‘ಒಂದು ರಾಷ್ಟ್ರ–ಒಂದು ಚುನಾವಣೆ’ ಕುರಿತ ಸಂವಾದ

ಚುನಾವಣೆಗಳಿಂದ ರಾಜಕಾರಣಿಗಳ ಮೇಲಿನ ವಿಶ್ವಾಸಕ್ಕೆ ಧಕ್ಕೆ: ಜೋಶಿ

ಪ್ರಜಾವಾಣಿ ವಾರ್ತೆ



ಸಚಿವ ಪ್ರಲ್ಹಾದ ಜೋಶಿ ಅವರು ಕೃತಿ ಲೋಕಾರ್ಪಣೆ ಮಾಡಿದರು. (ಎಡದಿಂದ) ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶ್ರೀನಿವಾಸ ಎಸ್‌ ಬಳ್ಳಿ ಮತ್ತು ಭಾರತೀಯ ವಿಕಾಸ ಕೇಂದ್ರ–ಕರ್ನಾಟಕದ ಪ್ರಧಾನ ಸಂಚಾಲಕ ಎಂ.ಆರ್‌.ವೆಂಕಟೇಶ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪದೇ ಪದೇ ಚುನಾವಣೆ ನಡೆಸುತ್ತಿರುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ರಾಜಕಾರಣಿಗಳ ಮೇಲೆ ನಾಗರಿಕರು ಇಟ್ಟಿರುವ ನಂಬಿಕೆ ಕಡಿಮೆಯಾಗುತ್ತಿದೆ’ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಶನಿವಾರ ಅಭಿಪ್ರಾಯಪಟ್ಟರು.


ಭಾರತೀಯ ವಿಕಾಸ ಕೇಂದ್ರ–ಕರ್ನಾಟಕ ಹಮ್ಮಿಕೊಂಡಿದ್ದ ‘ಒಂದು ರಾಷ್ಟ್ರ–ಒಂದು ಚುನಾವಣೆ’ ಕುರಿತ ಸಂವಾದ ಹಾಗೂ ದುಂಡು ಮೇಜಿನ ಸಭೆಯ ಕೃತಿ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಶ್ವಾಸ ಮೂಡಬೇಕಾದರೆ, ಒಂದು ದೇಶ–ಒಂದು ಚುನಾವಣೆಯ ಅಗತ್ಯವಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಏನೇ ಹೇಳಿದರೂ ಅದಕ್ಕೆ ವಿರೋಧ ವ್ಯಕ್ತಪಡಿಸುವ ವರ್ಗವೊಂದಿದೆ. ವಿರೋಧ ಪಕ್ಷದವರು ಚರ್ಚೆಗೆ ಮುನ್ನವೇ ಮೋದಿ ನಿಲುವು ಹಾಗೂ ಯೋಜನೆಗಳನ್ನು ಟೀಕಿಸುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ’ ಎಂದು ಟೀಕಿಸಿದರು.

‘ಪ್ರಜಾಪ್ರಭುತ್ವವು ಈಗ ಪರಿಪಕ್ವಗೊಂಡಿದೆ. ಜನರ ಕೈಗೆ 10 ಮತಪತ್ರ ಕೊಟ್ಟರೂ ವಿವೇಚಿಸಿ ಮತ ಹಾಕುತ್ತಾರೆ. ಭಾರತವನ್ನು ಶತಮಾನದ ರಾಷ್ಟ್ರವನ್ನಾಗಿ ರೂಪಿಸಬೇಕು. ಅದಕ್ಕೆ ಚುನಾವಣಾ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು’ ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ‘ಪ್ರತಿ ವಿಚಾರದಲ್ಲೂ ನಾವು ಪ್ರತ್ಯೇಕತೆಯನ್ನು ಕಾಣುತ್ತಾ ಬಂದಿದ್ದೇವೆ. ಅದನ್ನೇ ಪೋಷಿಸಿ ತಮಗೆ ಬೇಕಾದ ಕೆಲಸ ಸಿದ್ಧಿಸಿಕೊಳ್ಳುವವರನ್ನೂ ನೋಡಿದ್ದೇವೆ. ಅನೇಕತೆಯನ್ನು ಏಕತೆಯ ಸ್ತೋತ್ರದಲ್ಲಿ ಪೋಣಿಸಬೇಕು. ಆಗ ಭಾರತಕ್ಕೆ ಜಗತ್ತಿನಲ್ಲಿ ಮನ್ನಣೆ ಸಿಗಲಿದೆ. ಇದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು’ ಎಂದರು.

ಮಿದುಳಿನ ಆರೋಗ್ಯ– ರಾಬಿನ್ ಉತ್ತಪ್ಪ ರಾಯಭಾರಿ



ರಾಬಿನ್ ಉತ್ತಪ್ಪ

ಬೆಂಗಳೂರು: ಕ್ರಿಕೆಟಿಗ ರಾಬಿನ್ ಉತ್ತಪ್ಪ ಅವರನ್ನು ಮಿದುಳಿನ ಆರೋಗ್ಯ ಹಾಗೂ ಮಾನಸಿಕ ಆರೋಗ್ಯ ಕಾರ್ಯಕ್ರಮದ ರಾಯಭಾರಿಯನ್ನಾಗಿ ನೇಮಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಈ ಕಾರ್ಯಕ್ರಮವು ಆರೋಗ್ಯ ಸಚಿವಾಲಯ ಹಾಗೂ ನಿಮ್ಹಾನ್ಸ್ ಸಹಯೋಗದಲ್ಲಿ ನಡೆಯಲಿದೆ. ಮಿದುಳಿನ ಅನಾರೋಗ್ಯ ಸಮಸ್ಯೆಗಳು ತ್ವರಿತವಾಗಿ ಹೆಚ್ಚುತ್ತಿವೆ. ಇದು ಸಮಾಜದ ಮೇಲೆಯೂ ಗಮನಾರ್ಹವಾದ ಪರಿಣಾಮ ಬೀರುತ್ತಿದೆ. ಆರಂಭಿಕ ಹಂತದಲ್ಲಿಯೇ ಈ ಸಮಸ್ಯೆಯನ್ನು ಪತ್ತೆ ಹಚ್ಚಿ, ಚಿಕಿತ್ಸೆ ಒದಗಿಸಿದಲ್ಲಿ ಅಂಗವೈಕಲ್ಯ ಮತ್ತು ಮರಣ ತಡೆಯಲು ಸಾಧ್ಯ. ಸಮಯಕ್ಕೆ ಸರಿಯಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡರೆ ಮಿದುಳಿನ ಅಸ್ವಸ್ಥತೆ ಎದುರಿಸುವ ಪ್ರಮಾಣವನ್ನು ಶೇ 40 ರಷ್ಟು ತಡೆಯಬಹುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ನೇಮಕಾತಿಯು ಮೂರು ವರ್ಷಗಳವರೆಗೆ ಜಾರಿ ಇರಲಿದ್ದು, ಸಾರ್ವಜನಿಕರ ಹಿತಾಸಕ್ತಿಯಿಂದ ಸಂಭಾವನೆರಹಿತವಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪಕ್ಷಗಳ ಕೊಡುಗೆಗೆ ನಿರ್ಬಂಧ ಅಸಾಧ್ಯ: ಚುನಾವಣಾ ಆಯೋಗ

ನವದೆಹಲಿ (ಪಿಟಿಐ): ಚುನಾವಣೆಯ ಮೊದಲು ಅಥವಾ ನಂತರ ಯಾವುದೇ ಉಚಿತ ಕೊಡುಗೆಗಳನ್ನು ನೀಡುವುದು ಅಥವಾ ವಿತರಿಸುವುದು ಸಂಬಂಧಪಟ್ಟ ಪಕ್ಷದ ನೀತಿ ನಿರ್ಧಾರವಾಗಿದೆ. ಅಂತಹ ನೀತಿಗಳು ಆರ್ಥಿಕವಾಗಿ ಲಾಭದಾಯಕವೇ ಅಥವಾ ಪ್ರತಿಕೂಲ ಪರಿಣಾಮ ಬೀರುತ್ತವೆಯೇ ಎಂಬುದರ ಬಗ್ಗೆ ಮತದಾರರು ನಿರ್ಧರಿಸಬೇಕು ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

‘ಆಯಾ ರಾಜ್ಯಗಳಲ್ಲಿ ಗೆಲ್ಲುವ ಪಕ್ಷಗಳ ನೀತಿಗಳು ಮತ್ತು ಸರ್ಕಾರವನ್ನು ರಚಿಸುವಾಗ ಅವರು ತೆಗೆದುಕೊಳ್ಳಬಹುದಾದ ನಿರ್ಧಾರಗಳನ್ನು ನಿಯಂತ್ರಿಸಲು ಚುನಾವಣಾ ಆಯೋಗದಿಂದ ಸಾಧ್ಯವಿಲ್ಲ’ ಎಂದು ಆಯೋಗವು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ 2016ರ ಡಿಸೆಂಬರ್ ತಿಂಗಳಲ್ಲಿ 47 ಪ್ರಸ್ತಾವಗಳನ್ನು ಕೇಂದ್ರಕ್ಕೆ ಕಳುಹಿಸಲಾಗಿದೆ. ರಾಜಕೀಯ ಪಕ್ಷಗಳ ನೋಂದಣಿ ರದ್ದುಗೊಳಿಸುವುದು ಅದರಲ್ಲಿ ಸೇರಿದೆ ಎಂದು ಆಯೋಗ ಹೇಳಿದೆ.

‘ಜಾನಪದ ಜಾತ್ರೆ’ ಸಮಾರೋಪ ಇಂದು

ಪ್ರಜಾವಾಣಿ ವಾರ್ತೆ



‘ಜಾನಪದ ಜಾತ್ರೆ’ಯಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಕಂದಾಯ ಸಚಿವ ಆರ್‌. ಅಶೋಕ ಮತ್ತು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಹೆಜ್ಜೆ ಹಾಕಿದರು

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪದ್ಮನಾಭನಗರದ ಅಟಲ್ ಬಿಹಾರಿ ವಾಜಪೇಯಿ ರಂಗಮಂದಿರದಲ್ಲಿ ಆಯೋಜಿಸಿರುವ ‘ಜಾನಪದ ಜಾತ್ರೆ’ಯ ಅಂಗವಾಗಿ ಶನಿವಾರ ಜಾನಪದ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆದವು. ನಾಡಿನ ಪ್ರಸಿದ್ಧ ಕಲಾತಂಡಗಳು ಕಾರ್ಯಕ್ರಮ ಪ್ರಸ್ತುತ ಪಡಿಸಿದವು.

ಜಾನಪದ ಜಾತ್ರೆಯ ಸಮಾರೋಪ ಸಮಾರಂಭ ಏ.10ರ ಸಂಜೆ 6 ಗಂಟೆಗೆ ನೆರವೇರಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮಾರೋಪ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಬಿ.ಎಸ್.ಯಡಿಯೂರಪ್ಪ ಹಾಗೂ ಸಚಿವ ಆರ್‌.ಅಶೋಕ ಪಾಲ್ಗೊಳ್ಳಲಿದ್ದಾರೆ.

ಜಾನಪದ ಕಲಾವಿದರು ವಿಶೇಷ ಪ್ರದರ್ಶನ ನೀಡಲಿದ್ದಾರೆ. ಮಲೆಮಹದೇಶ್ವರರ ಹಾಡುಗಳು, ಮೈಸೂರಿನ ಚಂಡಿ ನಗಾರಿ, ಕೊಳ್ಳೇಗಾಲದ ನೀಲಗಾರರ ಪದ, ಸೋಲಿಗರ ಹಾಡು, ಮಂಗಳೂರಿನ ಕೋಲಾಟ, ವೀರಗಾಸೆ, ಜಗ್ಗಲಿಗೆ ಕುಣಿತದ ಮೂಲಕ ಕಲಾವಿದರು ಪ್ರೇಕ್ಷಕರನ್ನು ರಂಜಿಸಲಿದ್ದಾರೆ.

ರಾಜ್ಯದ 17 ಜಾನಪದ ಕಲಾ ತಂಡಗಳ ಸುಮಾರು 250ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಲಿದ್ದಾರೆ. ರಾಜ್ಯದ ವಿವಿಧ ಭಾಗಗಳ ಜನಪದ ಗಾಯಕರಿಂದ ವಿಶೇಷ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 300 ಕಲಾವಿದರು ಏಕಕಾಲದಲ್ಲೇ ವಿಶೇಷ ನೃತ್ಯ ಪ್ರದರ್ಶಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಮ ರಥಯಾತ್ರೆ ಇಂದು

ರಾಮನವಮಿ ಪ್ರಯುಕ್ತ ರಾಮ ರಥಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ಪದ್ಮನಾಭನಗರದ ವಾಜಪೇಯಿ ಮೈದಾನದಲ್ಲಿ ಏ.10ರಂದು ಬೆಳಿಗ್ಗೆ ಶ್ರೀರಾಮನಿಗೆ ಪೂಜೆ ಸಲ್ಲಿಸುವ ಮೂಲಕ 10 ಗಂಟೆಗೆ ಚಾಲನೆ ನೀಡಲಾಗುತ್ತದೆ. ಮಂತ್ರಾಲಯದ ಸುಬುದೇಂದ್ರ ತೀರ್ಥ ಸ್ವಾಮೀಜಿ, ಕಾಗಿನೆಲೆಯ ಈಶ್ವರಾನಂದಪುರಿ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ.

ಯಾತ್ರೆಯಲ್ಲಿ ಸುಮಾರು 10 ಸಾವಿರ ಮಂದಿ ಪಾಲ್ಗೊಳ್ಳಲಿದ್ದು, ಪದ್ಮನಾಭನಗರದ ಶಾಸಕರ ಕಚೇರಿವರೆಗೆ ಯಾತ್ರೆ ಸಾಗಲಿದೆ. ಮಧ್ಯಾಹ್ನ 1 ಗಂಟೆಗೆ ಪೂಜೆ, ಮಹಾಮಂಗಳಾರತಿ, ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಯಾತ್ರೆಯುದ್ದಕ್ಕೂ ಪಾನಕ, ಮಜ್ಜಿಗೆ ವಿತರಣೆ ಇರಲಿದೆ.

ಎಲ್ಲರೂ ಶ್ವೇತವಸ್ತ್ರಧಾರಿಗಳಾಗಿ ಯಾತ್ರೆಯಲ್ಲಿ ಸಾಗಲಿದ್ದು, ಕಂದಾಯ ಸಚಿವ ಆರ್‌.ಅಶೋಕ ನೇತೃತ್ವ ವಹಿಸಲಿದ್ದಾರೆ. ಜಾನಪದ ಕಲಾವಿದರು ನೃತ್ಯ, ಹಾಡುಗಳಿಂದ ರಂಜಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅಮಿತ್ ಶಾ ಹೇಳಿಕೆಗೆ ಕ್ಯಾಥೋಲಿಕ್ ಕ್ರೈಸ್ತ ಸಂಘ ಖಂಡನೆ

ಬೆಂಗಳೂರು: ‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಪರ್ಕ ಭಾಷೆಯಾಗಿ ಹಿಂದಿ ಬಳಸಬೇಕು ಎಂದು ಹೇಳುವ ಮೂಲಕ ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿ ಹೇರಿಕೆಗೆ ಮುಂದಾಗಿರುವುದು ಖಂಡನೀಯ’ ಎಂದು ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಸಂಘದ ಅಧ್ಯಕ್ಷ ರಫಾಯಲ್ ರಾಜ್ ದೂರಿದ್ದಾರೆ.

‘ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ’ಯ ಪರಿಕಲ್ಪನೆ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಕಾರ್ಯಸೂಚಿ. ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡುತ್ತಿರುವುದು ಸರಿಯಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಆಯಾ ಪ್ರದೇಶದ ಭಾಷೆಗಳನ್ನೇ ಸಂಪರ್ಕ ಭಾಷೆಯಾಗಿ ಮುಂದುವರಿಸಲು ಕಾನೂನು ತರುವ ಅಗತ್ಯವಿದೆ. ಈ ಮೂಲಕ ಪ್ರಾದೇಶಿಕ ಭಾಷೆಗಳನ್ನು ಉಳಿಸುವುದು ಅನಿವಾರ್ಯ. ಅಮಿತ್ ಶಾ ಅವರು ಕೂಡಲೇ ತಮ್ಮ ಹೇಳಿಕೆ ವಾಪಸ್ ಪಡೆಯಬೇಕು’ ಎಂದು ಒತ್ತಾಯಿಸಿದ್ದಾರೆ.

‘ಈ ಹಿಂದಿ ಹೇರಿಕೆ ಹೇಳಿಕೆ ವಿರುದ್ಧ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರು ಖಂಡನಾ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು’ ಎಂದೂ ಅವರು ಒತ್ತಾಯಿಸಿದ್ದಾರೆ.

ಅವಿಶ್ವಾಸ ನಿರ್ಣಯ: ಪಾಕ್ ಸಂಸತ್ತಿನಲ್ಲಿ ಇಡೀ ದಿನ ಗದ್ದಲ



ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ಸರ್ಕಾರದ ವಿರುದ್ಧ ಸಲ್ಲಿಕೆಯಾಗಿರುವ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕುವ ವಿಚಾರದಲ್ಲಿ ಇಮ್ರಾನ್ ನಿಷ್ಠ ಸಂಸದರು ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಸಂಸತ್ತಿನಲ್ಲಿ ಶನಿವಾರ ಇಡೀ ದಿನ ವಾಗ್ವಾದ ನಡೆದಿದೆ.

ಸುಪ್ರೀಂ ಕೋರ್ಟ್ ತೀರ್ಪಿನಂತೆ, ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿವೆ. ಅವಿಶ್ವಾಸ ನಿರ್ಣಯವನ್ನು ತಕ್ಷಣವೇ ಮತಕ್ಕೆ ಹಾಕಬೇಕು ಎಂದು ವಿರೋಧ ಪಕ್ಷದ ನಾಯಕ ಶಹಬಾಜ್ ಷರೀಫ್ ಅವರು ಒತ್ತಾಯಿಸಿದರು.

ಆದರೆ, ಸರ್ಕಾರ ಉರುಳಿಸುವ ಪ್ರಕ್ರಿಯೆಯಲ್ಲಿ ವಿದೇಶಿ ಶಕ್ತಿಗಳ ಹಸ್ತಕ್ಷೇಪ ಇದೆ. ಅದರ ಬಗ್ಗೆ ಮೊದಲು ಚರ್ಚೆ ಆಗಲಿ ಎಂದು ಇಮ್ರಾನ್ ನಿಷ್ಠರು ಪಟ್ಟು ಹಿಡಿದರು. ಇದು, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ವಾಗ್ವಾದಕ್ಕೆ ಕಾರಣವಾಯಿತು. ಈ ವಾಗ್ವಾದದ ಕಾರಣಕ್ಕಾಗಿಯೇ ಕಲಾಪವನ್ನು ಹಲವು ಬಾರಿ ಮುಂದೂಡಲಾಯಿತು. ಇಫ್ತಾರ್ ನಂತರ ರಾತ್ರಿ 8.30ಕ್ಕೆ ಕಲಾಪ ಪುನರಾರಂಭಗೊಂಡರೂ ಮತ್ತೆ ಮುಂದೂಡಿಕೆ ಆಯಿತು. ದಿನದ ಕಲಾಪ ಪಟ್ಟಿಯಲ್ಲಿ ನಾಲ್ಕನೇ ಅಂಶವಾಗಿ ಅವಿಶ್ವಾಸ ನಿರ್ಣಯವು ಇತ್ತು.

ಇಮ್ರಾನ್ ನೇತೃತ್ವದ ಸರ್ಕಾರವು ಅವಿಶ್ವಾಸ ನಿರ್ಣಯದಲ್ಲಿ ಸೋಲುವುದು ನಿಚ್ಚಳವಾಗಿದೆ. ಹಾಗಾಗಿ, ವಿರೋಧ ಪಕ್ಷಗಳ ಎಲ್ಲ ಸಂಸದರು ಸದನದಲ್ಲಿ ಹಾಜರಿದ್ದರು. ಆದರೆ, ಇಮ್ರಾನ್ ಅವರೂ ಸೇರಿದಂತೆ ಆಡಳಿತ ಪಕ್ಷದ ಹಲವು ಸದಸ್ಯರು ಗೈರುಹಾಜರಾಗಿದ್ದರು.

ಮರುಪರಿಶೀಲನೆ ಅರ್ಜಿ

ಅವಿಶ್ವಾಸ ನಿರ್ಣಯವನ್ನು ತಿರಸ್ಕರಿಸಿದ ಉಪ ಸ್ಪೀಕರ್ ನಿರ್ಧಾರವನ್ನು ರದ್ದುಪಡಿಸಿದ ಸುಪ್ರೀಂ ಕೋರ್ಟ್ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ಇಮ್ರಾನ್ ನೇತೃತ್ವದ ತೆಹ್ರೀಕ್ ಎ ಇನ್ಸಾಫ್ ಪಕ್ಷವು ಅರ್ಜಿ ಸಲ್ಲಿಸಿದೆ.

ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ನೀಡಿದ್ದ ತೀರ್ಪಿನ ಅನುಷ್ಠಾನವನ್ನು ಅಮಾನತಿನಲ್ಲಿ ಇರಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ಸಂಸತ್ತಿನ ಕಲಾಪದ ವೇಳಾಪಟ್ಟಿಯನ್ನು ಸುಪ್ರೀಂ ಕೋರ್ಟ್ ನೀಡಿದೆ. ಇದು ಸಂಸತ್ತಿನ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗಿದೆ. ಇದು ಸಂವಿಧಾನದ ಉಲ್ಲಂಘನೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಸಾಂವಿಧಾನಿಕ ಹೊಣೆಗಾರಿಕೆಗಳನ್ನು ನಿಭಾಯಿಸುವಂತೆ ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿ ಬಲವಂತ ಮಾಡಲು ಅವಕಾಶ ಇಲ್ಲ ಎಂದೂ ಅರ್ಜಿಯಲ್ಲಿ ತಿಳಿಸಲಾಗಿದೆ. ಆದರೆ, ಸುಪ್ರೀಂ ಕೋರ್ಟ್ ತೀರ್ಪನ್ನು ಪಾಲಿಸಲಾಗುವುದು ಎಂದು ಸಂಸತ್ತಿನ ಸ್ಪೀಕರ್ ಅಸಾದ್ ಖೈಸರ್ ಹೇಳಿದ್ದಾರೆ.

ಶಾ ಹೇಳಿಕೆಯ ವಿರುದ್ಧ ರೆಹಮಾನ್ ಪೋಸ್ಟರ್‌ಗೆ ವ್ಯಾಪಕ ಮೆಚ್ಚುಗೆ

‘ಹಿಂದಿ ಹೇರಿಕೆ’ಗೆ ಆಕ್ಷೇಪ ತೀವ್ರ

ಚೆನ್ನೈ (ಪಿಟಿಐ): ಇಂಗ್ಲಿಷ್‌ಗೆ ಪರ್ಯಾಯವಾಗಿ ಹಿಂದಿ ಬಳಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಗೆ ಹಿಂದಿಯೇತರ ಪ್ರದೇಶಗಳಿಂದ ನಿರಂತರವಾಗಿ ಆಕ್ಷೇಪ ವ್ಯಕ್ತವಾಗುತ್ತಲೇ ಇದೆ. ಆಸ್ಕರ್ ವಿಜೇತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರು ಟ್ವಿಟರ್‌ನಲ್ಲಿ ಪ್ರಕಟಿಸಿದ ಪೋಸ್ಟರ್ ಒಂದು ಹಿಂದಿ ಹೇರಿಕೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ತಮಿಳುನಾಡಿನ ವಿರೋಧ ಪಕ್ಷ ಎಐಎಡಿಎಂಕೆ ಕೂಡ ‘ಹಿಂದಿ ಹೇರಿಕೆ’ಯನ್ನು ಖಂಡಿಸಿದೆ. ಜನರು ತಮಗೆ ಇಷ್ಟ ಇದ್ದರೆ ಹಿಂದಿ ಕಲಿಯುತ್ತಾರೆ. ಆದರೆ ಯಾವುದೇ ಭಾಷೆಯ ಹೇರಿಕೆ ಸ್ವೀಕಾರಾರ್ಹವಲ್ಲ ಎಂದು ಹೇಳಿದೆ.

ದ್ರಾವಿಡ ಚಳವಳಿಯ ನೇತಾರ ಸಿ.ಎನ್. ಅಣ್ಣಾದೊರೆ ಅವರ ಹೇಳಿಕೆಯೊಂದನ್ನು ಎಐಎಡಿಎಂಕೆ ನಾಯಕ ಒ. ಪನ್ನೀರ್‌ಸೆಲ್ವಂ ಉಲ್ಲೇಖಿಸಿದ್ದಾರೆ. ‘#ಸ್ಟಾಪ್ ಹಿಂದಿ ಇಂಪೋಸಿಷನ್’ ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಅವರು ಟ್ವೀಟ್ ಮಾಡಿದ್ದಾರೆ. ಜನರು ಇಷ್ಟ ಇದ್ದರೆ ಹಿಂದಿ ಕಲಿಯಲಿ. ಆದರೆ, ಹಿಂದಿಯನ್ನು ಹೇರುವುದು ಎಂದೂ ಸ್ವೀಕಾರಾರ್ಹವಲ್ಲ ಎಂದು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಟ್ವಿಟರ್ ಬಳಕೆದಾರರಲ್ಲಿ ಹಲವರು ರೆಹಮಾನ್ ಅವರ ಪೋಸ್ಟರ್ ಅನ್ನು ಅಮಿತ್ ಶಾ ಅವರಿಗೆ ಲಿಂಕ್ ಮಾಡಿದ್ದಾರೆ. ರೆಹಮಾನ್ ಅವರು ಪೋಸ್ಟ್ ಮಾಡಿರುವ ಪೋಸ್ಟರ್ ತಮಿಳುಮಾತೆಯನ್ನು ಸ್ತುತಿಸುವ ಹಾಡನ್ನು ಉಲ್ಲೇಖಿಸುತ್ತಿದೆ. ತಮಿಳಿನ ಖ್ಯಾತ ಕವಿ ಭಾರತೀದಾಸನ್ ಅವರು ತಮಿಳು ಭಾಷೆಯನ್ನು ಹೊಗಳಿ ಬರೆದ ಕವಿತೆಯ ಸಾಲೊಂದನ್ನು ಪೋಸ್ಟರ್‌ನಲ್ಲಿ ಬರೆಯಲಾಗಿದೆ. ಪೋಸ್ಟರ್‌ನ ಮಧ್ಯ ಭಾಗದಲ್ಲಿ ಬಿಳಿ ಸೀರೆ ಉಟ್ಟ ಮಹಿಳೆಯ ಚಿತ್ರವಿದೆ. ಇದು ತಮಿಳು ಮಾತೆ ಎನ್ನಲಾಗುತ್ತಿದೆ. ಪೋಸ್ಟರ್‌ನ ಕೆಂಪು ಹಿನ್ನೆಲೆಯು ಹಿಂದಿ ಹೇರಿಕೆ ವಿರುದ್ಧದ ಆಕ್ರೋಶ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಯುವಜನರಿಗೆ ಅನ್ಯಾಯ: ಕೆ.ಟಿ. ರಾಮರಾವ್

ಹೈದರಾಬಾದ್ (ಪಿಟಿಐ): ಜಾಗತಿಕ ಆಕಾಂಕ್ಷೆಗಳನ್ನು ಹೊಂದಿರುವ ಈ ದೇಶದ ಯುವ ಜನರ ಮೇಲೆ ಹಿಂದಿ ಹೇರಿಕೆಯು ಅವರಿಗೆ ಮಾಡುವ ಬಹುದೊಡ್ಡ ಅನ್ಯಾಯ ಎಂದು ತೆಲಂಗಾಣ ರಾಷ್ಟ್ರ ಸಮಿತಿ ಕಾರ್ಯಾಧ್ಯಕ್ಷ ಮತ್ತು ತೆಲಂಗಾಣದ ಸಚಿವ ಕೆ.ಟಿ.ರಾಮರಾವ್ ಅವರು ಹೇಳಿದ್ದಾರೆ.

‘ಆತ್ಮೀಯ ಅಮಿತ್ ಶಾ ಅವರೇ, ವೈವಿಧ್ಯದಲ್ಲಿ ಏಕತೆಯೇ ನಮ್ಮ ಬಲ. ಭಾರತವು ರಾಜ್ಯಗಳ ಒಕ್ಕೂಟ... ಏನನ್ನು ತಿನ್ನಬೇಕು, ಏನನ್ನು ಧರಿಸಬೇಕು, ಯಾರನ್ನು ಪ್ರಾರ್ಥಿಸಬೇಕು, ಯಾವ ಭಾಷೆ ಮಾತಾಡಬೇಕು ಎಂಬ ನಿರ್ಧಾರವನ್ನು ಜನರಿಗೆ ಏಕೆ ನಾವು ಬಿಡಬಾರದು’ ಎಂದು ರಾಮರಾವ್ ಅವರು ಟ್ವೀಟ್ ಮಾಡಿದ್ದಾರೆ.

‘ಭಾಷಾ ಅಂಧಾಭಿಮಾನ ಅಥವಾ ಯಜಮಾನಿಕೆಯು ತಿರುಗುಬಾಣವಾಗಲಿದೆ’ ಎಂದೂ ಅವರು ಹೇಳಿದ್ದಾರೆ.

‘ಸಂಘದ ಕಾರ್ಯಸೂಚಿ’

‘ಭಾರತದ ಹಲವು ಭಾಷೆಗಳಿಗೆ ಸಂವಿಧಾನವೇ ಮಹತ್ವ ಕೊಟ್ಟಿದೆ. ಹಲವು ರಾಜ್ಯಗಳು ಭಾಷೆಯ ಆಧಾರದಲ್ಲಿ ರೂಪುಗೊಂಡಿವೆ. ಇದಕ್ಕಾಗಿ ಸುದೀರ್ಘ ಹೋರಾಟವೇ ನಡೆದಿತ್ತು. ನಮ್ಮ ದೇಶದ ವೈವಿಧ್ಯ ಮತ್ತು ಒಕ್ಕೂಟ ವ್ಯವಸ್ಥೆಗೆ ಮಾನ್ಯತೆ ಇರಬಾರದು ಎಂಬುದು ಸಂಘ ಪರಿವಾರದ ಕಾರ್ಯಸೂಚಿ. ಪ್ರಾದೇಶಿಕ ಭಾಷೆಗಳನ್ನು ದುರ್ಬಲಗೊಳಿಸುವ ಕಾರ್ಯಸೂಚಿಯ ಭಾಗ ಇದು’ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಭಾನುವಾರ, ಏಪ್ರಿಲ್ 10, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಣ್ಣೀರ ಸಿಂಚನ
ಬಿಸಿಲಿನ ತಾಪ ಏರಿಕೆಯಾದ ಪರಿಣಾಮ ನವದೆಹಲಿಯಲ್ಲಿ ಮಹಿಳೆಯೊಬ್ಬರು ಶನಿವಾರ ಎಮ್ಮೆಯ ಮೈಗೆ ನೀರೆರೆದರು




ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ನೌಕರರ ಒಕ್ಕೂಟ

ಸಿದ್ಧಾರ್ಥ ನಗರ, ತುಮಕೂರು



ಸವ್ಯಸಾಚಿ

ಡಾ. ಜಿ. ಪರಮೇಶ್ವರವರ ಗೌರವ ಗ್ರಂಥ
ಬಿಡುಗಡೆ ಸಮಾರಂಭ



ದಿನಾಂಕ:
10 ಏಪ್ರಿಲ್ 2022 ಭಾನುವಾರ
ಸಮಯ: ಬೆಳಿಗ್ಗೆ 10.30 ಕ್ಕೆ
ಸ್ಥಳ:
ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು ಆವರಣ,
ಅಗಳಕೋಟೆ, ತುಮಕೂರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ

ಕಲೆಯ ಕ್ಷೇತ್ರದೊಳಗೂ ದಾಂಗುಡಿಯಿಟ್ಟ ಮತಾಂಧತೆ, ದ್ವೇಷದ ಕೆಂಡದುಂಡೆಗಳನ್ನು ಇಲ್ಲವಾಗಿಸಿ ನಾಡಿನ ಒಟ್ಟುಮೆ ಉಳಿಸಿಕೊಳ್ಳಬೇಕಾದದ್ದು ಇಂದಿನ ತುರ್ತು

ವಿಶ್ವ ಡಬಲ್ಸ್ ಸ್ಕ್ವಾಷ್: ಅವಳಿ ಮಕ್ಕಳ ತಾಯಿಗೆ 'ಡಬಲ್' ಖುಷಿ 14

ಕಲ್ಯಾಣ ಕರ್ನಾಟಕ ಯಾತ್ರಾ ಪರ್ವಕ್ಕೆ ಸಿಎಂ ಚಾಲನೆ

ಅನುಭವ ಮಂಟಪ ನಿರ್ಮಾಣ ಮೇ ನಲ್ಲಿ ಆರಂಭ 4

ಶ್ರೀರಾಮ ನವಮಿ ಶುಭಾಶಯಗಳು



ಒಳ ಪುಟ

ಎರಡಂಕಿ ಮಟ್ಟಕ್ಕೆ ಹಣದುಬ್ಬರ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ನದಿ ತಿರುವು – ಹಣದ ಹರಿವು?

• ಪ್ರವೀಣ್ ಕುಮಾರ್ ಪಿ.ವಿ.

ಒಳನೋಟ

ಮುಗಿಯದ 'ತಿರುವು'

ಪ್ರತಿಕ್ರಿಯಿಸಿ: 9606038256

feedback@prajavani.co.in

ಬೆಂಗಳೂರು: ನದಿ ಹರಿವಿನ ಸಹಜ ದಿಕ್ಕನ್ನೇ ಬದಲಾಯಿಸಿ, ಗುರುತ್ವಾಕರ್ಷಣೆಗೆ ವಿರುದ್ಧವಾಗಿ ನೀರು ಹರಿಸುವ ಯೋಜನೆಗಳಿಂದ ಹಣದ ಹೊಳೆ ಹರಿದಿದೆಯೇ ವಿನಃ, ನೀರು ಹರಿದ ಉದಾಹರಣೆಗಳಿಲ್ಲ. ಇಂತಹ ಯೋಜನೆಗಳ ಆರಂಭದ ಅಂದಾಜು ವೆಚ್ಚದ ಲೆಕ್ಕಾಚಾರಗಳಿಗೂ, ವಾಸ್ತವದಲ್ಲಿ ಆಗುವ ವೆಚ್ಚಗಳಿಗೂ ಅಜಗಜಾಂತರ! ನದಿ ತಿರುವಿನಿಂದ ಪರಿಸರ ವ್ಯವಸ್ಥೆ ಹಾಗೂ ಜನಜೀವನದ ಮೇಲಾದ ಅನಾಹುತಗಳ ಕರುಣಾಜನಕ ಚಿತ್ರಣಗಳು ಕಣ್ಣಮುಂದಿದ್ದರೂ ಇಂತಹ ಕಣ್ಕಟ್ಟಿನ ಯೋಜನೆಗಳನ್ನು ರೂಪಿಸುವ ಪರಿಪಾಟಕ್ಕೆ ಕಡಿವಾಣ ಬಿದ್ದಿಲ್ಲ.

ವರ್ಷದಲ್ಲಿ ಸರಾಸರಿ 1,355 ಮಿ.ಮೀ. ಮಳೆಯಾಗುವ ರಾಜ್ಯದಲ್ಲಿ ನೀರಿನ ಬಿಕ್ಕಟ್ಟು ಎದುರಾದಾಗಲೆಲ್ಲಾ ಸರ್ಕಾರಕ್ಕೆ ಮೊದಲು ನೆನಪಿಗೆ ಬರುವುದು ನದಿ ತಿರುವು ಯೋಜನೆಗಳು. ಬೇಡ್ತಿ–ವರದಾ ಯೋಜನೆ, ಲಿಂಗನಮಕ್ಕಿ ಜಲಾಶಯದ ನೀರನ್ನು ಬೆಂಗಳೂರಿಗೆ ಹರಿಸುವ ಶರಾವತಿ ತಿರುವು ಯೋಜನೆ, ಬಯಲುಸೀಮೆಯ ಜಿಲ್ಲೆಗಳಿಗೆ ನೀರು ಹರಿಸುವ ಎತ್ತಿನಹೊಳೆ ಯೋಜನೆ, ಕಾಳಿ ನದಿ... ಇಂತಹ ನದಿ ತಿರುವು ಪ್ರಸ್ತಾವಗಳು ರಾಜ್ಯ ಸರ್ಕಾರದ ಮುಂದಿವೆ.

ಕಡಿಮೆ ದೂರಕ್ಕೆ ನೀರು ಹರಿಸಬೇಕಾಗುವ ನದಿ ಜೋಡಣೆ ಅಷ್ಟಾಗಿ ಅಪಾಯಕಾರಿಯೇನಲ್ಲ. ಭೌಗೋಳಿಕ ಪರಿಸ್ಥಿತಿ ಆಧರಿಸಿ ನೂರಿನ್ನೂರು ಕಿ.ಮೀ ದೂರಕ್ಕೆ ನೀರು ಪಂಪ್ ಮಾಡುವುದಕ್ಕೆ ದುಬಾರಿ ವೆಚ್ಚವಾಗುತ್ತದೆ. ಅಚ್ಚರಿ ಎಂದರೆ, ಈ ದುಬಾರಿ ವೆಚ್ಚದ ಕಾರಣಕ್ಕಾಗಿಯೇ ನದಿ ತಿರುವು ಯೋಜನೆಗಳು ಆಳುವವರ ಪಾಲಿಗೆ 'ಕಾಮಧೇನು'ವಿನಂತಾಗುತ್ತವೆ.

ಈಗ ಅನುಷ್ಠಾನಗೊಳ್ಳುತ್ತಿರುವ ಎತ್ತಿನಹೊಳೆ ಯೋಜನೆಯನ್ನೇ ಗಮನಿಸೋಣ. ಪಶ್ಚಿಮಾಭಿಮುಖವಾಗಿ ಹರಿಯುವ ಎತ್ತಿನಹೊಳೆಯ 24.01 ಟಿಎಂಸಿ ಅಡಿ ನೀರನ್ನು ಬಯಲುಸೀಮೆಯ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ 29 ತಾಲ್ಲೂಕುಗಳ 38 ಪಟ್ಟಣ ಪ್ರದೇಶಗಳು ಮತ್ತು 6,657 ಗ್ರಾಮಗಳಿಗೆ ಪೂರೈಸುವ ಯೋಜನೆ ಇದು.

5ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 5



ಸಕಲೇಶಪುರ ತಾಲ್ಲೂಕು ಹೆಬ್ಬನಹಳ್ಳಿ ಗ್ರಾಮದಲ್ಲಿ ಎತ್ತಿನಹೊಳೆ ಸುರಂಗ ಮಾರ್ಗ ಕುಸಿದ ಸ್ಥಳದಲ್ಲಿ ಕೆಲಸ ನಡೆಯುತ್ತಿದ್ದ ದೃಶ್ಯ (ಸಂಗ್ರಹ ಚಿತ್ರ)

'ನದಿ ತಿರುವು ಅಲ್ಲ, ನಿಧಿ ತಿರುವು'




ನದಿ ತಿರುವು ಯೋಜನೆಗಳೆಲ್ಲವೂ ನಿಧಿ ತಿರುವು ಯೋಜನೆಗಳು. ಎತ್ತಿನಹೊಳೆ ಯೋಜನೆಗೆ ಆರಂಭದಲ್ಲಿ 8 ಸಾವಿರ ಕೋಟಿ ಅನುದಾನ ಹಂಚಿಕೆ ಮಾಡಿದರು. ಇದು ಪೂರ್ಣಗೊಳ್ಳುವಾಗ ವೆಚ್ಚ ₹ 30 ಸಾವಿರ ಕೋಟಿ ದಾಟಲಿದೆ. ಇದರಿಂದ ಹನಿ ನೀರೂ ಹರಿಯುವುದಿಲ್ಲ. ರಾಜ್ಯದಲ್ಲಿ ನದಿ ತಿರುವು ಮಾಡುವು ದರಿಂದ ಭಾರಿ ದುಷ್ಪರಿಣಾಮ ಎದುರಿಸುವುದು ಪಶ್ಚಿಮ ಘಟ್ಟ ಮತ್ತು ಅರಬ್ಬೀ ಸಮುದ್ರ. ಮಳೆ ನೀರು ಪಶ್ಚಿಮಘಟ್ಟದಲ್ಲಿ ಸಂಗ್ರಹವಾಗಿ, ಮುಂದಿನ ಮಳೆಗಾಲದವರೆಗೆ ಕಂತಿನ ರೂಪದಲ್ಲಿ ನದಿಗಳಿಗೆ ನೀರು ಹರಿಸುತ್ತದೆ. ಆ ರೀತಿ ಸಮುದ್ರ ಸೇರುವ ಸಿಹಿನೀರೇ ಆವಿಯಾಗಿ, ಮೋಡವಾಗಿ ಪರಿವರ್ತನೆಗೊಂಡು ಮಳೆ ತರುತ್ತದೆ. ನದಿ ತಿರುವು ಮಾಡುವುದು ಮಿದುಳು ಮತ್ತು ಹೃದಯದ ನಡುವಿನ ಸಂಪರ್ಕವನ್ನು ಕಡಿತಗೊಳಿಸಿದಂತೆ. ಹೊಳೆ ಹರಿವಿಗೆ ಅದರದ್ದೇ ದಾರಿ ಇದೆ. ಅದನ್ನು ತಿರುಗಿಸುವುದು ನದಿಯ ಪಾಲಿಗೆ ಮರಣಶಾಸನದಂತೆ.

ದಿನೇಶ್ ಹೊಳ್ಳ

ಪರಿಸರ ಕಾರ್ಯಕರ್ತ, ಮಂಗಳೂರು

'ಕಾಡು ಕಳೆದುಕೊಂಡರೆ ನದಿಯೂ ಉಳಿಯದು'



'ಕಾಡನ್ನು ಉಳಿಸಿಕೊಂಡರೆ ಮಳೆಯೂ ಆಗುತ್ತದೆ. ನದಿಯೂ ಉಳಿಯುತ್ತದೆ ಎಂಬುದು ನಮ್ಮ ಸಂಸ್ಥೆಯ ಅಧ್ಯಯನದಿಂದಲೂ ಸಾಬೀತಾಗಿದೆ' ಎನ್ನುತ್ತಾರೆ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ.

'ಲಿಂಗನಮಕ್ಕಿ ಜಲಾಶಯ ಪ್ರದೇಶದಲ್ಲಿ 1901ರಿಂದ 1965ರವರೆಗೂ ವರ್ಷದಲ್ಲಿ ಸರಾಸರಿ 3,500 ಮಿ.ಮೀ.ಗಳಿಂದ 4,500 ಮಿ.ಮೀ.ಗಳಷ್ಟು ಮಳೆಯಾಗುತ್ತಿತ್ತು. ಅಣೆಕಟ್ಟು ಕಟ್ಟಿದ ಬಳಿಕ ಜಲಾನಯನ ಪ್ರದೇಶದ ಪೂರ್ವ ಭಾಗದಲ್ಲಿ ಶೇ 50ರಷ್ಟು ಕಾಡು ನಾಶವಾಯಿತು. ಕಾಡು ಉಳಿದುಕೊಂಡಿರುವ ಪ್ರದೇಶದಲ್ಲಿ ಈಗಲೂ ಅಷ್ಟೇ ಮಳೆಯಾಗುತ್ತಿದೆ. ಕಾಡನ್ನು ಕಳೆದುಕೊಂಡ ಪ್ರದೇಶದಲ್ಲಿ ವಾರ್ಷಿಕ ಮಳೆ ಸರಾಸರಿ 1,900 ಮಿ.ಮೀ.ಗೆ ಇಳಿದಿದೆ' ಎಂದರು.

'ಸ್ಥಳೀಯ ಪ್ರಭೇದಗಳ ಸಸ್ಯವರ್ಗ ಜಾಸ್ತಿ ಇರುವ ನದಿಗಳ ಜಲಾನಯನ ಪ್ರದೇಶದ ಬಾವಿಗಳಲ್ಲಿ ಹಾಗೂ ಝರಿಗಳಲ್ಲಿ ವರ್ಷವಿಡೀ ನೀರಿನ ಒರತೆ ಇರುತ್ತದೆ. ನೆಡುತೋಪುಗಳನ್ನು ಬೆಳೆಸಿದ ಕಡೆ ಬಾವಿಗಳಲ್ಲಿ ವರ್ಷದಲ್ಲಿ ಆರರಿಂದ ಎಂಟು ತಿಂಗಳು ನೀರು ಲಭ್ಯ. ಕಾಡಿನ ಪ್ರಮಾಣ ಶೇ 30ಕ್ಕಿಂತಲೂ ಕಡಿಮೆಯಾದ ಕಡೆ ಮಳೆಗಾಲದಲ್ಲಿ ಮಾತ್ರ ನೀರು ಸಿಗುತ್ತದೆ. ನದಿ ತಿರುವು ಯೋಜನೆಗಳಿಗೆ ದುಡ್ಡು ಪೋಲು ಮಾಡುವ ಬದಲು ಸರ್ಕಾರ ಜಲಾನಯನ ಪ್ರದೇಶದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಕೇವಲ ಚೆಕ್‌ಡ್ಯಾಮ್ ನಿರ್ಮಿಸಿದರೆ ಸಾಲದು, ಸ್ಥಳೀಯ ಪ್ರಭೇದದ ಗಿಡ ಮರಗಳನ್ನು ಬೆಳೆಸಬೇಕು' ಎಂದು ಸಲಹೆ ನೀಡಿದರು.

'ಮೇಕೆದಾಟು ಯೋಜನೆಗೆ 5 ಸಾವಿರ ಹೆಕ್ಟೇರ್‌ಗಳಷ್ಟು ಕಾಡು ಮುಳುಗಡೆ ಆಗುತ್ತದೆ. ಇಷ್ಟೊಂದು ಕಾಡು ವರ್ಷದಲ್ಲಿ 100 ಟಿಎಂಸಿ ಅಡಿಗಳಷ್ಟು ನೀರನ್ನು ಹಿಡಿದಿಟ್ಟುಕೊಳ್ಳಬಲ್ಲುದು. 65 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹಿಸಲು 100 ಟಿಎಂಸಿ ಅಡಿಗಳಷ್ಟು ನೀರು ಹಿಡಿದಿಟ್ಟುಕೊಳ್ಳುವ ಕಾಡನ್ನು ಕಳೆದುಕೊಳ್ಳುವುದು ಮೂರ್ಖತನದ ಪರಮಾವಧಿ' ಎಂದರು.

ಮುನ್ನೆಚ್ಚರಿಕೆ ಡೋಸ್‌ಗೆ ₹225

ನವದೆಹಲಿ (ಪಿಟಿಐ): ಕೋವಿಡ್‌–19 ತಡೆ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ದರವನ್ನು ₹225ಕ್ಕೆ ಇಳಿಸಲಾಗಿದೆ ಎಂದು ಲಸಿಕೆ ತಯಾರಿಕಾ ಸಂಸ್ಥೆಗಳಾದ ಸೀರಂ ಇನ್‌ಸ್ಟಿಟ್ಯೂಟ್ ಮತ್ತು ಭಾರತ್ ಬಯೊಟೆಕ್ ಶನಿವಾರ ತಿಳಿಸಿವೆ. ಖಾಸಗಿ ಆಸ್ಪತ್ರೆಗೆ ಪೂರೈಸಲಾಗುವ ಲಸಿಕೆಗೆ ಈ ದರ ನಿಗದಿ ಮಾಡಲಾಗಿದೆ. ಸರ್ಕಾರದ ಜತೆಗೆ ಚರ್ಚೆ ನಡೆಸಿದ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಸಂಸ್ಥೆಗಳು ಹೇಳಿವೆ.

ಕೋವಿಶೀಲ್ಡ್ ಲಸಿಕೆಯನ್ನು ಸೀರಂ ಇನ್‌ಸ್ಟಿಟ್ಯೂಟ್ ಮತ್ತು ಕೋವ್ಯಾಕ್ಸಿನ್ ಲಸಿಕೆಯನ್ನು ಭಾರತ್ ಬಯೊಟೆಕ್ ತಯಾರಿಸುತ್ತಿವೆ.

ಕೋವಿಶೀಲ್ಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗೆ ₹600 ದರ ನಿಗದಿ ಮಾಡಲಾಗಿದೆ ಎಂದು ಸೀರಂ ಇನ್‌ಸ್ಟಿಟ್ಯೂಟ್ ಶುಕ್ರವಾರ ಪ್ರಕಟಿಸಿತ್ತು.

ಕೋವ್ಯಾಕ್ಸಿನ್ ಲಸಿಕೆಯ ಪ್ರತಿ ಡೋಸ್‌ಗೆ ₹1,200 ನಿಗದಿ ಮಾಡಲಾಗಿತ್ತು. ಆದರೆ, ಈಗ ಅದನ್ನು ₹225ಕ್ಕೆ ಇಳಿಸಲಾಗಿದೆ ಎಂದು ಭಾರತ್ ಬಯೊಟೆಕ್‌ನ ಜಂಟಿ ಸಂಸ್ಥಾಪಕಿ ಸುಚಿತ್ರಾ ಎಲ್ಲ ಟ್ವೀಟ್ ಮಾಡಿ ತಿಳಿಸಿದ್ದಾರೆ. 18 ದಾಟಿದ ಎಲ್ಲರಿಗೂ ಮುನ್ನೆಚ್ಚರಿಕೆ ಡೋಸ್ ಲಸಿಕೆ ಹಾಕಿಸಲು ಅವಕಾಶ ಇದೆ.

ಲಸಿಕೆ ಸೇವಾ ಶುಲ್ಕ ₹150

ಮುನ್ನೆಚ್ಚರಿಕೆ ಡೋಸ್ ನೀಡುವ ಖಾಸಗಿ ಲಸಿಕಾ ಕೇಂದ್ರಗಳು ಪ್ರತಿ ಡೋಸ್‌ಗೆ ಲಸಿಕೆಯ ದರದ ಜೊತೆಗೆ ಗರಿಷ್ಠ ₹150 ಸೇವಾ ಶುಲ್ಕ ವಿಧಿಸಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಲಸಿಕೆ ಹಾಕಿಸಲು ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳುವ ಅಗತ್ಯ ಇಲ್ಲ. ಆನ್‌ಲೈನ್ ಮೂಲಕ ಸಮಯ ನಿಗದಿಪಡಿಸಿಕೊಂಡು ಲಸಿಕೆ ಹಾಕಿಸಿಕೊಳ್ಳಬಹುದು. ಲಸಿಕೆ ಕೇಂದ್ರಕ್ಕೆ ನೇರವಾಗಿ ಹೋಗಿಯೂ ಲಸಿಕೆ ಹಾಕಿಸಿಕೊಳ್ಳಲು ಸಮಯ ನಿಗದಿ ಮಾಡಿಕೊಳ್ಳುವ ಅವಕಾಶ ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 4

ಮುಸ್ಲಿಮರ ಅಂಗಡಿ ಧ್ವಂಸಗೊಳಿಸಿದ ಶ್ರೀರಾಮಸೇನೆ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ನುಗ್ಗಿಕೇರಿ ಆಂಜನೇಯ ದೇವಸ್ಥಾನ ಆವರಣದಲ್ಲಿ ಮುಸ್ಲಿಮರಿಗೆ ಸೇರಿದ ನಾಲ್ಕು ಅಂಗಡಿಗಳನ್ನು ಶ್ರೀರಾಮಸೇನೆ ಕಾರ್ಯಕರ್ತರು ಶನಿವಾರ ಧ್ವಂಸ ಮಾಡಿದರು.ಇದರಿಂದಾಗಿ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡಿತು. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಗುಂಪು ಚದುರಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ದೇವಸ್ಥಾನದ ಆವರಣದಲ್ಲಿರುವ ಹಿಂದೂಯೇತರ ಅಂಗಡಿಗಳನ್ನು ತೆರವುಗೊಳಿಸುವಂತೆ ಹದಿನೈದು ದಿನಗಳ ಹಿಂದೆ ಶ್ರೀರಾಮ ಸೇನೆ ಕಾರ್ಯಕರ್ತರು ದೇವಸ್ಥಾನದ ಪರ್ಯಾಯಸ್ಥರಿಗೆ ಎಚ್ಚರಿಕೆ ಪತ್ರ ನೀಡಿದ್ದರು. ಶನಿವಾರ ಬಂದ 8ರಿಂದ 10 ಜನರ ಗುಂಪು ಅಂಗಡಿಗಳಿಗೆ ನುಗ್ಗಿ ಹಣ್ಣು, ಕಾಯಿ, ಕಲ್ಲಂಗಡಿ ಹಣ್ಣುಗಳನ್ನು ಬೀದಿಗೆ ಚೆಲ್ಲಿ ಧ್ವಂಸಗೊಳಿಸಿತು.

4ನೇ ಪುಟ ನೋಡಿ



ಶ್ರೀರಾಮ ಸೇನೆ ಕಾರ್ಯಕರ್ತರು ಅಂಗಡಿಗಳನ್ನು ಧ್ವಂಸಗೊಳಿಸಿದರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಹಿಂದೂಗಳ ರಿಕ್ಷಾ ಬಳಸಲು ಅಭಿಯಾನ

ಪುತ್ತೂರು: ಇಲ್ಲಿನ ಮಹಾಲಿಂಗೇಶ್ವರ ದೇವಳದ ವರ್ಷಾವಧಿ ಜಾತ್ರೋತ್ಸವವು ಭಾನುವಾರದಿಂದ ಇದೇ 20ರವರೆಗೆ ನಡೆಯಲಿದ್ದು, ಈ ಬಾರಿ ಸಂತೆ ಗದ್ದೆಯಲ್ಲಿ ಅನ್ಯಧರ್ಮಿಯರಿಗೆ ವ್ಯಾಪಾರ- ವ್ಯವಹಾರಕ್ಕೆ ನಿಷೇಧ ಹೇರಲಾಗಿದೆ. ಅದರ ಮುಂದುವರಿದ ಭಾಗವಾಗಿ ಜಾತ್ರೆಗೆ ಬರುವ ಭಕ್ತರು ಹಿಂದೂ ಚಾಲಕರ ಆಟೊದಲ್ಲೇ ಬರಬೇಕು ಎಂದು ಹಿಂದೂ ಜಾಗರಣ ವೇದಿಕೆ ಮನವಿ ಮಾಡಿದೆ.

ಈ ಸಂಬಂಧ ಹಿಂದೂಗಳ ಆಟೊ ರಿಕ್ಷಾಗಳಿಗೆ ಭಗವಾಧ್ವಜ ಅಳವಡಿಸಲು ತೀರ್ಮಾನ ಕೈಗೊಳ್ಳಲಾಗಿದೆ.

4ನೇ ಪುಟ ನೋಡಿ



ಹನುಮ ವೇಷಧಾರಿ

ಭಾನುವಾರ ರಾಮನವಮಿ ಆಚರಣೆಗೆ ಎಲ್ಲೆಡೆ ಸಿದ್ಧತೆ ನಡೆಯುತ್ತಿದೆ. ಹಬ್ಬದ ಮುನ್ನಾ ದಿನವಾದ ಶನಿವಾರ ರಾಮಭಕ್ತ ಹನುಮನ ವೇಷಧಾರಿಯೊಬ್ಬರು ಸದಾಶಿವನಗರದ ಭಾಷ್ಯಂ ಸರ್ಕಲ್‌ನಲ್ಲಿ ಕಾಣಿಸಿಕೊಂಡರು.

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಗಾಳಿ ಆಂಜನೇಯಸ್ವಾಮಿ ರಥೋತ್ಸವ ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಜಾತ್ರೆ ಹಾಗೂ ರಥೋತ್ಸವದ ಅಂಗವಾಗಿ ಇದೇ 10 ರಿಂದ 12ರವರೆಗೆ ಕಿಂಕೊ ಜಂಕ್ಷನ್‌ನಿಂದ ಹೊಸಗುಡ್ಡದ ಹಳ್ಳಿ ಜಂಕ್ಷನ್‌ವರೆಗೆ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

'ಶ್ರೀರಾಮ ವೇಣುಗೋಪಾಲ ಸ್ವಾಮಿ ರಥೋತ್ಸವ ವೀಕ್ಷಿಸಲು ಲಕ್ಷಾಂತರ ಮಂದಿ ಭಕ್ತರು ಬರುವ ನಿರೀಕ್ಷೆ ಇದೆ. ರಸ್ತೆ ಕಿರಿದಾಗಿರುವುದರಿಂದ ಭಕ್ತರ ಓಡಾಟಕ್ಕೂ ತೊಂದರೆಯಾಗಲಿದೆ. ಹೀಗಾಗಿ ಈ ಮಾರ್ಗದಲ್ಲಿ ವಾಹನ ಸಂಚಾರ ನಿಷೇಧಿಸಿದ್ದು, ಪರ್ಯಾಯ ಮಾರ್ಗವನ್ನೂ ಸೂಚಿಸಲಾಗಿದೆ' ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯ ಪ್ರಕಟಣೆ ತಿಳಿಸಿದೆ.

'ಸಿರ್ಸಿ ವೃತ್ತ ಮತ್ತು ಕೆ.ಆರ್. ಮಾರುಕಟ್ಟೆಯ ಮೇಲ್ಸೇತುವೆ ಕಡೆಯಿಂದ ಬರುವ ವಾಹನಗಳು ಹೊಸಗುಡ್ಡದಹಳ್ಳಿ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು, ಟಿಂಬರ್ ಯಾರ್ಡ್ ಬಡಾವಣೆ ಮೂಲಕ ಮುನೇಶ್ವರ ಬ್ಲಾಕ್ 50 ಅಡಿ ರಸ್ತೆಯಲ್ಲಿ ಸಂಚರಿಸಿ, ಹೊಸಕೆರೆಹಳ್ಳಿ ರಸ್ತೆ ಮಾರ್ಗವಾಗಿ ವೀರಭದ್ರನಗರ ಜಂಕ್ಷನ್ ಮುಖಾಂತರ ಹೊರ ವರ್ತುಲ ರಸ್ತೆಗೆ ಕೂಡಿಕೊಂಡು ಅಲ್ಲಿಂದ ಮೈಸೂರು ರಸ್ತೆಗೆ ಸಂಚರಿಸಬೇಕು' ಎಂದು ಪ್ರಕಟಣೆ ತಿಳಿಸಿದೆ.

'ಮೈಸೂರು ಕಡೆಯಿಂದ ಬರುವ ವಾಹನಗಳು ಕಿಂಕೊ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಮೇಲ್ಸೇತುವೆಯಲ್ಲಿ ಸಂಚರಿಸಿ, ಬಾಪೂಜಿನಗರ ಜಂಕ್ಷನ್ ಬಳಿ ಮೈಸೂರು ರಸ್ತೆಗೆ ಸೇರ್ಪಡೆಯಾಗಿ ನಗರ ಪ್ರವೇಶಿಸಬಹುದು' ಎಂದು ಸಲಹೆ ನೀಡಲಾಗಿದೆ.





'ಎಲ್ಲ 97 ಲಕ್ಷ ಮನೆಗಳಿಗೆ ವರ್ಷದೊಳಗೆ ನಲ್ಲಿ ನೀರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆ ಮನೆಗೆ ಗಂಗೆ ಯೋಜನೆ'ಯಡಿ ರಾಜ್ಯದಲ್ಲಿನ 97 ಲಕ್ಷ ಮನೆಗಳಿಗೆ ವರ್ಷದೊಳಗೆ ಕುಡಿಯುವ ನೀರು ಪೂರೈಸಲು ಉದ್ದೇಶಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಈಶ್ವರಪ್ಪ, 'ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರು ಇಲಾಖೆಯ ವಿವಿಧ ಯೋಜನೆಗಳ ಪ್ರಗತಿಯ ಬಗ್ಗೆ ಇದೇ 11ರಿಂದ ಒಂದು ವಾರ ಸಭೆ ನಡೆಸಲಿದ್ದಾರೆ. ಒಂದು ದಿನ ಎಲ್ಲ ರಾಜ್ಯಗಳ ಸಚಿವರು, ಉಳಿದ ದಿನಗಳಲ್ಲಿ ಅಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದರು.

'ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ಮನೆ ಮನೆಗೆ ಗಂಗೆ ಯೋಜನೆಗೆ ಚಾಲನೆ ನೀಡಲಾಗಿದೆ. ಈಗಾಗಲೇ 3 ಸಾವಿರ ಗ್ರಾಮಗಳಲ್ಲಿ ಪ್ರತಿ ಮನೆಗೆ ನಲ್ಲಿ ನೀರು ಸರಬರಾಜು ಆಗುತ್ತಿದೆ. ಕೇಂದ್ರ ₹ 3,325 ಕೋಟಿ, ರಾಜ್ಯ ಸರ್ಕಾರ ₹ 2,323 ಕೋಟಿ ಬಿಡುಗಡೆ ಮಾಡಿದೆ. 31 ಜಿಲ್ಲೆಗಳಲ್ಲಿ ಪ್ರಯೋಗಾಲಯ ಸ್ಥಾಪಿಸಲಾಗಿದೆ' ಎಂದರು.

'ನರೇಗಾ ಯೋಜನೆಯಲ್ಲಿ 32 ಲಕ್ಷ ಕುಟುಂಬಗಳು ಭಾಗಿಯಾಗಿದ್ದು, ಗುರಿ ಮೀರಿ ಸಾಧನೆಯಾಗಿದೆ. ಪರಿಶಿಷ್ಟ ಜಾತಿ-ಪಂಗಡದ 8.8 ಲಕ್ಷ ಕುಟುಂಬಗಳು ಈ ಯೋಜನೆಯ ಲಾಭ ಪಡೆದುಕೊಂಡಿವೆ. 6.97 ಕೋಟಿ ಮಾನವ ದಿನಗಳನ್ನು ಮಹಿಳೆಯರಿಗೆ ನೀಡಲಾಗಿದೆ. 22,441 ಅಂಗವಿಕಲರು ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ' ಎಂದರು. 'ಜಲಧಾರೆ ಯೋಜನೆ ಮತ್ತು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿಯೂ ಉತ್ತಮ ಪ್ರಗತಿ ಸಾಧಿಸಲಾಗಿದೆ. ಕಸ ವಿಲೇವಾರಿ-ನಿರ್ಮೂಲನೆಗೆ ಜಿಲ್ಲೆಗೊಂದು ಘಟಕ ಸ್ಥಾಪಿಸಲು ನಿರ್ಧರಿಸಲಾಗಿದೆ. ನರೇಗಾ, ಮನೆಮನೆಗೆ ಗಂಗೆ ಯೋಜನೆಗೆ ವೇಗ ನೀಡಲು ಇದೇ 28 ಮತ್ತು 29ರಂದು ಮಂಗಳೂರಿನಲ್ಲಿ ಎಲ್ಲ ಸಿಇಒಗಳಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, 'ಸ್ವಚ್ಛ ಭಾರತ್ ಯೋಜನೆಯಲ್ಲಿ ಎಲ್ಲ ಮನೆಗಳಲ್ಲೂ ಶೌಚಾಲಯ ಕಟ್ಟಿಸಿಕೊಂಡಿದ್ದಾರೆ. ಆದರೆ, ಕೆಲವರಿಗೆ ರಾತ್ರಿ ತಂಬಿಗೆ ಹಿಡಿದು ಬಯಲಿನಲ್ಲಿ ಕುಳಿತರಷ್ಟೆ ತೃಪ್ತಿ. ಈ ಮನಸ್ಥಿತಿ ಬದಲಾಗಬೇಕು. ಈ ಕುರಿತು ಸ್ವಸಹಾಯ ಸಂಘಗಳಿಂದ ಜನಜಾಗೃತಿ ಮಾಡಲಾಗುತ್ತಿದೆ' ಎಂದರು.

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಏ.10ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕುಂಬಳಗೋಡು ಆಸುಪಾಸಿನ ವಿವಿಧ ಕಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಸ್ಥಳಗಳು: ಕುಂಬಳಗೋಡು, ಕುಂಬಳಗೋಡು ಕೈಗಾರಿಕಾ ಪ್ರದೇಶದ ಮೊದಲ ಮತ್ತು ಎರಡನೇ ಹಂತ, ಪೆಪ್ಸಿ ರಸ್ತೆ, ಗೊಲ್ಲಹಳ್ಳಿ, ಗೋಣಿಪುರ, ಗಂಗಸಂದ್ರ, ತಿಪ್ಪೂರು, ತಿಟ್ಟಹಳ್ಳಿ, ಲಿಂಗಪುರ, ದೇವಗಿರಿ, ಆನೆಪಾಳ್ಯ, ದೊಡ್ಡಿಪಾಳ್ಯ, ಕುಂಬಿಪುರ, ಹೊಸಪಾಳ್ಯ, ರಾಮೋಹಳ್ಳಿ, ಭೀಮನಕುಪ್ಪೆ, ಆರ್.ಆರ್. ವೈದ್ಯಕೀಯ ಮತ್ತು ಎಂಜಿನಿಯರ್ ಕಾಲೇಜು. ದೊಡ್ಡಬೆಲೆ ಕಾಲೋನಿ, ಸ್ವಾತಿ ನಗರ, ವೈಷ್ಣವಿ ನಗರ ಸುತ್ತಮುತ್ತ ಪ್ರದೇಶಗಳು.

'ವೀರಶೈವ ಮಠ ಕಡೆಗಣಿಸಿದ ಸಿಎಂ'

ಇಂಡಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೀರಶೈವ ಲಿಂಗಾಯತ ಮಠಗಳನ್ನು ಕಡೆಗಣನೆ ಮಾಡುತ್ತಿದ್ದಾರೆ. ವೀರಶೈವ ಮಠಾಧೀಶರ ಬೆಂಬಲದಿಂದಲೇ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದು ಎಂಬುದನ್ನು ಅವರು ಮರೆತಿದ್ದಾರೆ ಎಂದು ಶಿರಶ್ಯಾಡ ಸಂಸ್ಥಾನ ಹಿರೇಮಠದ ಅಭಿನವ ಮುರುಘೇಂದ್ರ ಶಿವಾಚಾರ್ಯರು ಆರೋಪಿಸಿದ್ದಾರೆ.



ನೆಲಮಂಗಲದಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣ ಮಾತನಾಡಿದರು. ಬೂದಿಹಾಳ್ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜು, ವರದ ನಾಯಕನಹಳ್ಳಿ ನಾಗರಾಜು, ಮಾಲ್ಲೂರು ರೇಣುಕಪ್ಪ, ಗಂಗರುದ್ರಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ರಂಗನಾಥ ಬಾಬು, ಯುವ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಯೋಗೇಶ್ ಗೌಡ ಇದ್ದಾರೆ.

'ಸ್ಥಳೀಯರಿಗೆ ಟಿಕೆಟ್ ನೀಡಿ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಥಳೀಯ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದಲ್ಲಿನ ಒಕ್ಕಲಿಗ ಮುಖಂಡರು ಆಗ್ರಹಿಸಿದರು.

ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಪಕ್ಷದ ಮುಖಂಡ ಶಿವಣ್ಣ, 'ಅಭ್ಯರ್ಥಿ ವಿಚಾರದಲ್ಲಿ ಹಲವು ಗೊಂದಲ ಸೃಷ್ಟಿಯಾಗುವ ಮೊದಲೇ ವರಿಷ್ಠರು ನಿರ್ಧಾರ ಪ್ರಕಟಿಸಬೇಕು' ಎಂದು ಒತ್ತಾಯಿಸಿದರು.

'ಈ ಹಿಂದೆ ಕ್ಷೇತ್ರವು ಕಾಂಗ್ರೆಸ್ ಭದ್ರಕೋಟೆಯಾಗಿತ್ತು. ಆದರೆ, ಕಳೆದ ಮೂರು ಚುನಾವಣೆಯಲ್ಲಿ ಪರಾಭವಗೊಂಡಿದ್ದೇವೆ. ಹಣಬಲವೊಂದನ್ನೇ ನೋಡಿ ಹೊರಗಿನ ಅಭ್ಯರ್ಥಿಗಳಿಗೆ ಟಿಕೆಟ್ ನೀಡುತ್ತಿರುವುದು ಮತ್ತು ಕೆಲವರು ಮುಖಂಡರನ್ನು ಓಲೈಸಿ ಗೊಂದಲ ಸೃಷ್ಟಿಸುತ್ತಿರುವುದು ಇದಕ್ಕೆ ಕಾರಣ. ಸ್ಥಳೀಯವಾಗಿ ಕ್ಷೇತ್ರದ ಮುಖಂಡರ, ಸಮಸ್ಯೆಗಳ ಮತ್ತು ಗ್ರಾಮಗಳ ಪರಿಚಯವಿರುವ ಅಭ್ಯರ್ಥಿಯನ್ನು ಆಯ್ಕೆಮಾಡಬೇಕು' ಎಂದರು. 'ಮಾಜಿ ಸಚಿವ ಅಂಜನಾಮೂರ್ತಿ, ಕೋವಿಡ್ ಸಂದರ್ಭದಲ್ಲಿ ಉಚಿತ ಆಂಬುಲೆನ್ಸ್ ಹಾಗೂ ಇತರೆ ಸೇವೆ ಒದಗಿಸಿದ ಸಪ್ತಗಿರಿ ಶಂಕರ ನಾಯಕ್, ಎಚ್.ಪಿ. ಚೆಲುವರಾಜು, ವಕೀಲ ಕಾರೆಹಳ್ಳಿ ವೆಂಕಟರಾಮು, ಕೃಷ್ಣಮೂರ್ತಿ, ಮುಮ್ಮೆನಹಳ್ಳಿ ಜಯರಾಮ್ ಇವರಲ್ಲಿ ಯಾರಿಗಾದರೂ ಟಿಕೆಟ್ ನೀಡಿದರೆ ಗೆಲುವು ಸುಲಭ. ಹೊರಗಿನವರಿಗೆ ನೀಡಿದರೆ ಕೆಲಸ ಮಾಡಲು ಉತ್ಸಾಹ ಇಲ್ಲದಂತಾಗುತ್ತದೆ' ಎಂದರು.


'ಒಕ್ಕಲಿಗರು ಕೇವಲ ಜೆಡಿಎಸ್‌ನಲ್ಲಿದ್ದಾರೆ. ಕಾಂಗ್ರೆಸ್‌ನಲ್ಲಿ ಬೆರಳಣಿಕೆ ಮಂದಿ ಇದ್ದಾರೆ ಎನ್ನುವ ತಪ್ಪು ಭಾವನೆ ಜನರಲ್ಲಿದೆ. ಒಕ್ಕಲಿಗರು ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ' ಎಂದು ತಿಳಿಸಿದರು.

ಅಧ್ಯಕ್ಷರಾಗಿ ನವೀನ್ ಆಯ್ಕೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ರೆಸಿಡೆಂಟ್ಸ್ ಫೋರಂನ ನೂತನ ಅಧ್ಯಕ್ಷರಾಗಿ ಕೆ.ಆರ್.ನವೀನ್ ಮತ್ತು ಗೌರವ ಕಾರ್ಯದರ್ಶಿಯಾಗಿ ಕೆ.ಸುದರ್ಶನ್ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಅಧ್ಯಕ್ಷ ಡಿ.ಸೋಮಶೇಖರ್ ನೇತೃತ್ವದ ತಂಡವರು 2022-24ನೇ ಸಾಲಿಗೆ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳು: ಸಂಪಿಗೆ ಎನ್. ಶಿವಪ್ರಕಾಶ್ (ಉಪಾಧ್ಯಕ್ಷ), ಕೆ.ನವೀನ್ (ಜಂಟಿ ಕಾರ್ಯದರ್ಶಿ), ಜಿ.ಶಶಿಧರ್ (ಖಜಾಂಚಿ),


ಕೆ.ಆರ್.ನವೀನ್


ಕೆ.ಸುದರ್ಶನ್

ಆಡಳಿತ ಮಂಡಳಿ ಸದಸ್ಯರು: ಅಮರ್ ಸುಬ್ಬಯ್ಯ, ಡಿ.ಎಂ.ನಾಗರಾಜ್, ಎ.ಸಿ.ರಮೇಶ್, ಎಚ್.ಎಲ್. ರವಿಕುಮಾರ್, ಡಿ.ರಂಗರಾಜ್, ಆರ್. ಶಿವಶಂಕರ್ ಬಾಬು, ಜಿ.ಶಿವರುದ್ರಯ್ಯ, ಡಿ.ಬಿ.ಸುರೇಶ್, ಜಿ.ತಿಮ್ಮರಾಯಪ್ಪ ಮತ್ತು ಕೆ.ವಿನೋದ್ ಕುಮಾರ್.

ಮುಂಬೈ ರೇಸ್

ಗೆಜಿನೊ ಗೆಲ್ಲುವ ನಿರೀಕ್ಷೆ

ಸಾರ್ಜೆಂಟ್ ಅಟ್ ಆರ್ಮ್ಸ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಗೆಜಿನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕಾಗ್ನೊಸ್ಕೊ 1, ಮಾಲ್‌ಬೋರೊ ಮ್ಯಾನ್ 2, ಎಸ್ಪಿರ್ 6
2ನೇ ರೇಸ್: ಗೆಜಿನೊ 2, ಜೊಕ್ವಿನ್ 1
3ನೇ ರೇಸ್: ಆಹಾ ಬೆಲ್ಲಾ 2, ಮಿಸ್ಟಿಕಲ್ ರೋಸ್ 3, ಐರಾ 5
4ನೇ ರೇಸ್: ಹೂವ್ಸ್ ಆಫ್ ಥಂಡರ್ 1, ಫ್ಯಾಷನ್ ಅಲಾಂಗ್ 5, ಜಿಪ್ ಅಲಾಂಗ್ 6
5ನೇ ರೇಸ್: ಇರ್ರೆಪ್ರೆಸ್ಸಿಬಲ್ 6, ಶೀ ಈಸ್ ಆನ್ ಫೈರ್ 3, ಮಿದಾಸ್ ಟಚ್ 4
6ನೇ ರೇಸ್: ಬ್ರಿಲಿಯಂಟ್ ಎಡ್ಜ್ 5, ಡಾಲಿ ಸ್ವಿರ್ಲ್ 2, ಹೈಪರ್ ಡೈಮೆನ್ಶನಲ್ 6
7ನೇ ರೇಸ್: ಐರಿಷ್ ಮೋರ್ 1, ಡಿವೈನ್ ಥಾಟ್ಸ್ 2, ಫೈತ್ 3
8ನೇ ರೇಸ್: ಜೆಟ್‌ಫೈರ್ 3, ಲಗರ್ಥಾ 2, ಅರೇಬಿಯನ್ ಫಿನಿಕ್ಸ್ 1

ಉತ್ತಮ ಬೆಟ್: ಆಹಾ ಬೆಲ್ಲಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಬೌರಿಂಗ್ ಆಸ್ಪತ್ರೆ: ಬ್ರಿಟಿಷರಿಂದ ನಿರ್ಮಾಣ • 1868ರಲ್ಲಿ ಕಾರ್ಯಾರಂಭ • ಶಿಥಿಲಾವಸ್ಥೆಯಲ್ಲಿ ಕಟ್ಟಡ

ಸೇವೆಗೆ ಮೆಚ್ಚುಗೆ, ವರ್ತನೆಗೆ ಬೇಸರ

• ಮನೋಹರ್ ಎಂ.

ಬೆಂಗಳೂರು: ರೋಗಿಗಳು ವಾರ್ಡ್ ತಲುಪಲು ಎಷ್ಟು ಬಾರಿ ಬಟನ್ ಒತ್ತಿದರೂ ಬಾಗಿಲು ತೆರೆದುಕೊಳ್ಳದ ಕೆಲ ಲಿಫ್ಟ್‌ಗಳು. ಲಿಫ್ಟ್‌ಗಾಗಿ ಕಾದು ಸುಸ್ತಾಗುವ ರೋಗಿಗಳು ಮತ್ತು ಅವರ ಬಂಧುಗಳು..

ಶಿವಾಜಿನಗರದ ಬಸ್ ನಿಲ್ದಾಣದ ಸಮೀಪವಿರುವ 150 ವರ್ಷಗಳಿಗೂ ಹಳೆಯದಾದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಶನಿವಾರ ಕಂಡುಬಂದ ದುಸ್ಥಿತಿ ಇದು. ನಿತ್ಯ ಸಾವಿರಾರು ರೋಗಿಗಳು ಚಿಕಿತ್ಸೆಗಾಗಿ ಬರುವ ಈ ಆಸ್ಪತ್ರೆ ನಗರದ ಹಳೆಯ ಆಸ್ಪತ್ರೆಗಳಲ್ಲೊಂದು. ಆಸ್ಪತ್ರೆಯ ಒಳಭಾಗದಲ್ಲಿರುವ ಕಬ್ಬಿಣದ ಸರಳುಗಳೆಲ್ಲ ತುಕ್ಕು ಹಿಡಿದಿವೆ. ಶತಮಾನ ಕಂಡಿರುವ ಆಸ್ಪತ್ರೆ ಕಟ್ಟಡ ಶಿಥಿಲಾವಸ್ಥೆ ತಲುಪಿದೆ.

ಆದರೆ, ಆಸ್ಪತ್ರೆಯಲ್ಲಿ ಸಿಗುತ್ತಿರುವ ಆರೋಗ್ಯ ಸೇವೆಗಳ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ರೋಗಿಗಳು ಮತ್ತು ಅವರ ಸಂಬಂಧಿಗಳು ಇಲ್ಲಿ ಸಿಗುವ ಆರೈಕೆ ಬಗ್ಗೆ ಒಟ್ಟಾರೆಯಾಗಿ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ, ಕೆಲ ಶುಶ್ರೂಷಕರ ಹಾಗೂ ಸಿಬ್ಬಂದಿ ವರ್ತನೆ ಬಗ್ಗೆ ಅನೇಕರು ಬೇಸರವನ್ನೂ ತೋಡಿಕೊಂಡರು.

'ಮಧುಮೇಹ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದೇನೆ. ನಿನ್ನೆಯಷ್ಟೇ ಕಾಲಿನ ಶಸ್ತ್ರಚಿಕಿತ್ಸೆಯೂ ಆಯಿತು. ನನಗೆ ವಯಸ್ಸಾಗಿರುವುದರಿಂದ ದೇಹದ ನೋವು ಸಹಿಸಿಕೊಳ್ಳಲು ಆಗುವುದಿಲ್ಲ. ಆದರೆ, ಈ ವಿಚಾರಕ್ಕೆ ಶುಶ್ರೂಷಕಿಯೊಬ್ಬರು ಏರುದನಿಯಲ್ಲಿ ಗದರುತ್ತಾರೆ. 'ನೋವು ತಡೆಯಲಾಗದಿದ್ದರೆ, ಡಿಸ್ಚಾರ್ಜ್ ಮಾಡಿಕೊಂಡು ಮನೆಗೆ ಹೊರಡು' ಎಂದು ಏಕವಚನದಲ್ಲಿ ಬೈಯುತ್ತಾರೆ. ಇವರನ್ನು ನಂಬಿ ಆಸ್ಪತ್ರೆಗೆ ಬಂದಿದ್ದೇವೆ. ಈಗ ಇವರಿಂದ ಬೈಗುಳವೂ ಕೇಳಬೇಕು' ಎಂದು ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿ ಶ್ರೀನಿವಾಸ್ ತಮ್ಮ ಸಂಕಟ ಹೊರಹಾಕಿದರು.

'ಹಿರಿಯ ವೈದ್ಯರು ಚೆನ್ನಾಗಿ ಆರೋಗ್ಯ ವಿಚಾರಿಸುತ್ತಾರೆ. ಅವರಿದ್ದಾಗ ಶುಶ್ರೂಷಕರೂ ಸುಮ್ಮನಿರುತ್ತಾರೆ. ಆಸ್ಪತ್ರೆ ಸಿಬ್ಬಂದಿ ರೋಗಿಗಳೊಂದಿಗೆ ಸೌಮ್ಯವಾಗಿ ವರ್ತಿಸಿದರೆ, ರೋಗಿಗಳಿಗೆ ಕನಿಷ್ಠ ಪಕ್ಷ ನೋವು ತಡೆಯುವ ಧೈರ್ಯವಾದರೂ ಮೂಡುತ್ತದೆ' ಎಂದರು.

'ಕ್ಷಯರೋಗ ಸಮಸ್ಯೆಯಿಂದಾಗಿ ಕುಟುಂಬದ ಸದಸ್ಯರೊಬ್ಬರನ್ನು ಆಸ್ಪತ್ರೆಗೆ ದಾಖಲಿಸಿದ್ದೇವೆ. ನಾಲ್ಕು ದಿನಗಳಾದರೂ ಚಿಕಿತ್ಸೆ ಆರಂಭಿಸಿಲ್ಲ. ಕೇಳಿದರೆ ಕಫ ಪರೀಕ್ಷೆಯ ವರದಿ ಬರಲು ಒಂದು ವಾರ ಆಗಬಹುದು. ಅನಂತರವೇ ಚಿಕಿತ್ಸೆ ಆರಂಭಿಸುತ್ತೇವೆ ಎಂದು ವೈದ್ಯರು ಹೇಳುತ್ತಾರೆ' ಎಂದು ಹೆಗಡೆ ನಗರದಿಂದ ಕ್ಷಯರೋಗ ಚಿಕಿತ್ಸೆಗಾಗಿ ಬಂದಿದ್ದ ರೋಗಿಯ ಸಹೋದರಿ ಮುಸ್ಕಾನ್ ತಿಳಿಸಿದರು.

'ವರದಿ ಬರುತ್ತದೆ ಎಂಬ ನಿರೀಕ್ಷೆಯಲ್ಲಿ ಐದು ದಿನಗಳಿಂದ ಬೆಳಿಗ್ಗೆ ಬಂದು ಆಸ್ಪತ್ರೆಯಲ್ಲಿ ಕೂರುವುದು, ಸಂಜೆ ಬಳಿಕ ಮನೆಯತ್ತ ಹೊರಡುವುದೇ ಆಯಿತು. ವೈದ್ಯರು ಚಿಕಿತ್ಸೆ ನೀಡಲು ಬಹಳ ವಿಳಂಬ ಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ಬರುವ ಬಡರೋಗಿಗಳ ನೋವು ಕೇಳುವವರು ಯಾರೂ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಆಹಾರ ವಿತರಣೆಗೆ ಮೆಚ್ಚುಗೆ: 'ಸಾಮಾನ್ಯ ವಾರ್ಡ್‌ಗಳಲ್ಲಿನ ಬಹುತೇಕ ರೋಗಿಗಳು ಆಸ್ಪತ್ರೆಯಲ್ಲಿ ವಿತರಿಸುವ ಆಹಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವೈದ್ಯರಿಂದ ಯಾವುದೇ ಸಮಸ್ಯೆಯಿಲ್ಲ. ಆರೋಗ್ಯ ವಿಚಾರಿಸಿ ಮನೆಯವರಂತೆ ನೋಡಿಕೊಳ್ಳುತ್ತಾರೆ' ಎಂದೂ ಹೇಳಿದರು.

'ನಮ್ಮಂಥ ಬಡವರು ಮೂರು ಹೊತ್ತಿನ ಊಟಕ್ಕೂ ಪರದಾಡಬೇಕು. ಆದರೆ, ಆಸ್ಪತ್ರೆಯಲ್ಲಿ ಸಮಯಕ್ಕೆ ಸರಿಯಾಗಿ ಆಹಾರ ವಿತರಿಸುತ್ತಾರೆ. ಆಹಾರ ರುಚಿಯಿಂದಲೂ ಕೂಡಿರುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಇಂತಹ ಊಟ ನೀಡುತ್ತಾರೆ ಎಂದು ಊಹಿಸಿರಲಿಲ್ಲ' ಎಂದು ಸಾಮಾನ್ಯ ವಾರ್ಡ್‌ನಲ್ಲಿದ್ದ ರೋಗಿಯ ಸಂಬಂಧಿ, ಹೊಸಕೋಟೆಯ ರಂಗಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಲ ವಾರ್ಡ್‌ಗಳಲ್ಲಿ ಸ್ವಚ್ಛತೆ ಇರಲಿಲ್ಲ. ಮಹಿಳಾ ವಾರ್ಡ್‌ನಲ್ಲಿ ಕಸದ ಸಹಿತ ನಿಂತಿದ್ದ ನೀರನ್ನು ಮಧ್ಯಾಹ್ನವಾದರೂ ಸ್ವಚ್ಛಗೊಳಿಸಿರಲಿಲ್ಲ. ಹಾಸಿಗೆಗಳು ಸೇರಿದಂತೆ ಆಸ್ಪತ್ರೆಯಲ್ಲಿದ್ದ ಕೆಲ ಪರಿಕರಗಳು ಹಾಳಾಗಿದ್ದವು.


ಸಾಮಾನ್ಯ ಶಸ್ತ್ರಚಿಕಿತ್ಸೆ, ಮೂಳೆರೋಗ ಚಿಕಿತ್ಸೆ, ರಕ್ತನಿಧಿ, ಅರಿವಳಿಕೆ, ಎಕ್ಸ್‌ರೇ, ಚರ್ಮ ಚಿಕಿತ್ಸೆ, ಪ್ರಸೂತಿ, ಮಕ್ಕಳ ಶುಶ್ರೂಷೆ, ನೇತ್ರ ಚಿಕಿತ್ಸೆ, ನರವಿಜ್ಞಾನ, ಮೂತ್ರಸಂಬಂಧಿ ರೋಗಗಳ ಚಿಕಿತ್ಸೆ, ಪ್ಲಾಸ್ಟಿಕ್ ಸರ್ಜರಿ, ರೇಡಿಯೊಥೆರಪಿ, ವಾತ ಚಿಕಿತ್ಸೆ ಸೇರಿದಂತೆ 20ಕ್ಕೂ ಹೆಚ್ಚು ಆರೋಗ್ಯ ಸೇವೆಗಳು ಆಸ್ಪತ್ರೆಯಲ್ಲಿ ಲಭ್ಯ.



ಬೌರಿಂಗ್ ಆಸ್ಪತ್ರೆಯ ಒಳಭಾಗದಲ್ಲಿರುವ ಕಬ್ಬಿಣದ ಕಂಬ ತುಕ್ಕು ಹಿಡಿದಿರುವುದು –ಪ್ರಜಾವಾಣಿ ಚಿತ್ರ/ ರಂಜು ಪಿ.

ನಿರ್ಮಾಣವಾಗಲಿದೆ ಹೊಸ ಆಸ್ಪತ್ರೆ

'ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ 500 ಹಾಸಿಗೆ ಸಾಮರ್ಥ್ಯದ ಹೊಸ ಕಟ್ಟಡ ನಿರ್ಮಿಸಲು 2022–23ನೇ ರಾಜ್ಯ ಬಜೆಟ್‌ನಲ್ಲಿ ಅನುದಾನ ಘೋಷಿಸಲಾಗಿದೆ. ಸುಮಾರು ₹297 ಕೋಟಿ ವೆಚ್ಚದ ಈ ಯೋಜನೆಯ ಕೆಲಸಗಳು ಎರಡು ತಿಂಗಳಲ್ಲಿ ಆರಂಭವಾಗಲಿವೆ. ಸದ್ಯಕ್ಕೆ ಆಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲ ಆರೋಗ್ಯ ಸೇವೆಗಳು ಲಭ್ಯ' ಎಂದು ಬೌರಿಂಗ್ ಆಸ್ಪತ್ರೆಯ ನಿರ್ದೇಶಕ ಡಾ.ಮನೋಜ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.



ಡಾ.ಮನೋಜ್ ಕುಮಾರ್

ಅಂಕಿ-ಅಂಶಗಳು

20 ಆಸ್ಪತ್ರೆಯಲ್ಲಿರುವ ವಿಭಾಗಗಳು

1 ಸಾವಿರ ಆಸ್ಪತ್ರೆಯಲ್ಲಿರುವ ಆರೋಗ್ಯ ಸಿಬ್ಬಂದಿ

4 ಸಾವಿರ ಬೌರಿಂಗ್ ಆಸ್ಪತ್ರೆಗೆ ಪ್ರತಿದಿನ ಬರುವ ರೋಗಿಗಳ ಸರಾಸರಿ ಸಂಖ್ಯೆ

636 ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ

ಸರ್ಕಾರಿ ಆಸ್ಪತ್ರೆ ಹೀಗಿದೆ ವ್ಯವಸ್ಥೆ 4



ಬೌರಿಂಗ್ ಆಸ್ಪತ್ರೆ ಆವರಣದಲ್ಲಿ ನಿಂತಿದ್ದ ನೀರಿನಲ್ಲೇ ರೋಗಿಯೊಬ್ಬರನ್ನು ಸಿಬ್ಬಂದಿ ಕರೆದೊಯ್ಯುತ್ತಿರುವುದು

ಒಂದೂವರೆ ಶತಮಾನ ಕಂಡ ಬೌರಿಂಗ್ ಆಸ್ಪತ್ರೆ

ಬ್ರಿಟಿಷರು ಹೆಚ್ಚಾಗಿ ವಾಸಿಸುತ್ತಿದ್ದ ಶಿವಾಜಿನಗರ ಪ್ರದೇಶದಲ್ಲಿ 1866ರಲ್ಲಿ ಬೌರಿಂಗ್ ಆಸ್ಪತ್ರೆಯ ನಿರ್ಮಾಣ ಕಾರ್ಯ ಶುರುವಾಯಿತು. ಪ್ಯಾರಿಸ್‌ನಲ್ಲಿದ್ದ ಲಾ ರಿಬೋಸಿ ಕಟ್ಟಡದ ನಕ್ಷೆಯನ್ನು ಆಧಾರವಾಗಿಟ್ಟುಕೊಂಡು ಈ ಆಸ್ಪತ್ರೆಯನ್ನು ಕಟ್ಟಲಾಯಿತು. ಇದು ಅಂದು ನಗರದ ದೊಡ್ಡ ಪ್ರಪ್ರಥಮ ಆಸ್ಪತ್ರೆಯಾಗಿತ್ತು. 1868ರಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಂಡು ಆಸ್ಪತ್ರೆ ಶುರುವಾಯಿತು. ಅಂದಿನ ಮೈಸೂರು ಪ್ರಾಂತ್ಯದ ಕಮಿಷನರ್ ಆಗಿದ್ದ 'ಬೌರಿಂಗ್' ಅವರ ಹೆಸರನ್ನೇ ಈ ಆಸ್ಪತ್ರೆಗೆ ಇಡಲಾಯಿತು.

1900ರವರೆಗೆ ಆಸ್ಪತ್ರೆಯ ಖರ್ಚು-ವೆಚ್ಚ ಹಾಗೂ ಆಡಳಿತ ಮುನಿಸಿಪಲ್ ಕಮಿಷನ್ ನಿಯಂತ್ರಣದಲ್ಲಿತ್ತು. 1900ರ ಏಪ್ರಿಲ್ ನಂತರ ಆಸ್ಪತ್ರೆಯ ಜವಾಬ್ದಾರಿಯನ್ನು ಅಂದಿನ ಬ್ರಿಟಿಷ್ ಸರ್ಕಾರ ಹೊತ್ತಿತ್ತು. ಅದೇ ವರ್ಷ ಹಳೇ ಕಟ್ಟಡಕ್ಕೆ ಹೊಸ ಕೊಠಡಿಗಳನ್ನು ಸೇರಿಸಿ ನವೀಕರಿಸಲಾಯಿತು. ಇದನ್ನು ಲೇಡಿ ಕರ್ಜನ್ ಅವರು ಡಿಸೆಂಬರ್ 10ರಂದು ಉದ್ಘಾಟಿಸಿದರು. ಅದಕ್ಕಾಗಿ ಈ ಭಾಗವನ್ನು ಲೇಡಿ ಕರ್ಜನ್ ಮಹಿಳೆಯರ ಹಾಗೂ ಮಕ್ಕಳ ಆಸ್ಪತ್ರೆ ಎಂದೂ ಕರೆಯಲಾಯಿತು.

'ಪಾವತಿ ಪಾರ್ಕಿಂಗ್'ಗೆ ವಿರೋಧ

ಬೌರಿಂಗ್ ಆಸ್ಪತ್ರೆ ಪ್ರವೇಶದ್ವಾರದ ಮುಂಭಾಗದಲ್ಲೇ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಆದರೆ, ಅಲ್ಲಿ ದಿನವಿಡೀ ನಿಲ್ಲಿಸಿದರೂ, ಒಂದು ಗಂಟೆಗೆ ಸೀಮಿತವಾಗಿ ನಿಲ್ಲಿಸಿದರೂ ವಾಹನ ಮಾಲೀಕರು ₹20 ಪಾವತಿಸಬೇಕು. ಇದಕ್ಕೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸುವ ದೃಶ್ಯ ಕಂಡುಬಂತು.

'ವಾಹನ ನಿಲುಗಡೆಗೆ ಪ್ರತ್ಯೇಕ ಸ್ಥಳ ನಿಗದಿಪಡಿಸಿಲ್ಲ. ಇಲ್ಲಿನ ಒಂದು ಮಾರ್ಗವನ್ನೇ ಪಾರ್ಕಿಂಗ್ ಸ್ಥಳವಾಗಿ ಬದಲಾಯಿಸಿದ್ದಾರೆ. ಬಹುತೇಕರು ರೋಗಿಗಳ ಭೇಟಿಗಾಗಿ ಬರುತ್ತಾರೆ. ಸರ್ಕಾರಿ ಆಸ್ಪತ್ರೆ ಬಳಿ ವಾಹನ ನಿಲ್ಲಿಸುವುದಕ್ಕೂ ಹಣ ಕೊಡಬೇಕೆ' ಎಂದು ಬೆಂಗಳೂರಿನ ನಿವಾಸಿ ಹರೀಶ್ ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ವ್ಹೀಲಿಂಗ್: ದ್ವಿಚಕ್ರ ವಾಹನ ಗುದ್ದಿ ಮಹಿಳೆಗೆ ಗಾಯ

ಬೆಂಗಳೂರು: ಗೋರಿಪಾಳ್ಯದಲ್ಲಿ ಅಪಾಯಕಾರಿಯಾಗಿ ವ್ಹೀಲಿಂಗ್ ಮಾಡಿದ್ದ ಯುವಕರಿಬ್ಬರು, ದ್ವಿಚಕ್ರ ವಾಹನವನ್ನು ಮಹಿಳೆಗೆ ಗುದ್ದಿಸಿ ಪರಾರಿಯಾಗಿದ್ದಾರೆ.

'ಏಪ್ರಿಲ್ 6ರಂದು ನಡೆದಿರುವ ಘಟನೆಯಿಂದಾಗಿ ಮಹಿಳೆ ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗೋರಿಪಾಳ್ಯದ ನರಸಿಂಹ ಸ್ವಾಮಿ ದೇವಸ್ಥಾನದ ರಸ್ತೆ ಪಕ್ಕ ಮಹಿಳೆ ನಡೆದು ಹೋಗುತ್ತಿದ್ದರು. ಅಪಾಯಕಾರಿಯಾಗಿ ವ್ಹೀಲಿಂಗ್ ಮಾಡಿಕೊಂಡು ಬಂದಿದ್ದ ಯುವಕರು, ದ್ವಿಚಕ್ರ ವಾಹನವನ್ನು ಮಹಿಳೆಗೆ ಗುದ್ದಿಸಿದ್ದಾರೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದನ್ನೇ ಪುರಾವೆಯಾಗಿ ಪರಿಗಣಿಸಿ, ಯುವಕರ ಪತ್ತೆಗೆ ಕ್ರಮ ಕೈಗೊಂಡಿದ್ದೇವೆ' ಎಂದೂ ತಿಳಿಸಿವೆ.

'ಅಂಬೇಡ್ಕರ್, ಬಾಬೂಜಿ ಸ್ಮರಣೀಯರು'



ಯಲಹಂಕ: 'ಅಂಬೇಡ್ಕರ್ ರಚಿಸಿದ ಸಂವಿಧಾನದ ಅಡಿಯಲ್ಲಿ ಪರಿಶಿಷ್ಟರಿಗೆ 10 ವರ್ಷಗಳ ಅವಧಿಗೆ ಸೀಮಿತವಾಗಿದ್ದ ಮೀಸಲಾತಿ 75 ವರ್ಷಗಳಾದರೂ ಮುಂದುವರಿಯಲು ಬಾಬು ಜಗಜೀವನರಾಂ ಪರಿಶ್ರಮ ಕಾರಣ. ಈ ಇಬ್ಬರ ಕೊಡುಗೆಯೂ ಸ್ಮರಣೀಯವಾದುದು' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅಭಿಪ್ರಾಯಪಟ್ಟರು.

ಸಿಂಗನಾಯಕನಹಳ್ಳಿಯಲ್ಲಿ ಆಯೋಜಿಸಿದ್ದ ಬಾಬು ಜಗಜೀವನರಾಂ ಅವರ 115ನೇ ಜಯಂತ್ಯುತ್ಸವ ಹಾಗೂ ಬೆಂಗಳೂರು ಆದಿಜಾಂಬವ ಮಾದಿಗ ಮಹಾಸಭಾ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ 3,300 ವಸತಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 5 ಲಕ್ಷಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಇವರ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ₹2,500 ವೆಚ್ಚದಲ್ಲಿ 133 ವಸತಿ ಶಾಲೆಗಳಿಗೆ ಚಾಲನೆ ನೀಡಿದೆ' ಎಂದರು.

ಕಾಂಗ್ರೆಸ್ ಮುಖಂಡ ಕೆ.ಎಚ್.ಮುನಿಯಪ್ಪ, 'ಕಳೆದ ಬಾರಿ ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಮ್ಮದೇ ಸರ್ಕಾರ ಇದ್ದರೂ ಸದಾಶಿವ ಆಯೋಗದ ವರದಿ ಜಾರಿ ಸಾಧ್ಯವಾಗಲಿಲ್ಲ. ಬಿಜೆಪಿ ಸರ್ಕಾರವೇ ಈ ವರದಿ ಜಾರಿಗೊಳಿಸಿದರೆ ಶ್ಲಾಘಿಸುತ್ತೇವೆ' ಎಂದು ಹೇಳಿದರು.

ಸುಧಾ–ಮಯೂರ ಓದಿರಿ

ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿ ಆತ್ಮಹತ್ಯೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ದೀಪು ಎಂಬುವರು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಮೂರು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ದೀಪುನನ್ನು ಪೊಲೀಸರು ಬಂಧಿಸಿದ್ದರು. ನಂತರ, ಆತನನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು. ಮಾರ್ಚ್ 28ರಂದು ಪೊಲೀಸರು ಜೈಲಿಗೆ ಬಿಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'ಕೋವಿಡ್ ಸಂದರ್ಭದಲ್ಲಿ ಹೊಸ ಕೈದಿಗಳ ಕ್ವಾರಂಟೈನ್‌ಗಾಗಿ ಕಟ್ಟಡವೊಂದನ್ನು ಮೀಸಲಿರಿಸಲಾಗಿತ್ತು. ಅದೇ ಕಟ್ಟಡದ ಬ್ಯಾರಕ್‌ನಲ್ಲಿ ದೀಪುನನ್ನು ಇರಿಸಲಾಗಿತ್ತು. ಆತನ ಜೊತೆ ಸುಮಾರು 20 ಕೈದಿಗಳಿದ್ದರು. ಬ್ಯಾರಕ್‌ನಲ್ಲಿದ್ದ ಕೈದಿಗಳು ಶನಿವಾರ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಶೌಚಾಲಯಕ್ಕೆ ಹೋಗಿದ್ದ ದೀಪು, ಅಲ್ಲಿಯೇ ಕಿಟಕಿಗೆ ಬೆಡ್‌ಶೀಟ್‌ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ' ಎಂದೂ ಅವರು ತಿಳಿಸಿದರು.

'ಕೆಲ ನಿಮಿಷಗಳ ನಂತರ ಶೌಚಾಲಯಕ್ಕೆ ಹೋಗಿದ್ದ ಕೈದಿಯೊಬ್ಬರು ಮೃತದೇಹ ಗಮನಿಸಿ, ಜೈಲಿನ ಸಿಬ್ಬಂದಿಗೆ ತಿಳಿಸಿದ್ದರು. ಸಿಬ್ಬಂದಿ ನೀಡಿದ್ದ ಮಾಹಿತಿ ಆಧರಿಸಿ ಜೈಲಿನೊಳಗೆ ಹೋಗಿ ಮೃತ ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ. ಆತ್ಮಹತ್ಯೆಗೂ ಮುನ್ನ ದೀಪು ತನ್ನ ಕೈ ಮೇಲೆ ಪತ್ನಿ ಹೆಸರು ಬರೆದುಕೊಂಡಿದ್ದಾನೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಷರತ್ತುಗಳಲ್ಲ, ನೌಕರರ ಪಾಲಿನ ಮರಣ ಶಾಸನ: ಸಂಘಟನೆಗಳ ಆಕ್ಷೇಪ

ಬಿಎಂಟಿಸಿ: ವಜಾಗೊಂಡ ನೌಕರರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಷ್ಕರದ ವೇಳೆ ವಜಾಗೊಂಡಿದ್ದ ಸಿಬ್ಬಂದಿಗಳ ಮರು ನೇಮಕಕ್ಕೆ ಬಿಎಂಟಿಸಿ ಮುಂದಾಗಿದೆ. ಅದಕ್ಕೆ ವಿಧಿಸಿರುವ ಷರತ್ತುಗಳು ನೌಕರರ ಪಾಲಿಗೆ ಮರಣ ಶಾಸನವಾಗಿವೆ ಎಂಬ ಆಕ್ಷೇಪ ನೌಕರರ ಸಂಘಟನೆಗಳಿಂದ ವ್ಯಕ್ತವಾಗಿದೆ.

ಆರನೇ ವೇತನ ಆಯೋಗದ ಶಿಫಾರಸುಗಳನ್ನು ಸಾರಿಗೆ ನೌಕರರಿಗೂ ಅನ್ವಯಿಸಬೇಕು ಎಂದು ಒತ್ತಾಯಿಸಿ 2021ರ ಏಪ್ರಿಲ್ 7ರಿಂದ 21ರವರೆಗೆ ನೌಕರರು ಮುಷ್ಕರ ನಡೆಸಿದ್ದರು. ಕರ್ತವ್ಯಕ್ಕೆ ಗೈರಾಗಿ ಮುಷ್ಕರದಲ್ಲಿ ಭಾಗಿಯಾಗಿದ್ದ ಆರೋಪದಲ್ಲಿ 1,392 ನೌಕರರನ್ನು ಬಿಎಂಟಿಸಿ ವಜಾಗೊಳಿಸಲಾಗಿತ್ತು.

ಯಾವುದೇ ಷರತ್ತು ವಿಧಿಸದೆ ನೌಕರರನ್ನು ಮರು ನೇಮಕ ಮಾಡಿಕೊಳ್ಳಬೇಕು ಎಂದು ನೌಕರರ ಸಂಘಟನೆಗಳು ನಿರಂತರವಾಗಿ ಹೋರಾಟ ನಡೆಸಿದ್ದವು. ಈಗ ಮರು ನೇಮಕಾತಿ ಆದೇಶ ಪತ್ರವನ್ನು ಸಾರಿಗೆ ಸಚಿವ ಶ್ರೀರಾಮುಲು ಅವರು ಸೋಮವಾರ ವಿತರಣೆ ಮಾಡಲಿದ್ದಾರೆ ಎಂದು ಬಿಎಂಟಿಸಿ ಮಾಹಿತಿ ನೀಡಿದೆ.

'ತರಬೇತಿ ಅವಧಿಯಲ್ಲಿದ್ದ ಮತ್ತು ಪ್ರೊಬೇಷನರಿ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಮರು ನೇಮಕ ಮಾಡಿಕೊಳ್ಳಲಾಗಿದೆ. ಅವರು ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಪರಿಗಣಿಸದೆ ಹೊಸದಾಗಿ ನೇಮಕ ಮಾಡಿಕೊಳ್ಳಲಾಗಿದೆ. ಇನ್ನುಳಿದಂತೆ 700ಕ್ಕೂ ಹೆಚ್ಚು ಕಾಯಂ ನೌಕರರ ಮರು ನೇಮಕ ಆಗಬೇಕಿದೆ. ಅದರಲ್ಲಿ 53 ಜನರಿಗಷ್ಟೇ ಸೋಮವಾರ ಮರು ನೇಮಕ ಆದೇಶ ನೀಡಲು ಬಿಎಂಟಿಸಿ ಸಿದ್ಧತೆ ಮಾಡಿಕೊಂಡಿದೆ' ಎಂದು ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

'ಯಾವುದೇ ಷರತ್ತುಗಳನ್ನು ವಿಧಿಸದೆಯೇ ಮರು ನೇಮಕ ಮಾಡಿಕೊಳ್ಳಲಾಗುವುದು ಎಂದು ಪದೇ ಪದೇ ಹೇಳುತ್ತಿದ್ದ ಸಾರಿಗೆ ಸಚಿವರು, ಈಗ ಇನ್ನಿಲ್ಲದ ಷರತ್ತುಗಳನ್ನು ವಿಧಿಸಿದ್ದಾರೆ. ಬಿಎಂಟಿಸಿ ಈಗ ನೀಡಲು ಹೊರಟಿರುವುದು ನೇಮಕಾತಿ ಆದೇಶವಲ್ಲ, ಮರಣ ಶಾಸನ' ಎಂದು ಅವರು ಹೇಳಿದರು.

'ಮರು ನೇಮಕಗೊಳ್ಳುವ ಸಿಬ್ಬಂದಿಗೆ ಸೇವಾ ಅವಧಿಯಲ್ಲಿ ವೇತನ ಹೆಚ್ಚಳ (ಇಂಕ್ರಿಮೆಂಟ್) ಮತ್ತು ಬಡ್ತಿ ಇರುವುದಿಲ್ಲ ಎಂಬ ಷರತ್ತು ವಿಧಿಸಲಾಗಿದೆ. ಇದರಿಂದ ಪ್ರತಿ ನೌಕರರಿಗೆ ಕನಿಷ್ಠ ₹5 ಲಕ್ಷದಷ್ಟು ನಷ್ಟವಾಗಲಿದೆ. ಸೇವೆಯ ನಿರಂತರತೆಯನ್ನೂ ಖಾತ್ರಿಪಡಿಸುತ್ತಿಲ್ಲ. ಇದು ನೌಕರರ ಗ್ರಾಚ್ಯುಟಿ ಮೇಲೆ ಪರಿಣಾಮ ಬೀರಲಿದೆ. ಇದರಿಂದ ಪ್ರತಿ ನೌಕರನಿಗೆ ₹7 ಲಕ್ಷದಿಂದ ₹8 ಲಕ್ಷದ ತನಕ ನಷ್ಟವಾಗಲಿದೆ' ಎಂದು ಚಂದ್ರಶೇಖರ್ ವಿವರಿಸಿದರು.

'ತನಿಖೆ ನಡೆಸದೆಯೇ ನೌಕರರನ್ನು ವಜಾಗೊಳಿಸಲಾಗಿದೆ. ಕೂಡಲೇ ಅವರನ್ನು ಸೇವೆಗೆ ಮರು ನೇಮಕ ಮಾಡಿಕೊಳ್ಳಬೇಕು. ಇಲ್ಲವೇ ಅರ್ಧ ಸಂಬಳ ನೀಡಬೇಕು ಎಂದು ಕಾರ್ಮಿಕ ನ್ಯಾಯಾಲಯ ಆದೇಶ ನೀಡಿದೆ. ಆದ್ದರಿಂದ ನೆಪಮಾತ್ರಕ್ಕೆ ನೌಕರರನ್ನು ಮರು ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ನೌಕರರಿಗೆ ಯಾವುದೇ ಪ್ರಯೋಜನ ಇಲ್ಲ. ಇದಕ್ಕೆ ನಮ್ಮ ವಿರೋಧ ಇದೆ' ಎಂದರು.

ಸ್ವೀಕರಿಸದ ದೂರವಾಣಿ ಕರೆ: ಈ ಬಗ್ಗೆ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.

'ಕಿದ್ವಾಯಿ ಆಸ್ಪತ್ರೆ: ತಜ್ಞ ವೈದ್ಯರ ನೇಮಕಾತಿ ಶೀಘ್ರ'

ಬೆಂಗಳೂರು: ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ತಜ್ಞ ವೈದ್ಯರ ನೇಮಕಾತಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದ್ದು, ಶೀಘ್ರ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಕ್ಯಾನ್ಸರ್ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಮುಂದೂಡುತ್ತಿಲ್ಲ. ರೋಗಿಯ ಸ್ಥಿತಿ ಆಧಾರದ ಮೇಲೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಆಸ್ಪತ್ರೆಗೆ ಬಂದ ರೋಗಿಗಳನ್ನು ಕೆಲ ವೈದ್ಯಕೀಯ ತಪಾಸಣೆಗಳನ್ನು ಒಳಪಡಿಸಬೇಕಾಗುತ್ತದೆ. ವೈದ್ಯಕೀಯ ವರದಿ ಆಧರಿಸಿ ರೋಗ ಪತ್ತೆಯಾದ ಕೂಡಲೇ ಚಿಕಿತ್ಸೆ ನೀಡಲಾಗುತ್ತಿದೆ. ಇದುವರೆಗೂ ಯಾವೊಬ್ಬ ರೋಗಿಯೂ ಹಣ ಇರಲಿ, ಇಲ್ಲದಿರಲಿ ಚಿಕಿತ್ಸೆ ಇಲ್ಲದೆಯೇ ಆಸ್ಪತ್ರೆಯಿಂದ ಹೊರ ಹೋಗಿರುವ ನಿದರ್ಶನ ಇಲ್ಲ ಎಂದು ತಿಳಿಸಿದೆ.

ರೋಗಿಗಳ ಸಂಬಂಧಿಕರು ಖಾಲಿ ಇರುವ ವಾರ್ಡ್‌ಗಳಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ರೋಗಿಗಳು ವಿಶ್ರಾಂತಿ ಪಡೆಯಲು ಹಸಿರು ವನಗಳನ್ನು ನಿರ್ಮಿಸಲಾಗಿದೆ. ಆಸ್ಪತ್ರೆಯ ಆವರಣದಲ್ಲಿರುವ ಎರಡು ಧರ್ಮಶಾಲೆಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದೆ. ರೋಗಿಗಳ ಜತೆ ಬರುವ ಸಂಬಂಧಿಕರು ಸುಮಾರು 5 ಸಾವಿರದಿಂದ 6 ಸಾವಿರ ಮಂದಿ ಬರುತ್ತಾರೆ. ಎಲ್ಲರಿಗೂ ಉಳಿದುಕೊಳ್ಳುವ ಸೌಲಭ್ಯ ಕಲ್ಪಿಸಿಕೊಡುವುದು ಕಷ್ಟ ಸಾಧ್ಯ ಎಂದು ತಿಳಿಸಿದೆ.

ರೋಗಿಗಳಿಗೆ ಕೈಗೆಟಕುವ ದರದಲ್ಲಿ ಔಷಧ ನೀಡಲಾಗುತ್ತಿದೆ. ಕ್ಯಾನ್ಸರ್ ರೋಗ ವಾಸಿಯಾಗಲು ಎಲ್ಲ ಔಷಧಗಳು ಇಲ್ಲಿ ಲಭ್ಯ. ಕೆಲವೊಮ್ಮೆ ಸೂಕ್ತ ಔಷಧಿಗಳು ಖಾಲಿಯಾದ ಕೂಡಲೇ ತರಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

'ಕಿದ್ವಾಯಿ: ಬಸವಳಿದ ಬಡವರ ಆಸ್ಪತ್ರೆ' ಶೀರ್ಷಿಕೆ ಅಡಿ ಪ್ರಕಟವಾದ ಸುದ್ದಿಗೆ ಸಂಸ್ಥೆಯು ಈ ಸ್ಪಷ್ಟನೆ ನೀಡಿದೆ.

ಏ. 11ರಂದು ಬೆಂಗಳೂರು ನಗರ ವಿ.ವಿ. ಮೊದಲ ಘಟಿಕೋತ್ಸವ: ಪ್ರಥಮ ರ‍್ಯಾಂಕ್ ಪಡೆದ 84 ವಿದ್ಯಾರ್ಥಿಗಳು

41,768 ವಿದ್ಯಾರ್ಥಿಗಳಿಗೆ ನಾಳೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೊದಲ ವಾರ್ಷಿಕ ಘಟಿಕೋತ್ಸವದಲ್ಲಿ ಒಟ್ಟು 41,768 ವಿದ್ಯಾರ್ಥಿಗಳು ಪದವಿ ಸ್ವೀಕರಿಸಲಿದ್ದಾರೆ. ಇವರಲ್ಲಿ 26,945 (ಶೇ 64.51) ವಿದ್ಯಾರ್ಥಿನಿಯರು.

'ಏ.11ರಂದು ಬೆಳಿಗ್ಗೆ 10.30ಕ್ಕೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ಘಟಿಕೋತ್ಸವ ನಡೆಯಲಿದ್ದು, ಪ್ರಥಮ ರ‍್ಯಾಂಕ್ ಪಡೆದ 84 ವಿದ್ಯಾರ್ಥಿಗಳು ಪ್ರಮಾಣಪತ್ರಗಳನ್ನು ಸ್ವೀಕರಿಸಲಿದ್ದಾರೆ. ಇವರಲ್ಲಿ 2018–20ನೇ ಶೈಕ್ಷಣಿಕ ವರ್ಷದ 32 ಮತ್ತು 2019–21ರ ಶೈಕ್ಷಣಿಕ ವರ್ಷದ 32 ಸ್ನಾತಕೋತ್ತರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಸ್ಥಾಪಿಸಿರುವ ಚಿನ್ನದ ಪದಕ (₹10 ಸಾವಿರ ಮೌಲ್ಯ) ಮತ್ತು ₹20 ಸಾವಿರ ನಗದು ಬಹುಮಾನ ಸ್ವೀಕರಿಸಲಿದ್ದಾರೆ' ಎಂದು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಎಂ.ಎ. ಫ್ರೆಂಚ್ ವಿಷಯಕ್ಕೆ ದಿವಂಗತ ಬಿ. ನಂಜುಂಡಯ್ಯ ಐ.ಇ.ಎಸ್. ಸ್ಮಾರಕ ಚಿನ್ನದ ಪದಕ, ಎಂ.ಎಸ್ಸಿ. ಜೈವಿಕ ರಸಾಯನವಿಜ್ಞಾನಕ್ಕೆ ಪ್ರೊ.ಪಿ.ಎಸ್. ವೀರಭದ್ರಪ್ಪ ಸ್ಮಾರಕ ಚಿನ್ನದ ಪದಕ, ಎಂ.ಎಸ್ಸಿ. ಸೂಕ್ಷ್ಮಜೀವಾಣುವಿಜ್ಞಾನ ವಿಭಾಗಕ್ಕೆ ಡಾ. ಎಂ.ಎಸ್. ರಾಮಯ್ಯ ಸ್ಮಾರಕ ಚಿನ್ನದ ಪದಕ ಸ್ಥಾಪಿಸಲಾಗಿದೆ. ಪ್ರತಿ ಚಿನ್ನದ ಪದಕಕ್ಕಾಗಿ ಬ್ಯಾಂಕ್‌ನಲ್ಲಿ ತಲಾ ₹6 ಲಕ್ಷ ಠೇವಣಿ ಇಡಲಾಗಿದ್ದು, ಇದರ ಬಡ್ಡಿ ಮೊತ್ತವನ್ನು ಚಿನ್ನದ ಪದಕಗಳಿಗೆ ವೆಚ್ಚ ಮಾಡಲಾಗುತ್ತಿದೆ' ಎಂದು ವಿವರಿಸಿದರು.

'ಪ್ರವಾಸೋದ್ಯಮ ನಿರ್ವಹಣೆ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜು ವತಿಯಿಂದ ಚಿನ್ನದ ಪದಕ ಹಾಗೂ ಬಿ.ಕಾಂ. ಕೋರ್ಸ್‌ನಲ್ಲಿ ಡಾ. ಚೆನ್ನರಾಜ್ ರಾಯ್‌ಚಂದ್ ಸ್ಮಾರಕ ಚಿನ್ನದ ಪದಕ ಹಾಗೂ ಬಿ.ಕಾಂ ಮತ್ತು ಬಿಬಿಎ ಕೋರ್ಸ್‌ನಲ್ಲಿ ಶೇಷಾದ್ರಿಪುರ ಎಜುಕೇಷನಲ್ ಟ್ರಸ್ಟ್ ವತಿಯಿಂದ ಚಿನ್ನದ ಪದಕ ಸ್ಥಾಪಿಸಲಾಗಿದೆ' ಎಂದರು.

'ಕೋವಿಡ್ ಕಾರಣಕ್ಕೆ 2021ರಲ್ಲಿ ಘಟಿಕೋತ್ಸವ ನಡೆಸಲು ಸಾಧ್ಯವಾಗಲಿಲ್ಲ. 2021ರಲ್ಲಿ ಕೇವಲ ಸ್ನಾತಕೋತ್ತರ ವಿದ್ಯಾರ್ಥಿಗಳು ಮಾತ್ರ ಇದ್ದರು. ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಮಾನ್ಯತೆ ಪಡೆದ 242 ಕಾಲೇಜುಗಳು ಮತ್ತು 11 ಸ್ವಾಯತ್ತ ಕಾಲೇಜುಗಳಿವೆ' ಎಂದು ತಿಳಿಸಿದರು.


'ಬಾಹ್ಯಾಕಾಶ ವಿಜ್ಞಾನಿ ಡಾ.ಕೆ. ಕಸ್ತೂರಿ ರಂಗನ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಗಣ್ಯರು ಮತ್ತು ವಿದ್ಯಾರ್ಥಿಗಳು ಬಿಳಿ ಖಾದಿ ಬಟ್ಟೆ ಧರಿಸಿ ಪಾಲ್ಗೊಳ್ಳಲಿದ್ದಾರೆ' ಎಂದು ಪ್ರೊ. ಲಿಂಗರಾಜ ಗಾಂಧಿ ಅವರು ಮಾಹಿತಿ ನೀಡಿದರು.

ನಟ ರವಿಚಂದ್ರನ್ ಸೇರಿ ಮೂವರಿಗೆ ಗೌರವ ಡಾಕ್ಟರೇಟ್


ಬೆಂಗಳೂರು: ನಟ ಮತ್ತು ನಿರ್ದೇಶಕ ವಿ. ರವಿಚಂದ್ರನ್ ಸೇರಿದಂತೆ ಮೂವರಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದೆ.

'ಕನ್ನಡ ಚಿತ್ರೋದ್ಯಮಕ್ಕೆ ನೀಡಿರುವ ಕೊಡುಗೆಗಾಗಿ ವಿ. ರವಿಚಂದ್ರನ್ ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿನ ಅನುಪಮ ಸೇವೆಗಾಗಿ ಎಂ.ಆರ್. ಜೈಶಂಕರ್ ಅವರಿಗೆ ಡಿ.ಲಿಟ್. ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆಗಾಗಿ ಡಾ. ಸತ್ಯನಾರಾಯಣ ಅವರಿಗೆ ಡಿ.ಎಸ್ಸಿ. ಪದವಿ ನೀಡಲಾಗುವುದು' ಎಂದು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


'ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಈ ಮೂವರಿಗೆ ಪದವಿ ಪ್ರದಾನ ಮಾಡಲಿದ್ದಾರೆ' ಎಂದು ತಿಳಿಸಿದರು.



ರವಿಚಂದ್ರನ್



ಎಂ.ಆರ್. ಜೈಶಂಕರ್



ಡಾ. ಸತ್ಯನಾರಾಯಣ

ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳ ವಿವರ

ಒಟ್ಟು	12,528
ಕಲಾ ವಿಭಾಗ	1,369
ವಿಜ್ಞಾನ ವಿಭಾಗ	2,932
ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ	8191
ಶಿಕ್ಷಣ ವಿಭಾಗ	36

ಸ್ನಾತಕ ಪದವಿ ಪಡೆಯುವ ವಿದ್ಯಾರ್ಥಿಗಳ ವಿವರ

ಒಟ್ಟು	29,240
ಕಲಾ ವಿಭಾಗ	2,723
ವಿಜ್ಞಾನ ವಿಭಾಗ	7,179
ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ	16,881
ಶಿಕ್ಷಣ ವಿಭಾಗ	2,457

ಚಿನ್ನದ ಪದಕ: ವಿದ್ಯಾರ್ಥಿನಿಯರೇ ಮೇಲುಗೈ

ವಿಶ್ವವಿದ್ಯಾಲಯದಲ್ಲಿ ಅತಿ ಹೆಚ್ಚು ಚಿನ್ನದ ಪದಕಗಳನ್ನು ವಿದ್ಯಾರ್ಥಿನಿಯರೇ ಪಡೆದಿದ್ದಾರೆ.

ಭಗವಾನ್ ಮಹಾವೀರ ಜೈನ್ ಸಂಜೆ ಕಾಲೇಜಿನ ಪೂರ್ವಾ ಎನ್. ಗಾಂಧಿ ಬಿ.ಕಾಂ. ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದಕ್ಕಾಗಿ ಮೂರು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಪದವಿ ವಿಷಯಗಳಲ್ಲಿ ಅತಿ ಹೆಚ್ಚು ಚಿನ್ನದ ಪದಕಗಳನ್ನು ಇವರು ಪಡೆದಿದ್ದಾರೆ. ಪ್ರಸ್ತುತ ಚಾರ್ಟಡ್ ಅಕೌಂಟ್‌ಂಟ್ (ಸಿ.ಎ) ಕೋರ್ಸ್ ಅಧ್ಯಯನವನ್ನು ಪೂರ್ವಾ ಕೈಗೊಂಡಿದ್ದಾರೆ.

'ನಾನು ಚಿನ್ನದ ಪದಕ ನಿರೀಕ್ಷಿಸಿರಲಿಲ್ಲ. ನನ್ನ ತಂದೆಯೂ ಚಾರ್ಟಡ್ ಅಕೌಂಟಂಟ್. ಹೀಗಾಗಿ, ಈ ವೃತ್ತಿಯ ಬಗ್ಗೆ ಆಸಕ್ತಿ ಮೂಡಿದೆ' ಎಂದು ಪೂರ್ವಾ ಹೇಳಿದರು.

ಜಯನಗರದ ಎಸ್.ಎಸ್. ಎಂ.ಆರ್.ವಿ. ಕಾಲೇಜಿನ ತಾಕಿಯಾ ಖಾನಮ್ ಬಿಬಿಎ ಪದವಿಯಲ್ಲಿ ಎರಡು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ರೇವಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನಿಂದ ಎಂಬಿಎ ಪಡೆದಿರುವ ದುವ್ವುರು ಅಲೇಕ್ಯಾ ಅವರು ಎರಡು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

'ರ‍್ಯಾಂಕ್ ನಿರೀಕ್ಷಿಸಿರಲಿಲ್ಲ. ಶಿಕ್ಷಕರು ಮಾರ್ಗದರ್ಶನ ನೀಡಿದ್ದರು. ನಮ್ಮ ತಂದೆ ಕೃಷಿಕ ಮತ್ತು ಸಾರಿಗೆ ಉದ್ಯಮಿ. ತಾಯಿ ಗೃಹಿಣಿ' ಎಂದು ಅಲೇಕ್ಯಾ ವಿವರಿಸಿದರು.

ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಆನ್ ಮೇರಿ ಸೆಬಾಸ್ಟಿಯನ್ ಎಂ.ಎಸ್ಸಿಯಲ್ಲಿ ಎರಡು ಚಿನ್ನದ ಪದಕ ಪಡೆದಿದ್ದಾರೆ.

'ನಾನು ಮೊದಲ ರ‍್ಯಾಂಕ್ ನಿರೀಕ್ಷಿಸಿರಲಿಲ್ಲ. ಪರಿಶ್ರಮ ಮತ್ತು ಪೋಷಕರ ಬೆಂಬಲ ಇದು ಸಾಧ್ಯವಾಗಿದೆ. ತಂದೆ ವ್ಯಾಪಾರಸ್ಥರಾಗಿದ್ದು, ತಾಯಿ ಕೇಂದ್ರ ಸರ್ಕಾರದ ಸಂಸ್ಥೆಯಲ್ಲಿ ಉದ್ಯೋಗಿ' ಎಂದು ಆನ್ ಮೇರಿ ಸೆಬಾಸ್ಟಿಯನ್ ವಿವರಿಸಿದರು.

ಎಂ.ಎಸ್ಸಿ. ಜೈವಿಕ ರಸಾಯನವಿಜ್ಞಾನದಲ್ಲಿ ಎರಡು ಚಿನ್ನದ ಪದಕ ಪಡೆದಿರುವ ಬಿ.ಎಸ್. ನಿವೇದಿತಾ, ಸಂಶೋಧನೆಯಲ್ಲಿ ಆಸಕ್ತಿ ತೋರಿದ್ದಾರೆ. ಅವರ ತಂದೆ ನಿವೃತ್ತ ಸರ್ಕಾರಿ ನೌಕರ. ಇವರ ತಾಯಿ ಗೃಹಿಣಿ.


'ಶಾಲಾ ದಿನಗಳಿಂದಲೂ ಜೀವವಿಜ್ಞಾನದ ಬಗ್ಗೆ ಬಲು ಆಸಕ್ತಿ. ಕ್ಯಾನ್ಸರ್ ಕುರಿತ ಪಿಎಚ್.ಡಿ.ಸಂಶೋಧನೆ ಕೈಗೊಳ್ಳುವ ಆಸೆ ಇದೆ' ಎಂದು ನಿವೇದಿತಾ ತಿಳಿಸಿದರು.

ವಿದೇಶಿ ಭಾಷಾ ವಿಭಾಗದಲ್ಲಿ ಫ್ರೆಂಚ್ ವಿಷಯದಲ್ಲಿ ಅನಿತಾ ಕರೆನ್ ಪಿರೇರಾ ಎರಡು ಚಿನ್ನದ ಪದಕ ಪಡೆದಿದ್ದಾರೆ.

'ನನಗೆ ನಿಜಕ್ಕೂ ಅಚ್ಚರಿಯಾಯಿತು. ಪದವಿಯಲ್ಲಿ ಫ್ರೆಂಚ್ ಆಯ್ಕೆ ಮಾಡಿಕೊಂಡಿದ್ದೆ. ಹೀಗಾಗಿ, ಆ ಭಾಷೆಯ ಬಗ್ಗೆ ಒಲವು ಮೂಡಿತ್ತು' ಎಂದು ಅನಿತಾ ಅವರು ವಿವರಿಸಿದರು.



ಪೂರ್ವ ಎನ್. ಗಾಂಧಿ



ಅನಿತಾ ಕರೆನ್ ಪಿರೇರಾ



ದುವ್ವುರು ಅಲೇಕ್ಯಾ



ತಾಕಿಯಾ ಖಾನಂ



ಆನ್ ಮೇರಿ ಸೆಬಾಸ್ಟಿಯನ್



ನಿವೇದಿತಾ

ಪ್ರಪಂಚದ ಅತಿದೊಡ್ಡ ಭೌಗೋಳಿಕ ಸಮೀಕ್ಷೆಗೆ ನಾಂದಿ ಹಾಡಿದ ಬೆಂಗಳೂರು

ದೇಶದ ನಕ್ಷೆಯ ಮೂಲ ಈ 'ಜಿಟಿಎಸ್' ಬಿಂದು

• ಶಿವರಾಜ ರಾಮನಾಳ



ಮೇಖ್ರಿ ವೃತ್ತ ಬಳಿಯ ರಮಣ ಮಹರ್ಷಿ ಉದ್ಯಾನದಲ್ಲಿರುವ ಗ್ರೇಟ್ ಟ್ರಿಗೊನೊಮೆಟ್ರಿಕಲ್ ಸರ್ವೆಯ ಬಿಂದುವಿನ ಕುರುಹು –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ಬೆಂಗಳೂರು: ಉದ್ಯಾನ ನಗರಿಯು ಅನೇಕ ಮಹಾನ್ ಯೋಜನೆಗಳಿಗೆ ನಾಂದಿ ಹಾಡಿದೆ. ಅಂತಹ ಮಹತ್ತರ ಯೋಜನೆಗಳಲ್ಲಿ ಒಂದು 'ಗ್ರೇಟ್ ಟ್ರಿಗೊನೊಮೆಟ್ರಿಕಲ್ ಸರ್ವೆ' (ತ್ರಿಕೋನಮಿತಿಯ ಸಮೀಕ್ಷೆ). ಇದು ಪ್ರಪಂಚದ ಅತಿದೊಡ್ಡ ಭೌಗೋಳಿಕ ಸಮೀಕ್ಷೆ ಎಂಬ ಹೆಗ್ಗಳಿಕೆಯನ್ನು ಹೊಂದಿದೆ.

ದೇಶದ ಭೌಗೋಳಿಕ ಸಮೀಕ್ಷೆಯನ್ನು ಮೊದಲ ಬಾರಿ ವೈಜ್ಞಾನಿಕವಾಗಿ ಕೈಗೊಂಡಿದ್ದು ಬೆಂಗಳೂರಿನಲ್ಲಿ. ಸಮೀಕ್ಷೆಗಾಗಿ ನಿರ್ಮಿಸಿದ ತ್ರಿಕೋನಮಿತಿಯ ಬಿಂದುವಿನ ಒಂದು ಕುರುಹು ಮೇಖ್ರಿ ವೃತ್ತದ ರಮಣ ಮಹರ್ಷಿ ಉದ್ಯಾನದಲ್ಲಿದೆ. ಇನ್ನೊಂದು ಕಣ್ಣೂರಿನ ಬಳಿ ಇದೆ. 1800ರಲ್ಲಿ ನಿರ್ಮಿಸಲಾದ ಈ ಬಿಂದುಗಳಿಗೆ ಈಗ 221 ವರ್ಷಗಳು.

ಉದ್ಯಾನದಲ್ಲಿನ ಕೆಂಪೇಗೌಡ ಕಾವಲು ಗೋಪುರದ ಮುಂದಿನ ಬೆಣಚು ಕಲ್ಲಿನ ಹಾದಿಯು ನಿಮ್ಮನ್ನು ಕಟ್ಟೆಯೊಂದರ ಬಳಿಗೆ ಕರೆದೊಯ್ಯುತ್ತದೆ. ಅದರ ಮೇಲಿನ ಚೌಕಾಕಾರದ ಆಕೃತಿ ಗಮನ ಸೆಳೆಯುತ್ತದೆ. ಸನಿಹಕ್ಕೆ ಹೋದಾಗಲೇ ಅಲ್ಲಿ ತ್ರಿಕೋನಮಿತಿ ಸಮೀಕ್ಷೆಯ ಬಿಂದು ಇರುವುದು ತಿಳಿಯುತ್ತದೆ.

ಸಮೀಕ್ಷೆ ಬಿಂದುವಿನ ಇತಿಹಾಸವು ಹಲವು ಕೌತುಕಗಳಿಂದ ಕೂಡಿದೆ. 1799ರ ಆಂಗ್ಲೊ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತ ನಂತರ ಮೈಸೂರು ಪ್ರಾಂತ್ಯ ಬ್ರಿಟಿಷರ ವಶವಾಯಿತು. ಆಗ ಮದ್ರಾಸ್ ಮತ್ತು ಮಂಗಳೂರಿನವರೆಗೆ

ಬೆಂಗಳೂರು ನಮ್ಮ ಹೆಮ್ಮೆ...

ವಿಸ್ತರಿಸಿದ್ದ ಸಾಮ್ರಾಜ್ಯದ ಭೌಗೋಳಿಕ ಸಮೀಕ್ಷೆ ನಡೆಸಿಕೊಡುವುದಾಗಿ ಟಿಪ್ಪುವಿನೊಡನೆ ಕಾದಾಡಿದ್ದ ಸೈನಿಕ ವಿಲಿಯಂ ಲ್ಯಾಂಪ್ಟನ್ ಬ್ರಿಟಿಷ್ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸುತ್ತಾನೆ.

ತಾವು ಗೆದ್ದ ಪ್ರದೇಶಗಳಲ್ಲಿ ಸೈನ್ಯದ ಸಂಚಾರಕ್ಕೆ ಮತ್ತು ಇಲ್ಲಿ ಕಂದಾಯ ವಸೂಲಿ ಮಾಡಲು ಭೂಮಿಯ ಬಗ್ಗೆ ಅರಿವು ಅವಶ್ಯಕ ಎಂದರಿತ ಬ್ರಿಟಿಷ್ ಆಡಳಿತ ಈ ಸಮೀಕ್ಷೆಗೆ 1800ರಲ್ಲಿ ಅನುಮೋದನೆ ನೀಡುತ್ತದೆ. ನಂತರ ಲ್ಯಾಂಪ್ಟನ್ ಸಮೀಕ್ಷೆಗೆ ಅತ್ಯಾಧುನಿಕ ಸಾಮಗ್ರಿಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತಾನೆ. ಆಗ ಲ್ಯಾಂಪ್ಟನ್ ಬೆಂಗಳೂರಿನ ಹಲಸೂರು ಬಳಿ ಕಚೇರಿ ಹೊಂದಿದ್ದ. ಸಾಮಗ್ರಿಗಳು ತಲುಪಲು ನಾಲ್ಕು ವರ್ಷಗಳು ಬೇಕಾಗುತ್ತವೆ ಎಂದರಿದ ಲ್ಯಾಂಪ್ಟನ್ ಸಮಯ ಹಾಳು ಮಾಡದೆ ಸಮೀಕ್ಷೆಗೆ ಆಧುನಿಕ ತ್ರಿಕೋನಮಿತಿಯ ತಂತ್ರಗಳನ್ನು ಬಳಸಿಕೊಂಡ. ಮೇಖ್ರಿ ಮತ್ತು ಕಣ್ಣೂರು ಬಳಿ ಬಿಂದುಗಳನ್ನು ನಿರ್ಮಿಸಿ ಸಮೀಕ್ಷೆ ನಡೆಸಿದ.

ಅಗರದಿಂದ ಲಿಂಗರಾಜಪುರವರೆಗೆ ಮೊದಲ ಸಮೀಕ್ಷೆಯನ್ನು ಲ್ಯಾಂಪ್ಟನ್ ಪ್ರಾರಂಭಿಸಿದ. ಈ ಮಾರ್ಗದಲ್ಲಿದ್ದ ಬೆಳಂದೂರು ಕೆರೆಯಲ್ಲಿ ನೀರು ತುಂಬಿದ್ದರಿಂದ ಅದನ್ನು ಸ್ಥಗಿತಗೊಳಿಸಿ ಮೇಖ್ರಿಯಲ್ಲಿ ಮತ್ತೆ ಸಮೀಕ್ಷೆ ಪ್ರಾರಂಭಿಸಿದ ಎಂದು ಸಮೀಕ್ಷೆ ಬಿಂದುವಿನ ಹಿಂದಿನ ಇತಿಹಾಸ ತೆರೆದಿಡುತ್ತಾರೆ ಮಿಥಿಕ್ ಸೊಸೈಟಿಯಲ್ಲಿ ಬೆಂಗಳೂರು ಶಿಲಾಶಾಸನಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕಾರ್ಯದ ಗೌರವ ನಿರ್ದೇಶಕ ಉದಯ್ ಕುಮಾರ್.


ಇಂಗ್ಲೆಂಡ್‌ನಿಂದ ಆಧುನಿಕ ಸಾಮಗ್ರಿಗಳು ಮದ್ರಾಸ್‌ಗೆ ಬಂದ ನಂತರ ಲ್ಯಾಂಪ್ಟನ್ ಅಲ್ಲಿಗೆ ತೆರಳಿ ಸಮೀಕ್ಷೆ ಮುಂದುವರಿಸುತ್ತಾನೆ. ಸುಮಾರು 130 ವರ್ಷಗಳ ಕಾಲ ಯೋಜನೆ ಮುಂದುವರಿಯಿತು ಎಂದು ಉದಯ್‌ಕುಮಾರ್ ಮಾಹಿತಿ ನೀಡಿದರು.

'ಭಾರತದ ವೈಜ್ಞಾನಿಕ ಇತಿಹಾಸದಲ್ಲಿ ಇದು ಅತಿ ಮುಖ್ಯವಾದುದು. ವಿಜ್ಞಾನಿಗಳ ಪಾಲಿಗೆ ಇದು ಮಹತ್ತರ ಅಧ್ಯಯನಶೀಲ ಸ್ಥಳ. ಇಡೀ ಭೂಗೋಳವನ್ನು ವೈಜ್ಞಾನಿಕವಾಗಿ ಅಳತೆ ಮಾಡುವುದಕ್ಕೂ ಇದು ನೆರವಾಯಿತು. ಇಂತಹ ಶ್ರೇಷ್ಠ ಕಾರ್ಯಕ್ಕೆ ಬೆಂಗಳೂರು ಸಾಕ್ಷಿಯಾಗಿರುವುದು ನಮಗೆ ಗರ್ವದ ಸಂಗತಿ' ಎಂದು ಉದಯ್ ತಿಳಿಸಿದರು.

'ಭಾರತದ ನಕ್ಷೆ ರೂಪಿಸುವಲ್ಲಿ ಈ ಸಮೀಕ್ಷೆ ಮಹತ್ತರ ಪಾತ್ರ ವಹಿಸಿದೆ. ಮೊದಲ ಬಾರಿಗೆ ಇಂಚುಗಳ ಮೂಲಕ ಪ್ರದೇಶದ ಅಳತೆ ದೊರೆಯಿತು. ಆಗ ಮದ್ರಾಸಿನಿಂದ ಬೆಂಗಳೂರಿನವರೆಗೆ ನಡೆಸಿದ ಸಮೀಕ್ಷೆಯಲ್ಲಿ ಲ್ಯಾಂಪ್ಟನ್ ಕಂಡುಕೊಂಡ ದೂರಕ್ಕೂ ಈಗಿನ ತಂತ್ರಜ್ಞಾನದಲ್ಲಿ ಮಾಡಿದ ಅಳತೆಗೂ ಕೇವಲ ಆರು ಇಂಚುಗಳ ವ್ಯತ್ಯಾಸವಿದೆ' ಎಂದು ಅವರು ವಿವರಿಸಿದರು.

ಬಿಬಿಎಂಪಿಯ ಉದ್ಯಾನದಲ್ಲಿ ಇಂತಹ ಒಂದು ಮಹತ್ತರ ಸಮೀಕ್ಷೆಯ ಬಿಂದುವಿನ ಗುರುತಿದೆ ಎಂದು ಮಾಹಿತಿ ನೀಡುವ ಯಾವುದೇ ಫಲಕಗಳನ್ನು ಇಲ್ಲಿ ಅಳವಡಿಸಿಲ್ಲ. ಬಿಂದು ಇರುವ ಕಟ್ಟೆ ಬಳಿಯೂ ಯಾವುದೇ ವಿವರಗಳಿಲ್ಲ.

ಏನಿದು ಟ್ರಿಗೊನೊಮೆಟ್ರಿಕಲ್ ಸರ್ವೆ?



ಉದಯ್ ಕುಮಾರ್

ತ್ರಿಕೋನಮಿತಿಯ ಈ ಸಮೀಕ್ಷೆ ಮೂಲಕ ಭೌಗೋಳಿಕ ಪ್ರದೇಶದ ಅಳತೆ ಸಾಧ್ಯವಾಗುತ್ತದೆ. ಲ್ಯಾಂಪ್ಟನ್ ಮೇಖ್ರಿ ಮತ್ತು ಕಣ್ಣೂರಿನಲ್ಲಿ ಬಿಂದುವನ್ನು ಗುರುತು ಮಾಡಿ 6-7 ಮೈಲು ಸರಪಳಿಯನ್ನು ಬಿಗಿಯಾಗಿ ಎಳೆದು ಅದರ ತುದಿಯಲ್ಲಿ ಗುರುತು ಹಾಕಿ 20 ಅಡಿಯಂತೆ ಸರಪಳಿಗಳ ಮೂಲಕ ಅಳೆಯುತ್ತಾ ಹೋಗಲಾಗುತ್ತದೆ. ಎರಡೂ ಬಿಂದುಗಳಲ್ಲಿ ತ್ರಿಭುಜಾಕಾರದ ಮಾದರಿ ತಯಾರಿಸಿ ಒಂದು ಬಿಂದುವಿನಿಂದ ಮತ್ತೊಂದಕ್ಕೆ ಇರುವ ದೂರವನ್ನು ಅಳೆಯುತ್ತಾರೆ. ನಂತರ ಎರಡನೇ ಬಿಂದುವಿನಿಂದ ಮೂರನೇ ಬಿಂದುವಿನ ದೂರವನ್ನು ತಿಳಿದು ತ್ರಿಭುಜಾಕಾರದ ಸಮೀಕರಣದ ಮೂಲಕ ಒಂದು ಮತ್ತು ಮೂರನೇ ಬಿಂದುವಿನ ನಡುವಿನ ದೂರ ಲೆಕ್ಕ ಹಾಕುತ್ತಾರೆ ಎಂದು ಉದಯ್ ಕುಮಾರ್ ವಿವರಿಸಿದರು.

ಅಂಕಿ-ಅಂಶಗಳು

52 ಮೊದಲ ಟ್ರಿಗೊನೊಮೆಟ್ರಿಕಲ್ ಸರ್ವೆಗೆ ತೆಗೆದುಕೊಂಡ ದಿನಗಳು

130 ತ್ರಿಕೋನಮಿತಿ ಸಮೀಕ್ಷೆ ಪೂರ್ಣಗೊಳಿಸಲು ಬೇಕಾದ ವರ್ಷ

16 ದೇಶದಾದ್ಯಂತ ನಿರ್ಮಿಸಲಾದ ಸಮೀಕ್ಷೆ ಬಿಂದುಗಳು

800 ಸಮೀಕ್ಷಾ ತಂಡದಲ್ಲಿದ್ದ ಸದಸ್ಯರ ಸಂಖ್ಯೆ

'ಬಿಟ್ ಕಾಯಿನ್: ಎಫ್‌ಬಿಐ ತಂಡ ರಾಜ್ಯಕ್ಕೆ ಬಂದಿಲ್ಲ'

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

ಬೆಂಗಳೂರು: 'ಬಿಟ್ ಕಾಯಿನ್ ಪ್ರಕರಣದ ತನಿಖೆಗಾಗಿ ಎಫ್‌ಬಿಐ ಅಧಿಕಾರಿಗಳ ತಂಡ ಕರ್ನಾಟಕಕ್ಕೆ ಬಂದಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಹಿರಿಯ ಅಧಿಕಾರಿಗಳಿಂದ ಈ ಬಗ್ಗೆ ಮಾಹಿತಿ ಪಡೆದಿದ್ದೇನೆ. ಎಫ್‌ಬಿಐ ಅಧಿಕಾರಿಗಳು ಬಂದಿಲ್ಲ ಎನ್ನುವುದು ಕಾಂಗ್ರೆಸ್ಸಿನವರಿಗೂ ಗೊತ್ತಿದೆ. ಜನರ ಗಮನ ಬೇರೆಡೆಗೆ ಸೆಳೆಯಲು ಅವರು ಈ ಆರೋಪ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಕರ್ನಾಟಕದ ಬಿಜೆಪಿ ಸರ್ಕಾರದ ಅಡಿಯಲ್ಲಿ ನಡೆದ ಬಿಟ್ ಕಾಯಿನ್ ಹಗರಣದ ತನಿಖೆಗೆ ಎಫ್‌ಬಿಐ ಭಾರತದಲ್ಲಿದೆಯೇ? ಹಾಗಿದ್ದರೆ, ತನಿಖೆ ಹಾಗೂ ರಾಜಕೀಯ ವ್ಯಕ್ತಿಗಳು ಸೇರಿದಂತೆ ಶಂಕಿತರ ವಿವರಗಳನ್ನು ಬಿಡುಗಡೆ ಮಾಡುವಿರಾ' ಎಂದು ಟ್ವೀಟ್ ಮೂಲಕ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಪ್ರಶ್ನಿಸಿದ್ದರು.

ಕೇಂದ್ರದ ಏಜೆನ್ಸಿಯಿಂದ ತನಿಖೆ: ಶಾಲೆಗಳಿಗೆ ಬಾಂಬ್ ಬೆದರಿಕೆ ಕುರಿತು ಪ್ರತಿಕ್ರಿಯಿಸಿದ ಆರಗ ಜ್ಞಾನೇಂದ್ರ, 'ಈ ಬಗ್ಗೆ ಕೇಂದ್ರದ ತನಿಖಾ ಏಜೆನ್ಸಿ ತನಿಖೆ ನಡೆಸುತ್ತಿದೆ' ಎಂದು ಹೇಳಿದರು.

'ಅಲ್ ಕೈದಾ ಸಂಘಟನೆ ಹರಿಯಬಿಟ್ಟ ವಿಡಿಯೊದ ಹಿನ್ನೆಲೆಯಲ್ಲಿ ನಮ್ಮ ದೇಶದ ಏಕತೆ ಮತ್ತು ಸಮಗ್ರತೆ ದೃಷ್ಟಿಯಿಂದ ಏನೆಲ್ಲಾ ಕ್ರಮ ಕೈಗೊಳ್ಳಬೇಕೊ ಅದನ್ನು ತೆಗೆದುಕೊಳ್ಳುತ್ತೇವೆ. ಮಂಡ್ಯದ ಹೆಣ್ಣು ಮಗಳ ಬಗ್ಗೆ ಎಲ್ಲಿಂದಲೊ ವಿಡಿಯೊ ಹರಿಯಬಿಡಲಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ' ಎಂದರು.

'ಮುಳಬಾಗಿಲಿನಲ್ಲಿ ಶೋಭಾ ಯಾತ್ರೆ ನಡೆಯುತ್ತಿದ್ದಾಗ ವಿದ್ಯುತ್ ಕಡಿತವಾಗಿತ್ತು. ಆ ಸಂದರ್ಭದಲ್ಲಿ ಕೆಲವು ಕಿಡಿಗೇಡಿಗಳು ಕಲ್ಲು ಎಸೆದಿದ್ದಾರೆ. ಪೊಲೀಸರು ಮಾಹಿತಿ ಸಂಗ್ರಹಿಸುತ್ತಿದ್ದಾರೆ' ಎಂದರು.

ಪರಪ್ಪನ ಅಗ್ರಹಾರದಲ್ಲಿ ಆರೋಪಿ ಖಾತೆಯಿಂದ ಜೈಲು ಅಧಿಕಾರಿಗಳು ಹಣ ಪಡೆದ ಆರೋಪ ಕುರಿತು ಮಾತನಾಡಿದ ಅವರು, 'ಹಣದ ವ್ಯವಹಾರ ಮತ್ತು ಅಧಿಕಾರಿಗಳ ಬಗ್ಗೆ ಮಾಹಿತಿ ಪಡೆಯುತ್ತೇನೆ. ಈಗಾಗಲೇ ಹಲವು ಪ್ರಕರಣದಲ್ಲಿ ಕ್ರಮ ಕೈಗೊಂಡಿದ್ದು, ಈ ವಿಚಾರದಲ್ಲೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳುತ್ತೇನೆ' ಎಂದರು.

ಜೆ.ಜೆ. ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದ ಚಂದ್ರಶೇಖರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆಂಬ ಕಾರಣಕ್ಕೆ ದೂರು ನೀಡಲು ಕಾಂಗ್ರೆಸ್ ಮುಂದಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ತುರ್ತು ಪರಿಸ್ಥಿತಿಯ ದಿನಗಳಲ್ಲಿ ಜಾರ್ಜ್ ಫರ್ನಾಂಡಿಸ್, ವಾಜಪೇಯಿ ಅವರನ್ನು ಜೈಲಿಗೆ ಕಳುಹಿಸಿದ್ದರು. ನಮ್ಮನ್ನೂ ಜೈಲಿನಲ್ಲಿಟ್ಟಿದ್ದರು. ಈಗ ಅವರ ಕೈಯಲ್ಲಿ (ಕಾಂಗ್ರೆಸ್) ಏನೂ ಇಲ್ಲ. ಹೀಗಾಗಿ ಬರೀ ದೂರು ಕೊಡುತ್ತಿದ್ದಾರೆ. ಕೊಡಲಿ, ಆದರೆ ಕಾನೂನು ಪ್ರಕಾರ ಕ್ರಮಕೈಗೊಳ್ಳಲಿ' ಎಂದು ಹೇಳಿದರು.

'ಗೃಹ ಸಚಿವರ ಹೇಳಿಕೆ ಸತ್ಯ, ಕಮಿಷನರ್ ಹೇಳಿಕೆ ಸುಳ್ಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉರ್ದು ಮಾತನಾಡಲಿಲ್ಲ ಎಂಬ ಕಾರಣಕ್ಕೆ ಜೆ.ಜೆ. ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಚಂದ್ರಶೇಖರ ಕೊಲೆ ನಡೆದಿತ್ತು ಎಂದು ಗೃಹ ಸಚಿವರು ನೀಡಿದ್ದ ಹೇಳಿಕೆ ಸತ್ಯ. ಬೈಕ್‌ಗಳು ತಗುಲಿದ ವಿಚಾರಕ್ಕೆ ಗಲಾಟೆಯಾಗಿ ಕೃತ್ಯ ನಡೆದಿದೆ ಎಂದು ಪೊಲೀಸ್ ಕಮಿಷನರ್ ಹೇಳಿರುವುದು ಸುಳ್ಳು' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಮೃತನ ಸ್ನೇಹಿತ ಸೈಮನ್ ಚಾಕುವಿನಿಂದ ಚುಚ್ಚಿದ್ದನ್ನು ನೋಡಿದ್ದಾನೆ. ಉರ್ದು ಬರಲ್ಲ ಎಂಬ ಕಾರಣಕ್ಕೆ ಚುಚ್ಚಿದ್ದಾರೆಂದು ಮೃತನ ತಾಯಿ, ಚಿಕ್ಕಮ್ಮ, ಸೈಮನ್ ಎಲ್ಲರೂ ಹೇಳಿದ್ದಾರೆ. ಈ ಬಗ್ಗೆ ತನಿಖೆ ನಡೆಯಲಿ' ಎಂದು ಆಗ್ರಹಿಸಿದರು.

'ಈ ಕೃತ್ಯ ಎಸಗಿದವರು ಮುಸ್ಲಿಂ ಗೂಂಡಾಗಳು. ಬೈಕ್ ಅಪಘಾತ ಆಗಿದ್ದು ನಿಜ. ಆಗ ಉರ್ದುವಿನಲ್ಲಿ ಮಾತನಾಡಿ ಎಂದು ಹೇಳಿದ್ದಾರೆ. ಉರ್ದು ಬರುವುದಿಲ್ಲ ಎಂದಾಗ ಕೊಲೆ ಮಾಡಿದ್ದಾರೆ. ರಕ್ತ ಸ್ರಾವದಿಂದ ಚಂದ್ರಶೇಖರ ಸಾವನ್ನಪ್ಪಿದ್ದಾರೆ' ಎಂದು ಅವರು ಹೇಳಿದರು.

ಹೇಳಿಕೆಗೆ ಬದ್ಧ– ಕಮಲ್ ಪಂತ್

'ಚಂದ್ರಶೇಖರ ಕೊಲೆ ಪ್ರಕರಣದ ತನಿಖೆ ನಡೆಯುತ್ತಿದೆ. ತನಿಖೆಯಲ್ಲಿ ಲಭ್ಯವಾದ ಮಾಹಿತಿ ಪರಿಶೀಲಿಸಿದಾಗ, ಬೈಕ್‌ಗಳು ಪರಸ್ಪರ ತಗುಲಿದ ವಿಚಾರಣಕ್ಕೆ ಗಲಾಟೆ ಆಗಿರುವುದು ಗೊತ್ತಾಗಿದೆ. ಈ ಬಗ್ಗೆ ನಾನು ನೀಡಿದ್ದ ಹೇಳಿಕೆಗೆ ಬದ್ಧವಾಗಿದ್ದೇನೆ' ಎಂದು ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಏಪ್ರಿಲ್ 5ರಂದು ರಾತ್ರಿ ಸೈಮನ್ ಮತ್ತು ಚಂದ್ರಶೇಖರ ಇಬ್ಬರು ಜತೆಯಾಗಿ ಊಟಕ್ಕೆ ತೆರಳಿ ಹಿಂದಿರುಗುತ್ತಿದ್ದರು. ಅವರ ಬೈಕ್ ಮತ್ತು ಆರೋಪಿ ಶಾಹಿದ್ ಚಲಾಯಿಸುತ್ತಿದ್ದ ಬೈಕ್ ಪರಸ್ಪರ ಡಿಕ್ಕಿ ಹೊಡೆದಿದ್ದವು. ಇದೇ ವಿಷಯದೇ ಗಲಾಟೆಗೆ ಕಾರಣವಾಗಿದೆ' ಎಂದರು.

'ಗಲಾಟೆಗೆ ಇತರರು ಸೇರಿಕೊಂಡಿದ್ದರು. ಗಲಾಟೆಯ ಸಂದರ್ಭದಲ್ಲಿ ಆರೋಪಿ ಶಾಹಿದ್, ಚಂದ್ರಶೇಖನ ಬಲ ತೊಡೆಗೆ ಇರಿದು ಘಟನಾ ಸ್ಥಳದಿಂದ ಪರಾರಿಯಾಗಿದ್ದ. ಗಾಯಗೊಂಡಿದ್ದ ಚಂದ್ರಶೇಖರನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ತೀವ್ರ ರಕ್ತ ಸ್ರಾವದಿಂದ ಸಾವು ಸಂಭವಿಸಿದೆ. ಈ ಪ್ರಕರಣದಲ್ಲಿ ಈಗಾಗಲೇ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

ಲೈಂಗಿಕ ದೌರ್ಜನ್ಯ: 8 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 15 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿ, ಅದರ ವಿಡಿಯೊ ಚಿತ್ರೀಕರಣ ಮಾಡಿಟ್ಟುಕೊಂಡಿದ್ದ ಪ್ರಕರಣದಲ್ಲಿ ಎಂಟು ಮಂದಿಯನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ನೆಲೆಸಿದ್ದ ಬಾಲಕಿ ಮೇಲೆ 2021ರ ಅಕ್ಟೋಬರ್‌ನಿಂದ ನಿರಂತರವಾಗಿ ಲೈಂಗಿಕ ದೌರ್ಜನ್ಯ ನಡೆದಿದೆ. ಬಾಲಕಿಯ ಪೋಷಕರು ಏಪ್ರಿಲ್ 5ರಂದು ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು. 'ಬಾಲಕಿ ಸ್ನೇಹಿತೆಯ ಸಹೋದರ ಹಾಗೂ ಆತನ ಸ್ನೇಹಿತರು ಸೇರಿ 8 ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳೆಲ್ಲರೂ ಬಾಲಕಿಗೆ ಪರಿಚಿತರು. ಬಾಲಕಿ ಗುರುತು ಬಹಿರಂಗವಾಗಬಾರದೆಂಬ ಕಾರಣಕ್ಕೆ ಆರೋಪಿಗಳ ಹೆಸರು ಗೌಪ್ಯವಾಗಿ ಇರಿಸಲಾಗಿದೆ' ಎಂದರು.

'ಬಂಧಿತರ ಪೈಕಿ ಇಬ್ಬರು ಬಾಲಕರು. ಉಳಿದವರು 18 ವರ್ಷದಿಂದ 36 ವರ್ಷದ ಒಳಗಿನವರಾಗಿದ್ದಾರೆ. ಕೆಲವರು ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ಉಳಿದವರು ಇತರ ಆರೋಪಿಗಳ ಕೃತ್ಯಕ್ಕೆ ಸಹಕಾರ ನೀಡಿದ್ದಾರೆ' ಎಂದೂ ತಿಳಿಸಿವೆ.



ಕಬ್ಬಿನ ಹಾಲು ಸವಿದ ಜನ

ಬಿಸಿಲ ಬೇಗೆಯಿಂದ ದಣಿದಿದ್ದ ಜನ ಹನುಮಂತನಗರದಲ್ಲಿ ಕಬ್ಬಿನ ಹಾಲು ಸೇವಿಸಿ ಶನಿವಾರ ದಣಿವಾರಿಸಿಕೊಂಡರು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಬೆಂಕಿ ಅವಘಡ: ಹೊತ್ತಿ ಉರಿದ ಬಿಎಂಟಿಸಿ ಬಸ್

ಬೆಂಗಳೂರು: ನಗರದ ಶೇಷಾದ್ರಿ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಅವಘಡ ಸಂಭವಿಸಿದ್ದು, ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.

'ಕೆಂಪೇಗೌಡ ಬಸ್ ನಿಲ್ದಾಣದಿಂದ ವಿದ್ಯಾನಗರಕ್ಕೆ ಬಿಎಂಟಿಸಿ ಬಸ್ ಹೊರಟಿತ್ತು. ಬಸ್ಸಿನ ಎಂಜಿನ್‌ನ ಬಾನೆಟ್‌ನಿಂದ ಹೊಗೆ ಬರಲಾರಂಭಿಸಿತ್ತು. ಬೆಂಕಿ ಹೊತ್ತಿಕೊಳ್ಳುವ ಮುನ್ಸೂಚನೆ ಅರಿತ ಚಾಲಕ, ಶೇಷಾದ್ರಿ ರಸ್ತೆಯಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಕೆಳಗೆ ಇಳಿಸಿದ್ದರು' ಎಂದು ಅಗ್ನಿಶಾಮಕದ ದಳದ ಸಿಬ್ಬಂದಿ ಹೇಳಿದರು.

ಅಗ್ನಿಶಾಮಕ ಸಿಬ್ಬಂದಿ ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು' ಎಂದೂ ತಿಳಿಸಿದರು.

ನ್ಯೂನತೆ ಸರಿಪಡಿಸಲು ಸೂಚನೆ: ಘಟನೆ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಬಿಎಂಟಿಸಿ, 'ಅಶೋಕ ಲೇಲ್ಯಾಂಡ್ ಬಿಎಸ್-4 ಮಿಡಿ ಮಾದರಿಯ ಬಸ್ಸಿನಲ್ಲಿ ಸ್ಟಾರ್ಟರ್ ಹಾಗೂ ತಂತಿಗಳ ವಿನ್ಯಾಸದ ನ್ಯೂನತೆ ಕಾರಣದಿಂದ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಅವಘಡ ಸಂಭವಿಸಿದೆ. ಇತರ ಬಸ್‌ಗಳಲ್ಲಿರುವ ನ್ಯೂನತೆಗಳಿದ್ದರೆ, ಪತ್ತೆಹಚ್ಚಿ ಸರಿಪಡಿಸುವಂತೆ ಲೇಲ್ಯಾಂಡ್ ಕಂಪನಿಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದೂ ತಿಳಿಸಿದೆ.

ಕಾರು ಡಿಕ್ಕಿ: ಯುವತಿ ಸಾವು

ರಾಮನಗರ: ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಹ್ಯಾಂಡ್‌ಪೋಸ್ಟ್ ಬಳಿ ಶನಿವಾರ ರಾತ್ರಿ ಕಾರು ಡಿಕ್ಕಿಯಾಗಿ ಚೇತನಾ (22) ಎಂಬ ಯುವತಿ ಮೃತಪಟ್ಟರು.

ಮಾಗಡಿ ತಾಲ್ಲೂಕಿನ ರಘುನಾಥಪುರದ ಚೇತನಾರಿಗೆ ಹದಿನೈದು ದಿನದಲ್ಲಿ ಮದುವೆ ನಡೆಯಬೇಕಿತ್ತು.

ಬಾಂಬ್ ಬೆದರಿಕೆ: 'ಇ-ಮೇಲ್' ಆಧರಿಸಿ ತನಿಖೆ

ಬೆಂಗಳೂರು: ನಗರದ ಶಾಲೆಗಳಿಗೆ ಬಾಂಬ್ ಬೆದರಿಕೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, 'ಇ-ಮೇಲ್' ಸುಳಿವು ಬೆನ್ನತ್ತಿ ಆರೋಪಿಗಳನ್ನು ಪತ್ತೆ ಹಚ್ಚುತ್ತಿದ್ದಾರೆ.

ಶಾಲೆಗಳ 'ಇ-ಮೇಲ್' ವಿಳಾಸಗಳಿಗೆ ಬಂದಿದ್ದ ಸಂದೇಶಗಳ ಬಗ್ಗೆ ಪೊಲೀಸರು ಮಾಹಿತಿ ಪಡೆದುಕೊಂಡಿದ್ದಾರೆ. 'ಇ-ಮೇಲ್' ಸೌಲಭ್ಯ ಒದಗಿಸಿದ್ದ ಕಂಪನಿಗಳಿಗೂ ಪತ್ರ ಬರೆದಿದ್ದಾರೆ. ಇಮೇಲ್ ಸಂದೇಶ ಬಂದಿದ್ದು ಎಲ್ಲಿಂದ, ಯಾವ ಐಪಿ ವಿಳಾಸ ಬಳಸಲಾಗಿದೆ ಎಂಬಿತ್ಯಾದಿ ಮಾಹಿತಿ ನೀಡುವಂತೆ ಪತ್ರದಲ್ಲಿ ಕೋರಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಕಮಲ್ ಪಂತ್, 'ಪ್ರಕರಣದ ತನಿಖೆ ತೀವ್ರಗೊಳಿಸಲಾಗಿದೆ' ಎಂದರು.

'ನಗರದ ಬಹುತೇಕ ಶಾಲೆಗಳಿಗೆ ಬೆದರಿಕೆ ಸಂದೇಶ ಬಂದಿರುವುದು ಗೊತ್ತಾಗಿದೆ. ಕೆಲವರು ಮಾಹಿತಿ ನೀಡದೇ ಮುಚ್ಚಿಟ್ಟಿದ್ದಾರೆ. ಅಂಥ ಶಾಲೆಗಳಿಂದ ಪೊಲೀಸರು ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ' ಎಂದು ಹೇಳಿದರು.

ನಶೆ ಪಾರ್ಟಿ: ಹೋಟೆಲ್ ಮೇಲೆ ದಾಳಿ

ಬೆಂಗಳೂರು: ಅವಧಿ ಮೀರಿ ರಾತ್ರಿ ಪೂರ್ತಿ ನಶೆಯ ಪಾರ್ಟಿ ನಡೆಸುತ್ತಿದ್ದ ಹೋಟೆಲ್ ಮೇಲೆ ಸಿಸಿಬಿ ಪೊಲೀಸರು ಶನಿವಾರ ನಸುಕಿನಲ್ಲಿ ದಾಳಿ ಮಾಡಿದ್ದು, ಮಾಲೀಕ ಸೇರಿ ಮೂವರನ್ನು ಬಂಧಿಸಿದ್ದಾರೆ. ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಯುವಕ– ಯುವತಿಯರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ನಗರದ ಹೊರವರ್ತುಲ ರಸ್ತೆಗೆ ಹೊಂದಿಕೊಂಡಿರುವ ಹೋಟೆಲ್‌ನಲ್ಲಿ ರಾತ್ರಿಯಿಂದ ನಸುಕಿನವರೆಗೂ ಪಾರ್ಟಿ ಆಯೋಜಿಸಲಾಗಿತ್ತು. ಬಾತ್ಮೀದಾರರೊಬ್ಬರು ನೀಡಿದ್ದ ಮಾಹಿತಿ ಆಧರಿಸಿ ದಾಳಿ ಮಾಡಲಾಯಿತು. ಹೋಟೆಲ್ ಮಾಲೀಕ ವೆಂಕಟೇಶ್, ಪಾರ್ಟಿ ಆಯೋಜಿಸಿದ್ದ ಆಫ್ರಿಕಾ ಪ್ರಜೆ ಡೇನಿಯಲ್ ಹಾಗೂ ಕ್ಯಾಷಿಯರ್ ಪರಮೇಶ್ವರ್ ಎಂಬುವರನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಹೋಟೆಲ್‌ನಲ್ಲಿ ಮದ್ಯ ಹಾಗೂ ಊಟದ ಪಾರ್ಟಿ ಆಯೋಜಿಸುತ್ತಿದ್ದ ಬಗ್ಗೆ ಜಾಹೀರಾತು ನೀಡಲಾಗಿತ್ತು. ಯುವಕರಿಗೆ ₹ 400 ಹಾಗೂ ಯುವತಿಯರಿಗೆ ₹ 300 ಪ್ರವೇಶ ಶುಲ್ಕ ನಿಗದಿಪಡಿಸಲಾಗಿತ್ತು. ಉತ್ತರ ಭಾರತದ ರಾಜ್ಯಗಳ ಯುವಕ-ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು' ಎಂದೂ ಅವರು ತಿಳಿಸಿದರು.

'ಶುಕ್ರವಾರ ರಾತ್ರಿ ಹೋಟೆಲ್‌ಗೆ ಬಂದಿದ್ದ ಯುವಕ-ಯುವತಿಯರು, ಪಾರ್ಟಿಯಲ್ಲಿ ಭಾಗವಹಿಸಿದ್ದರು. ನಸುಕಿನವರೆಗೂ ಪಾರ್ಟಿ ನಡೆಯುತ್ತಿತ್ತು. ಡಿಸ್ಕ್ ಜಾಕಿ (ಡಿ.ಜೆ) ಕಾರ್ಯಕ್ರಮ ಸಹ ಇತ್ತು. ದಾಳಿ ಮಾಡಿದ ವೇಳೆ, ಬಹುತೇಕರು ಮದ್ಯದ ಅಮಲಿನಲ್ಲಿದ್ದರು. ಕೆಲವರು ಹೋಟೆಲ್‌ನಿಂದ ಓಡಿಹೋದರು' ಎಂದೂ ಸಿಸಿಬಿ ಅಧಿಕಾರಿ ಹೇಳಿದರು.

'64 ಯುವಕರು ಹಾಗೂ 24 ಯುವತಿಯರನ್ನು ವಶಕ್ಕೆ ಪಡೆಯಲಾಗಿದೆ. ಪಾರ್ಟಿಯಲ್ಲಿದ್ದ ಕೆಲವರು ಡ್ರಗ್ಸ್ ಸೇವಿಸಿದ್ದ ಬಗ್ಗೆ ಮಾಹಿತಿ ಇದೆ. ಎಲ್ಲರನ್ನೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿ ಬರಬೇಕಿದೆ. ಆರೋಪಿಗಳ ವಿರುದ್ಧ ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದೂ ತಿಳಿಸಿದರು.

ಪೊಲೀಸರ ವೈಫಲ್ಯ: 'ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲಿ ಹೋಟೆಲ್ ಇದ್ದು, ಅಲ್ಲಿ ನಡೆಯುತ್ತಿದ್ದ ಪಾರ್ಟಿ ಬಗ್ಗೆ ಮಾಹಿತಿಸಂಗ್ರಹಿಸುವಲ್ಲಿ ಪೊಲೀಸರ ವೈಫಲ್ಯ ಎದ್ದು ಕಾಣುತ್ತಿದೆ. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು' ಎಂದು ಅಧಿಕಾರಿ ಹೇಳಿದರು.

ಹುಕ್ಕಾ ಬಾರ್ ಮೇಲೆ ದಾಳಿ

ಬೆಂಗಳೂರು: ಪುಟ್ಟೇನಹಳ್ಳಿಯ 'ಮಿಲೇನಿಯಂ' ಹುಕ್ಕಾ ಬಾರ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದಾರೆ. ಮಾಲೀಕ ಸೇರಿ ಮೂವರನ್ನು ಬಂಧಿಸಿದ್ದಾರೆ.

ನಿಯಮಗಳನ್ನು ಉಲ್ಲಂಘಿಸಿ ಹುಕ್ಕಾ ಬಾರ್ ನಡೆಸಲಾಗುತ್ತಿತ್ತು. ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ಪುಟ್ಟೇನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಸಂಗೀತ ನಿರ್ದೇಶಕ ಹಂಸಲೇಖ ಒತ್ತಾಯ

ನಿಘಂಟಿನಿಂದ 'ಶೂದ್ರ' ಪದ ಕಿತ್ತುಹಾಕಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಾವೆಲ್ಲರೂ ಶುದ್ಧರು, ಶೂದ್ರರಲ್ಲ. ದೇಶದ ಎಲ್ಲ ನಿಘಂಟುಗಳಿಂದಲೂ ಶೂದ್ರ ಪದವನ್ನು ಕಿತ್ತು ಬಿಸಾಡಬೇಕು. 'ಶೂದ್ರ' ಪದಕ್ಕೆ ಪರ್ಯಾಯವಾಗಿ 'ಶುದ್ಧ' ಬಳಕೆಗೆ ಬರಬೇಕು. ಶುದ್ಧತ್ವ ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕು ಎಂದು ಸಂಗೀತ ನಿರ್ದೇಶಕ ಹಂಸಲೇಖ ಅಭಿಪ್ರಾಯಪಟ್ಟರು.

ಮಾನವ ಬಂಧುತ್ವ ವೇದಿಕೆ ಇಲ್ಲಿನ ತರಾಸು ರಂಗಮಂದಿರದಲ್ಲಿ ಏರ್ಪಡಿಸಿದ್ದ 'ರಾಜ್ಯ ಬಂಧುತ್ವ ಅಧಿವೇಶನ'ದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜ್ಯದ ಮಾಜಿ ಮುಖ್ಯಮಂತ್ರಿಯೊಬ್ಬರು ಇತ್ತೀಚೆಗೆ ಶೂದ್ರ ಪದವನ್ನು ಧಾರಾಳವಾಗಿ ಬಳಸಿದರು. ಹಾಳಾಗಿಹೋಗಿದ್ದ ಈ ಶಬ್ದ ಏಕೆ ಹೊರಗೆ ಬಂದಿತು ಎಂಬ ಬೇಸರ ಮೂಡಿತು. ಬೇರೆಯವರು ನಮ್ಮನ್ನು ಶೂದ್ರರು ಎಂದು ಸಂಬೋಧಿಸಿದರೆ ಅದಕ್ಕೆ ಹೊಣೆಗಾರರು ನಾವಲ್ಲ' ಎಂದು ಪ್ರತಿಪಾದಿಸಿದರು.

'ಶೂದ್ರ ಮತ್ತು ಶುದ್ಧ ಪದಕ್ಕೆ ಸಂಬಂಧಿಸಿದಂತೆ 'ರಾ ಒತ್ತು ರದ್ದಾಯಿತು..' ಎಂಬ ಹಾಡು ಬರೆಯುವ ಪ್ರಯತ್ನದಲ್ಲಿದ್ದೇನೆ. ಏ.14ರ ಅಂಬೇಡ್ಕರ್ ಜನ್ಮದಿನದಂದು ಈ ಹಾಡು ಪ್ರಕಟವಾಗಲಿದೆ. ಶುದ್ಧತ್ವವನ್ನು ನಾಯಕತ್ವಕ್ಕೆ ತರುವವರು ನಮ್ಮ ನಾಯಕರಾಗಬೇಕು' ಎಂದು ಹೇಳಿದರು.

'ಅಧಿಕಾರಕ್ಕೆ ಬರುವ ಎಲ್ಲರಿಂದ ಪ್ರಜಾಪ್ರಭುತ್ವ ಗೆಲ್ಲಲು ಸಾಧ್ಯವಿಲ್ಲ. ಹೊಣೆಗಾರಿಕೆ ಅರಿತ ಜ್ಞಾನಿಗಳು ಅಧಿಕಾರಕ್ಕೆ ಬಂದಾಗ ಮಾತ್ರ ಪ್ರಜಾಪ್ರಭುತ್ವ ಗೆಲ್ಲುತ್ತದೆ. ಸಿಂಹಾಸನದಲ್ಲಿ ಕುಳಿತ ಅವರ ಕಾಲು ನೆಲಕ್ಕೆ ತಾಗುತ್ತಿರಬೇಕು. ಅಂತಹ ಪ್ರಭುವಿಗೆ ಮಾತ್ರ ಪ್ರಜೆಗಳು ಅರ್ಥವಾಗುತ್ತಾರೆ. ಪ್ರಜಾಪ್ರಭುತ್ವದಲ್ಲಿ ರಾಜ ಮತ್ತು ದಳವಾಯಿ ಇಬ್ಬರೂ ಒಬ್ಬರೇ ಆಗಬೇಕು' ಎಂದರು.

'ಪ್ರತಿಯೊಬ್ಬ ಭಾರತೀಯನ ತಲೆಯ ಮೇಲೆ ಶಸ್ತ್ರಾಸ್ತ್ರಗಳ ಸಾಲ ಬಿದ್ದಿದೆ. ಸಂಘಟನೆಗಾಗಿ ಕ್ರೋಡೀಕರಿಸುವ ಕೋಟಿ ಕೋಟಿ ಹಣದ ಭಾರ ಸಾಮಾನ್ಯರ ಮೇಲೆ ಬೀಳುತ್ತಿದೆ. ದೇಶದಲ್ಲಿ ಸೃಷ್ಟಿಯಾಗುತ್ತಿರುವ ಗಲಾಟೆಗಳಿಂದ ಮಹಿಳೆಯರನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲಿದೆ' ಎಂದರು.

> **ಯುದ್ಧಕ್ಕೆ, ಜಗಳಕ್ಕೆ ಕರೆಯಲಾಗುತ್ತಿದೆ. ಎದುರುಬಿದ್ದರೆ ಟ್ರ್ಯಾಪ್ ಮಾಡಿ ನಮ್ಮ ಸಂವಿಧಾನದ ಕೈಯಲ್ಲೇ ನಮ್ಮನ್ನು ಬಲಿ ಹಾಕುವ ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ. ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು**
> **ಹಂಸಲೇಖ,** ಸಂಗೀತ ನಿರ್ದೇಶಕ

'ಶಿಕ್ಷಣದಿಂದ ವಂಚಿಸುವ ಹುನ್ನಾರ'

ಎರಡು ಧರ್ಮದ ಮೂಲಭೂತವಾದಿ ನೆಲೆಯ ಕರ್ಮಠರು ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿಸುವ ಹುನ್ನಾರದಲ್ಲಿ ತೊಡಗಿದ್ದಾರೆ ಎಂದು ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

'ಶಿಕ್ಷಣ ನೀಡಬೇಕಾದ ಮಕ್ಕಳ ಮನಸಿನಲ್ಲಿ ದ್ವೇಷ ತುಂಬಲಾಗುತ್ತಿದೆ. ನಮ್ಮ ಕುಲಮೂಲ, ವಂಶವೃಕ್ಷಗಳಿಗೆ ನಮ್ಮ ಮಕ್ಕಳನ್ನೇ ಕೊಡಲಿಯ ಕಾವಾಗಿ ಬಳಸಿಕೊಳ್ಳುವುದಕ್ಕೆ ಅವಕಾಶ ನೀಡಬಾರದು. ಅಜ್ಞಾನ, ಆವೇಶ, ಭಾವೋದ್ವೇಷದ ಹೋರಾಟದಿಂದ ಹೊರಬಂದು ಮನುಷ್ಯರಾಗಬೇಕಿದೆ' ಎಂದು ಹೇಳಿದರು.

ನಗರದಲ್ಲಿ ಇಂದು

ಸಂವಿಧಾನ ಓದು ಅಭಿಯಾನ: ಆಯೋಜನೆ-ಕನ್ನಡ ಮನಸ್ಸುಗಳು ತಂಡ, ಸ್ಥಳ-ಕಬ್ಬನ್ ಉದ್ಯಾನ (ಬ್ಯಾಂಡ್ ಸ್ಟ್ಯಾಂಡ್)-ಬೆಳಿಗ್ಗೆ 7.

ಶ್ರೀರಾಮನವಮಿ ಪಲ್ಲಕ್ಕಿ ಉತ್ಸವ ಮತ್ತು ಶೋಭಾ ಯಾತ್ರೆ: ಸಾನ್ನಿಧ್ಯ-ಸುಗುಣೇಂದ್ರ ತೀರ್ಥ ಸ್ವಾಮೀಜಿ, ಆಯೋಜನೆ-ಹನುಮಗಿರಿ ಕ್ಷೇತ್ರ, ಸ್ಥಳ-ಹನುಮಗಿರಿ ಬೆಟ್ಟ, ಅರೆಹಳ್ಳಿ, ಬೆಳಿಗ್ಗೆ 8ರಿಂದ

ಸೌಹಾರ್ದ ಸತ್ಯಾಗ್ರಹ: ಆಯೋಜನೆ-ಕರ್ನಾಟಕ ಜ್ಞಾನವಿಜ್ಞಾನ ಸಮಿತಿ, ಸ್ಥಳ-ಸ್ವಾತಂತ್ರ್ಯ ಉದ್ಯಾನ-ಬೆಳಿಗ್ಗೆ 9ರಿಂದ.

ಕಾನೂನು ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ: ಉದ್ಘಾಟನೆ-ಪಿ.ರವಿಕುಮಾರ್, ಮುಖ್ಯ ಅತಿಥಿ-ಟಿ.ವೆಂಕಟೇಶ್ ನಾಯಕ್, ಜಿ. ಶ್ರೀಧರ್, ಅಧ್ಯಕ್ಷತೆ-ಕೆ.ದ್ವಾರಕನಾಥ್ ಬಾಬು, ಆಯೋಜನೆ-ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಸ್ಥಳ-ಕೊಠಡಿ ಸಂಖ್ಯೆ 419, ವಿಕಾಸಸೌಧ- ಬೆಳಿಗ್ಗೆ 9.30.

'ಸ್ವರಾಜ್ಯ-75' ಪುಸ್ತಕ ಬಿಡುಗಡೆ: ಭಾಗವಹಿಸುವವರು-ಕೆ.ರಾಧಾಕೃಷ್ಣನ್, ಕೆ.ವಿ.ಸಿಬಂತಿ ಪದ್ಮನಾಭ, ಎನ್. ವಿ.ರಘುರಾಮ್, ರೇಖಾ ರಾಮಚಂದ್ರನ್, ಆಯೋಜನೆ-ದಿಶಾ ಭಾರತ್, ಸ್ಥಳ-ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣ, ಬಸವನಗುಡಿ-ಬೆಳಿಗ್ಗೆ 10.30.

ಸುಧಾ ಶರ್ಮಾ, ಚವತ್ತಿ ಅವರ 'ನಮ್ಮೊಳಗೆ ನಾವು', ಮಾಲತಿ ಭಟ್ ಅವರ 'ದೀಪದ ಮಲ್ಲಿಯರು', ಶೋಭಾ ಹೆಗಡೆ ಅವರ 'ಅವಳೆಂಬ ಸುಗಂಧ', ಸಿ.ಚಿತ್ರ ಅವರ 'ಅನಾಮಿಕಳ ಅಂತರಂಗ' ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ-ವಸುಂಧರಾ ಭೂಪತಿ, ಮುಖ್ಯ ಅತಿಥಿಗಳು-ರವೀಂದ್ರ ಭಟ್ಟ, ಶಾಂತಾ ನಾಗರಾಜ್, ಭುವನೇಶ್ವರಿ ಹೆಗಡೆ, ಆಯೋಜನೆ-ಬೆನಕ ಬುಕ್ಸ್ ಬ್ಯಾಂಕ್ ಹಾಗೂ ಪ್ರಾಫಿಟ್ ಪ್ಲಸ್ ಮಾಸಪತ್ರಿಕೆ, ಸ್ಥಳ-ಬಾಪು ಸಭಾಂಗಣ, ಗಾಂಧಿಭವನ, ಶಿವಾನಂದ ವೃತ್ತ-ಬೆಳಿಗ್ಗೆ 10.30.

'ಸ್ನೇಹ ಸಮ್ಮಿಲನ' ಕಾರ್ಯಕ್ರಮ: ಭಾಗವಹಿಸುವವರು-ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್.ಯಡಿಯೂರಪ್ಪ, ಆರಗ ಜ್ಞಾನೇಂದ್ರ, ಗಾಯತ್ರಿ ವಿಹಾರ್, ಅರಮನೆ ಮೈದಾನ-ಸಂಜೆ 6.

'ನೋವಿನಂಚಿನ ನಲಿವು' ಕಾದಂಬರಿ ಲೋಕಾರ್ಪಣೆ: ಬಿಡುಗಡೆ ಮಾಡುವವರು-ಸಚ್ಚಿದಾನಂದ ಮೂರ್ತಿ, ಮುಖ್ಯ ಅತಿಥಿಗಳು-ಎನ್.ರಾಮನಾಥ್, ಪಿ.ಜಯ ಮಾಧವ, ಆಯೋಜನೆ-ಸಿದ್ದಿಗಣಪತಿ ದೇವಾಲಯ ಸಮಿತಿ, ಸೋಹಂ ಕ್ರಿಯಾ ಯೋಗ ಕೇಂದ್ರ, ಮನೋರಂಜನಿ ಸಾಂಸ್ಕೃತಿಕ ವೇದಿಕೆ, ಸ್ಥಳ-ಮನೋರಂಜನಿ ಸಭಾಂಗಣ-ಸಂಜೆ 5.30.



ತರಳಬಾಳು ಯಕ್ಷ ಅಭಿಯಾನದಿಂದ 'ಭೀಷ್ಮ ಪ್ರತಿಜ್ಞೆ' ಯಕ್ಷಗಾನ ಪ್ರದರ್ಶನ: ಆಯೋಜನೆ-ತರಳಬಾಳು ಕೇಂದ್ರ ಹಾಗೂ ಸುವರ್ಣ ಪ್ರಸಾದನ ಯಕ್ಷರಂಗ, ಸ್ಥಳ-ತರಳಬಾಳು ಕೇಂದ್ರ ಸಭಾಂಗಣ, ಆರ್.ಟಿ.ನಗರ- ಸಂಜೆ 4.45.

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಮೈಸೂರು ಮಂಜುನಾಥ್ ನೇತೃತ್ವದಲ್ಲಿ 75 ಸಂಗೀತಗಾರರಿಂದ 'ಭಾರತ ಸ್ವಾತಂತ್ರ್ಯ ಸಂಗೀತ ವೈಭವ' ಕಾರ್ಯಕ್ರಮ; ಆಯೋಜನೆ-ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ-ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ-ಸಂಜೆ 6.30 ರಿಂದ.

ಶ್ರೀ ರಾಮ ನವಮಿ ಉತ್ಸವ ಮತ್ತು ಶೋಭಾ ಯಾತ್ರೆ: ಶೋಭಾ ಯಾತ್ರೆ ಉದ್ಘಾಟನೆ-ಪುಷ್ಕರ್ ದಾಸ್ ಜಿ.ಮಹಾರಾಜ್, ಆಯೋಜನೆ-ವಿಶ್ವ ಹಿಂದೂ ಪರಿಷತ್, ಶ್ರೀ ರಾಮ ನವಮಿ ಉತ್ಸವ ಸಮಿತಿ, ಸ್ಥಳ-ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಅಶ್ವತ್ಥನಗರ-ಸಂಜೆ 4.

ಮಕ್ಕಳ ಮನೆ ಸಿ.ಲಕ್ಷ್ಮಣ ಸ್ಮರಣಾರ್ಥ 'ಮಕ್ಕಳ ಸಾಂಸ್ಕೃತಿಕ ಕಾರ್ಯಾಗಾರ': ಆಯೋಜನೆ-ರಂಗಕಹಳೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ-ರಂಗ ಕಹಳೆ ಮಕ್ಕಳ ಮನೆ, ಉತ್ತರಹಳ್ಳಿ-ಬೆಳಿಗ್ಗೆ 10 ರಿಂದ.

29ನೇ ಶ್ರೀ ರಾಮನವಮಿ ಸಂಗೀತೋತ್ಸವ ಹಾಗೂ ಗಾನಕಲಾ ಭೂಷಣ ಆರ್.ಕೆ.ಪದ್ಮನಾಭ ಅವರಿಗೆ ಸನ್ಮಾನ: ಮುಖ್ಯ ಅತಿಥಿ-ಭಾಸ್ಕರ್ ರಾವ್, ಕಲಾವಿದರು-ಆರ್.ಕೆ.ಪದ್ಮನಾಭ, ಸಿ.ಎನ್. ಚಂದ್ರಶೇಖರ, ಸಿ.ಚೆಲುವರಾಜು, ಎ.ಎಸ್. ಎನ್.ಸ್ವಾಮಿ, ಆಯೋಜನೆ-ಶ್ರೀವಾಣಿ ಕಲಾ ಕೇಂದ್ರ, ಸ್ಥಳ-ಶ್ರೀವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ-ಬೆಳಿಗ್ಗೆ 9.30.

74ನೇ ವರ್ಷದ ಶ್ರೀರಾಮನವಮಿ ಸಂಗೀತೋತ್ಸವ ಉದ್ಘಾಟನೆ: ಉದ್ಘಾಟಕರು-ಎಸ್.ಸಿ.ಶರ್ಮ, ವಿದ್ವಾನ್ ಶ್ರೀಧರ್ ಸಾಗರ್ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ, ಆಯೋಜನೆ-ಶೇಷಾದ್ರಿಪುರಂ ರಾಮಸೇವಾ ಸಮಿತಿ, ಸ್ಥಳ-ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜು, ಸಂಜೆ 5.45ರಿಂದ.

ಯುಗಾದಿ ಕವಿಗೋಷ್ಠಿ-ಗೀತಗಾಯನ-ಪ್ರಶಸ್ತಿ ಪ್ರದಾನ ಕಾರ್ಯಕ್ರಮ: ಪ್ರಶಸ್ತಿ ಪ್ರದಾನ-ವ.ಚ.ಚನ್ನೇಗೌಡ, ಅಧ್ಯಕ್ಷತೆ-ಬಿ.ಶೃಂಗೇಶ್ವರ್, ಅತಿಥಿಗಳು-ಎ.ಶ್ರೀಲತಾ, ಆರ್.ರಂಗಸ್ವಾಮಿ, ಆಯೋಜನೆ-ಸಮ್ಮಿಲನ, ಸ್ಥಳ-ಕೆನ್ ಕಲಾಶಾಲೆ, ಶೇಷಾದ್ರಿಪುರ-ಬೆಳಿಗ್ಗೆ 10.30.

ಗೂಗಲ್ ಮೀಟ್ ವಚನಯಾನಕ್ಕೆ ನೂರರ ಸಂಭ್ರಮ: ಉದ್ಘಾಟನೆ-ಶಿವರುದ್ರ ಸ್ವಾಮಿ, ಮುಖ್ಯ ಅತಿಥಿ-ಪ್ರಸನ್ನಕುಮಾರ್ ವಿ.ಕನಕೇರಿ, ಆಯೋಜನೆ-ವಚನ ಜ್ಯೋತಿ ಬಳಗ, ಸ್ಥಳ-ವಾಸುದೇವ ಸಭಾಂಗಣ, ಕನ್ಯಾಕುಮಾರಿ ಪ್ರೌಢಶಾಲೆ, ಮಲ್ಲತ್ತಹಳ್ಳಿ-ಬೆಳಿಗ್ಗೆ 10.30.

ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪ್ರದಾನ-ವೂಡೇ ಪಿ.ಕೃಷ್ಣ, ಅಧ್ಯಕ್ಷತೆ-ದ್ವಾರನಕುಂಟೆ ಪಾತಣ್ಣ, ಆಯೋಜನೆ-ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ-ದತ್ತಿ ಸಭಾಂಗಣ, 2ನೇ ಮಹಡಿ, ಶೇಷಾದ್ರಿಪುರ ಕಾಲೇಜು-ಬೆಳಿಗ್ಗೆ 10.30.

ವಿಶ್ವ ಹೋಮಿಯೋಪತಿ ದಿನದ ಅಂಗವಾಗಿ ರಾಷ್ಟ್ರೀಯ ಹೋಮಿಯೋಪತಿ ವಿಚಾರ ಸಂಕಿರಣ, ಆರೋಗ್ಯ ಶಿಬಿರ: ಮುಖ್ಯ ಅತಿಥಿ-ಸುಮಿತ್ರಾ ರಾಜೇಂದ್ರ ಬಾಬು, ಉದ್ಘಾಟನೆ-ಮಲ್ಲೇಪುರಂ ಜಿ.ವೆಂಕಟೇಶ, ಅಧ್ಯಕ್ಷತೆ-ಬಿ.ಡಿ.ಪಟೇಲ್, ಆಯೋಜನೆ-ಕರ್ನಾಟಕ ಮಾನ್ಯತೆ ಪಡೆದ ಹೋಮಿಯೋಪತಿ ವೈದ್ಯರ ಸಂಸ್ಥೆ, ಸ್ಥಳ-ತೇರಪಂಥ್ ಭವನ, ಗಾಂಧಿನಗರ-ಬೆಳಿಗ್ಗೆ 11ರಿಂದ.

ಋತುಗಾನ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಉದ್ಘಾಟನೆ ಮತ್ತು ಕವಿಗೋಷ್ಠಿ: ಉದ್ಘಾಟನೆ-ಎಂ.ಪ್ರಕಾಶ ಮೂರ್ತಿ, ಅಧ್ಯಕ್ಷತೆ-ರಾ.ಸು.ವೆಂಕಟೇಶ, ಅತಿಥಿಗಳು-ಎಂ.ವಿ.ತ್ಯಾಗರಾಜ್, ಬೆಮೆಲ್ ಸೆಲ್ವಕುಮಾರ್, ಸ್ಥಳ-ಮಾತಿನ ಮನೆ, ಚಾಮರಾಜಪೇಟೆ, ಮಧ್ಯಾಹ್ನ 3.

ಸ್ವಾಮಿ ಶಿವಾತ್ಮಾನಂದ ಸರಸ್ವತಿ ರಚಿಸಿರುವ ಪಂಚವೇದ ಸಂಹಿತಾ 'ವೇದ ಭಗವಾನ್' ಗ್ರಂಥ ಲೋಕಾರ್ಪಣೆ: ಉದ್ಘಾಟನೆ-ಶ್ರೀ ರವಿಶಂಕರ ಗುರೂಜಿ, ಉಪಸ್ಥಿತಿ-ಶಿವಸುಜ್ಞಾನತೀರ್ಥ ಮಹಾಸ್ವಾಮಿ, ಗ್ರಂಥ ಲೋಕಾರ್ಪಣೆ-ಶ್ರೀ ಶಿವಾನಂದ ರಾಜೇಂದ್ರ ಮಹಾಸ್ವಾಮಿ, ಅಧ್ಯಕ್ಷತೆ-ಕೆ.ಎಸ್.ಪ್ರಭಾಕರ್, ಗ್ರಂಥ ಪರಿಚಯ-ಮಲ್ಲೇಪುರಂ ಜಿ.ವೆಂಕಟೇಶ್, ಆಯೋಜನೆ-ಸ್ವಾಮಿ ಶಿವಾತ್ಮಾನಂದ ಸರಸ್ವತಿ ಗುರುಸೇವಾ ಚಾರಿಟಬಲ್ ಟ್ರಸ್ಟ್, ಸ್ಥಳ-ಸರಸ್ವತಿ ಸಭಾಂಗಣ, ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಸಂಸ್ಥೆ, ಕನಕಪುರ ಮುಖ್ಯರಸ್ತೆ-ಸಂಜೆ 4.



ಕೃಶಲಾ ಡ್ಯಾನ್ಸ್ ಥಿಯೇಟರ್‌ನ ಸಿಮ್ರಾನ್ ಗೋಧ್ವಾನಿ ಅವರ ಶಿಷ್ಯೆ ಯುಕ್ತಾ ಪವಾರ್ 'ಕಥಕ್ ರಂಗ ಪ್ರವೇಶ': ಸ್ಥಳ-ಸತ್ಯ ಸಾಯಿ ಸಭಾಂಗಣ, ಕೋರಮಂಗಲ-ಸಂಜೆ 5.30.

ರಕ್ಷಾ ಕಾರ್ತಿಕ್ ಅವರಿಂದ ತ್ಯಾಗರಾಜ ಆರಾಧನೆ: ಅತಿಥಿ-ಗೋಪಾಲ್ ಪ್ರಸಾದ್ ದುಬೇ, ಬಿ.ಸೋಮಸ್ಕಂದ, ಪದ್ಮಪ್ರಿಯ, ಪ್ರಬಾಲ್ ಗುಪ್ತ, ಸ್ಥಳ-ಪ್ರಸನ್ನ ಗಣಪತಿ ದೇವಸ್ಥಾನ, ಕೆಎಚ್‌ಬಿ ಕಾಲೊನಿ, ಕೋರಮಂಗಲ, ಸಂಜೆ 5.30ರಿಂದ.

ಪಂಡಿತ್ ಭೀಮಸೇನ ಜೋಷಿ ಜನ್ಮಶತಮಾನೋತ್ಸವ ಅಂಗವಾಗಿ ಸಂಗೀತ ಕಾರ್ಯಕ್ರಮ: ಅಧ್ಯಕ್ಷತೆ-ಪಿ.ಭುಜಂಗರಾವ್, ಮುಖ್ಯ ಅತಿಥಿ-ಚಿಂಚೋಳಿ ಸುಧೀಂದ್ರ, ಆಯೋಜನೆ-ಮಹಿದಾಸ ಸಂಗೀತ ವಿದ್ಯಾಲಯ ಹಾಗೂ ಸಾಂಸ್ಕೃತಿಕ ಕೇಂದ್ರ, ಹಿಂದೂ ಧರ್ಮಪ್ರಚಾರ ಪರಿಷತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ-ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನ, ಎಲ್.ಆರ್.ಬಂಡೆ, ರಾಘವೇಂದ್ರ ನಗರ, ಕಾವಲ್‌ಬೈರಸಂದ್ರ-ಸಂಜೆ 6 ರಿಂದ.

ಸ್ವದೇಶಿ ಮೇಳ ಸಮಾರೋಪ ಸಮಾರಂಭ ಹಾಗೂ ಸುದರ್ಶನ ಗರ್ವಭಂಗ ಯಕ್ಷಗಾನ: ಉಪಸ್ಥಿತಿ-ರಾಜ್ಯಪಾಲ ಥಾವರಚಂದ್ ಗೆಹಲೋತ್, ಕಶ್ಮೀರಿಲಾಲ್, ಆಯೋಜನೆ-ಸ್ವದೇಶಿ ಜಾಗರಣ್ ಮಂಚ್-ಕರ್ನಾಟಕ, ಸ್ಥಳ-ಶಾಲಿನಿ ಮೈದಾನ, ಜಯನಗರ-ಸಂಜೆ 6.

'ಆಸೆಯೆಂಬ ಬಿಸಿಲುಗುದುರೆ' ಪುಸ್ತಕ ಬಿಡುಗಡೆ: ಬಿಡುಗಡೆ ಮಾಡುವವರು-ರವೀಂದ್ರ ಭಟ್ಟ, ಅಧ್ಯಕ್ಷತೆ-ಲಕ್ಷ್ಮೀನಾರಾಯಣ್, ಸಂಘದ ಉದ್ಘಾಟನೆ-ಗಜಾನನ ಶರ್ಮ, ಆಯೋಜನೆ-ನಿರ್ಮಾಣ್ ಯಕ್ಷ ಬಳಗ, ಸ್ಥಳ-ಪುರಂದರ ಮಂಟಪ, ನಿಸರ್ಗ ಬಡಾವಣೆ, ಬನ್ನೇರುಘಟ್ಟ-ಸಂಜೆ 6

ಮುನ್ನೆಚ್ಚರಿಕೆ ಡೋಸ್: ಪ್ರತಿ ಲಸಿಕೆಗೆ ₹ 630 ರಿಂದ ₹ 1,410 ನಿಗದಿಪಡಿಸಿದ ಖಾಸಗಿ ಆಸ್ಪತ್ರೆಗಳು

ದರ ಇಳಿಕೆಯಾದರೂ ಖರೀದಿಸಿದ್ದ ದರದಲ್ಲೇ ಮಾರಾಟ

• ವರುಣ್ ಹೆಗಡೆ

ಬೆಂಗಳೂರು: ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ದರವನ್ನು ತಯಾರಿಕಾ ಕಂಪನಿಗಳು ಶನಿವಾರ ₹ 225ಕ್ಕೆ ಇಳಿಕೆ ಮಾಡಿವೆ. ಆದರೂ ಈ ಹಿಂದೆ ಖರೀದಿಸಿದ ದರದಲ್ಲೇ ಲಸಿಕೆ ವಿತರಿಸಲು ನಗರದ ಖಾಸಗಿ ಆಸ್ಪತ್ರೆಗಳು ನಿರ್ಧರಿಸಿವೆ. ಹೀಗಾಗಿ, ಒಂದು ಡೋಸ್ ಲಸಿಕೆಗೆ ಸಾರ್ವಜನಿಕರು ₹ 630 ರಿಂದ ₹1,410 ವರೆಗೆ ಹಣ ಪಾವತಿಸಬೇಕಾಗುತ್ತದೆ.

ಭಾನುವಾರದಿಂದ 18 ವರ್ಷಗಳು ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತದೆ. ಕೋವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆಗಳನ್ನು ಖಾಸಗಿ ಲಸಿಕಾ ಕೇಂದ್ರಗಳಿಗೆ ಈ ಹಿಂದೆ ಕ್ರಮವಾಗಿ ₹ 600 ಹಾಗೂ ₹ 1,200ಕ್ಕೆ ಪೂರೈಸಲಾಗಿತ್ತು.

ಕೋವಿಡ್ ಮೂರನೇ ಅಲೆ ನಿಯಂತ್ರಣದ ಬಳಿಕ ಲಸಿಕೆ ಪಡೆದುಕೊಳ್ಳುವವರ ಸಂಖ್ಯೆ ಇಳಿಮುಖವಾಗಿದೆ. ಇದರಿಂದಾಗಿ ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ ಖರೀದಿಸಿದ್ದ ಲಸಿಕೆಯ ದಾಸ್ತಾನು ಹಾಗೆಯೇ ಉಳಿದಿದೆ. ಆದ್ದರಿಂದ ಖರೀದಿಸಿದ ದರಕ್ಕೇ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸಲು ಖಾಸಗಿ ಆಸ್ಪತ್ರೆಗಳು 'ಕೋವಿನ್' ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುತ್ತಿವೆ.

ಕೋವಿಡ್ ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷಗಳು ದಾಟಿದವರಿಗೆ ಉಚಿತವಾಗಿ ಸರ್ಕಾರಿ ಕೇಂದ್ರಗಳಲ್ಲಿ ಮುನ್ನೆಚ್ಚರಿಕೆ ಡೋಸ್ ಒದಗಿಸಲಾಗುತ್ತಿದೆ. ಉಳಿದವರು ಖಾಸಗಿ ಆಸ್ಪತ್ರೆಗಳಲ್ಲಿ ಹಣ ಪಾವತಿಸಿ ಲಸಿಕೆ ಪಡೆದುಕೊಳ್ಳಬೇಕಿದೆ.

ನಗರದ ಖಾಸಗಿ ಆಸ್ಪತ್ರೆಗಳು ಕೋವಿಶೀಲ್ಡ್ ಲಸಿಕೆಯನ್ನು ₹ 630 ರಿಂದ ₹ 780ರ ವರೆಗೆ ಹಾಗೂ ಕೋವ್ಯಾಕ್ಸಿನ್ ಲಸಿಕೆಯನ್ನು ₹ 1,050 ರಿಂದ ₹ 1,410ರ ವರೆಗೆ ಒದಗಿಸುತ್ತಿವೆ. ಇದರಲ್ಲಿ ಸೇವಾ ಶುಲ್ಕವೂ ಸೇರಿದೆ. ಮುನ್ನೆಚ್ಚರಿಕೆ ಡೋಸ್ ಲಸಿಕೆಗೂ ಆಸ್ಪತ್ರೆಗಳು 'ಕೋವಿನ್' ಪೋರ್ಟಲ್‌ನಲ್ಲಿ ಇದೇ ದರವನ್ನು ನಮೂದಿಸಿವೆ.

ದರದಲ್ಲಿ ವ್ಯತ್ಯಾಸ: 18 ವರ್ಷಗಳು ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ಬುಕ್ ಮಾಡಲು ಕೋವಿನ್ ಪೋರ್ಟಲ್‌ನಲ್ಲಿ ಅವಕಾಶ ನೀಡಲಾಗಿದೆ. ಯುನೈಟೆಡ್, ಮದರ್‌ಹುಡ್, ಲೋಟಸ್ ಡೈಗ್ನಾಸ್ಟಿಕ್ ಸೆಂಟರ್, ಕುಂದಲಹಳ್ಳಿಯ ಅಪೋಲೊ ಕ್ರೆಡಲ್ ಬ್ರೂಕ್ ಫೀಲ್ಡ್, ಫೋರ್ಟಿಸ್, ದೇವ್ ಹೆಲ್ತ್‌ಕೇರ್ ಸೆಂಟರ್ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ 'ಕೋವಿಶೀಲ್ಡ್' ಲಸಿಕೆಗೆ ₹ 780 ದರ ನಿಗದಿ ಮಾಡಲಾಗಿದೆ. ನಾರಾಯಣ ಹೃದಯಾಲಯದಲ್ಲಿ ₹ 630 ಹಾಗೂ ಅಪೋಲೊ ಮೆಡಿಕಲ್ ಸೆಂಟರ್‌ನಲ್ಲಿ ₹ 700 ದರ ಇದೆ.

ಅಪೋಲೊ ಕ್ಲಿನಿಕ್, ಸ್ಪಿಂಗ್‌ಲಿಪ್ ಹೆಲ್ತ್‌ಕೇರ್, ಕ್ಲೌಡ್‌ನೈನ್, ಟೋಟಲ್ ಆರ್ಥೋಕೇರ್, ಯುನೈಟೆಡ್, ಮಣಿಪಾಲ್, ಆಸ್ಟರ್ ಮಾನ್ಯತಾ ಕ್ಲಿನಿಕ್ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ 'ಕೋವ್ಯಾಕ್ಸಿನ್' ಲಸಿಕೆಗೆ ₹ 1,410 ನಿಗದಿಪಡಿಸಲಾಗಿದೆ. ಮದರ್‌ಹುಡ್, ಶ್ರೀಸಾಯಿ, ಫೋರ್ಟಿಸ್ ಸೇರಿದಂತೆ ಕೆಲ ಆಸ್ಪತ್ರೆಗಳಲ್ಲಿ ₹ 1,200 ನಿಗದಿಪಡಿಸಲಾಗಿದೆ. ನಾರಾಯಣ ಹೃದಯಾಲಯದಲ್ಲಿ ₹ 1,050 ಇದೆ.



ನಗರದ ದಾಸಪ್ಪ ಆಸ್ಪತ್ರೆಯ ಲಸಿಕಾ ಕೇಂದ್ರದಲ್ಲಿ ಆರೋಗ್ಯ ಕಾರ್ಯಕರ್ತೆಯೊಬ್ಬರು ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆದುಕೊಂಡರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಕೋವಿಡ್ ಲಸಿಕೆ ವಿತರಣೆ ವಿವರ

- **1.08** ಕೋಟಿ ಈವರೆಗೆ ಮೊದಲ ಡೋಸ್ ಪಡೆದವರು
- **1** ಕೋಟಿ ಎರಡನೆ ಡೋಸ್ ಪಡೆದವರು
- **3.97** ಲಕ್ಷ ಮೂರನೇ ಡೋಸ್ ಪಡೆದವರು
- **617** ಲಸಿಕೆ ವಿತರಿಸುತ್ತಿರುವ ಸರ್ಕಾರಿ ಕೇಂದ್ರಗಳು
- **148** ಲಸಿಕೆ ವಿತರಿಸುತ್ತಿರುವ ಖಾಸಗಿ ಕೇಂದ್ರಗಳು



ಈ ಹಿಂದೆ ಖರೀದಿಸಿದ ಲಸಿಕೆಯ ದಾಸ್ತಾನು ಆಸ್ಪತ್ರೆಗಳಲ್ಲಿ ಹಾಗೆಯೇ ಉಳಿದಿದೆ. ಅದನ್ನು ಕಡಿಮೆ ದರಕ್ಕೆ ನೀಡಿದರೆ ಆಸ್ಪತ್ರೆಗಳಿಗೆ ನಷ್ಟವಾಗುತ್ತದೆ. ಹಾಗಾಗಿ, ಖರೀದಿಸಿದ ದರಕ್ಕೆ ಆಸ್ಪತ್ರೆಗಳು ಒದಗಿಸುತ್ತವೆ

ಡಾ. ಪ್ರಸನ್ನ ಎಚ್.ಎಂ., ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ

ಖಾಸಗಿ ಆಸ್ಪತ್ರೆ: ಮುನ್ನೆಚ್ಚರಿಕೆ ಡೋಸ್ ಇಂದಿನಿಂದ

ಬೆಂಗಳೂರು: 18 ವರ್ಷ ಮೇಲ್ಪಟ್ಟವರಿಗೆ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ಭಾನುವಾರದಿಂದ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಣೆ ಮಾಡಲಾಗುತ್ತದೆ.

ಎರಡನೇ ಡೋಸ್ ಪಡೆದು 9 ತಿಂಗಳು ಪೂರ್ಣಗೊಂಡವರು ಮುನ್ನೆಚ್ಚರಿಕೆ ಡೋಸ್ ಪಡೆಯಬಹುದಾಗಿದೆ. 18 ವರ್ಷ ಮೇಲ್ಪಟ್ಟವರಲ್ಲಿ 4.97 ಕೋಟಿ ಮಂದಿ ಮೊದಲ ಡೋಸ್ ಹಾಗೂ 4.76 ಕೋಟಿ ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದಾರೆ. ಮೊದಲ ಹಾಗೂ ಎರಡನೇ ಡೋಸ್ ವಿತರಣೆಗೆ ನಿಗದಿಪಡಿಸಲಾದ ಗುರಿಯಲ್ಲಿ ಕ್ರಮವಾಗಿ ಶೇ 101.8 ರಷ್ಟು ಹಾಗೂ ಶೇ 97.4 ರಷ್ಟು ಸಾಧನೆಯಾಗಿದೆ. ಆರೋಗ್ಯ ಕಾರ್ಯಕರ್ತರು ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಉಚಿತವಾಗಿ ಮುನ್ನೆಚ್ಚರಿಕೆ ಡೋಸ್ ವಿತರಿಸಲಾಗುತ್ತಿದ್ದು, 14.24 ಲಕ್ಷ ಮಂದಿ ಮೂರನೇ ಡೋಸ್ ಲಸಿಕೆ ಪಡೆದಿದ್ದಾರೆ.

12ರಿಂದ 14 ವರ್ಷದವರಲ್ಲಿ 13.82 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. 15 ರಿಂದ 17 ವರ್ಷದವರಲ್ಲಿ 25.11 ಲಕ್ಷ ಮಂದಿ ಮೊದಲ ಡೋಸ್ ಹಾಗೂ 20.52 ಲಕ್ಷ ಮಂದಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ.

ಸುದ್ದಿ 2 ನಿಮಿಷ

'ಸಾಹಿತಿಗಳ ಕೂದಲು ಕೊಂಕಾದರೂ ಕಾಂಗ್ರೆಸ್ ಸುಮ್ಮನಿರಲ್ಲ'

ಹೊಸಪೇಟೆ (ವಿಜಯನಗರ): 'ಸಾಹಿತಿಗಳಿಗೆ ಜೀವ ಬೆದರಿಕೆಯ ಪತ್ರ ಬರೆಯಲಾಗಿದೆ. ಆದರೆ, ಅವರ ಕೂದಲು ಕೊಂಕಾದರೂ ಕಾಂಗ್ರೆಸ್ ಸುಮ್ಮನಿರಲ್ಲ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಎಚ್ಚರಿಸಿದರು.

'ಈಗಾಗಲೇ ಡಾ.ಎಂ.ಎಂ. ಕಲಬುರ್ಗಿ, ಗೋವಿಂದ ಪಾನ್ಸರೆ, ಗೌರಿ ಲಂಕೇಶ್ ಸೇರಿದಂತೆ ಹಲವರ ಹತ್ಯೆ ಮಾಡಲಾಗಿದೆ. ಧ್ವನಿ ಅಡಗಿಸುವ ಪ್ರಯತ್ನ ನಡೆಸಲಾಗುತ್ತಿದೆ. ಆದರೆ, ಕಾಂಗ್ರೆಸ್ ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ದೇಶದ ಏಕತೆ ಛಿದ್ರವಾಗಲು ಬಿಡುವುದಿಲ್ಲ. ದೇಶಕ್ಕಾಗಿ ಹೋರಾಟ ನಡೆಸಿದ ಪಕ್ಷ ನಮ್ಮದು. ಈಗ ಪ್ರಜಾಪ್ರಭುತ್ವ, ಸಂವಿಧಾನ ರಕ್ಷಣೆಗೆ ಬದ್ಧ' ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಾರ್ವಜನಿಕ ಕ್ಷೇತ್ರದಲ್ಲಿ ಇದ್ದಾಗ ಭಯ ಪಡಿಸುವುದು ಸಹಜ. ಆದರೆ, ಯಾರು ಕೂಡ ಎದೆಗುಂದಬಾರದು. ಬಜರಂಗದಳದ ವ್ಯಕ್ತಿಯನ್ನು ರಾಜ್ಯದ ಗೃಹಸಚಿವರಾಗಿ ಮಾಡಿರುವುದು ದುರಂತ. ಸರಿಯಾದ ಮಾಹಿತಿ ಇಲ್ಲದೇ ಮಾತನಾಡುತ್ತಿದ್ದಾರೆ. ಪ್ರತಿಯೊಂದಕ್ಕೂ ಕೋಮು ಬಣ್ಣ ಕೊಡುತ್ತಿದ್ದಾರೆ. ಗೃಹಸಚಿವರ ಬಂಧನ, ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಹೋರಾಟ ನಡೆಸಲಿದೆ' ಎಂದು ಹೇಳಿದರು.



ಮುಸ್ಕಾನ್ ಖಾನ್ ವಿಚಾರಣೆಗೆ ಒತ್ತಾಯ

ಮಂಡ್ಯ: 'ಅಲ್‌ಕೈದಾ ಸಂಘಟನೆ ಮುಖ್ಯಸ್ಥ ಆಯ್ಮಾನ್ ಅಲ್ ಝುವಾಹಿರಿಯಿಂದ ಪ್ರಶಂಸೆಗೆ ಒಳಗಾಗಿರುವ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಹಾಗೂ ಅವರ ಕುಟುಂಬ ಸದಸ್ಯರನ್ನು ವಿಚಾರಣೆಗೆ ಒಳಪಡಿಸಬೇಕು' ಎಂದು ಒತ್ತಾಯಿಸಿ ಸಂಸದ ಅನಂತ ಕುಮಾರ ಹೆಗಡೆ ಅವರ ಅಭಿಮಾನಿಗಳು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

'ಪಿಇಎಸ್ ಕಾಲೇಜು ಆವರಣದಲ್ಲಿ 'ಅಲ್ಲಾಹು ಅಕ್ಬರ್' ಘೋಷಣೆ ಕೂಗಿದ್ದ ಮುಸ್ಕಾನ್ ಖಾನ್ ಹಾಗೂ ಆಕೆಯ ಕುಟುಂಬ ಸದಸ್ಯರ ಬಗ್ಗೆ ಹಲವು ಅನುಮಾನಗಳು ಮೂಡಿವೆ. ಅವರ ಮನೆಗೆ ದೇಶ–ವಿದೇಶಗಳಿಂದ ಹಲವು ಜನ ಬಂದು ಅಭಿನಂದಿಸಿದ್ದಾರೆ, ಉಡುಗೊರೆ, ಹಣ ಕೊಟ್ಟಿದ್ದಾರೆ. ಇದು ದೇಶದ ಭದ್ರತೆಗೆ ಅಪಾಯದ ಮುನ್ಸೂಚನೆಯಾಗಿದೆ. ಹೀಗಾಗಿ ಅವರನ್ನು ವಿಚಾರಣೆ ಒಳಪಡಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಅನಂತಕುಮಾರ್ ಹೆಗಡೆ ಅಭಿಮಾನಿಗಳು ಎಂದು ಹೇಳಿಕೊಂಡಿರುವ ಅನಿಲ್ ಮರೀಗೌಡ, ಚಂದ್ರ, ಎಚ್.ಬಿ.ಪ್ರಸನ್ನಕುಉಮಾರ್ ಪತ್ರದಲ್ಲಿ ಸಹಿ ಮಾಡಿದ್ದಾರೆ.

'ಹಿಂದಿ ಬಳಕೆ– ಬ್ರಿಟಿಷರಿಗೂ ಬಿಜೆಪಿಗೂ ವ್ಯತ್ಯಾಸವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರತಿ ಸಂಸ್ಥಾನವನ್ನು ಆಕ್ರಮಿಸಿಕೊಳ್ಳುವ ಮೊದಲು ಬ್ರಿಟಿಷರು ಒಡೆದು ಆಳುವ ನೀತಿ ಅನುಸರಿಸುತ್ತಿದ್ದರು. ಈಗ ಬಿಜೆಪಿ ಅದೇ ನೀತಿ ಮುಂದುವರೆಸಿದೆ. ಬ್ರಿಟಿಷರಿಗೂ ಮತ್ತು ಬಿಜೆಪಿಗೆ ಯಾವುದೇ ವ್ಯತ್ಯಾಸ ಇಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಅನ್ಯ ರಾಜ್ಯಗಳ ಮಧ್ಯ ವ್ಯವಹರಿಸುವಾಗ ಹಿಂದಿ ಬದಲು ಇಂಗ್ಲಿಷ್ ಬಳಸಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅವರು, ಒಡೆದಾಳುವ ನೀತಿಗೆ ಈ ಮಾತು ಜೀವಂತ ಸಾಕ್ಷಿಯಾಗಿದೆ ಎಂದಿದ್ದಾರೆ.

'ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡು ಕಳೆದ 75 ವರ್ಷಗಳಿಂದ ಒಂದೇ ತಾಯಿಯ ಮಕ್ಕಳಂತೆ ಇರುವ ರಾಜ್ಯಗಳ ಮಧ್ಯೆ ಅಮಿತ್ ಶಾ ಅವರು ಹುಳಿ ಹಿಂಡುವ ಜತೆಗೆ, ಹಿಂದಿ ಹೇರಲು ಮುಂದಾಗಿರುವುದು ಆಘಾತಕಾರಿ' ಎಂದು ಹೇಳಿದ್ದಾರೆ.

'ಪ್ರತಿಯೊಂದಕ್ಕೂ ಹಿಂದುತ್ವದ ಜಪ ಮಾಡಿ ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತರುತ್ತಿರುವ ಬಿಜೆಪಿಯು ಸಮಾಜ ಮತ್ತು ಜನರನ್ನು ಒಡೆಯುತ್ತಿದೆ. ಈಗ ಭಾಷೆಯನ್ನೂ ಟೂಲ್ ಕಿಟ್ ಮಾಡಿಕೊಂಡು ವಿಭಜನೆಗೆ ಹೊರಟಿರುವುದು ದೇಶಕ್ಕೆ ಗಂಡಾಂತರಕಾರಿ' ಎಂದು ಕುಟುಕಿದ್ದಾರೆ.

'ಅಮಿತ್ ಶಾ ಅವರಿಗೆ ಇಂಗ್ಲಿಷ್ ಬರಲ್ವಾ? ಅವರಿಗೆ ಪ್ರಾದೇಶಿಕ ಭಾಷೆಗಳ ಮೇಲೆ ಯಾಕೆ ಈ ಪರಿ ದ್ವೇಷ? ನಮ್ಮ ಭಾಷೆ ನಮಗೆ ಮುಖ್ಯ. ಮಾತೃಭಾಷೆಗೇ ಅಗ್ರಸ್ಥಾನ. ಕರ್ನಾಟಕದಲ್ಲಿ ಕನ್ನಡವೇ ಮೊದಲು. ಹಿಂದಿ ನಮ್ಮ ಭಾಷೆಯಲ್ಲ. ಹಿಂದಿ ಹೇರಿಕೆ ವಿರುದ್ಧ ಅಭಿಯಾನಕ್ಕೆ ನನ್ನ ಪೂರ್ಣ ಬೆಂಬಲ ಇದೆ' ಎಂದು ಕುಮಾರಸ್ವಾಮಿ ಅವರು ಪ್ರತಿಪಾದಿಸಿದ್ದಾರೆ.

'ಕರ್ನಾಟಕದಲ್ಲಿ ಕನ್ನಡ ಮೊದಲು, ದೇಶದಲ್ಲಿ ಹಿಂದಿ ಮೊದಲು'

ಬೆಂಗಳೂರು: 'ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೇ ಅಗ್ರಸ್ಥಾನ. ದೇಶದ ವಿಚಾರ ಬಂದಾಗ ರಾಷ್ಟ್ರೀಯ ಭಾಷೆ ಹಿಂದಿಗೆ ಅಗ್ರಸ್ಥಾನ. ಇದಕ್ಕೆ ನಮ್ಮ ಸರ್ಕಾರ ಬದ್ಧ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದರು.

ಕೇಂದ್ರದಿಂದ ಹಿಂದಿ ಭಾಷೆ ಹೇರಿಕೆ ವಿಚಾರಕ್ಕೆ ಸಂಬಂಧಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮಾಡಿದ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಅವರು, 'ಕರ್ನಾಟಕದಲ್ಲಿ ಕನ್ನಡ ಮೊದಲು, ದೇಶದಲ್ಲಿ ಹಿಂದಿ ಮೊದಲು' ಎಂದು ಸಮರ್ಥಿಸಿದರು.

'ಕುಮಾರಸ್ವಾಮಿ ಹೇಳಿಕೆಯನ್ನು ನಾನು ಗಮನಿಸಿದ್ದೇನೆ. ಕನ್ನಡಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಪ್ರಾದೇಶಿಕ ಭಾಷೆಗೆ ಅನ್ಯಾಯ ಮಾಡಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಕುಮಾರಸ್ವಾಮಿ ದೇಶ ಸುತ್ತಿದವರು. ದೇಶದಲ್ಲಿ ಕೋಟ್ಯಂತರ ಜನ ಯಾವ ಭಾಷೆ ಮಾತನಾಡುತ್ತಾರೆ ಎನ್ನುವುದು ಅವರಿಗೂ ಗೊತ್ತಿದೆ' ಎಂದರು.

'ಅರ್ಚಕರು ಹೊಟ್ಟೆಪಾಡಿಗಾಗಿ ಕೆಲಸ ಮಾಡುತ್ತಿದ್ದಾರೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ದೇವಾಲಯಗಳಲ್ಲಿ ಸ್ವಾರ್ಥ ಬಿಟ್ಟು ಕೆಲಸ ಮಾಡುವವರು ಅರ್ಚಕರು. ಕುಮಾರಸ್ವಾಮಿಯವರ ಈ ಹೇಳಿಕೆ ಸರಿಯಲ್ಲ. ಈ ಹೇಳಿಕೆಯನ್ನು ಅವರು ವಾಪಸ್ ಪಡೆಯಬೇಕು' ಎಂದರು.

ಅಮಿತ್ ಶಾ ಹೇಳಿಕೆ: ಪ್ರಲ್ಹಾದ ಜೋಶಿ ಸಮರ್ಥನೆ

ಬೆಂಗಳೂರು: ಹಿಂದಿ ಬಳಕೆ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆಯನ್ನು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸಮರ್ಥಿಸಿಕೊಂಡರು.

ಭಾರತೀಯ ವಿಕಾಸ ಕೇಂದ್ರ–ಕರ್ನಾಟಕ ಹಮ್ಮಿಕೊಂಡಿದ್ದ 'ಒಂದು ರಾಷ್ಟ್ರ–ಒಂದು ಚುನಾವಣೆ' ಕುರಿತ ಸಂವಾದ ಹಾಗೂ ದುಂಡು ಮೇಜಿನ ಸಭೆಯ ಕೃತಿ ಲೋಕಾರ್ಪಣೆ ಮಾಡಿ ಶನಿವಾರ ಮಾತನಾಡಿದರು.

'ಅನ್ಯರಾಜ್ಯಗಳಿಗೆ ಹೋದಾಗ ಇಂಗ್ಲಿಷ್ ಬದಲು ಹಿಂದಿ ಬಳಸುವಂತೆ ಅಮಿತ್ ಶಾ ಹೇಳಿದ್ದಾರೆ. ಅದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸ್ಥಳೀಯ ಭಾಷೆಗೆ ಒತ್ತು ನೀಡಲಾಗುತ್ತಿದೆ. ಕರ್ನಾಟಕದಲ್ಲಿ ಕನ್ನಡಕ್ಕೇ ಆದ್ಯತೆ ಸಿಗಲಿದೆ. 70 ವರ್ಷ ದೇಶ ಆಳಿದವರು ತಾಂತ್ರಿಕ ಶಿಕ್ಷಣದಲ್ಲಿ ಸ್ಥಳೀಯ ಭಾಷೆಗೆ ಮನ್ನಣೆ ನೀಡಿರಲಿಲ್ಲ. ನಾವು ಆ ಕೆಲಸ ಮಾಡಿದ್ದೇವೆ' ಎಂದರು.

'ಮೊಘಲರಂತೆ ಆಂಗ್ಲರೂ ನಮ್ಮ ದೇಶವನ್ನು ಹಾಳು ಮಾಡಿದ್ದಾರೆ. 100–200 ವರ್ಷಗಳ ಇತಿಹಾಸವಿರುವ ಇಂಗ್ಲಿಷ್ ಭಾಷೆಗೆ ಏಕಿಷ್ಟು ಒತ್ತು ಕೊಡಬೇಕು. ಆ ಭಾಷೆ ಮೇಲೆ ಒಲವು ಹೊಂದಿರುವ ನಮಗೆ ಹಿಂದಿ ಬೇಡ ಅಂದರೆ ಹೇಗೆ' ಎಂದು ಪ್ರಶ್ನಿಸಿದರು.

ಹಿಂದಿ ಹೇರಿಕೆ: ಎಲ್ಲ ಲೇಖಕರು ಖಂಡಿಸಿ– ಕುಂ. ವೀರಭದ್ರಪ್ಪ

ಪ್ರಜಾವಾಣಿ ವಾರ್ತೆ

ಸಾಗರ: 'ಹಿಂದಿ ಹೇರಿಕೆಯ ಹಿಂದೆ ಇರುವ ಹುನ್ನಾರವನ್ನು ಕನ್ನಡದ ಎಲ್ಲ ಲೇಖಕರು ಗಟ್ಟಿ ಧ್ವನಿಯಲ್ಲಿ ಖಂಡಿಸಬೇಕಿದೆ. ಭಾಷೆ, ಸಂಸ್ಕೃತಿಯ ವೈವಿಧ್ಯವನ್ನು ನಾಶಪಡಿಸುವ ನಡೆಯನ್ನು ವಿರೋಧಿಸಲೇಬೇಕಿದೆ' ಎಂದು ಸಾಹಿತಿ ಕುಂ. ವೀರಭದ್ರಪ್ಪ ಶನಿವಾರ ಹೇಳಿದರು.

ಪ್ರಕಾಶ ಕುಗ್ವೆ ಅವರ 'ಸೀಳುನೋಟ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹಿಂದಿ ಭಾಷೆಯನ್ನು ಎಲ್ಲಾ ಭಾರತೀಯರ ಮೇಲೆ ಹೇರಿಕೆ ಮಾಡಲು ಹೊರಟಿರುವುದು ಅಪಾಯಕಾರಿ ಬೆಳವಣಿಗೆ. ಕರ್ನಾಟಕದಲ್ಲೂ ಸರ್ಕಾರ ಅವರ ಹೇಳಿಕೆಗೆ ಬೆಂಬಲ ಕೊಡಲು ಮುಂದಾದರೆ ಕನ್ನಡ ಭಾಷೆ, ಸಂಸ್ಕೃತಿಗೆ ಧಕ್ಕೆ ಉಂಟಾಗಲಿದೆ' ಎಂದು ಹೇಳಿದರು.



ಕುಂ. ವೀರಭದ್ರಪ್ಪ

ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿಗಳ ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇಮಕದ ನಂತರ ನನೆಗುದಿಗೆ ಬಿದ್ದಿದ್ದ ಕೆಪಿಸಿಸಿಯ ಇತರ ಪದಾಧಿಕಾರಿಗಳ ನೇಮಕಕ್ಕೆ ಕಾಂಗ್ರೆಸ್ ವರಿಷ್ಠರು ಶನಿವಾರ ಚಾಲನೆ ನೀಡಿದ್ದು, 40 ಜನ ಉಪಾಧ್ಯಕ್ಷರು ಹಾಗೂ 109 ಜನ ಪ್ರಧಾನ ಕಾರ್ಯದರ್ಶಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ನೇಮಕ ಪ್ರಕ್ರಿಯೆಯಲ್ಲಿ ಪ್ರಾದೇಶಿಕತೆ ಹಾಗೂ ಜಾತಿವಾರು ಸಮತೋಲನಕ್ಕೆ ಆದ್ಯತೆ ನೀಡಿದ್ದಲ್ಲದೆ, ಹಿರಿಯರ ಜೊತೆ ಕಿರಿಯರನ್ನೂ ಪರಿಗಣಿಸಿರುವುದು ವಿಶೇಷ.

ಹಿಂದುಳಿದ ವರ್ಗಕ್ಕೆ ಸೇರಿದ 53, ಪರಿಶಿಷ್ಟ ಜಾತಿಯ 25, ಪರಿಶಿಷ್ಟ ಪಂಗಡದ 5, ಲಿಂಗಾಯತ ಸಮುದಾಯದ 19, ಒಕ್ಕಲಿಗ ಸಮುದಾಯದ 16, ಅಲ್ಪಸಂಖ್ಯಾತ ಸಮುದಾಯದ 22 ಜನರಿಗೆ ಅವಕಾಶ ಕಲ್ಪಿಸಲಾಗಿದೆ. 23 ಜನ ಮಹಿಳೆಯರೂ ಸ್ಥಾನ ಪಡೆದಿದ್ದಾರೆ.

ಪದಾಧಿಕಾರಿಗಳ ಪಟ್ಟಿ ನೋಡಲು ಲಿಂಕ್:
https://bit.ly/377hJSL

'ಸರ್ಕಾರದ ದೃಷ್ಟಿಯಲ್ಲಿ ಎಲ್ಲರೂ ಸಮಾನರು'

ಬೀದರ್: 'ವಕ್ಫ್ ಬೋರ್ಡ್ ನಿಷೇಧ ಅಭಿಯಾನಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ. ರಾಜ್ಯದಲ್ಲಿ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವುದು ನಮ್ಮ ಗುರಿ. ಸರ್ಕಾರದ ದೃಷ್ಟಿಯಲ್ಲಿ ಎಲ್ಲರೂ ಸಮಾನರು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಸವಕಲ್ಯಾಣದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ತೆರಳುವ ಮುನ್ನ ವಕ್ಫ್ ಬೋರ್ಡ್ ನಿಷೇಧ ಅಭಿಯಾನಕ್ಕೆ ಪ್ರಮೋದ್ ಮುತಾಲಿಕ್ ಕರೆ ನೀಡಿರುವ ಬಗ್ಗೆ ಸುದ್ದಿಗಾರರ ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದರು. ಅವರವರ ಸಂಪ್ರದಾಯವನ್ನು ಅವರು ಆಚರಣೆ ಮಾಡುತ್ತಾರೆ. ಅಭಿಯಾನಗಳಿಗೂ ಸರ್ಕಾರಕ್ಕೂ ಸಂಬಂಧವಿಲ್ಲ ಎಂದರು.

ಹಿಂದಿಯೇತರ ರಾಜ್ಯಗಳು ಪ್ರಾದೇಶಿಕ ಭಾಷೆಯ ಜತೆಗೆ ಹಿಂದಿಯಲ್ಲಿ ವ್ಯವಹರಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿರುವ ಪ್ರಶ್ನೆಗೆ ಉತ್ತರಿಸಿದ ಅವರು ರಾಜ್ಯದಲ್ಲಿ ಹಿಂದಿ ಹೇರಿಕೆ ಸಾಧ್ಯವಿಲ್ಲ ಎಂದರು.

ಕಾರ್ಯಕರ್ತರ ಸಿಟ್ಟು: ಸಭೆಯಿಂದ ಹೊರನಡೆದ ಕುಮಾರಸ್ವಾಮಿ

ರಾಮನಗರ: ಕ್ಷೇತ್ರವನ್ನು ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎಂದು ಅಸಮಾಧಾನ ವ್ಯಕ್ತಪಡಿಸಿ ಕನಕಪುರದ ಜೆಡಿಎಸ್ ಕಾರ್ಯಕರ್ತರು ಪಕ್ಷದ ಶಾಸಕಾಂಗ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡರು.

ಬಿಡದಿಯ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಶನಿವಾರ ನಡೆದ ಕಾರ್ಯಕರ್ತರೊಂದಿಗಿನ ಸಭೆಯಲ್ಲಿ ಕುಮಾರಸ್ವಾಮಿ ಮಾತನಾಡುತ್ತಿದ್ದಂತೆ ಎದ್ದು ನಿಂತ ಕಾರ್ಯಕರ್ತರು, 'ಕನಕಪುರದಲ್ಲಿ ಪಕ್ಷದ ಸಂಘಟನೆಗೆ ನೀವು ಒತ್ತು ನೀಡುವುದಿಲ್ಲ. ಅಲ್ಲಿ ನಮ್ಮನ್ನು ಕೇಳುವವರೇ ಇಲ್ಲ. ಪಕ್ಷದ ವಿಚಾರವಾಗಿ ಠಾಣೆಗೆ ಹೋದರೂ ಈವರೆಗೆ ಯಾರೂ ಬಂದಿಲ್ಲ' ಎಂದು ಸಿಟ್ಟು ಹೊರ ಹಾಕಿದರು.

'ಕ್ಷೇತ್ರದಲ್ಲಿ 30 ವರ್ಷಗಳಿಂದಲೂ ಇದೇ ಪರಿಸ್ಥಿತಿ ಇದೆ. ಅಭ್ಯರ್ಥಿ ಆಯ್ಕೆ ವಿಚಾರದಲ್ಲೂ ಕಾರ್ಯಕರ್ತರನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಕೊನೆಕ್ಷಣದಲ್ಲಿ ಚುನಾವಣೆ ನಡೆಸುವುದಿಲ್ಲ. ಡಿ.ಕೆ. ಸಹೋದರರ ವಿರುದ್ಧ ನಿಲ್ಲಲು ಆಗುತ್ತಿಲ್ಲ. ಈ ಬಾರಿ ನಿಮ್ಮ ನಿಲುವು ಏನೆಂದು ಸ್ಪಷ್ಟಪಡಿಸಿ. ಇಲ್ಲವಾದರೆ ನಮ್ಮ ದಾರಿ ನಾವು ನೋಡಿಕೊಳ್ಳುತ್ತೇವೆ' ಎಂದು ರೊಚ್ಚಿಗೆದ್ದರು.

ಅವರನ್ನು ಸಮಾಧಾನಪಡಿಸಲು ಸಾಧ್ಯವಾಗದೆ ಕುಮಾರಸ್ವಾಮಿ ಸಭೆಯಿಂದ ಹೊರನಡೆದರು. ಅದಾದ ಬಳಿಕ ಕಾರ್ಯಕರ್ತರು ಒಬ್ಬರಿಗೊಬ್ಬರು ಕಿತ್ತಾಡಿಕೊಂಡಿದ್ದು, ಕೈಕೈ ಮಿಲಾಯಿಸುವ ಹಂತಕ್ಕೆ ಪರಿಸ್ಥಿತಿ ತಲುಪಿತ್ತು.

ಪಕ್ಷ ಸಂಘಟನೆ: ಬಳಿಕ ತೋಟದ ಮತ್ತೊಂದು ವೇದಿಕೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, 'ದೇವೇಗೌಡರ ಕಾಲದಿಂದಲೂ ನೀವು ನನ್ನನ್ನು ಬೆಂಬಲಿಸುತ್ತಿದ್ದೀರಿ. ನಾನು ಅಲ್ಲಿಯೇ ಬೆಳೆದ ಕುಡಿ. ನನ್ನನ್ನು ಚಿವುಟುವ ಪ್ರಯತ್ನ ಮಾಡಬೇಡಿ. ಕಳೆದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅವರೊಂದಿಗೆ ಕೈಜೋಡಿಸಿ ತಪ್ಪು ಮಾಡಿದ್ದು ನಿಜ. ಆದರೆ, ಮುಂದೆಂದೂ ಇಂತಹ ಪ್ರಯತ್ನ ಆಗುವುದಿಲ್ಲ. ನಿಮ್ಮ ಬೆಂಬಲಕ್ಕೆ ನಿಲ್ಲುತ್ತೇನೆ' ಎಂದು ಭರವಸೆ ನೀಡಿದರು.

'ಕನಕಪುರದಲ್ಲಿ ಸದ್ಯದಲ್ಲೇ ಪಕ್ಷದ ಕಚೇರಿ ತೆರೆದು ಸಿಬ್ಬಂದಿಯೊಬ್ಬರನ್ನು ನೇಮಿಸಲಾಗುವುದು. ಕಾರ್ಯಕರ್ತರು ಏನೇ ಅಹವಾಲು ಇದ್ದರೂ ಅಲ್ಲಿಗೆ ಸಲ್ಲಿಸಬಹುದು. ಮುಂದಿನ ಚುನಾವಣೆಗೆ ಕಾರ್ಯಕರ್ತರ ಅಭಿಪ್ರಾಯ ಪಡೆದೇ ಅಭ್ಯರ್ಥಿ ಆಯ್ಕೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಪಲಾಯನ ಮಾಡುವುದಿಲ್ಲ. ಇಂದಿನಿಂದಲೇ ಹೊಸ ರಾಜಕಾರಣ ಶುರು ಮಾಡೋಣ' ಎಂದು ಕಾರ್ಯಕರ್ತರನ್ನು ಸಮಾಧಾನಪಡಿಸಿದರು.

ಮಹಿಳೆಗೆ ಕೆಎಫ್‌ಡಿ ದೃಢ

ಕಾರ್ಗಲ್: ಸಮೀಪದ ಯಲ್ಲಮ್ಮ ಗುಡ್ಡದಲ್ಲಿ ಮಹಿಳೆಯೊಬ್ಬರಿಗೆ ಕೆಎಫ್‌ಡಿ (ಮಂಗನ ಕಾಯಿಲೆ) ಸೋಂಕು ದೃಢಪಟ್ಟಿದ್ದು, ಸ್ಥಳೀಯರಲ್ಲಿ ಆತಂಕ ಮನೆಮಾಡಿದೆ.

ಯಲ್ಲಮ್ಮ ಗುಡ್ಡದ ನಿವಾಸಿ ಸೀಮಾ ಬಾನು ಅವರಿಗೆ ತಲೆನೋವು, ಜ್ವರ, ಶೀತ, ನೆಗಡಿ, ಕೆಮ್ಮು, ಕಣ್ಣು ನೋವು ಕಾಣಿಸಿಕೊಂಡಿತ್ತು. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೂ ಗುಣಮುಖರಾಗಿರಲಿಲ್ಲ. ಬಳಿಕ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿ ಪರೀಕ್ಷೆ ಮಾಡಿದಾಗ ಕೆಎಫ್‌ಡಿ ಸೋಂಕು ದೃಢಪಟ್ಟಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಮುಸ್ಲಿಮರ ಅಂಗಡಿ ಧ್ವಂಸಗೊಳಿಸಿದ ಶ್ರೀರಾಮಸೇನೆ ಕಾರ್ಯಕರ್ತರು

ಒಂದನೇ ಪುಟದಿಂದ

ಈ ಕುರಿತು ಪ್ರತಿಕ್ರಿಯಿಸಿದ ವ್ಯಾಪಾರಿ ನಬಿಸಾಬ್, 'ನೋಡನೋಡುತ್ತಿದ್ದಂತೆ ಎಲ್ಲವನ್ನೂ ಒಡೆಯುತ್ತಾ, ಬೀದಿಗೆ ಚೆಲ್ಲುತ್ತಾ ಬಂದರು. ನಾನೊಬ್ಬನೇ ಇದ್ದೆ. ಅಂಗಡಿ, ವಸ್ತುಗಳನ್ನು ಉಳಿಸಿಕೊಳ್ಳಲು ಆಗಲಿಲ್ಲ 6 ಕ್ವಿಂಟಾಲ್ ಕಲ್ಲಂಗಡಿ ಖರೀದಿಸಿದ್ದೆ. ಅದರಲ್ಲಿ ಒಂದು ಕ್ವಿಂಟಾಲ್ ಮಾತ್ರ ಮಾರಾಟವಾಗಿತ್ತು. ಕಳೆದ 15 ವರ್ಷಗಳಿಂದ ಇಲ್ಲಿ ವ್ಯಾಪಾರ ಮಾಡುತ್ತಾ ಬಂದಿದ್ದೇನೆ. ಈಗ ಮುಸ್ಲಿಮರಿಗೆ ಅಂಗಡಿ ಹಾಕಬೇಡಿ ಎಂದು ಹೇಳುತ್ತಿದ್ದಾರೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಪ್ರಕರಣ ಕುರಿತು ಪ್ರತಿಕ್ರಿಯಿಸಿದ ಪರ್ಯಾಯಸ್ಥ ನರಸಿಂಹಸ್ವಾಮಿ ದೇಸಾಯಿ, 'ಇಲ್ಲಿ ಬಡ ಕುಟುಂಬಗಳಿಗೆ ವ್ಯಾಪಾರ ನಡೆಸಲು ಅನುಮತಿ ನೀಡಲಾಗಿದೆ. ಇದರಲ್ಲಿ ಶೇ 99ರಷ್ಟು ಜನ ಹಿಂದೂಗಳೇ ಇದ್ದಾರೆ. ಘಟನೆ ಕುರಿತು ಇತರ ಪರ್ಯಾಯಸ್ಥರ ಸಭೆ ಸೇರಿ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದರು. ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಹಿಂದೂಗಳ ರಿಕ್ಷಾ ಬಳಸಲು ಅಭಿಯಾನ

ಒಂದನೇ ಪುಟದಿಂದ

ನಗರದ ಎಪಿಎಂಸಿ ರಸ್ತೆಯ ರಿಕ್ಷಾ ತಂಗುದಾಣದಲ್ಲಿ ಶನಿವಾರ ವೈದ್ಯ ಡಾ.ಎಂ.ಕೆ.ಪ್ರಸಾದ್ ಭಂಡಾರಿ ಅವರು ಭಗವಾಧ್ವಜವನ್ನು ರಿಕ್ಷಾ ಚಾಲಕರಿಗೆ ಹಸ್ತಾಂತರಿಸಿದರು.

'ಜಾತ್ರೆಗೆ ಬರುವ ಭಕ್ತರು ಕೇಸರಿ ಧ್ವಜವಿರುವ ಆಟೊದಲ್ಲೇ ಸಂಚರಿಸುವ ಮೂಲಕ ಹಿಂದೂ ಬಡ ಆಟೊ ಚಾಲಕರಿಗೆ ಸಹಾಯ ಮಾಡಬೇಕು ಎನ್ನುವ ವಿಚಾರವನ್ನೂ ಹಿಂದೂ ಜಾಗರಣಾ ವೇದಿಕೆ ತನ್ನ ಅಭಿಯಾನದಲ್ಲಿ ಬಳಸಿಕೊಂಡಿದೆ. ಧರ್ಮವನ್ನು ಉಳಿಸುವ ಕಾರ್ಯ ನಾವು ಮಾಡಬೇಕಾಗಿದೆ' ಎಂದು ಡಾ.ಪ್ರಸಾದ್ ಭಂಡಾರಿ ಹೇಳಿದರು.

'ಜಾತ್ರೆಯ ನೆಪದಲ್ಲಿ ಅನ್ಯಧರ್ಮಿಯರು, ಹಿಂದೂ ಹೆಣ್ಣುಮಕ್ಕಳನ್ನು ಮೋಸದ ಜಾಲದಲ್ಲಿ ಸಿಲುಕಿಸುವ ಕಾರ್ಯದಲ್ಲಿ ನಿರತರಾಗುತ್ತಾರೆ' ಎಂದು ಆರೋಪಿಸಿರುವ ಕಾರ್ಯಕರ್ತರು, ಆಟೊ ಚಾಲಕರಿಗೆ ಭಗವಾಧ್ವಜವನ್ನು ವಿತರಿಸುವ ಕೆಲಸವನ್ನು ಈಗಾಗಲೇ ಆರಂಭಿಸಿದ್ದಾರೆ.

'ಹಿಂದುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸರ್ಕಾರದಿಂದ ಹಿಂದೂಗಳಿಗೆ ಯಾವುದೇ ಸಹಾಯ ದೊರೆಯುತ್ತಿಲ್ಲ. ಹಿಂದೂ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸುವ ಕೆಲಸ ಆಗುತ್ತಿದ್ದು, ಇದೀಗ ಹಿಂದೂ ಸಮಾಜ ತಾನೇ ಕಾರ್ಯಾಚರಣೆಗೆ ಇಳಿದಿದೆ' ಎಂದು ಕಾರ್ಯಕರ್ತರು ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಯಾತ್ರಾ ಪರ್ವಕ್ಕೆ ಸಿ.ಎಂ ಚಾಲನೆ

'ಅನುಭವ ಮಂಟಪ ನಿರ್ಮಾಣ ಮೇ ನಲ್ಲಿ ಆರಂಭ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಇಲ್ಲಿಯ ನೂತನ ಅನುಭವ ಮಂಟಪದ ನಿರ್ಮಾಣ ಕಾರ್ಯ ಮೇ ತಿಂಗಳ ಮೊದಲ ವಾರದಲ್ಲಿ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಸವಕಲ್ಯಾಣ ಕ್ಷೇತ್ರ ಸಮಿತಿ ಹಾಗೂ ವಿಕಾಸ ಅಕಾಡೆಮಿ ವತಿಯಿಂದ ನಗರದ ತೇರು ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಬಸವಕಲ್ಯಾಣವನ್ನು ಸುಂದರ ಸಾಂಸ್ಕೃತಿಕ ನಗರವನ್ನಾಗಿಸುವ ವಿವಿಧ ಯೋಜನೆಗಳ 'ಕಲ್ಯಾಣ ಕರ್ನಾಟಕ ಯಾತ್ರಾ ಪರ್ವ (ಮುಂದಿನ ಐದು ವರ್ಷಗಳ ಯೋಜನೆ) ಅನಾವರಣ' ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

'ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಅನುಭವ ಮಂಟಪ ನಿರ್ಮಾಣಕ್ಕೆ ಬಜೆಟ್‌ನಲ್ಲಿ ₹ 500 ಕೋಟಿ ಅನುದಾನ ಒದಗಿಸಿದರು. ಇದಕ್ಕೆ ಅವರ ಬದ್ಧತೆಯೇ ಕಾರಣವಾಗಿದೆ. ಅನುಭವ ಮಂಟಪ ನಿರ್ಮಾಣದ ಜತೆಗೆ ಪರುಷ ಕಟ್ಟೆ, ಇತರ ಸ್ಮಾರಕಗಳ ಅಭಿವೃದ್ಧಿಗೂ ಸರ್ಕಾರ ಬದ್ಧವಾಗಿದೆ' ಎಂದರು.

ಅನುಭವ ಮಂಟಪ ನಿರ್ಮಾಣ ಪೂರ್ಣಗೊಳ್ಳುವುದರಲ್ಲಿ ವೈಚಾರಿಕ ಕ್ರಾಂತಿ ಮಾಡಲು ಬಸವರಾಜ ಪಾಟೀಲ ಸೇಡಂ ಪಣ ತೊಟ್ಟಿದ್ದಾರೆ. 12ನೇ ಶತಮಾನದಸಾಮಾಜಿಕಚಿಂತನೆಮತ್ತೆಶುರುವಾಗಬೇಕು. ಎಲ್ಲ ತರಹದ ವಿಚಾರಗಳು ಇಲ್ಲಿ ಚರ್ಚೆಗೆ ಬರಬೇಕು ಎಂದು ಹೇಳಿದರು.

ಸನ್ಮಾನ: ನಾಲ್ಕು ಶತಮಾನಗಳಿಂದ ಪರುಷಕಟ್ಟೆಯ ಜಾಗದ ಸಮಸ್ಯೆ ಇತ್ತು. ಅದನ್ನು ಬಗೆಹರಿಸುವಲ್ಲಿ ಸಹಕರಿಸಿದ ಹಾಗೂ ಮುಸ್ಲಿಮರ ಕೆಲ ಮನೆಗಳನ್ನು ತೆರವುಗೊಳಿಸಿ ಪರುಷಕಟ್ಟೆಗೆ ಹೆಚ್ಚಿನ ಜಾಗ ಒದಗಿಸುವ ಭೂಸ್ವಾಧೀನ ಪ್ರಕ್ರಿಯೆಗೆ ಸಹಕಾರ ನೀಡಿದ ಜಮ್ಮೈತ್ ಉಲ್ ಕುರೇಶಿ ಸಮಾಜ ಸಂಘದ ಸಲಹಾ ಮಂಡಳಿ ಅಧ್ಯಕ್ಷ ಮುಜಾಹಿದ್‌ಪಾಷಾ ಕುರೇಶಿ, ಅಬ್ದುಲ್ ಗಫಾರಸಾಬ್ ಕುರೇಶಿ, ಮುಸ್ತಾಕ್ ಚೌಧರಿ, ಯುನೂಸ್ ಕುರೇಶಿ ಹಾಗೂ ಅಕ್ಬರ್ ಅಲಿ ಕುರೇಶಿ ಅವರನ್ನು ಮುಖ್ಯಮಂತ್ರಿ ಸನ್ಮಾನಿಸಿದರು.

ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವಕಲ್ಯಾಣ ಕ್ಷೇತ್ರ ಸಮಿತಿ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ ಮಾತನಾಡಿದರು. ಕೇಂದ್ರ ಸಚಿವ ಭಗವಂತ ಖೂಬಾ, ಜಿಲ್ಲಾ ಉಸ್ತುವಾರಿ ಸಚಿವಶಂಕರಪಾಟೀಲಮುನೇನಕೊಪ್ಪ, ಸಚಿವ ಪ್ರಭು ಚವಾಣ್ ಹಾಗೂ ಜಿಲ್ಲೆಯ ಮಠಾಧೀಶರು ಇದ್ದರು.



ಬಸವಕಲ್ಯಾಣದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಪರುಷಕಟ್ಟೆಗೆ ಹೆಚ್ಚಿನ ಜಾಗ ಒದಗಿಸಲು ಮುಂದಾಗಿರುವ ಜಮ್ಮೈತ್ ಉಲ್ ಕುರೇಶಿ ಸಮಾಜ ಸಂಘದ ಸಲಹಾ ಮಂಡಳಿ ಅಧ್ಯಕ್ಷ ಮುಜಾಹಿದ್‌ಪಾಶಾ ಕುರೇಶಿ, ಅಬ್ದುಲ್ ಗಫಾರಸಾಬ್ ಕುರೇಶಿ, ಮುಸ್ತಾಕ್ ಚೌಧರಿ, ಯೂನೂಸ್ ಕುರೇಶಿ, ಅಕ್ಬರ್ ಅಲಿ ಕುರೇಶಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು – ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ವರ್ಷ ವರ್ಷವೂ ವ್ಯರ್ಥವಾಗುತ್ತಿದೆ ಮಳೆ ನೀರು ● ಕೊಳವೆಬಾವಿ ಅವಲಂಬಿಸಿದ ಶೇ 40ರಷ್ಟು ಮಂದಿ

ರಾಜಧಾನಿಗೇಕೆ ದೂರದೂರಿನ ನೀರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳನ್ನೆಲ್ಲ ಆಪೋಶನ ತೆಗೆದುಕೊಂಡು ಲಂಗುಲಗಾಮಿಲ್ಲದೇ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ 'ಜಲದಾಹ'ವೂ ದಿನೇ ದಿನೇ ಹೆಚ್ಚುತ್ತಲೇ ಇದೆ. ಜಲಮಂಡಳಿಯು ನಿತ್ಯ 140 ಕೋಟಿ ಲೀಟರ್ (ಗೃಹ ಹಾಗೂ ವಾಣಿಜ್ಯ ಉದ್ದೇಶಗಳಿಗೆ ಸೇರಿ) ನೀರನ್ನು ನಗರಕ್ಕೆ ಪೂರೈಸುತ್ತಿದೆ. 2031ರ ಹೊತ್ತಿಗೆ ಈ ಬೇಡಿಕೆ ದಿನಕ್ಕೆ 354 ಕೋಟಿ ಲೀಟರ್‌ಗಳಷ್ಟಾಗಲಿದೆ ಎಂದು ಅಂದಾಜಿಸಲಾಗಿದೆ.

ನಗರದ ಕುಡಿಯುವ ನೀರಿನ ಬೇಡಿಕೆ ಈಡೇರಿಸಲು ಸರ್ಕಾರ ಸ್ಥಳೀಯ ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ ಬದಲು ನೂರಾರು ಕಿಲೋಮೀಟರ್ ದೂರದಿಂದ ನೀರು ತರಿಸುವುದಕ್ಕೇ ಆದ್ಯತೆ ನೀಡುತ್ತಿದೆ.

ಕಾವೇರಿ ಐದನೇ ಹಂತದ ಯೋಜನೆ ಪೂರ್ಣಗೊಂಡ ಬಳಿಕ ಕೆಆರ್‌ಎಸ್ ಜಲಾಶಯದ ನೀರಿನ ಪಾಲು ನಗರಕ್ಕೆ ಲಭಿಸದು. ಇದನ್ನರಿತ ಸರ್ಕಾರ, ಜಲಮಂಡಳಿಯ ನಿವೃತ್ತ ಮುಖ್ಯ ಎಂಜಿನಿಯರ್ ಬಿ.ಎನ್. ತ್ಯಾಗರಾಜ ನೇತೃತ್ವದ ಸಮಿತಿ ವರದಿಯ ಶಿಫಾರಸಿನಂತೆ ಲಿಂಗನಮಕ್ಕಿ ಜಲಾಶಯದ ನೀರಿನ ಮೇಲೆ ಕಣ್ಣಿಟ್ಟಿತ್ತು. ಸುಮಾರು 350 ಕಿ.ಮೀ ದೂರದಿಂದ 10 ಟಿಎಂಸಿ ಅಡಿ ನೀರು ತರುವ ಈ ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವ ಸಿದ್ಧತೆಯೂ ನಾಲ್ಕು ವರ್ಷಗಳ ಹಿಂದೆ ನಡೆದಿತ್ತು. ಮಲೆನಾಡಿನ ಹಸಿರು ವನಸಿರಿಯನ್ನೇ ಬುಡಮೇಲು ಮಾಡುವ ಈ ಯೋಜನೆಗೆ ಪರಿಸರವಾದಿಗಳಿಂದ ತೀವ್ರ ವಿರೋಧ ವ್ಯಕ್ತವಾದ ಬಳಿಕ ಈ ಯೋಜನೆ ನನೆಗುದಿಗೆ ಬಿದ್ದಿದೆ.

ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರು ಬೆಂಗಳೂರಿನ ಉಸ್ತುವಾರಿ ಸಚಿವರಾಗಿದ್ದಾಗ ಆಲಮಟ್ಟಿಯ ನೀರನ್ನು ಇಲ್ಲಿಗೆ ಹರಿಸುವ ಪ್ರಸ್ತಾಪವನ್ನೂ ಮಾಡಿದ್ದರು. ಸಮುದ್ರದ ಉಪ್ಪು ನೀರನ್ನು ಸಿಹಿ ನೀರನ್ನಾಗಿ ಪರಿವರ್ತಿಸಿ ಬಳಸುವ ನಿಟ್ಟಿನಲ್ಲೂ ಚರ್ಚೆಗಳು ನಡೆದಿದ್ದವು. ಹೊರಗಡೆಯಿಂದ ನಗರಕ್ಕೆ ನೀರು ತರುವ ಯೋಜನೆಗಳಿಗೆ ಇತ್ತೀಚಿನ ಸೇರ್ಪಡೆ ಮೇಕೆದಾಟು. ಈ ನಡುವೆ ಎತ್ತಿನಹೊಳೆ ಯೋಜನೆ ಬಳಸಿಕೊಂಡು 2.5 ಟಿಎಂಸಿ ಅಡಿ ನೀರನ್ನು ಪಡೆದು ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಸಂಗ್ರಹಿಸಿ ಬಳಸುವ ನಿಟ್ಟಿನಲ್ಲೂ ಪ್ರಯತ್ನ ಸಾಗಿದೆ.

ಕಂದಾಯ ಇಲಾಖೆ ದಾಖಲೆಗಳ ಪ್ರಕಾರ ಬೆಂಗಳೂರು ನಗರ ಜಿಲ್ಲೆಯಲ್ಲಿ 937 ಕೆರೆಗಳಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗ ಉಳಿದಿರುವ ಕೆರೆಗಳು 210 ಮಾತ್ರ. ಕೆರೆಗಳಿಗೆ ಮಳೆ ನೀರು ಹರಿಸಲು 850 ಕಿ.ಮೀ ಉದ್ದದ ರಾಜಕಾಲುವೆ ಜಾಲವೂ ನಗರದಲ್ಲಿದೆ. ಹಾಗಿದ್ದರೂ ದೂರದ ಊರುಗಳಿಂದ ನಗರಕ್ಕೆ ನೀರು ಪೂರೈಸಲು ಸಾವಿರಾರು ಕೋಟಿ ಸುರಿಯುವ ಬದಲು ಇಲ್ಲಿನ ಕೆರೆಗಳ ಹಾಗೂ ರಾಜಕಾಲುವೆಗಳ ಪುನರುಜ್ಜೀವನಕ್ಕೆ ಆ ಹಣವನ್ನು ಬಳಸಬಹುದಲ್ಲವೇ ಎಂಬುದು ತಜ್ಞರ ಪ್ರಶ್ನೆ.

ಅಂಕಿ–ಅಂಶ

14.80 ಟಿಎಂಸಿ ಅಡಿ — ನಗರದಲ್ಲಿ ವರ್ಷದಲ್ಲಿ ಲಭ್ಯವಾಗುವ ಮಳೆ ನೀರು

16.04 ಟಿಎಂಸಿ ಅಡಿ — ನಗರದಲ್ಲಿ ವರ್ಷದಲ್ಲಿ ಕೊಳಚೆ ನೀರು ಶುದ್ಧೀಕರಣದಿಂದ ಲಭಿಸಬಹುದಾದ ನೀರು

18.34 ಟಿಎಂಸಿ ಅಡಿ — ಗೃಹ ಮತ್ತು ವಾಣಿಜ್ಯ ಬಳಕೆಗೆ ಅಗತ್ಯವಿರುವ ನೀರು (ಪ್ರತಿ ವ್ಯಕ್ತಿಗೆ ದಿನಕ್ಕೆ 135 ಲೀಟರ್‌ನಂತೆ)

ರಾಜಧಾನಿಯ ನೀರಿನ ಅಗತ್ಯವನ್ನು 1970ರ ದಶಕದವರೆಗೂ ಪೂರೈಸುತ್ತಿದ್ದುದು ಇಲ್ಲಿನ ಕೆರೆಗಳು ಹಾಗೂ ಬಾವಿಗಳು. 1974ರಲ್ಲಿ ನಗರಕ್ಕೆ ಕಾವೇರಿ ನೀರಿನ ಪೂರೈಕೆ ಆರಂಭವಾದ ಬಳಿಕ ಕೆರೆ ಕಾಲುವೆಗಳನ್ನು ಕಾಪಾಡುವ ಕಾಳಜಿ ಕಣ್ಮರೆಯಾಯಿತು. ಒತ್ತುವರಿ ಹೆಚ್ಚಳವಾಗಿ ಕೆರೆಗಳು ಅವಸಾನದ ಹಾದಿ ಹಿಡಿದವು. ಶೌಚನೀರು ಸೇರಿ ಕೆರೆಗಳು ಮಲಗುಂಡಿಗಳಂತಾದವು. ನಗರಕ್ಕೆ ಕುಡಿಯುವ ನೀರು ಒದಗಿಸುತ್ತಿದ್ದ ತಿಪ್ಪಗೊಂಡನಹಳ್ಳಿ ಜಲಾಶಯ ಹಾಗೂ ಹೆಸರಘಟ್ಟದಂತಹ ಕೆರೆಗಳ ನೀರೂ ಕುಡಿಯಲು ಯೋಗ್ಯವಲ್ಲದಂತಾಯಿತು. ಈಗ ಅವುಗಳನ್ನು ಪುನಃಶ್ಚೇತನಗೊಳಿಸುವ ಇಚ್ಛಾಶಕ್ತಿ ಪ್ರದರ್ಶಿಸಬೇಕಿದೆ ಎಂದು ಸಲಹೆ ನೀಡುತ್ತಾರೆ ತಜ್ಞರು.

ನಗರದ ಕೆರೆಗಳಲ್ಲಿ ನೀರು ಸಂಗ್ರಹದ ಒಟ್ಟು ಸಾಮರ್ಥ್ಯ 1800ರಲ್ಲಿ 35 ಟಿಎಂಸಿ ಅಡಿಗಳಷ್ಟಿತ್ತು. 1970ರ ದಶಕದಲ್ಲಿ ನಗರದ ಕೆರೆಗಳ ಪ್ರದೇಶ 3,180 ಹೆಕ್ಟೇರ್‌ಗಳಷ್ಟಿತ್ತು. ಅದೀಗ 2,792 ಹೆಕ್ಟೇರ್‌ಗಳಿಗೆ ಇಳಿಕೆಯಾಗಿದೆ. ಕೆರೆಗಳ ಈಗಿನ ವಿಸ್ತೀರ್ಣದ ಪ್ರಕಾರ ಅವುಗಳಲ್ಲಿ 5 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹಿಸಬಹುದು. ಹೂಳು ತುಂಬಿರುವುದರಿಂದ ವಾಸ್ತವದಲ್ಲಿ 1.2 ಟಿಎಂಸಿ ಅಡಿಗಳಷ್ಟು ಮಾತ್ರ ನೀರು ಸಂಗ್ರಹಿಸಬಹುದು. ಈ ಕೆರೆಗಳ ಹೂಳೆತ್ತಿ, ಪುನರುಜ್ಜೀವನಗೊಳಿಸಿದರೆ, ಅವುಗಳ ಸಂಗ್ರಹ ಸಾಮರ್ಥ್ಯವೂ ಹೆಚ್ಚಲಿದೆ ಎಂದು ಐಐಎಸ್ಸಿಯ ಅಧ್ಯಯನ ವರದಿಗಳು ತಿಳಿಸಿವೆ.

'ಬೆಂಗಳೂರಿನಲ್ಲಿ ವಾರ್ಷಿಕ ಸರಾಸರಿ 787 ಮಿ.ಮೀ ಮಳೆ ಆಗುತ್ತದೆ. 14.80 ಟಿಎಂಸಿ ಅಡಿಯಷ್ಟು ಮಳೆ ನೀರು ಪ್ರತಿ ವರ್ಷ ಸಿಗುತ್ತದೆ. ಸದ್ಯಕ್ಕೆ ನಗರಕ್ಕೆ 18.34 ಟಿಎಂಸಿ ಅಡಿಗಳಷ್ಟು ನೀರು ಸಾಕಾಗುತ್ತದೆ. ಮಳೆ ನೀರು ಸಂಗ್ರಹಿಸಿ ಬಳಸಲು ಹಾಗೂ ಕೆರೆಗಳಲ್ಲಿ ಶುದ್ಧ ಮಳೆ ನೀರು ಸಂಗ್ರಹಕ್ಕೆ ಕ್ರಮ ಕೈಗೊಳ್ಳಬೇಕು. ನಗರಕ್ಕೆ ನೂರಾರು ಕಿ.ಮೀ ದೂರದಿಂದ ನೀರು ತರುವ ಯೋಜನೆಗಳಿಗೆ ತಗಲುವ ಅರ್ಧದಷ್ಟು ಬಂಡವಾಳವೂ ಇದಕ್ಕೇ ಬೇಕಾಗದು. ಕಾವೇರಿ ನೀರು ಪೂರೈಕೆಯ ಹೊರತಾಗಿಯೂ ನಗರದಲ್ಲಿ ಈಗಲೂ ಶೇ 40ರಷ್ಟು ಮಂದಿ ಕೊಳವೆಬಾವಿ ನೀರನ್ನೇ ಅವಲಂಬಿಸಿದ್ದಾರೆ. ಕೆರೆ ಪುನಶ್ಚೇತನದಿಂದ ಅಂತರ್ಜಲವೂ ವೃದ್ಧಿಸಲಿದೆ' ಎಂದು ಐಐಎಸ್ಸಿಯ ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ತಿಳಿಸಿದರು.

ಯೋಜನೆಗಳ ಭಾರಕ್ಕೆ ಕಾಳಿ ಏದುಸಿರು



ದಾಂಡೇಲಿಯಲ್ಲಿ ಕಾಳಿ ನದಿ ಹರಿಯುತ್ತಿರುವುದು

● ಪ್ರಜಾವಾಣಿ ವಾರ್ತೆ



ವಿ.ಎನ್‌.ನಾಯಕ

ಕಾರವಾರ: ಕಾಳಿ ನದಿಯಿಂದ ಉತ್ತರ ಕರ್ನಾಟಕದ ಐದು ಜಿಲ್ಲೆಗಳಿಗೆ ನೀರು ಸಾಗಿಸುವ ಯೋಜನೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದ್ದರು. ಈ ಯೋಜನೆಯ ಮೂಲಕ ದಾಂಡೇಲಿಯಲ್ಲಿ ನದಿ ದಂಡೆಯಲ್ಲಿ ಬೃಹತ್ ಜಾಕ್‌ವೆಲ್ ನಿರ್ಮಿಸಿ ಪೈಪ್‌ಲೈನ್‌ಗಳ ಮೂಲಕ ನೀರನ್ನು ಹರಿಸಬೇಕಾಗುತ್ತದೆ.

ಇದಕ್ಕೆ ತಗುಲುವ ಖರ್ಚು ಎಷ್ಟು ಸಾವಿರ ಕೋಟಿ ರೂಪಾಯಿ, ಎಷ್ಟು ಗಾತ್ರದ ಪೈಪ್ ಅಳವಡಿಸಲಾಗುತ್ತದೆ, ಕಾಮಗಾರಿಯ ವೇಳೆ ಪರಿಸರದ ಮೇಲೆ ಎಷ್ಟು ಹಾನಿಯಾಗಲಿದೆ ಎಂಬ ವಿವರ ಲಭ್ಯವಾಗಿಲ್ಲ.

ಕಾಳಿ ನದಿಯ ಮೇಲೆ ಈಗಾಗಲೇ ಹತ್ತಾರು ಯೋಜನೆಗಳು ಕಾರ್ಯಗತವಾಗಿವೆ. ಐದು ಜಲಾಶಯಗಳಲ್ಲಿ ವಿದ್ಯುತ್ ಉತ್ಪಾದನೆ ಯಾಗುತ್ತಿದೆ. ಕೈಗಾ ಅಣು ವಿದ್ಯುತ್ ಸ್ಥಾವರವೂ ಈ ನದಿಯ ದಂಡೆಯಲ್ಲೇ ಇದೆ. ದಾಂಡೇಲಿಯಲ್ಲಿ ಕಾಗದ ಕಾರ್ಖಾನೆ, ಹಳಿಯಾಳದಲ್ಲಿ ಸಕ್ಕರೆ ಕಾರ್ಖಾನೆ, ದಾಂಡೇಲಿಯಲ್ಲಿ ದೇಶದ ಎರಡನೇ ಮೊಸಳೆ ಉದ್ಯಾನ, ಕಾಳಿ ಹುಲಿ ಸಂರಕ್ಷಿತ ಪ್ರದೇಶ, ಅಪಾರ ಪ್ರವಾಸೋದ್ಯಮದ ಚಟುವಟಿಕೆಗಳು, ದಾಂಡೇಲಿ, ಹಳಿಯಾಳಕ್ಕೆ ಕುಡಿಯುವ ನೀರು, ಸಾವಿರಾರು ಎಕರೆ ಕೃಷಿ ಪ್ರದೇಶಗಳು, ಮೀನುಗಾರಿಕೆ ಈ ನದಿಯ ನೀರನ್ನೇ ಅವಲಂಬಿಸಿವೆ. ಮತ್ತಷ್ಟು ಯೋಜನೆಗಳು ಈಗ ಜಾರಿಯ ಹಂತದಲ್ಲಿವೆ. ಇದರ ಜೊತೆಗೇ ಅಳ್ನಾವರಕ್ಕೆ ಕುಡಿಯುವ ನೀರು, ದಾಂಡೇಲಿ ಮತ್ತು ಹಳಿಯಾಳ ತಾಲ್ಲೂಕಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಪೈಪ್‌ಲೈನ್ ಅಳವಡಿಸಲಾಗುತ್ತಿದೆ. ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ ಎರಡು ಹೊಸ ಘಟಕಗಳು ಸ್ಥಾಪನೆಯಾಗಲಿವೆ. ಹಳಿಯಾಳ ಸಕ್ಕರೆ ಕಾರ್ಖಾನೆ ಮತ್ತು ದಾಂಡೇಲಿ ಪೇಪರ್ ಮಿಲ್‌ನಲ್ಲಿ ಉತ್ಪದನಾ ಸಾಮರ್ಥ್ಯ ಹೆಚ್ಚಿಸುವ ಪ್ರಕ್ರಿಯೆಗಳು ಆರಂಭವಾಗಿವೆ.

'ಕಾಳಿ ನದಿಗೆ ದಶಕಗಳ ಹಿಂದೆ ಐದು ಜಲಾಶಯಗಳನ್ನು ನಿರ್ಮಿಸಿದಾಗಲೇ ಪರಿಸರದ ಮೇಲೆ ಸಾಕಷ್ಟು ಅಡ್ಡಪರಿಣಾಮಗಳು ಆಗಿವೆ. ಸಮುದ್ರದ ಉಪ್ಪುನೀರು ಈಗಾಗಲೇ ನದಿಯ ಮೂಲಕ ಸುತ್ತಮುತ್ತಲಿನ ಜಮೀನಿಗೆ ಹರಿಯುತ್ತಿದೆ. ಐದು ಜಿಲ್ಲೆಗಳಿಗೆ ನದಿ ನೀರನ್ನು ಸಾಗಿಸಿದರೆ ಕರಾವಳಿಯಲ್ಲಿ ನೇರ ಪರಿಣಾಮವಾಗದು. ಆದರೆ, ಘಟ್ಟದ ಮೇಲೆ ದಾಂಡೇಲಿ ಹಾಗೂ ಪೈಪ್ ಲೈನ್ ಸಾಗುವ ಪರಿಸರದಲ್ಲಿ, ನೀರಿನ ಸಂಗ್ರಹಾಗಾರಗಳ ನಿರ್ಮಾಣ ಸ್ಥಳದಲ್ಲಿ ಪರಿಸರಕ್ಕೆ ಹಾನಿಯಾಗ ಬಹುದು' ಎಂದು ಕಾರವಾರದ ವಿಜ್ಞಾನಿ ವಿ.ಎನ್.ನಾಯಕ ಅಭಿಪ್ರಾಯಪಡುತ್ತಾರೆ.

'ಜಲಾಶಯಗಳಲ್ಲಿ ಹೂಳು ತುಂಬಿಕೊಂಡಿರುವ ಕಾರಣ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿದೆ. ಬೇಸಿಗೆಯಲ್ಲೂ ನೀರಿನ ಹರಿವಿನ ದಿಕ್ಕನ್ನು ಬದಲಿಸಿದರೆ ವಿದ್ಯುತ್ ಉತ್ಪಾದನೆಗೆ ನೀರಿನ ಕೊರತೆಯಾಗಬಹುದು' ಎಂದು ಅವರು ಹೇಳುತ್ತಾರೆ.


ಜಲ ತಜ್ಞರ ಅಭಿಪ್ರಾಯ

'ನೀರಿನ ಮೌಲ್ಯ ಅರ್ಥ ಮಾಡಿಕೊಳ್ಳುತ್ತಿಲ್ಲ'

ಪ್ರಜಾವಾಣಿ ವಾರ್ತೆ



ವಿಶ್ವನಾಥ್



ಎ.ಆರ್. ಶಿವಕುಮಾರ್

ಬೆಂಗಳೂರು: ನಾಗರಿಕರು ನೀರಿನ ಬೆಲೆ ಅರ್ಥ ಮಾಡಿಕೊಳ್ಳದ ಕಾರಣ ಮನಸೋ ಇಚ್ಛೆ ಬಳಸುವ ಮನೋಭಾವ ಹೊಂದಿದ್ದಾರೆ. ಹೀಗಾಗಿಯೇ, ನಗರದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಕಟ್ಟಡಗಳಲ್ಲಿ ಅಳವಡಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ ಎನ್ನುವುದು ಜಲತಜ್ಞರ ಅಭಿಪ್ರಾಯ.

'ನೀರು ದಂಡಿಯಾಗಿ ಲಭ್ಯವಿರುವಾಗ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಕಟ್ಟಡಗಳಲ್ಲಿ ಏಕೆ ಅಳವಡಿಸಬೇಕು ಎನ್ನುವ ಮನಸ್ಥಿತಿ ಇದೆ' ಎಂದು ಜಲತಜ್ಞ ಎಸ್. ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.

'ಕೊಳವೆಬಾವಿ ಹೊಂದಿರುವ ಮನೆಗಳಿಗೆ ಕಡ್ಡಾಯವಾಗಿ ಈ ವ್ಯವಸ್ಥೆ ಅಳವಡಿಸುವಂತೆ ನಿಯಮ ರೂಪಿಸಬೇಕು. ಆಗ ಮಾತ್ರ ಪರಿಸ್ಥಿತಿ ಸುಧಾರಿಸಬಹುದು. ಬೆಂಗಳೂರಿನಲ್ಲಿ ಅಂದಾಜು ಮೂರು ಲಕ್ಷ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಲಾಗಿದೆ. ಚೆನ್ನೈ ನಂತರ ಬೆಂಗಳೂರಿನಲ್ಲೇ ಅತಿ ಹೆಚ್ಚು ಈ ವ್ಯವಸ್ಥೆ ಅಳವಡಿಸಲಾಗಿದೆ' ಎಂದು ವಿವರಿಸಿದ್ದಾರೆ.

ಕಟ್ಟಡದ ಮಾಲೀಕತ್ವ ಹೊಂದಿರುವವರು ಮತ್ತು ನೀರಿನ ಬಗ್ಗೆ ಕಾಳಜಿ ಹೊಂದಿರುವವರು ಈ ವ್ಯವಸ್ಥೆ ಅಳವಡಿಸಿದ್ದಾರೆ. ಕೆಲವರಿಗೆ ಮನಸ್ಸು ಇದ್ದರೂ ಜಾಗದ ಕೊರತೆ ಇದೆ. ಹೊಸ ಕಟ್ಟಡಗಳಿಗೆ ಕಡ್ಡಾಯವಾಗಿ ಈ ವ್ಯವಸ್ಥೆ ಅಳವಡಿಸುವಂತೆ ನಿಯಮ ರೂಪಿಸಲಾಗಿದೆ. ಆದರೆ, ಈ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ವಿವರಿಸಿದ್ದಾರೆ.

'ಸುಲಭವಾಗಿ ಕಾವೇರಿ ನೀರು ದೊರೆಯುತ್ತಿರುವುದರಿಂದ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಲು ನಾಗರಿಕರು ಆಸಕ್ತಿ ತೋರುತ್ತಿಲ್ಲ. ನೀರಿನ ಬೆಲೆಯೂ ಇಲ್ಲಿ ಬಹಳ ಕಡಿಮೆ ಇದೆ' ಎಂದು ಜಲ ಸಂರಕ್ಷಣಾ ತಜ್ಞ ಎ.ಆರ್. ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

'ಬೆಂಗಳೂರು ಜಲಮಂಡಳಿ ಒಂದು ಸಾವಿರ ಲೀಟರ್‌ಗೆ ₹7 ನಿಗದಿಪಡಿಪಡಿಸಿದೆ. ನೀರಿನ ಬೆಲೆ ಅರ್ಥ ಮಾಡಿಕೊಂಡರೆ ಮಾತ್ರ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳಲು ಜನರು ಮುಂದಾಗಬಹುದು. ಕೆಲವರು ಕಾವೇರಿ ಮತ್ತು ಮಳೆ ನೀರು ಸಂಗ್ರಹ ಬೇಡ ಎಂದು ಕೊಳವೆ ಬಾವಿ ಕೊರೆಯಿಸಿಕೊಂಡು ಅದರ ಮೇಲೆಯೇ ಅವಲಂಬನೆಯಾಗಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯ ಸಲಹೆಯಂತೆ ಒಂದು ಕುಟುಂಬಕ್ಕೆ ಪ್ರತಿ ತಿಂಗಳು 10 ಸಾವಿರ ಲೀಟರ್ ನೀರು ಪೂರೈಸಬೇಕು. 10 ಸಾವಿರ ಲೀಟರ್ ನಂತರ ಬಳಸುವ ಪ್ರತಿ ಲೀಟರ್ ನೀರಿಗೆ ₹250ರಿಂದ ₹300 ದರ ನಿಗದಿಪಡಿಸಬೇಕು. ಈ ರೀತಿಯ ಕ್ರಮಗಳಿಗೆ ರಾಜಕೀಯ ಇಚ್ಛಾಶಕ್ತಿ ಮುಖ್ಯ' ಎಂದು ವಿವರಿಸಿದ್ದಾರೆ.

ನದಿ ತಿರುವು– ಹಣದ ಹರಿವು?

ಒಂದನೇ ಪುಟದಿಂದ

ಬಿಜೆಪಿ ನೇತೃತ್ವದ ಸರ್ಕಾರ 2012ರಲ್ಲಿ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿದಾಗ ಇದರ ಅಂದಾಜು ವೆಚ್ಚ ₹ 8,323 ಕೋಟಿ. ಕಾಂಗ್ರೆಸ್ ನೇತೃತ್ವದ ಸರ್ಕಾರ 2014ರಲ್ಲಿ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದಾಗ ಯೊಜನಾ ವೆಚ್ಚ ₹ 12,912 ಕೋಟಿಗೆ ಏರಿಕೆಯಾಗಿತ್ತು.

ಎರಡು ಹಂತಗಳಲ್ಲಿ 43 ಸ್ಥಳಗಳಲ್ಲಿ ಕಾಮಗಾರಿಗಳನ್ನು ಆರಂಭಿಸಲಾಗಿತ್ತು. 3 ವರ್ಷಗಳಲ್ಲಿ ಮುಗಿಯಬೇಕಾದ ಕಾಮಗಾರಿಗಳು 9 ವರ್ಷಗಳ ಬಳಿಕವೂ ಪೂರ್ಣಗೊಂಡಿಲ್ಲ. ಈಗಾಗಲೇ ₹ 9 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆ. ಇದರ ಅಂದಾಜು ವೆಚ್ಚವನ್ನು ₹ 25,125 ಕೋಟಿಗೆ ಪರಿಷ್ಕರಿಸುವಂತೆ ವಿಶ್ವೇಶ್ವರಯ್ಯ ಜಲನಿಗಮವು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಎತ್ತಿನಹೊಳೆ ಯೋಜನೆಯಿಂದ 7 ಜಿಲ್ಲೆಗಳ ಕುಡಿಯುವ ನೀರಿನ ಬೇಡಿಕೆ ಈಡೇರಿಸಲು 15.029 ಟಿಎಂಸಿ ಅಡಿ ಹಾಗೂ ಒಟ್ಟು 527 ಕೆರೆಗಳನ್ನು ತುಂಬಿಸಲು 8.967 ಟಿಎಂಸಿ ಅಡಿಗಳು ಸೇರಿ ಒಟ್ಟು 24.01ಟಿಎಂಸಿ ಅಡಿಗಳಷ್ಟು ನೀರನ್ನು ಗುರುತ್ವಾಕರ್ಷಣೆಗೆ ವಿರುದ್ಧವಾಗಿ ಕೊಳವೆಗಳ ಮೂಲಕ ಹರಿಸಲು ಉದ್ದೇಶಿಸಲಾಗಿದೆ. ಆದರೆ, ನೀರಿನ ಸಂಗ್ರಹಾಗರಗಳ ನಿರ್ಮಾಣ ನೋಡಿದಾಗ, ಇಷ್ಟೊಂದು ಪ್ರಮಾಣದಲ್ಲಿ ಮಳೆ ನೀರು ಸಂಗ್ರಹವಾಗುವುದೇ ಅನುಮಾನ ಎನ್ನುತ್ತಾರೆ ವಿಜ್ಞಾನಿಗಳು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುವ ಕಾಳಿ ನದಿಯ ನೀರನ್ನು ಉತ್ತರ ಕರ್ನಾಟಕದ ಐದು ಜಿಲ್ಲೆಗಳಿಗೆ ಹರಿಸುವ ಯೋಜನೆಯ ಕುರಿತು ರಾಜ್ಯ ಸರ್ಕಾರವು 2022–23ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ. ಈ ಯೋಜನೆಯ ಅಂದಾಜು ವೆಚ್ಚದ ವಿವರಗಳನ್ನು ಸರ್ಕಾರ ಇನ್ನೂ ಬಹಿರಂಗಪಡಿಸಿಲ್ಲ. ಲಿಂಗನಮಕ್ಕಿ ಜಲಾಶಯದಿಂದ ನೀರನ್ನು ಬೆಂಗಳೂರಿಗೆ ಹರಿಸುವುದಕ್ಕೂ ಸರ್ಕಾರ ನಾಲ್ಕು ವರ್ಷಗಳ ಹಿಂದೆ ಡಿಪಿಆರ್ ತಯಾರಿಸಲು ಸೂಚಿಸಿತ್ತು. ಅಂದಾಜು ₹ 12,500 ಕೋಟಿಗೂ ಅಧಿಕ ಬಂಡವಾಳ ಬಯಸುವ ಈ ಯೋಜನೆ ಸದ್ಯಕ್ಕೆ ಸುಪ್ತಾವಸ್ಥೆಯಲ್ಲಿದೆ. ಬೇಡ್ತಿ–ವರದಾ ಜೋಡಣೆ ಯೋಜನೆಯು ಕೇಂದ್ರ ಸರ್ಕಾರದ ನದಿ ಜೋಡಣೆ ಯೋಜನೆಗಳ ಪಟ್ಟಿಯಲ್ಲಿದ್ದು, ಇದರ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ.


'ನದಿ ತಿರುಗಿಸಿ ಕೈಸುಟ್ಟುಕೊಂಡ ಬಹಳಷ್ಟು ನಿದರ್ಶನಗಳು ಜಗತ್ತಿನಲ್ಲಿ ಸಿಗುತ್ತವೆ. ರಷ್ಯಾದ ಅರಾಲ್ ಸಮುದ್ರ ಸೇರುವ ನದಿಗಳನ್ನು ತಿರುಗಿಸಿದ್ದರಿಂದ 1980ರ ದಶಕದ ಕೊನೆಯಲ್ಲಿ ಅಲ್ಲಿನ ಪರಿಸರ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿತು. ಸಮುದ್ರದಲ್ಲಿ ತಟದುದ್ದಕ್ಕೂ ಮೀನುಗಾರಿಕೆ ಉದ್ಯಮ ನೆಲಕಚ್ಚಿತು. ನೀರಿನಲ್ಲಿ ಲವಣಾಂಶ ಮತ್ತು ಖನಿಜಾಂಶಗಳ ಪ್ರಮಾಣ ಜಾಸ್ತಿಯಾಯಿತು. ಗುಜರಾತ್‌ನ ನದಿ ತಿರುವು ಯೋಜನೆಗಳಿಂದ ಮೀನುಗಾರರ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ' ಎನ್ನುತ್ತಾರೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ.

'ನೀರಿನ ಬಿಕ್ಕಟ್ಟು ಎದುರಾದಾಗಲೆಲ್ಲಾ ನದಿ ತಿರುವು ಯೋಜನೆಗಳು ಧುತ್ತೆಂದು ಪ್ರತ್ಯಕ್ಷವಾಗುತ್ತವೆ. ಮಳೆ ನೀರನ್ನೇ ಬಳಸುವ ಮಿತವ್ಯಯದ ಪರಿಹಾರಗಳು ಆಳುವವರಿಗೆ ಪಥ್ಯವಾಗುವುದಿಲ್ಲ. ಹಣದ ಹೊಳೆಯನ್ನೇ ಹರಿಸುವ ನದಿ ತಿರುವು ಯೋಜನೆಗಳ ಹಿಂದಿನ ನೈಜ ಉದ್ದೇಶ ನೀರಿನ ಕೊರತೆ ನೀಗಿಸುವುದಂತೂ ಅಲ್ಲವೇ ಅಲ್ಲ. ಸಾರ್ವಜನಿಕರ ಹಣವನ್ನು ಲೂಟಿ ಮಾಡುವುದೇ ಇಂತಹ ಯೋಜನೆಗಳ ಗುಪ್ತ ಕಾರ್ಯಸೂಚಿ' ಎಂದು ಅವರು ಟೀಕಿಸುತ್ತಾರೆ.

'ಗಂಗಾ– ಕಾವೇರಿ: ವಿನಾಶಕ್ಕೆ ದಾರಿ'

ಗಂಗಾ– ಕಾವೇರಿ ಜೋಡಣೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದು. ಗಂಗೆಯ ನೀರನ್ನು ಸುವರ್ಣರೇಖಾ, ಮಹಾನದಿ, ಗೋದಾವರಿ, ಕೃಷ್ಣಾ, ಪೆನ್ನಾರ್, ಪಾಲಾರ್ ನದಿಗಳ ಮೂಲಕ ಕಾವೇರಿ ನದಿಗೆ ಹರಿಸುವ ಈ ಯೋಜನೆಯಿಂದ ಪರ್ಯಾಯ ದ್ವೀಪದ ನೀರಿನ ಕೊರತೆಯಾಗಲಿದೆ ಎಂಬುದು ಕೇಂದ್ರದ ವಾದ.

ಈ ಯೋಜನೆಯ ಕುರಿತು ಅಧ್ಯಯನ ನಡೆಸಿರುವ ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ ಅವರು ಈ ಯೋಜನೆ ಸೃಷ್ಟಿಸುವ ಅಪಾಯಗಳನ್ನು ಎಳೆಎಳೆಯಾಗಿ ವಿವರಿಸುತ್ತಾರೆ. 'ರಾಜಕಾರಣಿಗಳು, ಅಧಿಕಾರಿಗಳು, ಕಾರ್ಪೊರೇಟ್ ಕಂಪನಿಗಳು ಹಾಗೂ ಗುತ್ತಿಗೆದಾರರ ಕಪಟ ಕೂಟವು 2002ರಿಂದಲೂ ನದಿ ಜೋಡಣೆ ಯೋಜನೆ ಜಾರಿಗೆ ಒತ್ತಾಯಿಸುತ್ತಿದೆ. ಅಕ್ರಮ ಕೂಸಾಗಿರುವ ಈ ಯೋಜನೆ ದುಬಾರಿ ಮಾತ್ರವಲ್ಲ; ತಾಂತ್ರಿಕವಾಗಿಯೂ ಅಸಂಬದ್ಧ. ಪರಿಸರದ ಪಾಲಿಗೆ ವಿಧ್ವಂಸಕಾರಿಯಾದ ಹಾಗೂ ಸಾಮಾಜಿಕವಾಗಿಯೂ ಹಾನಿಕಾರಕವಾದ ಈ ಯೋಜನೆ ಈಗಾಗಲೇ ಹದಗೆಟ್ಟಿರುವ ಸಾಮಾಜಿಕ, ಪರಿಸರಾತ್ಮಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಮತ್ತಷ್ಟು ಕೆಡಿಸಲಿದೆ' ಎಂದು ಅವರು ಎಚ್ಚರಿಸಿದರು.



ಸುಧೀರ್

'ಗಂಗಾನದಿಯು ಬಿಹಾರದಲ್ಲಿ ಸಮುದ್ರಮಟ್ಟಕ್ಕಿಂತ 65 ಮೀ ಎತ್ತರದಲ್ಲಿ ಹರಿಯುತ್ತದೆ. ಗೋದಾವರಿ, ಕೃಷ್ಣಾ, ಪೆನ್ನಾರ್, ಪಾಲಾರ್, ಕಾವೇರಿ ನದಿಗಳನ್ನು ಜೋಡಿಸುವ ಕಾಲುವೆಗಳೆಲ್ಲವೂ ಇದಕ್ಕಿಂತ ತಗ್ಗು ಪ್ರದೇಶದಲ್ಲಿರಲಿವೆ. ತಮಿಳುನಾಡಿನಲ್ಲಿ ಕಾವೇರಿಯನ್ನು ಸಂಪರ್ಕಿಸುವ ಕಾಲುವೆ ಸಮುದ್ರ ಮಟ್ಟಕ್ಕಿಂತ 50 ಮೀ ಎತ್ತರದಲ್ಲಿರಲಿದೆ. ಕರ್ನಾಟಕವೂ ಸೇರಿದಂತೆ ಪರ್ಯಾಯ ದ್ವೀಪ ಪ್ರದೇಶಗಳಲ್ಲಿ ನೀರಿನ ಕೊರತೆ ತೀವ್ರವಾಗಿ ಇರುವುದು ಸಮುದ್ರ ಮಟ್ಟಕ್ಕಿಂತ 800 ಮೀ ಎತ್ತರದ ಪ್ರದೇಶಗಳಲ್ಲಿ. ಗಂಗಾ ನದಿ ನೀರನ್ನು 60 ಮೀ ಎತ್ತರದ ಸುವರ್ಣರೇಖಾ ನದಿಗೆ, ಅದರಿಂದ 48 ಮೀ ಎತ್ತರದ ಮಹಾನದಿಗೆ, ಅದರಿಂದ 116 ಮೀ ಎತ್ತರದ ಗೋದಾವರಿ ಮತ್ತು ಕೃಷ್ಣಾ ನದಿಗಳಿಗೆ ನೀರು ಪಂಪ್ ಮಾಡಬೇಕು. ಇದಕ್ಕೆ ನಿರಂತರವಾಗಿ ಭಾರಿ ಪ್ರಮಾಣದ ವಿದ್ಯುತ್ ಪೂರೈಕೆಯ ಅಗತ್ಯವಿದೆ' ಎಂದು ವಿವರಿಸಿದರು.

ಜೀವ ವೈವಿಧ್ಯಕ್ಕೇ ಕನ್ನ ಹಾಕುವ ಶರಾವತಿ ತಿರುವು!

ಬೆಂಗಳೂರು ನಗರದ ನೀರಿನ ದಾಹವನ್ನು ತಣಿಸಲು ಲಿಂಗನಮಕ್ಕಿ ಅಣೆಕಟ್ಟೆಯಿಂದ ಮೊದಲ ಹಂತದಲ್ಲಿ 10 ಟಿಎಂಸಿ ಅಡಿ ನೀರನ್ನು ರಾಜಧಾನಿಗೆ ತರಲು ವಿಸ್ತೃತ ಯೋಜನಾ ವರದಿ ತಯಾರಿಸಲು ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಇದಕ್ಕೆ ಆ ಭಾಗದಲ್ಲಿ ಭಾರೀ ಪ್ರತಿರೋಧವೂ ವ್ಯಕ್ತವಾಗಿತ್ತು. 2014 ರಲ್ಲಿ ಬಿ.ಎನ್.ತ್ಯಾಗರಾಜ್ ಅಧ್ಯಕ್ಷತೆಯ ತಜ್ಞರ ಸಮಿತಿಯು ಲಿಂಗಮಕ್ಕಿಯಿಂದ 30 ಟಿಎಂಸಿ ಅಡಿ ನೀರು ತರುವ ಸಲಹೆಯನ್ನು ನೀಡಿತ್ತು.

ಶರಾವತಿ ನದಿ ಕಣಿವೆ ಪ್ರದೇಶ ವಿಶ್ವದಲ್ಲಿಯೇ ಅತಿಸೂಕ್ಷ್ಮವಾದುದು. ಪಶ್ಚಿಮಘಟ್ಟದ ಶ್ರೇಣಿಯಲ್ಲೇ ಸಂಪದ್ಭರಿತವಾದ ನಿತ್ಯಹರಿದ್ವರ್ಣ ಕಾಡುಗಳಿರುವ ತಾಣವಿದು. ರಾಮಪತ್ರೆ ಜಡ್ಡಿಯಂಥ ಜೀವಪೋಷಕ ತಾಣಗಳಿರುವ ಇಲ್ಲಿನ ಶರಾವತಿ ಅಭಯಾರಣ್ಯ ಮತ್ತು ಅಳಿವಿನಂಚಿನಲ್ಲಿರುವ ಸಿಂಗಳೀಕ ಸಂರಕ್ಷಿತ ಪ್ರದೇಶಕ್ಕೆ ಈ ಪ್ರಸ್ತಾವಿತ ಯೋಜನೆಯಿಂದ ತೀವ್ರ ಆಘಾತವಾದೀತು. ಹೊಳೆಹಿಪ್ಪೆ, ಹೊಳೆ ಹೊನ್ನೆ, ಹೇತಾರಿ, ರಾಮಪತ್ರೆ, ದೇವದಾರುವಿನಂಥ ನೂರಾರು ವಿನಾಶದಂಚಿನ ಸಸ್ಯಪ್ರಭೇದಗಳುಳ್ಳ ಈ ಜೀವವೈವಿಧ್ಯ ತಾಣಕ್ಕೆ ಹೊಡೆತ ಬೀಳುವುದು ಖಚಿತ. ಈಗಾಗಲೇ ಶರಾವತಿ ಟೇಲ್–ರೇಸ್ ಯೋಜನೆ ಮತ್ತು ಲಿಂಗನಮಕ್ಕಿ ಜಲವಿದ್ಯುತ್ ಯೋಜನೆಗಳ ಕಾಮಗಾರಿಗಳಿಂದ ಬಹಳಷ್ಟು ನಾಶವಾಗಿವೆ. ಅಳಿದುಳಿದಿರುವುದನ್ನೂ ಕಾಪಾಡಿಕೊಳ್ಳುವುದು ಅಗತ್ಯ ಎನ್ನುತ್ತಾರೆ ತಜ್ಞರು.

ಲಿಂಗನಮಕ್ಕಿಯಿಂದ ನೀರು ಒಯ್ಯುವುದು ಎಂದರೆ ಒಂದರ್ಥದಲ್ಲಿ ನದಿ ತಿರುವು ಯೋಜನೆಯೇ ಸರಿ. ಸುಲಭದಲ್ಲಿ ನೀರು ಸಿಗುತ್ತದೆ. ಒಮ್ಮೆ ಈ ಯೋಜನೆ ಚಾಲನೆ ಕೊಟ್ಟರೆ ಬೆಂಗಳೂರು ನಗರ ಮಾತ್ರವಲ್ಲ ದಿನದಿಂದ ದಿನಕ್ಕೆ ನೀರಿನ ಅಭಾವ ಕಾಣುತ್ತಿರುವ ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮುಂಬರುವ ದಿನಗಳಲ್ಲಿ ಇಲ್ಲಿಂದಲೇ ನೀರಿಗಾಗಿ ಬೇಡಿಕೆ ಇಡತೊಡಗಬಹುದು. ಎತ್ತಿನ ಹೊಳೆಯಂತೆ ನೀರಿಗಿಂತ ಇಲ್ಲಿ ಹಣದ ಹೊಳೆಯೇ ಹೆಚ್ಚಿಗೆ ಹರಿದು ಹೋಗುತ್ತದೆ. ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ಜೇಬು ತುಂಬುತ್ತದೆ ಎಂಬ ಆರೋಪವೂ ಕೇಳಿ ಬರುತ್ತಿದೆ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 10-4-1997

● **7 ಹೊಸ ಜಿಲ್ಲೆ ನ.1ರಂದು ಅಸ್ತಿತ್ವಕ್ಕೆ**

ಬೆಂಗಳೂರು, ಏ.9– 'ಬಾಗಲಕೋಟೆ, ಚಾಮರಾಜನಗರ, ದಾವಣಗೆರೆ, ಗದಗ, ಹಾವೇರಿ, ಕೊಪ್ಪಳ ಮತ್ತು ಉಡುಪಿ ಈ ಏಳು ಹೊಸ ಜಿಲ್ಲೆಗಳು ಬರುವ ಕನ್ನಡ ರಾಜ್ಯೋತ್ಸವ ದಿನದಂದು ಅಸ್ತಿತ್ವಕ್ಕೆ ಬರಲಿವೆ' ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಯುಗಾದಿ ಹಬ್ಬದ ದಿನವಾದ ಮಂಗಳವಾರ ಅಧಿಕೃತವಾಗಿ ಪ್ರಕಟಿಸಿದರು. 'ಇನ್ನೂ ಎರಡು ಜಿಲ್ಲೆಗಳನ್ನು ರಚಿಸಲು ಸರ್ಕಾರ ಬದ್ಧವಾಗಿದೆ' ಎಂದು ಅವರು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

'ಆದರೆ, ಈ ಎರಡು ಜಿಲ್ಲೆಗಳ ಕೇಂದ್ರ ಸ್ಥಾನ ಯಾವುದಾಗಬೇಕೆಂಬ ಬಗ್ಗೆ ಎದ್ದಿರುವ ವಿವಾದವನ್ನು ಎರಡು ವಾರಗಳಲ್ಲಿ ಪರಿಹರಿಸಲಾಗುವುದು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 10-4-1972

● **ಪಕ್ಷಾಂತರ ನಡೆದಿರುವ ಬಗ್ಗೆ ಅರಸು ಒಪ್ಪಿಗೆ: ಶುದ್ಧೀಕರಣದ ಎಚ್ಚರಿಕೆ**

ಬೆಂಗಳೂರು, ಏ.9– ರಾಜ್ಯಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದಲ್ಲಿ ಮತಗಳ ಪಕ್ಷಾಂತರ ನಡೆದಿದೆ ಎಂಬುದನ್ನು ಇಂದು ಇಲ್ಲಿ ಒಪ್ಪಿಕೊಂಡ ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು, 'ಕಾಂಗ್ರೆಸ್ ಪಕ್ಷದಲ್ಲಿ ಮತ್ತೊಂದು ಶುದ್ಧೀಕರಣ ಅಗತ್ಯವಾಗುವ ದಿನ ಬರಬಹುದು' ಎಂದು ಎಚ್ಚರಿಕೆ ನೀಡಿದರು.

ಆಡಳಿತ ಕಾಂಗ್ರೆಸ್ಸಿನ ಸಮಾಜವಾದಿ ವೇದಿಕೆಯು ತಮ್ಮ ಹಾಗೂ ಸಚಿವ ಸಹೋದ್ಯೋಗಿಗಳ ಗೌರವಾರ್ಥ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಶುದ್ಧೀಕರಣ ಇಲ್ಲದಿದ್ದಲ್ಲಿ ಇಂಥಾ ಸಡಿಲತೆಗಳಿಂದ ಸಮಾಜವಾದಿ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಅಗತ್ಯವಾದ ಐಕ್ಯ ಹಾಗೂ ಶಕ್ತಿ ಪಡೆಯಲು ಸಾಧ್ಯವಾಗದು' ಎಂದು ಸ್ಪಷ್ಟಪಡಿಸಿದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಏಪ್ರಿಲ್ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 27 ನೇ ದಿನ ತಿಥಿ: (ಚೈತ್ರ ಶುದ್ಧ) ನವಮಿ ಗಂ. 27-16 ನಕ್ಷತ್ರ: ಪುಷ್ಯ ಅಹೋರಾತ್ರ ಯೋಗ: ಸುಕರ್ಮ ಗಂ. 12-03, ಕರಣ: ಬಾಲವ ಗಂ. 14-24.
ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-24 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ: 08 ರಂಜಾನ್ ದಿನ ವಿಶೇಷ : ರಾಮನವಮಿ, ಪಾಮ್ ಸಂಡೇ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ: 1, 7

ಮೇಷ: ಉತ್ಸಾಹಭರಿತವಾದ ಕಾರ್ಯಾಸಕ್ತಿಯನ್ನು ಹೊಂದಿರುವ ನಿಮಗೆ ಇಂದು ವಿಘ್ನಗಳು ಎದುರಾದರೂ, ಮುಂದಿನ ದಿನಗಳಲ್ಲಿ ಕಾರ್ಯ ಸಂಪೂರ್ಣವಾಗುವುದು.

ವೃಷಭ: ವೃತ್ತಿಯಲ್ಲಿ ಸ್ವಾತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ನಿಮ್ಮದ್ದಾಗಲಿದೆ. ಬಹುಜನರಲ್ಲಿ ನಿಷ್ಠೂರ ಮಾಡಿಕೊಂಡಿರುವ ನೀವು ಎಲ್ಲರ ವಿಶ್ವಾಸ ಪುನಃ ಸಂಪಾದಿಸಬೇಕಾಗುವುದು.

ಮಿಥುನ: ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಬರವಣಿಗೆಯ ಹವ್ಯಾಸವನ್ನು ಹೊಂದಿದವರಿಗೆ ಪ್ರಖ್ಯಾತಿ ಪಡೆಯಲು ಉತ್ತಮವಾದ ವೇದಿಕೆ ದೊರಕುವುದು.

ಕರ್ಕಾಟಕ: ಆರ್ಥಿಕ ಸ್ಥಿತಿಯು ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ನಿಮ್ಮ ಅಗತ್ಯತೆಗೆ ಬಂಧುಜನಗಳ ಸಹಕಾರ ಸಿಗಲಿದೆ. ಅವಿವಾಹಿತರಿಗೆ ಧಾರ್ಮಿಕ ಕಾರ್ಯಗಳನ್ನು ಮಾಡಿದ ಫಲವಾಗಿ ಕಂಕಣ ಭಾಗ್ಯ ಕೂಡಿ ಬರಲಿದೆ.

ಸಿಂಹ: ನಿಮ್ಮ ಅತಿಯಾದ ಮಾತುಗಳಿಂದ ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು ಅಥವಾ ಕುಟುಂಬ ವರ್ಗದಲ್ಲಿ ಭಿನ್ನಾಭಿಪ್ರಾಯ ಕಂಡುಬರಬಹುದು.

ಕನ್ಯಾ: ಖರ್ಚು-ವೆಚ್ಚದಲ್ಲಿ ಮಿತಿ ಇದ್ದರೆ ಉತ್ತಮ. ನಿಮ್ಮ ಅಭಿವೃದ್ಧಿಯನ್ನು ನೋಡಿ ಬಂಧು ಮಿತ್ರರೂ ಶತ್ರುಗಳಂತೆ ನಿಮ್ಮ ವಿರುದ್ಧದ ಮನೋಭಾವನೆಯನ್ನು ಹೊಂದುವರು.

ತುಲಾ: ಕಾರ್ಯಕ್ಷೇತ್ರದಲ್ಲಿ ಉತ್ತಮವಾದ ಸ್ಥಾನಮಾನ ತೋರಿಬರುವುದರ ಜೊತೆಯಲ್ಲಿ ಕೆಲಸದ ಅತೀ ಒತ್ತಡವು ದೇಹದ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರಲಿದೆ. ಅಲಂಕಾರಿಕ ವಸ್ತುಗಳ ಖರೀದಿ ಆಗಲಿದೆ.

ವೃಶ್ಚಿಕ: ದಾಂಪತ್ಯದಲ್ಲಿ ಕಿರಿಕಿರಿ ಉಂಟಾಗಿ ಮನೆಯಲ್ಲಿ ಅಶಾಂತಿಯ ವಾತಾವರಣ ತೋರಿಬರಲಿದೆ. ಎಲ್ಲರೂ ನನ್ನಂತೆಯೇ ಇರಬೇಕೆಂಬ ನಿಮ್ಮ ಮನೋಭಾವವು, ನಿಮ್ಮ ಮನಸ್ಥಿತಿಯನ್ನು ಹಾಳುಮಾಡಲಿದೆ.

ಧನು: ಭೂಸಂಬಂಧದ ವ್ಯವಹಾರದಲ್ಲಿ ಅಧಿಕ ಆದಾಯವು ಕಂಡುಬರುವುದು. ಗೃಹ ನಿರ್ಮಾಣದ ಯೋಚನೆಯು ಕಾರ್ಯರೂಪಕ್ಕೆ ಬರಲಿದೆ. ರಾಜಕೀಯ ವ್ಯಕ್ತಿಗಳಿಗೆ ಓಡಾಟ ಹೆಚ್ಚಲಿದೆ.

ಮಕರ: ನಿಮ್ಮ ಆಶ್ವಾಸನೀಯ ವರ್ತನೆಯಿಂದ ಇತರರಿಗೆ ಬಹಳ ಸಂತಸ ಉಂಟಾಗುವುದು. ಪ್ರವಾಸ ಹೋಗುವ ಯೋಜನೆಗಳು ಕಾರ್ಯ ರೂಪಕ್ಕೆ ಬರಲಿದೆ.


ಕುಂಭ: ಸಜ್ಜನರ ಒಡನಾಟ ಪ್ರಾಪ್ತಿಯಾಗಲಿದೆ. ನಿಮ್ಮ ಮೇಲಧಿಕಾರಿಗಳು ನಿಮ್ಮ ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಲು ಹೆಚ್ಚಿನ ಗಮನ ನೀಡಿರಿ. ಮನೆಯಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ಇರುತ್ತದೆ.

ಮೀನ: ನಿರುದ್ಯೋಗಿಗಳಿಗೆ ಸಾಮಾಜಿಕ ಬದುಕಿನಲ್ಲಿ ಹೊಸ ತಿರುವು ಮೂಡುತ್ತದೆ. ಮನೋಬಲದಿಂದಾಗಿ ಕೆಲಸ ಕಾರ್ಯಗಳು ಚುರುಕಾಗಿ ಮತ್ತು ಅಚ್ಚುಕಟ್ಟಾಗಿ ನಡೆಯುವುದು.

ಪದಬಂಧ 4923 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)
3.ಜೊತೆಗಾತಿಯನ್ನು ಹೀಗೆನ್ನಿ (3)
5.ಈತ ದಾರಿಯನ್ನು ತೋರುವವನು (5)
6.ದರ್ಶನದಲ್ಲಿರುವ ಎತ್ತು ಕಾಣುತ್ತಿದೆಯೇ! (2)
8.ಅಂಕಣದಲ್ಲಿರುವ ಸಂಖ್ಯೆ (2)
9.ನಾರೀಕೇಳ ಹಿಡಿದಿರುವ ಸ್ತ್ರೀ! (2)
10.ಜವಾನನ ಸುತ್ತ ನೆರೆದಿರುವ ಮಂದಿ (2)
14.ರಸಾಯನ ಪ್ರಕ್ರಿಯೆಯಲ್ಲಿ ಉಪಯೋಗಿಸುವ ವಸ್ತು (5)
15.ಗುರುಗುಟ್ಟುತ್ತಿರುವ ಗಂಡುಕುರಿ (3)
16.ತಿರುಗಿದಾಗ ಕಾಣಿಸಿದ್ದು ದೊಡ್ಡ ಹಾರೆ (3)

ಮೇಲಿಂದ ಕೆಳಕ್ಕೆ
1.ಲಲಿತವಿದ್ಯೆಯನ್ನು ಬಲ್ಲವನು (4)
2.ಈತ ಹಳ್ಳಿಗ (3)
3.ಕರ ಕೊನೆಟ್ಟಾಗ ಮಿಶ್ರu ಕಾಣುವುದು! (3)
4.ಎಳ್ಳು ನೀರು ಬಿಡುವಿಕೆ (4)
7.ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
8.ಮನ್ಮಥನ ಇನ್ನೊಂದು ಹೆಸರು (3)
9.ಮೂಗಿನ ಹೊಳ್ಳೆ (4)
11.ಈತ ನೃತ್ಯ ಮಾಡುವವನು (4)
12.ಕರುವನ್ನು ಖರೀದಿಸಲು ಈ ನಿಬಂಧನೆ! (3)
13.ಮಂಕ ಹೊತ್ತಿರುವ ಹೆಡಿಗೆ (3)



4922ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ನರುಗಂಪು 5.ರಮಣಿ
6.ಸುಧಾರಕ 8.ಸಮಾಗಮ
12.ಮತದಾನ 13.ರಣಹೇಡಿ
15.ಮತ್ಸರ 16.ನವಜಾತ

ಮೇಲಿಂದ ಕೆಳಕ್ಕೆ:
1.ಉರವಣಿಗೆ 2.ರಾಣಿವಾಸ
3.ನವಸುಮ 4.ಪುಳಕ
7.ರಥ 9.ಗಣಿತ
10.ನವೀಕರಣ 11.ಬಾಣ
12.ಮಡಿವಂತ 13.ನಡುಮನೆ
14.ರಸನ

ಸುಡೊಕು 5309

	5		1			4		7
6				5				
	4	2	8				6	
4			5		9	2		1
	2	8		4			5	
3		5	2		8			6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5308 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಕ್ರಾಮಟೊರ್‌ಸ್ಕ್ ಮೇಲೆ ನಡೆದ ಕ್ಷಿಪಣಿ ದಾಳಿಗೆ ಆಕ್ರೋಶ • ಮೃತರ ಸಂಖ್ಯೆ 52ಕ್ಕೆ ಏರಿಕೆ • ದಾಳಿ ಭೀತಿ, ಜನರ ಗುಳೆ

ರಷ್ಯಾಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಲು ಉಕ್ರೇನ್ ಆಗ್ರಹ

ಕೀವ್, ಉಕ್ರೇನ್ (ಎ.ಪಿ): ಪ್ರಯಾಣಿಕರು ಕಿಕ್ಕಿರಿದು ಸೇರಿದ್ದ ಕ್ರಾಮಟೊರ್‌ಸ್ಕ್ ರೈಲ್ವೆ ನಿಲ್ದಾಣದ ಮೇಲೆ ಕ್ಷಿಪಣಿ ದಾಳಿ ನಡೆಸಿದ ರಷ್ಯಾಗೆ 'ತೀಕ್ಷ್ಣ ಪ್ರತಿಕ್ರಿಯೆ' ನೀಡಬೇಕು ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ವಿಶ್ವದ ರಾಷ್ಟ್ರಗಳನ್ನು ಆಗ್ರಹಿಸಿದ್ದಾರೆ.

ಸುಮಾರು 4000 ಪ್ರಯಾಣಿಕರಿದ್ದ ರೈಲ್ವೆ ನಿಲ್ದಾಣದ ಮೇಲೆ ನಡೆದ ಕ್ಷಿಪಣಿ ದಾಳಿಯಿಂದ ಕನಿಷ್ಠ 52 ಜನ ಮೃತಪಟ್ಟಿದ್ದರು. ಉಕ್ರೇನ್ ಈ ಕೃತ್ಯವನ್ನು 'ಯುದ್ಧ ಅಪರಾಧ' ಎಂದು ಹೇಳಿದೆ. 'ಈ ದಾಳಿಗೆ ತಾನು ಹೊಣೆಯಲ್ಲ' ಎಂದು ರಷ್ಯಾ ಪ್ರತಿಕ್ರಿಯಿಸಿದೆ.

ಇದು, ರಷ್ಯಾದ ಮತ್ತೊಂದು ಯುದ್ಧ ಅಪರಾಧ. ಇದಕ್ಕೆ ಕಾರಣರಾದ ಎಲ್ಲರನ್ನೂ ಹೊಣೆಗಾರರನ್ನಾಗಿಸಲಾಗುವುದು. ಬುಕಾದ ನರಮೇಧದ ಜೊತೆಗೆ ಕ್ರಾಮಟೊರ್‌ಸ್ಕ್ ಘಟನೆಯನ್ನು ಯುದ್ಧ ಅಪರಾಧವಾಗಿ ಪರಿಗಣಿಸಬೇಕು ಎಂದು ಝೆಲೆನ್‌ಸ್ಕಿ ಆಗ್ರಹಪಡಿಸಿದ್ದಾರೆ.

ನಾಗರಿಕರು ಬಲಿಯಾದ ರೈಲು ನಿಲ್ದಾಣ ಮೇಲಿನ ದಾಳಿಯನ್ನು ವಿಶ್ವದ ನಾಯಕರು ಈಗಾಗಲೇ ಖಂಡಿಸಿದ್ದಾರೆ. ಆದರೆ, ಕಟ್ಟುನಿಟ್ಟಿನ ತೀಕ್ಷ್ಣ ಪ್ರತಿಕ್ರಿಯೆ ನೀಡಬೇಕು ಎಂದು ಬಯಸುತ್ತೇವೆ ಎಂದಿರುವ ಝೆಲೆನ್‌ಸ್ಕಿ, ರಷ್ಯಾ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟವರಲ್ಲಿ ಮಕ್ಕಳೂ ಸೇರಿದ್ದು, 300ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು. ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ಹಾಳೆ ಮೇಲೆ 30 ಶವಗಳನ್ನು ಸಾಲಾಗಿ ಇರಿಸಿದ್ದನ್ನು ಗಮನಿಸಿದ್ದಾಗಿ ಎಎಫ್‌ಪಿ ಮಾಧ್ಯಮ ಪ್ರತಿನಿಧಿಗಳು ತಿಳಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಈ ದಾಳಿಯನ್ನು ಭೀಕರ ದೌರ್ಜನ್ಯ ಎಂದು ಬಣ್ಣಿಸಿದ್ದರೆ, 'ಮಾನವೀಯತೆ ಮೇಲಿನ ಅಪರಾಧ' ಎಂದು ಫ್ರಾನ್ಸ್ ಹೇಳಿದೆ. ಯೂರೋಪ್ ಒಕ್ಕೂಟ ಆಯೋಗದ ಅಧ್ಯಕ್ಷ ಉರ್ಸುಲಾ ವೊನ್ ಡೆರ್ ಲೆಯೆನ್ ಅವರು, 'ರಷ್ಯಾದ ಈ ನಡೆ ಸಿನಿಕತನದ್ದು' ಎಂದಿದ್ದಾರೆ. ವಿಶ್ವದ ವಿವಿಧ ನಾಯಕರೂ ತೀವ್ರವಾಗಿ ಖಂಡಿಸಿದ್ದಾರೆ.

ಈ ಮಧ್ಯೆ ರಷ್ಯಾದ ರಕ್ಷಣಾ ಸಚಿವಾಲಯವು, 'ಈ ದಾಳಿಯನ್ನು ಕೀವ್ ನಡೆಸಿದೆ. ಉಕ್ರೇನ್‌ನ ಸೇನಾ ಪಡೆಗಳ ರಕ್ಷಣೆಗಾಗಿ ನಾಗರಿಕರನ್ನೇ ಬಳಸುತ್ತಿದೆ' ಎಂದು ಆರೋಪಿಸಿದೆ.



ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ರಷ್ಯಾದ ಸೇನಾ ದಾಳಿಯಿಂದಾಗಿ ಸೇತುವೆಯೊಂದು ಹಾನಿಗೊಂಡಿದೆ –ಎಎಫ್‌ಪಿ ಚಿತ್ರ

ರಷ್ಯಾದ 'ಯುದ್ಧ ಅಪರಾಧ' ಸಾಬೀತಿಗೆ ಪೂರಕ ಸಾಕ್ಷ್ಯ ಸಂಗ್ರಹ: ಝೆಲೆನ್‌ಸ್ಕಿ

ವಾಷಿಂಗ್ಟನ್: 'ರಷ್ಯಾದ ಸೇನೆ ಯುದ್ಧ ಅಪರಾಧ ಎಸಗುತ್ತಿರುವುದನ್ನು ಸಾಬೀತುಪಡಿಸಲು ಸಾಕ್ಷ್ಯವನ್ನು ದೇಶದ ಭದ್ರತಾ ವಿಭಾಗ ಸಂಗ್ರಹಿಸುತ್ತಿದೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

52 ಜನರು ಮೃತಪಟ್ಟ ರೈಲ್ವೆ ನಿಲ್ದಾಣದ ಮೇಲೆ ಕ್ಷಿಪಣಿ ದಾಳಿ ನಡೆದ ಹಿನ್ನೆಲೆಯಲ್ಲಿ ಸಿಬಿಎಸ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ.

ರಷ್ಯಾದ ಸೈನಿಕರು ತಮ್ಮ ಕೃತ್ಯಗಳ ಬಗ್ಗೆ ಪೋಷಕರ ಜೊತೆಗೆ ಮಾತನಾಡಿದ್ದಾರೆ. ಜನರ ಹತ್ಯೆ ಮಾಡಿದ್ದನ್ನು ರಷ್ಯಾದ ಯುದ್ಧ ಕೈದಿಗಳು ಒಪ್ಪಿಕೊಂಡಿದ್ದಾರೆ. ಯುದ್ಧ ಕೈದಿಗಳಾಗಿರುವ ಪೈಲಟ್‌ಗಳ ಬಳಿ ಉಕ್ರೇನ್‌ನ ನಾಗರಿಕ ತಾಣ ಕುರಿತ ನಕ್ಷೆಗಳಿವೆ. ಕೃತ್ಯ ನಡೆದ ಸ್ಥಳದ ಸಾಕ್ಷ್ಯ ಆಧರಿಸಿ ತನಿಖೆ ನಡೆಸಿದೆ ಎಂದಿದ್ದಾರೆ.

ಈ ಕೃತ್ಯಗಳಿಗೆ ಹೊಣೆ ಯಾರು? ಕ್ಷಿಪಣಿ ದಾಳಿಗೆ ಅನುಮತಿ ನೀಡಿದವರು ಯಾರು, ಎಲ್ಲಿಂದ ಕ್ಷಿಪಣಿ ಪ್ರಯೋಗಿಸಲಾಗಿದೆ? ಎಂಬುದು ಸೇರಿದಂತೆ ಎಲ್ಲ ಮಾಹಿತಿಗಳನ್ನು ಕಲೆಹಾಕುತ್ತಿದೆ ಎಂದು ಹೇಳಿದ್ದಾರೆ.

'ಕೃತ್ಯ ಎಸಗಲು ಆದೇಶ ನೀಡಿದವರು ಹಾಗೂ ಕೃತ್ಯ ಎಸಗಿದವರು ಇದರ ತಪ್ಪಿತಸ್ಥರು' ಎಂದು ಝೆಲೆನ್‌ಸ್ಕಿ ಹೇಳಿದರು. ರಷ್ಯಾ ಅಧ್ಯಕ್ಷ ಪುಟಿನ್ ಕೂಡಾ ಹೊಣೆಗಾರರೇ ಎಂಬ ಪ್ರಶ್ನೆಗೆ 'ಅವರೂ ಒಬ್ಬರು' ಎಂದರು.

45ನೇ ದಿನದ ಬೆಳವಣಿಗೆಗಳು

- ರಷ್ಯಾದ ಪಡೆಗಳು ಉಕ್ರೇನ್‌ನಲ್ಲಿನ ಮಿರೋರೊಡ್ ವಾಯುನೆಲೆಯ ಮೇಲೆ ದಾಳಿ ನಡೆಸಿದ್ದು, ಉಕ್ರೇನ್ ವಾಯುಪಡೆಗೆ ಸೇರಿದ ಎಂಐ-8 ಹೆಲಿಕಾಪ್ಟರ್, ಮಿಗ್ –29 ಯುದ್ಧ ವಿಮಾನ ಜಖಂಗೊಂಡಿವೆ. ಶಸ್ತ್ರಾಸ್ತ್ರಗಳ ದೊಡ್ಡ ಸಂಗ್ರಹಾಗಾರವನ್ನು ಧ್ವಂಸ ಮಾಡಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.
- ಉಕ್ರೇನ್‌ನ ಪೂರ್ವದಲ್ಲಿ ಶನಿವಾರ ನಾಗರಿಕರನ್ನು ಸುಗಮವಾಗಿ ತೆರಳು ನೆರವಾಗಲು ಒಟ್ಟು 10 ಮಾನವೀಯ ಹೆದ್ದಾರಿಗಳನ್ನು ಮುಕ್ತಗೊಳಿಸಲಾಗಿದೆ. ಈ ಮೂಲಕ ನಾಗರಿಕರು ಡೊನೆಸ್ಕ್, ಲುಹಾನ್ಸ್ಕ್, ಝಪೊರೊಝಿಯಾಗೆ ತೆರಳಬಹುದು ಎಂದು ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್ ಹೇಳಿದರು.
- ರಷ್ಯಾ ಸೇನೆಗಳ ದಾಳಿಯನ್ನು ತೀವ್ರಗೊಳಿಸುವ ಭೀತಿಯಿಂದಾಗಿ ಉಕ್ರೇನ್‌ನ ವಿವಿಧ ಗ್ರಾಮಗಳಿಂದ ಜನ ಗುಳೆ ಹೋಗುತ್ತಿದ್ದಾರೆ. ದಕ್ಷಿಣ ವಲಯದ ಮೈಕೊಲೈವ್, ಕೆರ್ಸನ್ ವಲಯದಲ್ಲಿ ಗುಳೆ ಸಾಮಾನ್ಯವಾಗಿದೆ.
- ಕ್ಷಿಪಣಿ ದಾಳಿ ಭೀತಿ ಹಿನ್ನೆಲೆಯಲ್ಲಿ ಉಕ್ರೇನ್‌ನ ಒಡೆಸಾ ನಗರ ವ್ಯಾಪ್ತಿಯಲ್ಲಿ ಸೋಮವಾರ ಸಂಜೆಯವರೆಗೂ ಕರ್ಫ್ಯೂ ಜಾರಿಗೊಳಿಸಲಾಗಿದೆ.
- ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ಪೂರೈಕೆ ಹೆಚ್ಚಿಸಲು ನ್ಯಾಟೊ ಸದಸ್ಯ ರಾಷ್ಟ್ರಗಳು ಸಮ್ಮತಿಸಿವೆ. ಸ್ಲೊವೇಕಿಯಾ ಪ್ರಧಾನಿ ಎಡ್ವರ್ಡ್ ಹೆಗೆರ್ ಅವರು, ಉಕ್ರೇನ್‌ಗೆ ಎಸ್‌-300 ರಕ್ಷಣಾ ವ್ಯವಸ್ಥೆ ಒದಗಿಸಲಿದೆ ಎಂದಿದ್ದಾರೆ.
- ಕೀವ್ ಉತ್ತರದಲ್ಲಿನ ಬುಚಾದಲ್ಲಿ 67 ಶವಗಳ ಸಾಮೂಹಿಕ ಅಂತ್ಯಕ್ರಿಯೆ ನಡೆಯಿತು ಎಂದು ಉಕ್ರೇನ್ ಸರ್ಕಾರ ತಿಳಿಸಿದೆ. ಇವುಗಳ ಪೈಕಿ ಮಹಿಳೆಯರು ಸೇರಿ 18 ಶವಗಳ ಗುರುತು ಪತ್ತೆಯಾಗಿದೆ. 16 ಶವಗಳ ಮೇಲೆ ಗುಂಡೇಟಿನ ಗುರುತುಗಳಿವೆ ಎಂದು ಪ್ರಾಸಿಕ್ಯೂಟರ್ ಜನರಲ್ ಇರಿಯಾನಾ ವೆನೆಡಿಕ್ಟೋವಾ ತಿಳಿಸಿದ್ದಾರೆ.
- ರಷ್ಯಾ ಅಧ್ಯಕ್ಷರ ಇಬ್ಬರು ಪುತ್ರಿಯರು ಸೇರಿದಂತೆ 200ಕ್ಕೂ ಹೆಚ್ಚು ಪ್ರಮುಖರಿಗೆ ಯೂರೋಪ್ ಒಕ್ಕೂಟ ನಿರ್ಬಂಧ ಹೇರಿದೆ. ಯೂರೋಪ್ ಒಕ್ಕೂಟದ 27 ರಾಷ್ಟ್ರಗಳಿಗೆ ಅವರು ತೆರಳಲು ನಿರ್ಬಂಧವಿದೆ. ಅಮೆರಿಕ ಮತ್ತು ಬ್ರಿಟನ್ ಈಗಾಗಲೇ ಪುಟಿನ್ ಪುತ್ರಿಯರಿಗೆ ನಿರ್ಬಂಧ ಹೇರಿವೆ.

ರಷ್ಯಾದ ಜೊತೆಗೆ ಮಾತುಕತೆಗೆ ಈಗಲೂ ಸಿದ್ಧ: ಉಕ್ರೇನ್ ಅಧ್ಯಕ್ಷ

ಕೀವ್ (ಎಎಫ್‌ಪಿ): ರಷ್ಯಾದ ಜೊತೆಗೆ ಈಗಲೂ ಮಾತುಕತೆಗೆ ಸಿದ್ಧ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ. ಬುಕಾ ನರಮೇಧ ಘಟನೆ ನಂತರ ಮಾತುಕತೆಗೆ ಹಿನ್ನಡೆಯಾಗಿತ್ತು. ಮಾ.29ರಂದು ಕಡೇ ಬಾರಿಗೆ ಸಂಧಾನ ಮಾತುಕತೆ ನಡೆದಿತ್ತು.

'ಮಾತುಕತೆ ನಡೆಸಲು ಉಕ್ರೇನ್ ಎಂದಿಗೂ ಸಿದ್ಧವಿದೆ. ಯುದ್ಧ ನಿಲ್ಲಿಸುವ ಮಾರ್ಗಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ನಾವು ಹೋರಾಟಕ್ಕೂ ಸಜ್ಜಾಗಿದ್ದೇವೆ. ರಾಜತಾಂತ್ರಿಕ ಮಾರ್ಗದಲ್ಲಿ ಚರ್ಚೆಗೆ ಸಿದ್ಧರಿದ್ದೇವೆ' ಎಂದು ಝೆಲೆನ್‌ಸ್ಕಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಫೀಜ್ ತಲ್ಹಾನನ್ನು ಭಯೋತ್ಪಾದಕ ಎಂದು ಘೋಷಿಸಿದ ಕೇಂದ್ರ

ನವದೆಹಲಿ: ಲಷ್ಕರ್-ಎ-ತಯಬಾ (ಎಲ್‌ಇಟಿ) ಮುಖ್ಯಸ್ಥ ಹಫೀಜ್ ಸಯೀದ್‌ನ ಪುತ್ರ ಹಫೀಜ್ ತಲ್ಹಾ ಸಯೀದ್‌ನನ್ನು ಕಾನೂನು ಬಾಹಿರ ಚಟುವಟಿಕೆಗಳ ನಿಗ್ರಹ ಕಾಯ್ದೆ-(ಯುಎಪಿಎ), 1967 ರ ಅಡಿಯಲ್ಲಿ 'ಭಯೋತ್ಪಾದಕ' ಎಂದು ಘೋಷಿಸಲಾಗಿದೆ. ಈ ಕಾಯ್ದೆಯಡಿ ಭಯೋತ್ಪಾದಕ ಎಂದು ಘೋಷಿಸಲಾದ 32 ನೇ ವ್ಯಕ್ತಿ ತಲ್ಹಾ ಸಯೀದ್.

ಗೃಹ ಸಚಿವಾಲಯವು ಶುಕ್ರವಾರ ತಡರಾತ್ರಿ ಅಧಿಸೂಚನೆ ಹೊರಡಿಸಿದ್ದು, ಪಟ್ಟಿಯಲ್ಲಿ 47 ವರ್ಷದ ತಲ್ಹಾ ಸಯೀದ್ ಹೆಸರು ಸೇರಿದೆ. ತಲ್ಹಾ ಸಯೀದ್ ಎಲ್‌ಇಟಿಯ ಕ್ಲರಿಕ್ ವಿಭಾಗದ ಮುಖ್ಯಸ್ಥ. ತಲ್ಹಾ ಸಯೀದ್ 'ಭಾರತ ಮತ್ತು ಅಫ್ಘಾನಿಸ್ತಾನದಲ್ಲಿ ಎಲ್‌ಇಟಿಗೆ ನೇಮಕಾತಿ, ನಿಧಿ ಸಂಗ್ರಹ ಸಹಿತ ಹಲವು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾನೆ' ಎಂದು ಹೇಳಿದೆ.

ಜಾಮಿಯ ಮಸೀದಿಯಲ್ಲಿ ದೇಶ ವಿರೋಧಿ ಘೋಷಣೆ: 13 ಮಂದಿ ಬಂಧನ

ಶ್ರೀನಗರ: ಇಲ್ಲಿನ ಐತಿಹಾಸಿಕ ಜಾಮಿಯ ಮಸೀದಿಯೊಳಗೆ ಶುಕ್ರವಾರದ ಸಾಮೂಹಿಕ ಪ್ರಾರ್ಥನೆ ವೇಳೆ ದೇಶ ವಿರೋಧಿ ಘೋಷಣೆ ಕೂಗಿದ ಆರೋಪದ ಮೇಲೆ ಶನಿವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸರು 13 ಮಂದಿಯನ್ನು ಬಂಧಿಸಿದ್ದಾರೆ.

'ಬಂಧಿತ ಆರೋಪಿಗಳ ವಿರುದ್ಧ ಐಪಿಸಿ 124 ಎ(ದೇಶದ್ರೋಹ) ಪ್ರಕರಣ ದಾಖಲಿಸಲಾಗಿದ್ದು, ಸಾರ್ವಜನಿಕ ಸುರಕ್ಷತಾ ಕಾಯ್ದೆ (ಪಿಎಸ್‌ಎ) ಅಡಿಯೂ ಪ್ರಕರಣ ದಾಖಲಿಸಲಾಗುವುದು' ಎಂದು ಶ್ರೀನಗರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ರಾಕೇಶ್ ಬಲ್ವಾಲ್ ತಿಳಿಸಿದರು.

'ಜನರನ್ನು ಪ್ರಚೋದಿಸುವ ಮೂಲಕ ಶುಕ್ರವಾರದ ಪ್ರಾರ್ಥನೆಯನ್ನು ಹಾಳು ಮಾಡಲು ಹಾಗೂ ಕಣಿವೆಯಲ್ಲಿ ಶಾಂತಿ ಸುವ್ಯವಸ್ಥೆಯನ್ನು ಹದಗೆಡಿಸಲು ಈ ಆರೋಪಿಗಳು ಪಾಕಿಸ್ತಾನ ಮೂಲದ ಭಯೋತ್ಪಾದನಾ ಸಂಘಟನೆಗಳ ನಿರ್ವಾಹಕರ ಸೂಚನೆ ಪಡೆದಿದ್ದರು' ಎಂದು ಅವರು ಹೇಳಿದರು.

'ಏ.8ರ ಮಧ್ಯಾಹ್ನ ಜಾಮಿಯಾ ಮಸೀದಿಯಲ್ಲಿ ನಡೆದ ಶುಕ್ರವಾರದ ಸಾಮೂಹಿಕ ಪ್ರಾರ್ಥನೆಯಲ್ಲಿ ಸುಮಾರು 24 ಸಾವಿರ ಜನ ಭಾಗವಹಿಸಿದ್ದರು. ಇದು ಇತ್ತೀಚಿನ ಇತಿಹಾಸದಲ್ಲಿ ಅತಿದೊಡ್ಡದು' ಎಂದರು.

2019ರ ಆಗಸ್ಟ್‌ನಲ್ಲಿ 370 ವಿಧಿ ರದ್ದುಗೊಳಿಸಿದ ಸಂದರ್ಭದಲ್ಲಿ 4 ತಿಂಗಳು ಹಾಗೂ ಕೋವಿಡ್ ಭೀತಿಯಿಂದ 2020ರ ಮಾರ್ಚ್‌ನಿಂದ ಮಸೀದಿಯನ್ನು ಮುಚ್ಚಲಾಗಿತ್ತು. ಇತ್ತೀಚೆಗಷ್ಟೇ ಶುಕ್ರವಾರದ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ಕಲ್ಪಿಸಲಾಗಿದೆ.

'ಇಮ್ರಾನ್‌ರನ್ನು ಹುಚ್ಚ ಎಂದು ಪರಿಗಣಿಸಿ'

ಭಾರತವನ್ನು ಮತ್ತೆ ಹೊಗಳಿದ ಪಾಕ್ ಪ್ರಧಾನಿಗೆ ವಿರೋಧ ಪಕ್ಷ ನಾಯಕಿ ತರಾಟೆ

ಇಸ್ಲಾಮಾಬಾದ್ / ಲಾಹೋರ್ (ಪಿಟಿಐ): ಭಾರತವನ್ನು ಬಹುವಾಗಿ ಹೊಗಳಿದ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಮೇಲೆ ವಿರೋಧ ಪಕ್ಷ ಪಾಕಿಸ್ತಾನ್ ಮುಸ್ಲಿಂ ಲೀಗ್‌ನ ಉಪಾಧ್ಯಕ್ಷೆ ಮರಿಯಂ ನವಾಜ್ ಹರಿಹಾಯ್ದಿದ್ದಾರೆ. ಭಾರತವು ಇಮ್ರಾನ್‌ಗೆ ಅಷ್ಟೊಂದು ಇಷ್ಟ ಎಂದಾದರೆ ಅವರು ಅಲ್ಲಿಗೇ ಹೋಗಲಿ ಎಂದಿದ್ದಾರೆ. 'ಇಮ್ರಾನ್‌ಗೆ ತಲೆ ಸರಿ ಇಲ್ಲ' ಎಂದೂ ಹೇಳಿದ್ದಾರೆ.

ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿ ಭಾರತದ ಯಾವ ಪ್ರಧಾನಿಯೂ ಸಂವಿಧಾನವನ್ನು ಉಲ್ಲಂಘಿಸಿದ ಉದಾಹರಣೆ ಇಲ್ಲ. ಇದನ್ನು ಇಮ್ರಾನ್ ಅವರೂ ಅನುಸರಿಸಬೇಕು ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಮಗಳು ಮರಿಯಂ ಹೇಳಿದ್ದಾರೆ.

'ಅತ್ಯಂತ ಹೆಮ್ಮೆಯ ಭಾವವನ್ನು ಹೊಂದಿರುವ ದೇಶ ಭಾರತ' ಎಂದು ಇಮ್ರಾನ್ ಹೇಳಿದ್ದಾರೆ. ಪಾಕಿಸ್ತಾನದ ಜನರನ್ನು ಉದ್ದೇಶಿಸಿ ಇಮ್ರಾನ್ ಅವರು ಶುಕ್ರವಾರ ಮಾತನಾಡಿದ್ದರು. ತಾವು ಭಾರತ ವಿರೋಧಿ ಅಲ್ಲ ಮತ್ತು ಭಾರತದಲ್ಲಿ ತಮಗೆ ದೊಡ್ಡ ಸಂಖ್ಯೆಯ ಅಭಿಮಾನಿಗಳು ಇದ್ದಾರೆ ಎಂದು ಹೇಳಿದ್ದರು.

'ಭಾರತದ ಹಿತಾಸಕ್ತಿಗೆ ವಿರುದ್ಧವಾಗಿ ಕ್ರಮ ಕೈಗೊಳ್ಳುವಂತೆ ಆ ದೇಶವನ್ನು ಯಾವುದೇ ಸೂಪರ್ ಪವರ್ ಕೂಡ ಬಲವಂತ ಮಾಡಲು ಸಾಧ್ಯವಿಲ್ಲ. ರಷ್ಯಾ ವಿರುದ್ಧ ನಿರ್ಬಂಧಗಳನ್ನು ಹೇರಲಾಗಿದ್ದರೂ ಭಾರತವು ಆ ದೇಶದಿಂದ ತೈಲ ಖರೀದಿ ಮಾಡುತ್ತಿದೆ. ಸಾರ್ವಭೌಮ ದೇಶವಾಗಿರುವ ಭಾರತವು ಹೀಗೆಯೇ ಮಾಡಬೇಕು ಎಂದು ಯಾರೂ ಹೇಳಲು ಸಾಧ್ಯವಿಲ್ಲ. ಎರಡೂ ದೇಶಗಳು (ಭಾರತ ಮತ್ತು ಪಾಕಿಸ್ತಾನ) ಒಂದೇ ಬಾರಿ ಸ್ವಾತಂತ್ರ್ಯ ಪಡೆದುಕೊಂಡವು. ಐರೋಪ್ಯ ಒಕ್ಕೂಟದ ರಾಯಭಾರಿಗಳು ಇಲ್ಲಿ ಹೇಳಿದ್ದನ್ನು ಭಾರತದಲ್ಲಿ ಹೇಳಲು ಸಾಧ್ಯವೇ?' ಎಂದು ಇಮ್ರಾನ್ ಹೇಳಿದ್ದಾರೆ.

'ಇಮ್ರಾನ್ ಅವರು ಭಾರತವನ್ನು ಹೊಗಳುತ್ತಿದ್ದಾರೆ. ಅವರು ಅವಿಶ್ವಾಸ ನಿರ್ಣಯದ ವಿಚಾರದಲ್ಲಿ ಭಾರತವನ್ನು ಅನುಸರಿಸಬೇಕು. ಭಾರತದಲ್ಲಿ ವಿವಿಧ ಪ್ರಧಾನಿಗಳ ವಿರುದ್ಧ 27 ಬಾರಿ ಅವಿಶ್ವಾಸ ನಿರ್ಣಯ ಮಂಡನೆ ಆಗಿದೆ. ಆದರೆ, ಇಮ್ರಾನ್ ಅವರಂತೆ ಯಾರೊಬ್ಬರೂ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ನೈತಿಕತೆಯ ಜತೆಗೆ ಆಟ ಆಡಿಲ್ಲ. ವಾಜಪೇಯಿ ಅವರು ಒಂದು ಮತದಿಂದ ವಿಶ್ವಾಸಮತ ಸೋತರು. ಅವರು ಸುಮ್ಮನೆ ಮನೆಗೆ ಹೋದರೇ ಹೊರತು ಇಮ್ರಾನ್ ಅವರಂತೆ ಸಂವಿಧಾನ ಮತ್ತು ದೇಶವನ್ನು ಒತ್ತೆಯಾಗಿ ಇರಿಸಿಕೊಳ್ಳಲಿಲ್ಲ' ಎಂದು ಮರಿಯಂ ಹೇಳಿದ್ದಾರೆ.

'ತಲೆ ಸರಿ ಇಲ್ಲದ ವ್ಯಕ್ತಿಯು ಇಡೀ ದೇಶವನ್ನು ಧ್ವಂಸ ಮಾಡಲು ಅವಕಾಶ ಕೊಡಬಾರದು. ಅವರನ್ನು (ಇಮ್ರಾನ್) ಪ್ರಧಾನಿ ಅಥವಾ ಮಾಜಿ ಪ್ರಧಾನಿ ಎಂದೂ ಪರಿಗಣಿಸಬಾರದು. ತಮ್ಮ ಮುಖ ರಕ್ಷಿಸಿಕೊಳ್ಳಲು ಇಡೀ ದೇಶವನ್ನು ಒತ್ತೆ ಇರಿಸಿಕೊಂಡಿರುವ ಅವರನ್ನು ಹುಚ್ಚ ಎಂದು ಮಾತ್ರ ಪರಿಗಣಿಸಬೇಕು' ಎಂದು ಅವರು ಹೇಳಿದ್ದಾರೆ.

ಇಮ್ರಾನ್ ಅವರು ಭಾರತವನ್ನು ಹೊಗಳಿದ್ದು ಇದೇ ಮೊದಲೇನೂ ಅಲ್ಲ. ಸ್ವತಂತ್ರ ವಿದೇಶ ನೀತಿಯನ್ನು ಭಾರತ ಹೊಂದಿದೆ ಎಂದು ಕಳೆದ ವಾರ ಅವರು ಹೇಳಿದ್ದರು. 'ತಮ್ಮ ಜನರನ್ನು ಕೇಂದ್ರೀಕರಿಸಿಕೊಂಡಿರುವ ವಿದೇಶಾಂಗ ನೀತಿಯನ್ನು ಭಾರತ ಹೊಂದಿದೆ' ಎಂದು ಹೇಳಿದ್ದರು.

ಗೋವಾ ಸಂಪುಟ: ಮೂರು ಶಾಸಕರ ಸೇರ್ಪಡೆ

ಪಣಜಿ (ಪಿಟಿಐ): ಮಿತ್ರ ಪಕ್ಷ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷದ (ಎಂಜಿಪಿ) ಸುದಿನ್ ಢವಳೀಕರ್ ಸೇರಿ ಮೂವರು ಶಾಸಕರಿಗೆ ಸಚಿವ ಸ್ಥಾನ ನೀಡುವ ಮೂಲಕ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಶನಿವಾರ ತಮ್ಮ ಸಚಿವ ಸಂಪುಟವನ್ನು ವಿಸ್ತರಿಸಿದ್ದಾರೆ.

ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಇತರ ಸಂಪುಟ ಸಚಿವರು ಉಪಸ್ಥಿತರಿದ್ದರು.

ಢವಳೀಕರ್ ಜೊತೆ ಬಿಜೆಪಿಯ ನೀಲಕಾಂತ ಹಳರಂಕರ್ ಮತ್ತು ಸುಭಾಷ್ ಫಳ್ದೇಸಾಯಿ ಅವರು ಪ್ರಮಾಣವಚನ ಸ್ವೀಕರಿಸಿದರು.



ಪ್ರತಿಭಟನೆ ಕೊಲಂಬೊದಲ್ಲಿರುವ ಶ್ರೀಲಂಕಾ ಅಧ್ಯಕ್ಷರ ಕಚೇರಿ ಎದುರು ನಾಗರಿಕರು ಶನಿವಾರ ಪ್ರತಿಭಟನೆ ನಡೆಸಿ, ಅಧ್ಯಕ್ಷ ಗೊಟಬಯ ರಾಜಪಕ್ಸ ವಿರುದ್ಧ ಘೋಷಣೆ ಕೂಗಿದರು –ಪಿಟಿಐ ಚಿತ್ರ

ಆಳ್ವಾಸ್: ವೈದ್ಯಕೀಯ ಶಿಕ್ಷಣಕ್ಕೆ 377 ಮಂದಿ

ಪ್ರಜಾವಾಣಿ ವಾರ್ತೆ



ಶಿವರಾಜ್



ಹರ್ಷಿತಾ



ರಕ್ಷಿತ್



ಶೈಕ್ಷಾ ನಾಯಕ್

ಮೂಡುಬಿದಿರೆ: 'ರಾಷ್ಟ್ರ ಮಟ್ಟದ ನೀಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವ ಆಳ್ವಾಸ್ ಪದವಿಪೂರ್ವ ಕಾಲೇಜಿನ 377 ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆಯಾಗಿದ್ದಾರೆ. ಈ ಮೂಲಕ ಪ್ರಸಕ್ತ ವರ್ಷ ರಾಜ್ಯದಲ್ಲೇ ಅತಿ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ಕಾಲೇಜು ಎಂಬ ಗೌರವಕ್ಕೆ ಆಳ್ವಾಸ್ ಕಾಲೇಜು ಪಾತ್ರವಾಗಿದೆ' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

'ಹರ್ಷಿತಾ ಗಂಗಾಧರಪ್ಪ ನೆಗಳೂರು, ಶೈಕ್ಷಾ ನಾಯಕ ಅವರು ದೆಹಲಿ ಏಮ್ಸ್‌ಗೆ, ರಕ್ಷಿತ್ ಪರೀಕ್ ರಾಯಬರೇಲಿ ಏಮ್ಸ್‌ಗೆ, ಶಿವರಾಜ್ ಎಂ. ಉಮ್ಮಜಪ್ಪನ್ವರ್ ಪುಣೆಯ ವೈದ್ಯಕೀಯ ಕಾಲೇಜಿಗೆ ಆಯ್ಕೆಯಾಗುವ ಮೂಲಕ ರಾಷ್ಟ್ರದ ಗಮನ ಸೆಳೆದಿದ್ದಾರೆ. ಇದರೊಂದಿಗೆ ರಾಜ್ಯದ ವಿವಿಧ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 213 ವಿದ್ಯಾರ್ಥಿಗಳು, ಖಾಸಗಿ ವೈದ್ಯಕೀಯ ಕಾಲೇಜುಗಳ ಸರ್ಕಾರಿ ಕೋಟದಲ್ಲಿ 106 ವಿದ್ಯಾರ್ಥಿಗಳು, ಖಾಸಗಿ ಕೋಟಾದಲ್ಲಿ 58 ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ' ಎಂದು ಹೇಳಿದರು.

'30 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ, 15 ಮಂದಿ ಪರಿಶಿಷ್ಟ ಪಂಗಡ, 29 ವಿದ್ಯಾರ್ಥಿಗಳು ಕನ್ನಡ ಮಾಧ್ಯಮ ಹಾಗೂ 51 ವಿದ್ಯಾರ್ಥಿಗಳು ಹೈದರಾಬಾದ್ ಕರ್ನಾಟಕ ಕೋಟಾದಡಿಯಲ್ಲಿ ಪ್ರವೇಶ ಪಡೆದಿದ್ದಾರೆ. ಈ ಪೈಕಿ 150 ವಿದ್ಯಾರ್ಥಿಗಳು ಆಳ್ವಾಸ್ ದತ್ತು ಸ್ವೀಕಾರ ಶಿಕ್ಷಣ ಯೋಜನೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಗ್ರಾಮೀಣ ಭಾಗದ ಹೆಚ್ಚಿನ ವಿದ್ಯಾರ್ಥಿಗಳು ಪ್ರತಿವರ್ಷವೂ ದೊಡ್ಡ ಸಂಖ್ಯೆಯಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆ ಆಗುತ್ತಿರುವುದು ನಮ್ಮ ಶಿಕ್ಷಣ ಸೇವೆಯ ಸಾರ್ಥಕತೆಗೆ ನಿದರ್ಶನವಾಗಿದೆ' ಎಂದು ಡಾ. ಮೋಹನ ಆಳ್ವ ತಿಳಿಸಿದರು.

ಟಿಪ್ಪು ಸುಲ್ತಾನ್ ಕುರಿತ ಸತ್ಯ ಸುಳ್ಳಾಗಿಸಲಾಗದು: ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಮೈಸೂರು: 'ಟಿಪ್ಪು ಸುಲ್ತಾನ್ ಮುಸ್ಲಿಂ ಸಮುದಾಯದಲ್ಲಿ ಹುಟ್ಟಿರಬಹುದು. ಆದರೆ ಭಾರತೀಯತೆ, ರಾಷ್ಟ್ರೀಯತೆಯನ್ನು ಎತ್ತಿ ಹಿಡಿದಿದ್ದ. ಜಗತ್ತಿನಲ್ಲಿ ಭಾರತಕ್ಕೆ ವಿಶಿಷ್ಟ ಮೌಲ್ಯ ತಂದುಕೊಟ್ಟಿರುವ ಆತನ ಕುರಿತ ಸತ್ಯಗಳನ್ನು ಸುಳ್ಳಾಗಿಸಲು ಸಾಧ್ಯವಿಲ್ಲ' ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರತಿಪಾದಿಸಿದರು.

ಇತಿಹಾಸತಜ್ಞ ಪ್ರೊ.ಪಿ.ವಿ. ನಂಜರಾಜೇ ಅರಸ್ ಅವರ, 'ಟೀಪೂ ಮಾನ್ಯತೆ ಸಿಗದ ಸುಲ್ತಾನ್: ಅಂದು-ಇಂದು' ಕೃತಿಯನ್ನು ಶನಿವಾರ ಇಲ್ಲಿ ಬಿಡುಗಡೆಗೊಳಿಸಿ ಮಾತನಾಡಿ, 'ಟಿಪ್ಪು, ಜಗತ್ತಿನ ಮಾನ್ಯತೆ ಪಡೆದಿರುವ ಚಕ್ರವರ್ತಿ. ಸೂರ್ಯನ ಪ್ರಕಾಶಕ್ಕೆ ಪರದೆ ಹಿಡಿಯಲು ಸಾಧ್ಯವಿಲ್ಲ. ಟಿಪ್ಪು ಹೊಂದಿರುವ ಮಾನ್ಯತೆ ಮರೆಮಾಚಲು ಆಗದು' ಎಂದರು.

'ಕೊಡಗಿನಲ್ಲಿ 80 ಸಾವಿರ ಮಂದಿಯನ್ನು ಕೊಂದಿದ್ದ ಎಂದು ಆತನ ಟೀಕಾಕಾರರು ಆರೋಪಿಸುತ್ತಾರೆ. ಕೊಡಗಿನ ಈಗಿನ ಜನಸಂಖ್ಯೆ ಸುಮಾರು 4 ಲಕ್ಷ. ಎರಡೂವರೆ ಶತಮಾನದ ಹಿಂದೆಯೇ 80 ಸಾವಿರ ಮಂದಿಯನ್ನು ಕೊಲ್ಲಬೇಕಿದ್ದರೆ ಅಲ್ಲಿನ ಜನಸಂಖ್ಯೆ ಎಷ್ಟಿತ್ತು' ಎಂದು ಪ್ರಶ್ನಿಸಿದರು.

'ನೆಪೋಲಿಯನ್ ಒಳಗೊಂಡಂತೆ ಜಗತ್ತು ಕಂಡ ಮಹಾನ್ ಚಕ್ರವರ್ತಿಗಳು ಕೂಡಾ ಎದುರಾಳಿಗಳ ಮುಂದೆ ತಲೆಬಾಗಿದ್ದಾರೆ. ತನ್ನ ವೈರಿಗಳ ಮುಂದೆ ಮಂಡಿಯೂರಿ ಶರಣಾಗದ ಜಗತ್ತಿನ ಏಕೈಕ ವೀರನೆಂದರೆ ಟಿಪ್ಪು' ಎಂದು ಬಣ್ಣಿಸಿದರು.

'ವನ್ಯಜೀವಿ ಕಳೇಬರ ಹೂಳುವ ಪದ್ಧತಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವನ್ಯಜೀವಿಗಳು ಸತ್ತಾಗ ಅವುಗಳನ್ನು ಹೂಳುವ ಅಥವಾ ಸುಡುವ ಗೋಜಿಗೆ ಹೋಗದೆ ಬೇರೆ ಪ್ರಾಣಿ–ಪಕ್ಷಿಗಳು ತಿನ್ನಲು ಅಥವಾ ಕೊಳೆಯಲು ಬಿಡಬೇಕು. ವನ್ಯಜೀವಿಗಳ ನೈಸರ್ಗಿಕ ಬದುಕಿನಲ್ಲಿ ಮಾನವರ ಹಸ್ತಕ್ಷೇಪ ಇರಬಾರದು' ಎಂದು ಪರಿಸರ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

'ಕಾಡಿನ ಮಧ್ಯದಲ್ಲಿ ಸತ್ತ ಪ್ರಾಣಿಗಳನ್ನು ಸುಡುವ ಅಥವಾ ಹೂಳುವ ಪದ್ಧತಿಯನ್ನು ನಿಲ್ಲಿಸಬೇಕು. ಆದರೆ, ಈ ಮಾರ್ಗಸೂಚಿಯು ರಾಷ್ಟ್ರೀಯ ಪ್ರಾಣಿ ಹುಲಿಗೆ ಅನ್ವಯಿಸುವುದಿಲ್ಲ' ಎಂದು ಅರಣ್ಯ ಇಲಾಖೆ ಇತ್ತೀಚೆಗೆ ಸುತ್ತೋಲೆ ಹೊರಡಿಸಿದೆ.

'ಕಾಡಿನ ಮಧ್ಯದಲ್ಲಿ ಪ್ರಾಣಿಗಳು ಸತ್ತರೆ, ಅವುಗಳನ್ನು ಮುಟ್ಟದೆ ಹಾಗೇ ಬಿಡುವುದು ಸೂಕ್ತ. ಆಗ ಪ್ರಾಣಿ–ಪಕ್ಷಿಗಳು ಅದನ್ನು ಆಹಾರವಾಗಿ ಮಾಡಿಕೊಳ್ಳುತ್ತವೆ. ಯಾವ ಪ್ರಾಣಿಯೂ ತಿನ್ನದೆ ಕೊಳೆತು ಹೋದರೆ, ಅದು ಕೂಡ ನೈಸರ್ಗಿಕ ಪ್ರಕ್ರಿಯೆಯೇ ಆಗಿದೆ' ಎಂದು ಪರಿಸರ ವಿಜ್ಞಾನಿ ಪ್ರವೀಣ್ ಭಾರ್ಗವ್ ಅಭಿಪ್ರಾಯಪಟ್ಟರು.

'ಆನೆ ಮತ್ತು ಹುಲಿಯ ವಿಚಾರದಲ್ಲಿ ಸ್ವಲ್ಪ ಎಚ್ಚರ ವಹಿಸಬೇಕಾಗುತದೆ. ಆನೆಯ ದಂತ, ಹುಲಿಯ ಚರ್ಮ, ಉಗುರು ಮತ್ತು ಕೋರೆ ಹಲ್ಲುಗಳನ್ನು ಜನ ಕಿತ್ತುಕೊಂಡು ಹೋಗುವ ಸಾಧ್ಯತೆ ಇರುತ್ತದೆ. ಜನ ಸಂಚಾರ ಇಲ್ಲದ ಕಾಡಿನ ಮಧ್ಯದಲ್ಲಿ ಮೃತಪಟ್ಟರೆ ಆನೆ ಮತ್ತು ಹುಲಿಯ ಕಳೇಬರವನ್ನೂ ಮುಟ್ಟುವ ಅಗತ್ಯ ಇರುವುದಿಲ್ಲ' ಎಂದರು.

'ರಾಷ್ಟ್ರೀಯ ಉದ್ಯಾನ ಮತ್ತು ವನ್ಯಧಾಮಗಳಲ್ಲಿ ಇತ್ತೀಚೆಗೆ ಮನುಷ್ಯರ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಅದು ಕಡಿಮೆ ಆಗಲೇಬೇಕಿದೆ. ಆ ನಿಟ್ಟಿನಲ್ಲಿಯೇ ಸಂಜಯ್ ಗುಬ್ಬಿ ಅವರು ಈ ಸಲಹೆ ನೀಡಿದ್ದರು. ಅದನ್ನ ಆಧರಿಸಿ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮ ಸರಿಯಾಗಿದೆ' ಎಂದು ಅಭಿಪ್ರಾಯಪಟ್ಟರು.

'ಮಾರಕ ಖಾಯಿಲೆಯಿಂದ ಮೃತಪಟ್ಟ ಪ್ರಾಣಿಯಿಂದ ಬೇರೆ ಪ್ರಾಣಿಗಳಿಗೂ ಸಾಂಕ್ರಾಮಿಕ ಹರಡುವ ಸಾಧ್ಯತೆ ಇದ್ದರೂ ಅದರ ಗೋಜಿಗೆ ಹೋಗುವುದು ಸೂಕ್ತವಲ್ಲ. ಆಂಥ್ರಾಕ್ಸ್ ಕಾಯಿಲೆ ಹರಡಿ 1970ರ ಆಸುಪಾಸಿನಲ್ಲಿ ಸಾಕಷ್ಟು ಕಾಡುಕೋಣಗಳು ಮೃತಪಟ್ಟವು. ಅವುಗಳ ಸಂತತಿ ಈಗ ಮತ್ತೆ ಹೆಚ್ಚಾಗಿದೆ. ಆದ್ದರಿಂದ ವನ್ಯಜೀವಿಗಳ ನೈಸರ್ಗಿಕ ಬದುಕಿನಲ್ಲಿ ಮಾನವನ ಹಸ್ತಕ್ಷೇಪದ ಅಗತ್ಯವಿಲ್ಲ' ಎಂದು ಅವರು ಹೇಳಿದರು.

ಅಧಿಕಾರಿಗಳೊಂದಿಗೆ ಶಾಸಕ ಸುನೀಲ ನಾಯ್ಕ ಸಭೆ

ಮೊಟ್ಟೆ ಎಸೆತ: 6 ಬಾಲಾರೋಪಿಗಳು ವಶಕ್ಕೆ


ಪ್ರಜಾವಾಣಿ ವಾರ್ತೆ

ಭಟ್ಕಳ: ಭಟ್ಕಳದಲ್ಲಿ ಶುಕ್ರವಾರ ರಾತ್ರಿ ಕಿಡಿಗೇಡಿಗಳು ವಿನಾಕಾರಣ ಕೆಲವು ಕಡೆ ಸಾರ್ವಜನಿಕರ ಮೇಲೆ ಮೊಟ್ಟೆಗಳನ್ನು ಎಸೆದಿದ್ದಾರೆ. ಈ ಸಂಬಂಧ ರಾತ್ರಿಯೇ ಸಾರ್ವಜನಿಕರು ಒಬ್ಬನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಇನ್ನೂ ಐವರನ್ನು ಪೊಲೀಸರು ಶನಿವಾರ ಬೆಳಿಗ್ಗೆ ವಶಕ್ಕೆ ಪಡೆದಿದ್ದು, ಬಾಲ ಕಾರಾಗೃಹಕ್ಕೆ ಕಳುಹಿಸಿದ್ದಾರೆ.

ಪಟ್ಟಣದ ಬಂದರು ರಸ್ತೆ ನಿವಾಸಿಗಳಾದ ಆರೋಪಿಗಳೆಲ್ಲರೂ 17 ವರ್ಷದ ಆಸುಪಾಸಿನವರು. ಆರು ಮಂದಿ ಮೂರು ದ್ವಿಚಕ್ರ ವಾಹನಗಳಲ್ಲಿ ತೆರಳಿ ಈ ಕೃತ್ಯ ಎಸಗಿದ್ದಾರೆ. ಹನುಮಾನ್ ನಗರದಲ್ಲಿ ಆಟೊರಿಕ್ಷಾ ಚಾಲಕ ಕೃಷ್ಣ ಮಾಸ್ತಪ್ಪ ನಾಯ್ಕ ಎಂಬುವವರ ಎದೆಯ ಮೇಲೆ ಮೊಟ್ಟೆಯಿಂದ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ಪುರವರ್ಗ ಬಳಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಂಜುನಾಥ ಎಂಬುವವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೈ ಹಾಗೂ ಕಾಲುಗಳಿಗೆ ಮೊಟ್ಟೆ ಎಸೆದಿದ್ದಾರೆ. ಇದನ್ನು ಗಮನಿಸಿದ ಮಂಜುನಾಥನ ಸಹೋದರ, ಯುವಕರನ್ನು ಬೆನ್ನಟ್ಟಿ ರಾಘವೇಂದ್ರ ಮಠದ ಬಳಿ ಒಬ್ಬನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ವಿಷಯ ತಿಳಿಯುತಿದಂತೆಯೇ ಶುಕ್ರವಾರ ರಾತ್ರಿ ನೂರಾರು ಜನರು ಶಹರ ಪೊಲೀಸ್ ಠಾಣೆ ಎದುರು ಜಮಾಯಿಸಿದರು. ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಲಾಠಿ ಬೀಸಿ ಗುಂಪನು ಚದುರಿಸಿದರು.

ಈ ಸಂಬಂಧ ಭಟ್ಕಳ ಶಾಸಕ ಸುನೀಲ ನಾಯ್ಕ ಶನಿವಾರ ಪಟ್ಟಣದಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ಕರೆದರು. ಕಿಡಿಗೇಡಿಗಳ ವಿರುದ್ಧ ನಿರ್ದಾಕ್ಷಿಣ್ಯ ಕಮಕೆ ಸೂಚಿಸಿದರು.



ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ಭಟ್ಕಳದ ರಾಘವೇಂದ್ರ ಮಠದ ಬಳಿ ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದರು

ಬ್ರಹ್ಮರಥೋತ್ಸವಕ್ಕೆ ಬಂದೋಬಸ್ತ್

'ಭಟ್ಕಳದಲ್ಲಿ ಏ.10ರಂದು ಚನ್ನಪಟ್ಟಣ ಹನುಮಂತ ದೇವರ ಬ್ರಹ್ಮರಥೋತ್ಸವ ನೆರವೇರಲಿದೆ. ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸ್ ಸಿಬ್ಬಂದಿ ನೇಮಿಸಿ ಬಂದೋಬಸ್ತ್ ಮಾಡಲಾಗಿದೆ. ಕೆ.ಎಸ್.ಆರ್.ಪಿ ಹಾಗೂ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಕರೆಸಲಾಗಿದೆ. ಟವರ್ ವಾಚರ್‌ಗಳನ್ನು ಜನಸಂದಣಿ ಪ್ರದೇಶದಲ್ಲಿ ಅಳವಡಿಸಲಾಗಿದೆ. ಯಾರೂ ಭಯ ಪಡುವ ಅಗತ್ಯ ಇಲ್ಲ' ಎಂದು ಡಿ.ವೈ.ಎಸ್ಪಿ ಕೆ.ಯು.ಬೆಳ್ಳಿಯಪ್ಪ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಸ್ವಾಮೀಜಿಗಳಿಗೆ ಜನರೇ ಹೊಡೆಯುತ್ತಾರೆ'

ತುಮಕೂರು: 'ಕೆಲವು ಸ್ವಾಮೀಜಿಗಳನ್ನು ಕರೆದುಕೊಂಡು ಬಂದು ಪ್ರಚೋದನಕಾರಿ ಹೇಳಿಕೆ ಕೊಡಿಸಲಾಗುತ್ತಿದೆ. ಇಂಥ ಸ್ವಾಮಿಗಳಿಗೆ ಜನರೇ ಬುದ್ಧಿ ಕಲಿಸುತ್ತಾರೆ' ಎಂದು ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಶನಿವಾರ ವಾಗ್ದಾಳಿ ನಡೆಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಜಾಬ್, ಹಲಾಲ್ ಕಟ್, ಜಟ್ಕಾ ಕಟ್ ವಿವಾದ ಅನಗತ್ಯ. ಆದರೆ, ಬೆಲೆ ಏರಿಕೆ ವಿಚಾರ ಮರೆಮಾಚಲು ಇಂತಹ ಭಾವನಾತ್ಮಕ ವಿಚಾರಗಳನ್ನು ತಂದು ಜನರ ದಿಕ್ಕು-ತಪ್ಪಿಸಲಾಗುತ್ತಿದೆ. ಕೆಲ ಸ್ವಾಮಿಗಳನ್ನು ಕರೆತಂದು ಪ್ರಚೋದನಾತ್ಮಕ ಹೇಳಿಕೆ ಕೊಡಿಸಲಾಗುತ್ತಿದೆ' ಎಂದು ಟೀಕಿಸಿದರು.

'ಧಾರ್ಮಿಕ ಕೇಂದ್ರಗಳಿಗೆ ಮುಸ್ಲಿಂ ಚಾಲಕರನ್ನು ಕರೆದುಕೊಂಡು ಹೋಗಬೇಡಿ ಎಂದು ಯಾರೋ ಒಬ್ಬರು ಸ್ವಾಮೀಜಿ ಹೇಳಿದ್ದಾರೆ. ಈ ಸ್ವಾಮಿ ಬಂದು ಚಾಲಕನ ಕೆಲಸ ಮಾಡುತ್ತಾರಾ? ಕಾವಿ ಬಟ್ಟೆ ತೊಟ್ಟವರು ಅವರ ಕೆಲಸ ಮಾಡಬೇಕು. ಇಲ್ಲವಾದರೆ ಕಾವಿ ಬಿಚ್ಚಿ, ಖಾಕಿ ಹಾಕಿಕೊಳ್ಳಲಿ. ಇಂಥ ಸ್ವಾಮೀಜಿಗಳಿಂದ ನಮಗೆ ಏನು ಸಂದೇಶ ಸಿಗುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಗನ್‌ಮ್ಯಾನ್ ವ್ಯವಸ್ಥೆ ತೆಗೆದು ಹಾಕಿ'

ಶಿವಮೊಗ್ಗ: ರಾಜ್ಯದ ಎಲ್ಲ ಶಾಸಕರಿಗೆ ನೀಡಿರುವ ಗನ್‌ಮ್ಯಾನ್ ವ್ಯವಸ್ಥೆ ತೆಗೆದು ಹಾಕಬೇಕು ಎಂದು ವಿಧಾನಪರಿಷತ್ ಸದಸ್ಯ ಆಯನೂರು ಮಂಜುನಾಥ್ ಸರ್ಕಾರವನ್ನು ಒತ್ತಾಯಿಸಿದರು.

ರಿಸರ್ವ್ ಪೊಲೀಸರನ್ನು ಈ ರೀತಿಯಾಗಿ ಬಳಸಿಕೊಳ್ಳುವುದು ಶೋಭೆ ತರುವುದಿಲ್ಲ. ಜನಪ್ರತಿನಿಧಿಯಾದವನು ಮುಕ್ತವಾಗಿ ಜನರ ಬಳಿ ಹೋಗಬೇಕು. ಯಾರಿಗೆ ಜೀವಭಯವಿದೆಯೋ ಅಂತಹವರಿಗೆ ಭದ್ರತೆ ನೀಡಲಿ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಎಪಿಗೆ ಬೆಂಬಲ ಚರ್ಚಿಸಿ ನಿರ್ಧಾರ: ಕೋಡಿಹಳ್ಳಿ

ಶಿರಸಿ: ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳು ಮತಬ್ಯಾಂಕ್ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುತ್ತಿವೆ. ರೈತರ ಕಾಳಜಿ ಇಲ್ಲದ ಈ ಪಕ್ಷಗಳನ್ನು ಅಧಿಕಾರದಿಂದ ದೂರ ಇಡಲು ಪರ್ಯಾಯ ಶಕ್ತಿಗೆ ಬೆಂಬಲಿಸಲಾಗುವುದು ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ನಗರದಲ್ಲಿ ಶನಿವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ಮೇ 11ಕ್ಕೆ ರೈತ ಸಂಘದ ಕೋರ್ ಕಮಿಟಿ ಸಭೆ ನಡೆಯಲಿದೆ. ರೈತ ಸಂಘದ ಸಿದ್ಧಾಂತಗಳಿಗೆ ಒಪ್ಪಿದರೆ ಆಮ್ ಆದ್ಮಿ ಪಕ್ಷವನ್ನು (ಎಎಪಿ) ಬೆಂಬಲಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗುವುದು' ಎಂದು ಪ್ರತಿಕ್ರಿಯಿಸಿದರು.

'ಮಾಯಾವತಿಗೆ ಸಿಎಂ ಸ್ಥಾನದ ಕೊಡುಗೆ ನೀಡಲಾಗಿತ್ತು'

ನವದೆಹಲಿ (ಪಿಟಿಐ): 'ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಜಂಟಿಯಾಗಿ ಸ್ಪರ್ಧೆ ಹಾಗೂ ಮಾಯಾವತಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿಸುವ ಕೋರಿಕೆಯನ್ನು ಬಿಎಸ್‌ಪಿಗೆ ಕಾಂಗ್ರೆಸ್ ನೀಡಿತ್ತು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಶನಿವಾರ ಇಲ್ಲಿ ದಲಿತರ ಹೋರಾಟಗಳ ಕುರಿತಾದ 'ದಿ ದಲಿತ್ ಟ್ರುತ್' ಎಂಬ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಕೇಂದ್ರದ ತನಿಖಾ ಸಂಸ್ಥೆಗಳಾದ ಸಿಬಿಐ, ಇ.ಡಿ ಹಾಗೂ ಪೆಗಾಸಸ್‌ಗಳಿಗೆ ಬೆದರಿದ ಮಾಯಾವತಿ ಅವರು, ನಮ್ಮ ಜೊತೆ ಮಾತನಾಡಲೂ ಸಹ ಮುಂದಾಗಲಿಲ್ಲ. ತನ್ಮೂಲಕ ಬಿಜೆಪಿ ಗೆಲುವಿಗೆ ದಾರಿ ಮಾಡಿಕೊಟ್ಟರು' ಎಂದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಶ್ರೀರಾಮ: ಧರ್ಮದ ಮೂರ್ತರೂಪ

• ಎಸ್. ಸೂರ್ಯಪ್ರಕಾಶ ಪಂಡಿತ್



ಇಂದು ಶ್ರೀರಾಮನವಮಿ

ರಾಮಾಯಣದ ಉದ್ದಕ್ಕೂ ಶ್ರೀರಾಮನ ಹಲವು ಗುಣಗಳ ವರ್ಣನೆಯಿದೆಯಷ್ಟೆ. ಅವುಗಳಲ್ಲಿ ಈ ಶ್ಲೋಕವೂ ಒಂದು; ರಾಮ ಕೇವಲ ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ; ರಾಷ್ಟ್ರವೇ ರಾಮ, ರಾಮನೇ ರಾಷ್ಟ್ರ – ಎಂಬ ತತ್ತ್ವವನ್ನು ಈ ಮಾತಿನಲ್ಲಿ ನೋಡಬಹುದು:

ನ ಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ|
ತದ್ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ||

'ರಾಮನು ಯಾವ ರಾಷ್ಟ್ರದಲ್ಲಿ ರಾಜನಾಗಿಲ್ಲವೋ ಅದು ರಾಷ್ಟ್ರವೇ ಅಲ್ಲ; ರಾಮನಿರುವ ಕಾಡು ಕೂಡ ರಾಷ್ಟ್ರವೇ ಆಗುವುದು.'

ರಾಷ್ಟ್ರ ಎನ್ನುವುದು ವಿಶಾಲವಾದ ಒಂದು ವ್ಯವಸ್ಥೆ; ಆ ವ್ಯವಸ್ಥೆಯೆಲ್ಲವೂ ರಾಮನೇ ಹೌದು ಎಂಬ ಸಮೀಕರಣವನ್ನು ಈ ಮಾತಿನಲ್ಲಿ ನೋಡಬಹುದು. ಧರ್ಮ, ನೀತಿ, ನಿಯಮ, ಸುಖ, ಸಂತೋಷ, ಕಾನೂನು, ಕರ್ತವ್ಯ, ಕರುಣೆ, ದಂಡನೆ, ಸಂಪತ್ತು – ಹೀಗೆ ಹತ್ತು ಹಲವು ವಿವರಗಳ ಸಾಂಗತ್ಯದಿಂದ ರಾಷ್ಟ್ರವೊಂದು ನೆಲೆ ನಿಲ್ಲುತ್ತದೆ. ರಾಮನೇ ರಾಷ್ಟ್ರ – ಎಂದರೆ ಈ ಎಲ್ಲ ಗುಣಗಳ ಧಣಿ, ಗಣಿ ಅವನು ಎಂದಾಯಿತು.

ರಾಮಾಯಣದ ಆರಂಭ ಆಗುವುದೇ ಸಗುಣವಂತನ ಹುಡುಕಾಟದಿಂದ. ನಮ್ಮ ಕಾಲವೂ ಸೇರಿದಂತೆ ಎಲ್ಲ ಕಾಲದಲ್ಲೂ ತೋರಿಕೊಳ್ಳಬಹುದಾದ ಪ್ರಶ್ನೆ: 'ಗುಣವಂತನಾದ ಮಹಾಪುರುಷ ಯಾರು?' ರಾಮಾಯಣದ ಆರಂಭವೇ ಈ ಪ್ರಶ್ನೆ. ಈ ಗುಣಗಳು ಯಾವುವು ಎಂದು ಉದ್ದವಾದ ಪಟ್ಟಿಯೂ ಅಲ್ಲಿದೆ. ಗುಣವಂತನಾದರಷ್ಟೆ ಸಾಲದು, ಅವನು ವೀರನೂ ಆಗಿರಬೇಕು; ಜೊತೆಗೆ ಧರ್ಮಜ್ಞನೂ ಕೃತಜ್ಞನೂ ಸತ್ಯವಾದಿಯೂ ದೃಢಸಂಕಲ್ಪನೂ ಸದಾಚಾರನಿಷ್ಠನೂ ಎಲ್ಲರ ಜೀವಿಗಳ ಹಿತವನ್ನು ಬಯಸುವವನೂ ವಿದ್ವಾಂಸನೂ ಕಾರ್ಯದಕ್ಷನೂ ನೋಡುವ ಜನರಿಗೆ ಆನಂದವನ್ನು ಉಂಟುಮಾಡುವವನೂ ಧೈರ್ಯಶಾಲಿಯೂ ಕೋಪವನ್ನು ಗೆದ್ದವನೂ ಕಾಂತಿವಂತನೂ ಆಸೆಯೆಯಿಲ್ಲದವನೂ ಯುದ್ಧಕ್ಕೆ ನಿಂತರೆ ದೇವತೆಗಳಿಗೂ ಭಯ ಹುಟ್ಟಿಸುವವನೂ ಆಗಿರಬೇಕು. ಈ ಎಲ್ಲ ಗುಣಗಳನ್ನು ಹೊಂದಿದವನು ನಿಜವಾದ ಗುಣವಂತ. ರಾಮಾಯಣ ಹುಟ್ಟಿದ್ದೇ ಇಂಥ ಗುಣವಂತನ ಹುಡುಕಾಟದಲ್ಲಿ. ಈ ಪ್ರಶ್ನೆಗೆ ಸಿಕ್ಕ ಉತ್ತರ: ಶ್ರೀರಾಮ.

ಇಷ್ಟು ಗುಣಗಳು ಮಾತ್ರವಲ್ಲ, ರಾಮನಲ್ಲಿ ಇನ್ನೂ ಹಲವು ಗುಣಗಳು ಮನೆಮಾಡಿದ್ದವು. ಅವನು ಯಾವಾಗಲೂ ಶಾಂತವಾಗಿರುತ್ತಿದ್ದ; ಜನರೊಡನೆ ಮೃದುವಾಗಿ ಮಾತನಾಡತಕ್ಕವನು; ಯಾರಾದರೂ ಅವನಿಗೆ ಚಿಕ್ಕ ಉಪಕಾರವನ್ನು ಮಾಡಿದರೂ ಅವನು ಅದರಿಂದ ಸಂತೋಷ ಪಡುತ್ತಿದ್ದ, ನೂರಾರು ಅಪಕಾರಗಳನ್ನು ಮಾಡಿದರೂ ಅವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ; ಜನರನ್ನು ಕಂಡಾಗ ಅವನೇ ಮೊದಲು ಮಾತನಾಡಿಸುತ್ತಿದ್ದ; ನಾನು ಶೂರ ಎಂಬ ಜಂಭ ಅವನಲ್ಲಿರಲಿಲ್ಲ; ಸುಳ್ಳು ಎಂಬುದು ಅವನ ಹತ್ತಿರವೂ ಸುಳಿಯುತ್ತಿರಲಿಲ್ಲ; ಶಾಸ್ತ್ರಗಳಲ್ಲಿ ನಿಷ್ಣಾತ; ದೊಡ್ಡವರೆಂದರೆ ಅವನಿಗೆ ಗೌರವ; ಪ್ರಜೆಗಳಿಗೆ ಅವನೆಂದರೆ ಪ್ರೀತಿ, ಅವನಿಗೆ ಪ್ರಜೆಗಳೆಂದರೆ ಪ್ರೀತಿ; ದೀನರಲ್ಲಿ ಅವನಿಗೆ ಅಪಾರ ದಯೆ; ಅವನು ಸದಾ ಆರೋಗ್ಯವಂತ; ಮಾತಿನಲ್ಲಿ ಚತುರನೂ ಹೌದು; ವಿದ್ಯೆಯನ್ನು ಚೆನ್ನಾಗಿ ಸಂಪಾದಿಸಿದ್ದ; ಅವನ ಸ್ಮರಣಶಕ್ತಿಯೂ ಅದ್ಭುತವಾಗಿತ್ತು; ತನ್ನ ಸುಖವನ್ನಾಗಲೀ ದುಃಖವನ್ನಾಗಲೀ ಹೊರಗೆ ತೋರಿಸಿಕೊಳ್ಳುತ್ತಿರಲಿಲ್ಲ; ವಿನಯಶಾಲಿ; ಸಜ್ಜನರಿಗೆ ಆಶ್ರಯದಾತ; ರಾಜವ್ಯವಹಾರದ ಚರ್ಚೆಗಳನ್ನು ಗುಟ್ಟಾಗಿ ಕಾಪಾಡುತ್ತಿದ್ದ; ಸಂಪತ್ತನ್ನು ಯಾವಾಗ ಗಳಿಸಬೇಕು ಮತ್ತು ಯಾವಾಗ ದಾನ ಮಾಡಬೇಕು ಎಂದು ಅರಿತಿದ್ದವನು; ಅವನಿಗೆ ಕಲೆಗಳಲ್ಲಿ ಆಸಕ್ತಿಯೂ ಪ್ರಾವೀಣ್ಯವೂ ಇದ್ದಿತು; ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಅವನಿಗೆ ಆಲಸ್ಯ ಎಂಬುದೇ ಇರಲಿಲ್ಲ; ಪುರುಷಾರ್ಥಗಳಿಗೆ ವಿರೋಧ ಬರದಂತೆ ಅವನು ಸುಖವನ್ನು ಅನುಭವಿಸುತ್ತಿದ್ದ; ಅವನು ಯಾರನ್ನೂ ಅವಮಾನಪಡಿಸುತ್ತಿರಲಿಲ್ಲ; ಅಹಂಕಾರಿಯಲ್ಲ – ಇಂಥ ಇನ್ನೂ ಹಲವು ಗುಣಗಳನ್ನು ಮೈಗೂಡಿಸಿಕೊಂಡಿದ್ದವನು ರಾಮ.

ಅವನು ತನ್ನ ಬಂಧು–ಮಿತ್ರರೊಂದಿಗೆ ಹೊಂದಿದ್ದ ನಂಟನ್ನು ತಿಳಿಸುವ ವಿಶೇಷಣಗಳನ್ನೂ ವಾಲ್ಮೀಕಿಗಳು ರಾಮನಿಗೆ ಯಥೇಷ್ಟವಾಗಿ ಬಳಸಿದ್ದಾರೆ. ಶ್ರೀರಾಮನು ಕೌಸಲ್ಯಾನಂದವರ್ಧನ; ಎಂದರೆ ತಾಯಿಯಾದ ಕೌಸಲ್ಯೆಯ ಆನಂದವನ್ನು ಹೆಚ್ಚುಮಾಡುವವನು. ಅವನು 'ಸೀತಾಪತಿ'; ದಶರಥನ ಮಗ; ಲಕ್ಷ್ಮಣ, ಭರತ, ಶತ್ರುಘ್ನರ ಅಣ್ಣ; ಗುಹನ ಮಿತ್ರ; ಸುಗ್ರೀವನ ರಕ್ಷಕ; ಹನುಮಂತನ ಸ್ವಾಮಿ; ವಿಶ್ವಾಮಿತ್ರರ ಶಿಷ್ಯ; ವಿಭೀಷಣನ ಆಶ್ರಯದಾತ; ಶಬರಿಯ ಮೋಕ್ಷಕಾರಕ; ಅಹಲ್ಯೆಯ ಪಾಪನಿವಾರಕ – ಹೀಗೆ ಅವನ ಸಂಪರ್ಕಕ್ಕೆ ಬಂದವರೆಲ್ಲರಿಗೂ ತನ್ನ ವ್ಯಕ್ತಿತ್ವದ ಬೆಳಕನ್ನು ಕಾಣಿಸಿದ ಪುರುಷೋತ್ತಮ ಶ್ರೀರಾಮ. ಈ ಎಲ್ಲ ಗುಣಗಳಿಗೂ ಮೂಲ ಯಾವುದು ಎಂಬುದನ್ನು ವಾಲ್ಮೀಕಿಗಳೇ ಸೂಚಿಸುತ್ತಾರೆ: 'ಶ್ರೀರಾಮ ಎಂದರೆ ಧರ್ಮದ ಮೂರ್ತರೂಪ.'

ಹೀಗಾಗಿ 'ರಾಮ' ಎಂದರೆ ಧರ್ಮ. ರಾಮನಿದ್ದ ಕಡೆ ಧರ್ಮ ಗಟ್ಟಿಯಾಗಿ ನೆಲೆಯೂರಿದೆ ಎಂದೇ ಹೌದು. ಎಲ್ಲಿ ಧರ್ಮ ನಾಲ್ಕು ಕಾಲಿನಿಂದ ನಿಂತಿರುತ್ತದೆಯೋ ಅದೇ ದಿಟವಾದ ರಾಷ್ಟ್ರ ಎಂಬುದನ್ನು ರಾಮಾಯಣವು ಶ್ರೀರಾಮನ ವ್ಯಕ್ತಿತ್ವದ ಮೂಲಕ ಸಾರಿ ಹೇಳುತ್ತಿದೆ.

ಗುಜರಾತ್‌ನಲ್ಲಿ 'ಎಕ್ಸ್‌.ಇ' ತಳಿ ಪತ್ತೆ

ಅಹಮದಾಬಾದ್ (ಪಿಟಿಐ): ಮುಂಬೈ ಮೂಲದ 67 ವರ್ಷದ ವ್ಯಕ್ತಿಗೆ ಕೊರೊನಾ ವೈರಸ್‌ನ ಹೊಸ ರೂಪಾಂತರಿ ತಳಿ 'ಎಕ್ಸ್‌.ಇ' (ಓಮೈಕ್ರಾನ್‌ನ ಉಪತಳಿ) ಸೋಂಕು ಇರುವುದು ಗುಜರಾತ್‌ನಲ್ಲಿ ದೃಢಪಟ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಸೋಂಕಿತ ವ್ಯಕ್ತಿ ಮುಂಬೈನಿಂದ ಕೆಲಸ ನಿಮಿತ್ತ ವಡೋದರಕ್ಕೆ ಬಂದಿದ್ದರು. ಮಾರ್ಚ್ 12ರಂದು ಅವರಿಗೆ ಕೋವಿಡ್ ದೃಢಪಟ್ಟಿತ್ತು. ಅವರು ಸ್ಥಳೀಯ ಆಡಳಿತಕ್ಕೆ ಯಾವುದೇ ಮಾಹಿತಿ ನೀಡದೆ ಮರುದಿನವೇ ಮುಂಬೈಗೆ ತೆರಳಿದ್ದರು' ಎಂದು ಅವರು ಮಾಹಿತಿ ನೀಡಿದ್ದಾರೆ.

'ಅವರ ಮಾದರಿಯ ಜೀನೋಮ್ ಸೀಕ್ವೆನ್ಸಿಂಗ್ ಫಲಿತಾಂಶದ ವರದಿ ಶುಕ್ರವಾರ ದೊರೆತಿದೆ. ಅವರಲ್ಲಿ ಈ ಎಕ್ಸ್‌.ಇ ತಳಿ ಪತ್ತೆಯಾಗಿರುವುದನ್ನು ಈ ವರದಿ ದೃಢಪಡಿಸಿದೆ' ಎಂದು ವಡೋದರಾ ಮುನ್ಸಿಪಲ್ ಕಾರ್ಪೊರೇಶನ್‌ನ ಆರೋಗ್ಯ ವೈದ್ಯಕೀಯ ಅಧಿಕಾರಿ ದೇವೇಶ್ ಪಟೇಲ್ ಮಾಹಿತಿ ನೀಡಿದ್ದಾರೆ.

'ಪ್ರಸ್ತುತ ಆ ವ್ಯಕ್ತಿಯು ಮುಂಬೈನಲ್ಲಿದ್ದು, ಅವರ ಆರೋಗ್ಯ ಸ್ಥಿರವಾಗಿದೆ' ಎಂದು ಅವರು ತಿಳಿಸಿದ್ದಾರೆ.


1,150 ಹೊಸ ಪ್ರಕರಣ, 83 ಜನರು ಸಾವು: (ನವದೆಹಲಿ ವರದಿ): ದೇಶದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ 1,150 ಹೊಸ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಈ ಅವಧಿಯಲ್ಲಿ 83 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ.

ದೇಶದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 4,30,34,217ಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 11,365ರಷ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ಸೋಂಕಿನಿಂದ ಒಟ್ಟಾರೆ 5,21,656 ಜನರು ಇದುವರೆಗೆ ಮೃತಪಟ್ಟಿದ್ದಾರೆ. ಒಟ್ಟು ಸೋಂಕು ಪ್ರಕರಣಗಳ ಪೈಕಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 0.03ರಷ್ಟಿದ್ದು, ದೈನಂದಿನ ಪಾಸಿಟಿವಿಟಿ ದರ ಶೇ 0.25 ರಷ್ಟಿದೆ.

ಕೊರೊನಾದಿಂದ ಇನ್ನೂ ಮುಕ್ತವಾಗಿಲ್ಲ: ವಿಶ್ವಸಂಸ್ಥೆ

ವಿಶ್ವಸಂಸ್ಥೆ(ಪಿಟಿಐ): ಪ್ರತಿ ನಾಲ್ಕು ತಿಂಗಳಿಗೊಮ್ಮೆ ಕೊರೊನಾ ವೈರಸ್‌ನ ಹೊಸ ಪ್ರಭೇದಗಳು ಹುಟ್ಟಿಕೊಳ್ಳುತ್ತಿವೆ. ಇದರಿಂದಾಗಿ ನಾವು ಸಾಂಕ್ರಾಮಿಕ ಕೊರೊನಾ ವೈರಸ್‌ನಿಂದ ಇನ್ನೂ ಮುಕ್ತವಾಗಿಲ್ಲ ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಹೇಳಿದರು.

ಏಷ್ಯಾದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಪ್ರತಿ ನಿತ್ಯ 15 ಲಕ್ಷ ಮಂದಿ ಹೊಸದಾಗಿ ಸೋಂಕಿಗೆ ತುತ್ತಾಗುತ್ತಿದ್ದಾರೆ. ಏಷ್ಯಾದಲ್ಲಿ ಬಹುವೇಗವಾಗಿ ಸೋಂಕು ವ್ಯಾಪಿಸುತ್ತಿದೆ. ಯುರೋಪ್‌ನಾದ್ಯಂತ ವೈರಸ್‌ನ ಹೊಸ ಅಲೆ ಹೆಚ್ಚಾಗಿದೆ ಎಂದು ತಿಳಿಸಿದರು.



ಆಂಟೊನಿಯೊ ಗುಟೆರಸ್

ಶ್ರೀಮಂತ ದೇಶಗಳು ಈಗಾಗಲೇ ತನ್ನ ನಾಗರಿಕರಿಗೆ 2ನೇ ಬೂಸ್ಟರ್ ಡೋಸ್ ನೀಡಲು ಸಿದ್ಧತೆ ನಡೆಸುತ್ತಿವೆ. ಆದರೆ, ವಿಶ್ವದ ಪ್ರತಿ ಮೂವರಲ್ಲಿ ಒಬ್ಬರು ಇನ್ನೂ ಲಸಿಕೆ ಪಡೆದಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಪ್ರತಿಯೊಂದು ದೇಶವು ತನ್ನ ನಾಗರಿಕರಿಗೆ ಶೇ 70ರಷ್ಟು ಲಸಿಕೆ ನೀಡಬೇಕು ಎಂಬ ಗುರಿಯಿಂದ ನಾವು ಇನ್ನೂ ದೂರ ಉಳಿದಿದ್ದೇವೆ ಎಂದರು.

ಕೋವ್ಯಾಕ್ಸಿನ್ ಬೂಸ್ಟರ್ ಡೋಸ್ ಪರಿಣಾಮಕಾರಿ

ನವದೆಹಲಿ (ಪಿಟಿಐ): ಎರಡು ಡೋಸ್ ಕೋವಿಡ್ ಲಸಿಕೆ ಪಡೆದ ಆರು ತಿಂಗಳ ಬಳಿಕ ಪಡೆಯುವ ಕೋವ್ಯಾಕ್ಸಿನ್ ಬೂಸ್ಟರ್ ಡೋಸ್ ಓಮೈಕ್ರಾನ್ ಸೇರಿದಂತೆ ಸಾರ್ಸ್ ಕೋವ್–2ನ ರೂಪಾಂತರಗಳ ವಿರುದ್ಧ ಹೆಚ್ಚಿನ ಪ್ರತಿಕಾಯಗಳನ್ನು ಸೃಷ್ಟಿಸಿ ಪರಿಣಾಮಕಾರಿಯೆನಿಸುತ್ತದೆ. ಅಲ್ಲದೆ ತೀವ್ರ ಕಾಯಿಲೆಯಿಂದಲೂ ರಕ್ಷಣೆ ಒದಗಿಸುತ್ತದೆ ಎಂಬುದು ಐಸಿಎಂಆರ್ ಮತ್ತು ಭಾರತ್ ಬಯೋಟೆಕ್ ಅಧ್ಯಯನ ತಿಳಿಸುತ್ತದೆ ಎಂದು ರಾಷ್ಟ್ರೀಯ ವೈರಾಲಜಿ ಸಂಸ್ಥೆ ತಿಳಿಸಿದೆ.

ಚೀನಾ: ಕೋವಿಡ್‌ನಿಂದ ಹಿರಿಯ ನಾಗರಿಕರ ಸರಣಿ ಸಾವು

ಬೀಜಿಂಗ್(ಎಪಿ): ಕೊರೊನಾ ಸೋಂಕು ಹೆಚ್ಚಳದಿಂದಾಗಿ ಶಾಂಘೈ ನಗರದ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರ ಸರಣಿ ಸಾವುಗಳು ಸಂಭವಿಸುತ್ತಿವೆ ಎಂದು ವರದಿಯಾಗಿದೆ.

ಶಾಂಘೈನಲ್ಲಿರುವ ಡೊಂಘೈ ಹಿರಿಯ ನಾಗರಿಕರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಮ್ಮ ಸಂಬಂಧಿಕರು ಸಿಬ್ಬಂದಿ ಕೊರತೆಯಿಂದ ಸೂಕ್ತ ಚಿಕಿತ್ಸೆಯಿಲ್ಲದೆ ಸಾವಿಗೀಡಾಗಿದ್ದಾರೆ ಎಂದು ಮೃತರ ಸಂಬಂಧಿಕರು ಆರೋಪಿಸಿದ್ದಾರೆ.

ಆಸ್ಪತ್ರೆಯಲ್ಲಿ ತಮ್ಮ ಪ್ರೀತಿ ಪಾತ್ರರ ಆರೋಗ್ಯ ನೋಡಿಕೊಳ್ಳುತ್ತಿದ್ದ ಸಿಬ್ಬಂದಿ ಕೋವಿಡ್ ಸೋಂಕಿಗೆ ತುತ್ತಾದರು. ಇದರಿಂದಾಗಿ ಸಿಬ್ಬಂದಿ ಸರ್ಕಾರದ ಕಠಿಣ ಕೋವಿಡ್ ನಿಯಂತ್ರಣ ಕ್ರಮಗಳನ್ನು ಪಾಲಿಸಲು ಕ್ವಾರಂಟೈನ್ ಆದರು. ಸಿಬ್ಬಂದಿಯ ಕೊರತೆ ಹಾಗೂ ಸೂಕ್ತ ಚಿಕಿತ್ಸೆ ಇಲ್ಲದೆ ತಮ್ಮ ಪ್ರೀತಿಪಾತ್ರರು ಸಾವಿಗೀಡಾಗಿದ್ದಾರೆ ಎಂದು ಸಂಬಂಧಿಕರು ದೂರಿದ್ದಾರೆ. ಸೋಂಕಿಗೆ ತುತ್ತಾದ ಬಹುತೇಕ ಸಿಬ್ಬಂದಿಯಲ್ಲಿ ಸೌಮ್ಯ ಸೋಂಕಿನ ಲಕ್ಷಣ ಇದ್ದಾಗ್ಯೂ, ಅವರನ್ನು ಕ್ವಾರಂಟೈನ್ ಮಾಡಲಾಗಿತ್ತು ಎಂದೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚೀನಾಕ್ಕೆ ಹೋಗಬೇಡಿ: ಅಮೆರಿಕ ಎಚ್ಚರಿಕೆ

ಬೀಜಿಂಗ್(ಎಎಫ್‌ಪಿ): ಶಾಂಘೈನಲ್ಲಿ ಸೋಂಕು ನಿಯಂತ್ರಣಕ್ಕೆ ಹಂತ ಹಂತವಾಗಿ ಹೇರಿದ ಲಾಕ್‌ಡೌನ್‌ನಿಂದಾಗಿ ಆಹಾರದ ಹಾಹಾಕಾರ ಎದುರಾದ ಬೆನ್ನಲ್ಲೇ, ತನ್ನ ನಾಗರಿಕರಿಗೆ ಚೀನಾ ಪ್ರವಾಸಕ್ಕೆ ಹೋಗದಂತೆ ಅಮೆರಿಕ ಸರ್ಕಾರ ಎಚ್ಚರಿಕೆ ನೀಡಿದೆ

ಕ್ಯುಎಸ್ ವರ್ಲ್ಡ್ ಯೂನಿವರ್ಸಿಟಿಯ ಶ್ರೇಯಾಂಕಪಟ್ಟಿಯಲ್ಲಿ ವಿಶ್ವದಲ್ಲಿ 346ನೇ ಸ್ಥಾನ

ಎಂಜಿನಿಯರಿಂಗ್: ವಿಐಟಿಗೆ ದೇಶದಲ್ಲಿ 9ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯುಎಸ್ (ಕ್ವಾಕ್ವೆರೆಲ್ಲಿ ಸೈಮಂಡ್ಸ್) ವರ್ಲ್ಡ್ ಯೂನಿವರ್ಸಿಟಿಯು 2022ರ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಷಯದಲ್ಲಿ ನೀಡುವ ಶ್ರೇಯಾಂಕ ಪಟ್ಟಿಯಲ್ಲಿ ತಮಿಳುನಾಡಿನ ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು (ವಿಐಟಿ) ವಿಶ್ವದಲ್ಲಿ 346ನೇ ಹಾಗೂ ಭಾರತದಲ್ಲಿ 9ನೇ ಸ್ಥಾನ ಪಡೆದುಕೊಂಡಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ವಿಐಟಿಯು 2022ರ ಕ್ಯುಎಸ್ ವರ್ಲ್ಡ್ ಯೂನಿವರ್ಸಿಟಿಯ ಶ್ರೇಯಾಂಕದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ.



ಕ್ಯುಎಸ್ ಪ್ರತಿವರ್ಷ ಕಲೆ ಮತ್ತು ಮಾನವಿಕ, ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ಜೀವವಿಜ್ಞಾನ ಮತ್ತು ಔಷಧ, ನೈಸರ್ಗಿಕ ವಿಜ್ಞಾನ, ಸಾಮಾಜಿಕ ವಿಜ್ಞಾನ ಹಾಗೂ ನಿರ್ವಹಣೆ ಈ ಐದು ಕ್ಷೇತ್ರಗಳಲ್ಲಿ ವಿಶ್ವವಿದ್ಯಾಲಯಗಳ ಶ್ರೇಯಾಂಕವನ್ನು ಪ್ರಕಟಿಸುತ್ತದೆ.

ಈ ವರ್ಷ ಕ್ಯುಎಸ್ ಏಳು ವಿಷಯಗಳನ್ನು ಪ್ರಕಟಿಸಿದ್ದು, ಹೆಚ್ಚುವರಿಯಾಗಿ ಪ್ರಕಟಿಸಲಾದ ಕಂಪ್ಯೂಟರ್ ಸೈನ್ಸ್ ಮತ್ತು ಇನ್‌ಫಾರ್ಮೇಷನ್ ಸಿಸ್ಟಮ್ಸ್ ಹಾಗೂ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಷಯಗಳಲ್ಲಿ ವಿಐಟಿಯು ದೇಶದಲ್ಲಿ 8ನೇ ಸ್ಥಾನವನ್ನು ಪಡೆದಿದೆ.

ಕ್ಯುಎಸ್ ವರ್ಲ್ಡ್ ಯುನಿವರ್ಸಿಟಿಯು ನೀಡುವ ಶ್ರೇಯಾಂಕವು ನಿರ್ದಿಷ್ಟ ವಿಷಯಗಳಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ವಿಶ್ವವಿದ್ಯಾಲಯಗಳನ್ನು ಗುರುತಿಸಲು ಸಹಾಯವಾಗುತ್ತದೆ.

ಕೇಂದ್ರ ಸರ್ಕಾರದ ಎನ್‌ಐಆರ್‌ಎಫ್ ರ‍್ಯಾಂಕಿಂಗ್‌ನಲ್ಲಿ ವಿಐಟಿ 12ನೇ ಅತ್ಯುತ್ತಮ ಸಂಶೋಧನಾ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.


ಮಸೀದಿ ಮುಂದೆ ರಾಮನವಮಿ

ಮೈಸೂರು: 'ರಾಷ್ಟ್ರೀಯ ಹಿಂದೂ ಸಮಿತಿ ಹಾಗೂ ಸುಜೀವ್ ಸಂಸ್ಥೆಯು ಏಪ್ರಿಲ್ 10ರಂದು ಸಂಜೆ 4.30ಕ್ಕೆ ಇಲ್ಲಿನ ಮೀನಾ ಬಜಾರ್‌ನ ಆಜ್ಞಂ ಮಸೀದಿ ಮುಂಭಾಗ ರಾಮನವಮಿ ಆಚರಿಸಲಿದೆ' ಎಂದು ಸಮಿತಿಯ ಅಧ್ಯಕ್ಷ ವಿಕಾಸ್ ಶಾಸ್ತ್ರಿ ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿ ದರು.

'ಸಮಾನತೆಯ ಸಂದೇಶ ಸಾರಲು ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಧರ್ಮದವರು ಒಟ್ಟಾಗಿ ರಾಮನವಮಿ ಆಚರಿಸಲಿದ್ದಾರೆ. ರಾಮದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮಜ್ಜಿಗೆ, ಪಾನಕ ಹಾಗೂ ಮುಸ್ಲಿಮರ ಇಫ್ತಾರ್ ಕೂಟಕ್ಕಾಗಿ ಹಣ್ಣು, ಸಮೋಸ, ಡ್ರೈಫ್ರೂಟ್ಸ್‌ಗಳನ್ನು ವಿತರಿಸಲಾಗುವುದು' ಎಂದು ಹೇಳಿದರು.

'ಎರಡೂ ಧರ್ಮದವರ ಮಧ್ಯೆ ಸದ್ಯದ ಪರಿಸ್ಥಿತಿಯಲ್ಲಿ ಉಂಟಾಗಿರುವ ಬಿರುಕನ್ನು ಮುಚ್ಚಲು ಹಾಗೂ ದೇಶದ ಹಿತಕ್ಕಾಗಿ ಎಲ್ಲರೂ ಒಗ್ಗೂಡಿ ಮುಂದೆ ನಡೆಯಲು ಭಾವೈಕ್ಯದ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದರು.

'ಕೋಟೆ ಆಂಜನೇಯಸ್ವಾಮಿ ದೇಗುಲದ ಸಮೀಪವಿರುವ ರಾಮ ಮಂದಿರ ಶಿಥಿಲಾವಸ್ಥೆ ತಲುಪಿದೆ. ಇಲ್ಲಿನ ರಾಮದೇವರ ಮೂಲ ವಿಗ್ರಹವನ್ನು ಚೀಲದಲ್ಲಿ ಮುಚ್ಚಿಡಲಾಗಿದೆ. ಉತ್ಸವಮೂರ್ತಿಗಷ್ಟೇ ಪೂಜೆ ಮಾಡಲಾಗುತ್ತಿದೆ. ಈ ದೇಗುಲದ ದುರಸ್ತಿಗೆ ಮುಸ್ಲಿಮರೂ ಕೈಜೋಡಿಸುತ್ತೇವೆ ಎಂದು ಹೇಳಿದ್ದಾರೆ' ಎಂದು ತಿಳಿಸಿದರು.



₹ 3.82 ಲಕ್ಷ ಕೋಟಿ ಮೌಲ್ಯದ ಕೃಷಿ ಉತ್ಪನ್ನಗಳ ರಫ್ತು

ನವದೆಹಲಿ (ಪಿಟಿಐ): ಕೃಷಿ ಉತ್ಪನ್ನಗಳ ರಫ್ತು ಮೌಲ್ಯವು 2021–22ನೇ ಹಣಕಾಸು ವರ್ಷದಲ್ಲಿ ₹ 3.82 ಲಕ್ಷ ಕೋಟಿಗಳಷ್ಟಾಗಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 20ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಶನಿವಾರ ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕದಿಂದ ಸಾಗಣೆ ವ್ಯವಸ್ಥೆಯು ಬಹಳಷ್ಟು ಸವಾಲುಗಳನ್ನು ಎದುರಿಸಿದ ಹೊರತಾಗಿಯೂ ರಫ್ತು ವಹಿವಾಟಿನಲ್ಲಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಹೇಳಿದೆ.

ಒಟ್ಟಾರೆ ರಫ್ತಿನಲ್ಲಿ ಅತಿ ಹೆಚ್ಚು ಪಾಲು ಹೊಂದಿರುವ ಅಕ್ಕಿ ರಫ್ತು ಮೌಲ್ಯವು ₹ 73,340 ಕೋಟಿಗಳಷ್ಟು ಆಗಿದೆ. 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 9.35ರಷ್ಟು ಹೆಚ್ಚಳ ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಗೋಧಿ ರಫ್ತು ₹ 16,720 ಕೋಟಿಗಳಿಗೆ ಏರಿಕೆ ಆಗಿದೆ. ಕುರಿ/ಮೇಕೆ ಮಾಂಸದ ರಫ್ತು ಶೇ 34ರಷ್ಟು ಹೆಚ್ಚಾಗಿದೆ. ಡೈರಿ ಉತ್ಪನ್ನಗಳ ರಫ್ತು ಸಹ ಹೆಚ್ಚಾಗಿದೆ ಎಂದು ಹೇಳಿದೆ.

ಬಾಂಗ್ಲಾದೇಶ, ಯುಎಇ, ವಿಯೆಟ್ನಾಂ, ಅಮೆರಿಕ, ನೇಪಾಳ, ಮಲೇಷ್ಯಾ, ಸೌದಿ ಅರೇಬಿಯಾ, ಇಂಡೋನೇಷ್ಯಾ, ಇರಾನ್ ಮತ್ತು ಈಜಿಪ್ಟ್ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162.50
ಗುಡ್ ಲಾಟ್	₹158.50

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

9-4-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1600)
ಒಂದು ವಾರದ ಡೆಲಿವರಿ	1605 (1595)
ಸೋಯಾ ಕಚ್ಚಾ	1465 (1445)
ಪಾಮ್ ವಾರದ ಡೆಲಿವರಿ	1463 (1453)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1600)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,000 (51,750)
ಬೆಳ್ಳಿ ಕೆ.ಜಿ 66,950 (66,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರ್ಚ್‌ನಲ್ಲಿ ಆರ್‌ಬಿಐ ನಡೆಸಿದ್ದ ಸಮೀಕ್ಷೆಯಲ್ಲಿ ಅಭಿಪ್ರಾಯ

ಎರಡಂಕಿ ಮಟ್ಟಕ್ಕೆ ಹಣದುಬ್ಬರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಣದುಬ್ಬರದ ಮೇಲೆ ಕಚ್ಚಾ ತೈಲ ದರ ಏರಿಕೆ ಪರಿಣಾಮ
- ಹೆಚ್ಚುತ್ತಿದೆ ಆಹಾರ ವಸ್ತುಗಳ ಬೆಲೆ



ಬೆಂಗಳೂರು: ಪ್ರಸಕ್ತ ಹಣಕಾಸು ವರ್ಷದಲ್ಲಿ (2022–23) ಚಿಲ್ಲರೆ ಹಣದುಬ್ಬರವು ಶೇ 6ಕ್ಕಿಂತ ಕಡಿಮೆ ಇರಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಹಣಕಾಸು ನೀತಿ ಸಭೆಯಲ್ಲಿ ಅಂದಾಜು ಮಾಡಿದೆ. ಆದರೆ, ಮುಂದಿನ ಮೂರು ತಿಂಗಳಿನಿಂದ ಒಂದು ವರ್ಷದವರೆಗೆ ಚಿಲ್ಲರೆ ಹಣದುಬ್ಬರವು ಎರಡಂಕಿ ಮಟ್ಟದಲ್ಲಿ ಇರಲಿದೆ ಎನ್ನುವ ಅಭಿಪ್ರಾಯವು ಕಳೆದ ತಿಂಗಳು ಆರ್‌ಬಿಐ ನಡೆಸಿರುವ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.

ಬೆಂಗಳೂರನ್ನೂ ಒಳಗೊಂಡು ಪ್ರಮುಖ 19 ನಗರಗಳಲ್ಲಿ ಮಾರ್ಚ್ 2ರಿಂದ 11ರವರೆಗೆ 6,033 ಕುಟುಂಬಗಳ ಅಭಿಪ್ರಾಯವನ್ನು ಸಂಗ್ರಹಿಸಿ ವರದಿ ಸಿದ್ಧಪಡಿಸಲಾಗಿದೆ.

ಈ ವೇಳೆ ಹಣದುಬ್ಬರವು ಎರಡಂಕಿ ಮಟ್ಟದಲ್ಲಿ ಏರಿಕೆಯ ಆಗುವ ಬಗ್ಗೆ ಜನರು ಆತಂಕ ವ್ಯಕ್ತಪಡಿಸಿದ್ದಾರೆ.

ಸದ್ಯ ಚಿಲ್ಲರೆ ಹಣದುಬ್ಬರ ದರವು ಶೇ 9.7ರಷ್ಟು ಇರಲಿದೆ. ಆದರೆ ಮುಂದಿನ ಮೂರು ತಿಂಗಳಿನಲ್ಲಿ ಶೇ 10.7 ಮತ್ತು ಒಂದು ವರ್ಷದ ಅವಧಿಗೆ ಹಣದುಬ್ಬರ ದರವು ಶೇ 10.8ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ.

ಹಿಂದಿನ ಸಮೀಕ್ಷೆಗೆ ಹೋಲಿಸಿದರೆ, ಮೂರು ತಿಂಗಳು ಮತ್ತು ಒಂದು ವರ್ಷದ ಅವಧಿಗೆ ಹಣದುಬ್ಬರದ ನಿರೀಕ್ಷೆಗಳಲ್ಲಿ ಅನಿಶ್ಚಿತತೆಯು ಹೆಚ್ಚಾಗಿದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ಜನವರಿಯಲ್ಲಿ ನಡೆಸಿದ್ದ ಸಮೀಕ್ಷೆಯಲ್ಲಿ ಮೂರು ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಶೇ 10.6ರಷ್ಟು ಮತ್ತು ಒಂದು ವರ್ಷದಲ್ಲಿ ಶೇ 10.7ರಷ್ಟು ಇರುವ ನಿರೀಕ್ಷೆ ಮಾಡಲಾಗಿತ್ತು.

2022–23ನೇ ಹಣಕಾಸು ವರ್ಷಕ್ಕೆ ಚಿಲ್ಲರೆ ಹಣದುಬ್ಬರವು ಶೇ 5.7ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಆದರೆ, ಕಚ್ಚಾ ತೈಲ ದರವು ಬ್ಯಾರಲ್‌ಗೆ 100 ಡಾಲರ್‌ಗಳ ಮಟ್ಟದಲ್ಲಿಯೇ ಮುಂದುವರಿದಲ್ಲಿ ಮಾತ್ರವೇ ಈ ಅಂದಾಜು ಸಮಂಜಸ ಆಗಿರಲಿದೆ ಎಂದೂ ಹೇಳಿದೆ.

ಮೂರು ತಿಂಗಳ ನಿರೀಕ್ಷೆಯು ಆಹಾರ ಮತ್ತು ಆಹಾರೇತರ ಉತ್ಪನ್ನಗಳಿಗೆ ಸಂಬಂಧಿಸಿದ್ದಾಗಿದೆ. ಒಂದು ವರ್ಷದ ನಿರೀಕ್ಷೆಯು ಆಹಾರೇತರ ಉತ್ಪನ್ನಗಳು ಮತ್ತು ಸೇವೆಗಳಿಗೆ ಸಂಬಂಧಿಸಿದ್ದಾಗಿದೆ.

ಚಿಲ್ಲರೆ ಹಣದುಬ್ಬರವನ್ನು ಶೇ 4ರಲ್ಲಿ (ಶೇ 2ರಷ್ಟು ಹೆಚ್ಚು ಅಥವಾ ಕಡಿಮೆ) ಮಿತಿಗೊಳಿಸುವಂತೆ ಕೇಂದ್ರ ಸರ್ಕಾರವು ಆರ್‌ಬಿಐಗೆ ಸೂಚನೆ ನೀಡಿದೆ. ಆದರೆ, ಈ ವರ್ಷದ ಜನವರಿ ಮತ್ತು ಫೆಬ್ರುವರಿಯ ಚಿಲ್ಲರೆ ಹಣದುಬ್ಬರವು ಶೇ 6ರ ಮಟ್ಟವನ್ನೂ ಮೀರಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಜನವರಿಯಲ್ಲಿ ಶೇ 60.1 ಮತ್ತು ಫೆಬ್ರುವರಿಯಲ್ಲಿ ಶೇಕಡ 6.07ಕ್ಕೆ ಏರಿಕೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೊಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	520

ತಿಪಟೂರು ಕೊಬ್ಬರಿ

ಕನಿಷ್ಠ	16800
ಗರಿಷ್ಠ	17217
ಮಾದರಿ	17000
ಒಟ್ಟು ಆವಕ(ಕ್ವಿಂಟಲ್)	1248.58

ರಾಮನಗರ ರೇಷ್ಮೆಗೂಡು

ಮಿಶ್ರ ತಳಿ	208-698
ದ್ವಿತಳಿ	270-896

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15900	15950	231.65 ಸೆಂಟ್ಸ್
ಎಸಿ	8400	8000	8500	
ಆರ್‌ಪಿ	9300	9000	9200	ಲಂಡನ್
ಆರ್‌ಸಿ	4255	4000	4175	2091ಡಾಲರ್ಸ್

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1590)
ಸೋಯಾ (ರಿಫೈನ್ಡ್)	₹1520 (1495)
ಸೂರ್ಯಕಾಂತಿ (ರಿಫೈನ್ಡ್)	₹1680 (1680)
ಪಾಮೋಲಿನ್	₹1465 (1455)

ಹೂಡಿಕೆದಾರರ ಸಂಪತ್ತು ₹ 6.22 ಲಕ್ಷ ಕೋಟಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಷೇರುಪೇಟೆಯ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದೆ. ಹೀಗಿದ್ದರೂ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 6.22 ಲಕ್ಷ ಕೋಟಿಗಳಷ್ಟು ವೃದ್ಧಿಯಾಗಿದೆ.

ಈ ಏರಿಕೆಯಿಂದಾಗಿ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳ ಒಟ್ಟಾರೆ ಬಂಡವಾಳ ಮೌಲ್ಯವು ₹ 274.10 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 170 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 114 ಅಂಶಗಳಷ್ಟು ಇಳಿಕೆ ಆಗಿದೆ.


ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ, ಹಣದುಬ್ಬರ ಹಾಗೂ ಅಮೆರಿಕದ ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಹೆಚ್ಚಳದಂತಹ ಬೆಳವಣಿಗೆಗಳು ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿವೆ.

ಹಣದುಬ್ಬರ ಮತ್ತು ಕಚ್ಚಾ ತೈಲ ದರ ಏರಿಕೆ ನಿಯಂತ್ರಿಸಲು ಅತ್ಯಂತ ತ್ವರಿತಗತಿಯಲ್ಲಿ ಬಡ್ಡಿದರ ಏರಿಕೆ ಮಾಡುವುದಾಗಿ ಫೆಡರಲ್ ರಿಸರ್ವ್ ಸೂಚನೆ ನೀಡಿದೆ. ಹೀಗಾದಲ್ಲಿ, ಭಾರತದ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಒಳಹರಿವು ಇನ್ನಷ್ಟು ಕಡಿಮೆ ಆಗಲಿದೆ. 2021–22ನೇ ಹಣಕಾಸು ವರ್ಷದಲ್ಲಿ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ದಾಖಲೆಯ ₹ 1.4 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಇಷ್ಟು ದೊಡ್ಡ ಮೊತ್ತವನ್ನು ಒಂದೇ ವರ್ಷದಲ್ಲಿ ಹಿಂದಕ್ಕೆ ಪಡೆದಿರುವುದು ಇದೇ ಮೊದಲು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ದೇಶದ ಬಂಡವಾಳ ಮಾರುಕಟ್ಟೆಯಿಂದ ಬಂಡವಾಳ ಹಿಂತೆಗೆತಕ್ಕೆ ಹೆಚ್ಚಿನ ಗಮನ ನೀಡಿದ್ದಾರೆ. ವಾರದ ವಹಿವಾಟಿನಲ್ಲಿ ₹ 7,290 ಕೋಟಿಗೂ ಹೆಚ್ಚಿನ ಮೊತ್ತವನ್ನು ಹಿಂದಕ್ಕೆ ಪಡೆದಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆ ವಿವರ (₹ ಕೋಟಿಗಳಲ್ಲಿ)



ಸುದ್ದಿ 2 ನಿಮಿಷ

₹ 2,925 ಕೋಟಿ ಮೊತ್ತದ ಸಾಲ ಮರುಪಾವತಿ: ರುಚಿ ಸೋಯಾ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಿಗೆ ₹ 2,925 ಕೋಟಿ ಸಾಲವನ್ನು ಮರುಪಾವತಿ ಮಾಡುವ ಮೂಲಕ ಸಾಲ ಮುಕ್ತ ಕಂಪನಿ ಆಗಿರುವುದಾಗಿ ರುಚಿ ಸೋಯಾ ತಿಳಿಸಿದೆ.

ರುಚಿ ಸೋಯಾ ಕಂಪನಿಯು ಈಚೆಗಷ್ಟೇ ಹೆಚ್ಚುವರಿ ಷೇರು ವಿತರಿಸುವ (ಎಫ್‌ಪಿಒ) ಮೂಲಕ ₹ 4,300 ಕೋಟಿ ಬಂಡವಾಳ ಸಂಗ್ರಹಿಸಿತ್ತು.

ಕಂಪನಿಯು ಸಾಲಮುಕ್ತವಾಗಿರುವ ಕುರಿತು ಪತಂಜಲಿ ಆಯುರ್ವೇದ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರು ಟ್ವೀಟ್ ಮಾಡಿದ್ದಾರೆ.

ಎಫ್‌ಪಿಒ ಮೂಲಕ ಸಂಗ್ರಹ ಆಗುವ ಮೊತ್ತದಲ್ಲಿ ಸಾಲ ಮರುಪಾವತಿಗೆ ₹ 1,950 ಕೋಟಿ ಮೊತ್ತವನ್ನು ಬಳಸುವುದಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ)ಸಲ್ಲಿಸಿದ್ದ ಕರಡು ದಾಖಲೆ ಪತ್ರದಲ್ಲಿ ಕಂಪನಿಯು ತಿಳಿಸಿತ್ತು. ಆದರೆ, ಸಾಲದ ಪೂರ್ತಿ ಮೊತ್ತವನ್ನು ಮರುಪಾವತಿ ಮಾಡಲು ಬಳಿಕ ನಿರ್ಧರಿಸಿದೆ.

ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟಕ್ಕೆ ಸಾಲ ಮರುಪಾವತಿ ಮಾಡಲಾಗಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಿಂಡಿಕೇಟ್ ಬ್ಯಾಂಕ್ ಮತ್ತು ಅಲಹಾಬಾದ್ ಬ್ಯಾಂಕ್‌ಗಳು ಈ ಒಕ್ಕೂಟದಲ್ಲಿ ಇವೆ.

ದಿವಾಳಿ ಪ್ರಕ್ರಿಯೆಗೆ ಒಳಗಾಗಿದ್ದ ರುಚಿ ಸೋಯಾ ಕಂಪನಿಯನ್ನು ಪತಂಜಲಿ ಆಯುರ್ವೇದ ಸಂಸ್ಥೆಯು 2019ರಲ್ಲಿ ₹ 4,350 ಕೋಟಿಗೆ ಸ್ವಾಧೀನಪಡಿಸಿಕೊಂಡಿದೆ.



ವಿದೇಶಿ ವಿನಿಮಯ ಸಂಗ್ರಹ: ₹ 84,892 ಕೋಟಿಗಳಷ್ಟು ಇಳಿಕೆ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ವಾರಾಂತ್ಯದಲ್ಲಿ ₹ 84,892 ಕೋಟಿಗಳಷ್ಟು ಕಡಿಮೆ ಆಗಿದೆ. ಈವರೆಗೆ ವಾರವೊಂದರಲ್ಲೇ ಆಗಿರುವ ಅತ್ಯಂತ ಹೆಚ್ಚಿನ ಇಳಿಕೆ ಇದಾಗಿದೆ. ಹೀಗಾಗಿ ಒಟ್ಟಾರೆ ಮೀಸಲು ಸಂಗ್ರಹವು ₹ 46.09 ಲಕ್ಷ ಕೋಟಿಗಳಿಗೆ ತಲುಪಿದೆ.

ಮಾರ್ಚ್ 25ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 46.94 ಲಕ್ಷ ಕೋಟಿಗಳಷ್ಟು ಇತ್ತು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಮೀಸಲು ಸಂಗ್ರಹದಲ್ಲಿ ಅತಿ ಹೆಚ್ಚಿನ ಪಾಲು ಹೊಂದಿರುವ ವಿದೇಶಿ ಕರೆನ್ಸಿಗಳ ಸಂಗ್ರಹದಲ್ಲಿ ₹ 81,472 ಕೋಟಿಗಳಷ್ಟು ಭಾರಿ ಇಳಿಕೆ ಆಗಿರುವುದೇ ಒಟ್ಟಾರೆ ಮೀಸಲು ಸಂಗ್ರದಲ್ಲಿನ ಕುಸಿತಕ್ಕೆ ಕಾರಣ.

ಚಿನ್ನದ ಮೀಸಲು ಸಂಗ್ರಹವು ₹ 3,853 ಕೋಟಿಗಳಷ್ಟು ಕಡಿಮೆ ಆಗಿ ₹ 3.24 ಲಕ್ಷ ಕೋಟಿಗಳಿಗೆ ತಲುಪಿದೆ.

ಸಂಕ್ಷಿಪ್ತ ಸುದ್ದಿ

ಪಿನಾಕಾ ರಾಕೆಟ್ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ಪಿನಾಕಾ ರಾಕೆಟ್ ವ್ಯವಸ್ಥೆಯ ಹೊಸ ಸುಧಾರಿತ ಮಾದರಿಯ ಪರೀಕ್ಷಾರ್ಥ ಪ್ರಯೋಗವನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಭಾರತೀಯ ಸೇನೆ ಜಂಟಿಯಾಗಿ ಶನಿವಾರ ನಡೆಸಿತು.

ಪೋಖ್ರಾನ್ ಸೇನಾ ನೆಲೆಯಲ್ಲಿ 15 ದಿನದಿಂದ ಈ ಪ್ರಯೋಗ ಕೈಗೊಳ್ಳಲಾಗಿತ್ತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಸಿಎಂ ಕಚೇರಿ ಟ್ವಿಟರ್ ಖಾತೆ ಹ್ಯಾಕ್

ಲಖನೌ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಕಚೇರಿಯ ಅಧಿಕೃತ ಟ್ವಿಟರ್ ಹ್ಯಾಂಡಲ್ ಅನ್ನು ಶುಕ್ರವಾರ ತಡರಾತ್ರಿ ಹ್ಯಾಕ್ ಮಾಡಲಾಗಿತ್ತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ರಾತ್ರಿ 29 ನಿಮಿಷಗಳ ಕಾಲ ಖಾತೆಯನ್ನು ಹ್ಯಾಕ್ ಮಾಡಿ, 400-500 ಟ್ವೀಟ್‌ಗಳನ್ನು ಪೋಸ್ಟ್ ಮಾಡಿದ್ದರು’ಎಂದು ಅಧಿಕಾರಿ ಶನಿವಾರ ತಿಳಿಸಿದರು.



ಅನುಜ್ ರಾವತ್ ಅರ್ಧಶತಕ; ವಿರಾಟ್ ಕೊಹ್ಲಿ ಚೆಂದದ ಬ್ಯಾಟಿಂಗ್

ಬೆಂಗಳೂರಿಗೆ ಜಯದ 'ಹ್ಯಾಟ್ರಿಕ್'

ಪುಣೆ: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಅನುಜ್ ರಾವತ್ ಮತ್ತು ವಿರಾಟ್ ಕೊಹ್ಲಿಯ ಸುಂದರ ಬ್ಯಾಟಿಂಗ್ ಕಳೆಗಟ್ಟಿತು.

ಇದರಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗೆಲುವಿನ ಹ್ಯಾಟ್ರಿಕ್ ಸಾಧಿಸಿತು. ಮುಂಬೈ ಇಂಡಿಯನ್ಸ್ ತಂಡವು ಸತತ ನಾಲ್ಕನೇ ಸೋಲಿನ ಕಹಿಯುಂಡಿತು.

ಆರ್‌ಸಿಬಿ ಏಳು ವಿಕೆಟ್‌ನಿಂದ ಗೆದ್ದಿತು.

ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕ ಫಫ್ ಡುಪ್ಲೆಸಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬೆಂಗಳೂರು ತಂಡದ ಸ್ಪಿನ್ನರ್ ವಣಿಂದು ಹಸರಂಗಾ ಮತ್ತು ಮಧ್ಯಮವೇಗಿ ಹರ್ಷಲ್ ಪಟೇಲ್ ಅವರ ದಾಳಿಗೆ ಅಲ್ಪಮೊತ್ತಕ್ಕೆ ಕುಸಿಯಬೇಕಿದ್ದ ಮುಂಬೈ ಇಂಡಿಯನ್ಸ್ ತಂಡವು ಗೌರವಾರ್ಹ ಮೊತ್ತ ಪೇರಿಸಲು ಸೂರ್ಯ (ಔಟಾಗದೆ 68; 37ಎ) ಕಾರಣರಾದರು. ಅದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 151 ರನ್ ಗಳಿಸಿತು. ಇದಕ್ಕುತ್ತರವಾಗಿ ಬೆಂಗಳೂರು ತಂಡವು 18.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 152 ರನ್ ಗಳಿಸಿತು. ಆರ್‌ಸಿಬಿಯು ಆಡಿದ ನಾಲ್ಕನೇ ಪಂದ್ಯ ಇದಾಗಿತ್ತು.

ಗುರಿ ಬೆನ್ನಟ್ಟಿದ ಬೆಂಗಳೂರು ತಂಡಕ್ಕೆ ಫಫ್ ಡುಪ್ಲೆಸಿ ಮತ್ತು ಅನುಜ್ ರಾವತ್ ಜೋಡಿಯು ಉತ್ತಮ ಆರಂಭ ನೀಡಿತು. ಎಂಟು ಓವರ್‌ಗಳಲ್ಲಿ 50 ರನ್‌ಗಳನ್ನು ಸೇರಿಸಿದರು. ಜಯದೇವ್ ಉನದ್ಕತ್ ಬೌಲಿಂಗ್‌ನಲ್ಲಿ ಫಫ್ ಔಟಾದ ನಂತರ ಅನುಜ್ ಮತ್ತು ವಿರಾಟ್ ಜೊತೆಗೂಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು. 17ನೇ ಓವರ್‌ನಲ್ಲಿ ಫೀಲ್ಡರ್ ರಮಣದೀಪ್ ಸಿಂಗ್ ನಿಖರ ಥ್ರೋಗೆ ರನ್‌ಔಟ್ ಆಗುವ ಮುನ್ನ ಅನುಜ್ ಆರು ಸಿಕ್ಸರ್, ಎರಡು ಬೌಂಡರಿಗಳಿದ್ದ 66 ರನ್‌ಗಳನ್ನು ಗಳಿಸಿದರು.

ಬಹುದಿನಗಳ ನಂತರ ತಮ್ಮನೈಜ ಶೈಲಿಯ ಬ್ಯಾಟಿಂಗ್ ಸೌಂದರ್ಯ ಉಣಬಡಿಸಿದ ವಿರಾಟ್, ಅರ್ಧಶತಕದ ಅಂಚಿನಲ್ಲಿ ಎಡವಿದರು. 19ನೇ ಓವರ್‌ನಲ್ಲಿ ಬ್ರೆವಿಸ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆದರೆ 36 ಎಸೆತಗಳಲ್ಲಿ ಅವರು ಗಳಿಸಿದ 48 ರನ್‌ಗಳು ತಂಡವನ್ನು ಗೆಲುವಿನ ಗಡಿಗೆ ತಂದು ನಿಲ್ಲಿಸಿದ್ದವು. ಅದರಲ್ಲಿ ಐದು ಬೌಂಡರಿಗಳಿದ್ದವು.

ಕ್ರೀಸ್‌ನಲ್ಲಿದ್ದ ದಿನೇಶ್ ಕಾರ್ತಿಕ್ ಮತ್ತು ಈ ಟೂರ್ನಿಯಲ್ಲಿ ಮೊದಲ ಬಾರಿಗೆ ಕಣಕ್ಕಿಳಿದ ಗ್ಲೆನ್ ಮ್ಯಾಕ್ಸ್‌ವೆಲ್ ತಂಡವನ್ನು ಗೆಲುವಿನ ಗಡಿ ಮುಟ್ಟಿಸಿದರು. ಗ್ಲೆನ್ ತಾವೆದುರಿಸಿದ ಎರಡೂ ಎಸೆತಗಳಲ್ಲಿ ಸತತ ಬೌಂಡರಿ ಸಿಡಿಸಿದರು.

ಹೊಳೆದ ಸೂರ್ಯ: ಮುಂಬೈ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ, ಸೂರ್ಯಕುಮಾರ್ ಯಾದವ್ ತಂಡದ ಗೌರವ ಉಳಿಸಿದರು. ಏಕಾಂಗಿ ಹೋರಾಟ ನಡೆಸಿದ ಅವರು. 32 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ಒಟ್ಟು ಐದು ಬೌಂಡರಿಗಳು ಮತ್ತು ಅರ್ಧ ಡಜನ್ ಸಿಕ್ಸರ್‌ಗಳನ್ನು ಅವರು ಸಿಡಿಸಿದರು. 183.78ರ ಸ್ಟ್ರೈಕ್‌ರೇಟ್‌ನಲ್ಲಿ ಔಟಾಗದೆ 68 ರನ್‌ಗಳನ್ನು ಸೂರೆ ಮಾಡಿದರು. ಜಯದೇವ್ ಉನದ್ಕತ್ (ಔಟಾಗದೆ 13) ಎಚ್ಚರಿಕೆಯಿಂದ ಆಡಿ ಸೂರ್ಯಕುಮಾರ್‌ಗೆ ಉತ್ತಮ ಜೊತೆ ಕೊಟ್ಟರು. ಆದರೆ ಉಳಿದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಅದರಲ್ಲೂ ತಿಲಕ್ ವರ್ಮಾ ಮತ್ತು ಪೊಲಾರ್ಡ್ ಖಾತೆಯನ್ನೇ ತೆರೆಯಲಿಲ್ಲ. ರಮಣದೀಪ್ ಮತ್ತು ಬ್ರೆವಿಸ್ ಕೂಡ ಎರಡಂಕಿ ಮುಟ್ಟಲಿಲ್ಲ.



ಅನುಜ್ ರಾವತ್ ಬ್ಯಾಟಿಂಗ್– ಪಿಟಿಐ ಚಿತ್ರ

ಅದರಿಂದಾಗಿ ಆರಂಭಿಕ ಜೋಡಿ ರೋಹಿತ್ ಮತ್ತು ಇಶಾನ್ ಕಿಶನ್ ಮೊದಲ ವಿಕೆಟ್‌ಗೆ 50 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರೂ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಆಗಲಿಲ್ಲ.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 6ಕ್ಕೆ 151 (20 ಓವರ್)

ಇಶಾನ್ ಸಿ ಸಿರಾಜ್ ಬಿ ಆಕಾಶ್ 26 (28 ಎ, 4x3), ರೋಹಿತ್ ಸಿ ಮತ್ತು ಬಿ ಹರ್ಷಲ್ 26 (15 ಎ, 4x4, 6x1), ಡಿವಾಲ್ಡ್ ಎಲ್‌ಬಿಡಬ್ಲ್ಯು ಬಿ ಹಸರಂಗ 8 (11 ಎ, 4x1), ಸೂರ್ಯಕುಮಾರ್ ಔಟಾಗದೆ 68 (37 ಎ, 4x5, 6x6), ತಿಲಕ್ ರನ್ ಔಟ್ (ಮ್ಯಾಕ್ಸ್‌ವೆಲ್) 0 (3 ಎ), ಕೀರನ್ ಬಿ ಎಲ್‌ಬಿಡಬ್ಲ್ಯು ಹಸರಂಗ 0 (1 ಎ), ರಮಣ್‌ದೀಪ್ ಸಿ ದಿನೇಶ್ ಬಿ ಹರ್ಷಲ್ 6 (12 ಎ), ಜಯದೇವ್ ಔಟಾಗದೆ 13 (14 ಎ, 4x1)

ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 1) 4

ವಿಕೆಟ್ ಪತನ: 1-50 (ರೋಹಿತ್ ಶರ್ಮಾ, 6.2), 2-60 (ಡಿವಾಲ್ಡ್ ಬ್ರೆವಿಸ್, 8.3), 3-62 (ಇಶಾನ್ ಕಿಶನ್, 9.2), 4-62 (ತಿಲಕ್ ವರ್ಮಾ, 9.5), 5-62 (ಕೀರನ್ ಪೊಲಾರ್ಡ್, 10.1), 6-79 (ರಮಣ್ ದೀಪ್ ಸಿಂಗ್, 13.2)

ಬೌಲಿಂಗ್: ಡೇವಿಡ್ ವಿಲ್ಲಿ 2-0-8-0, ಮೊಹಮ್ಮದ್ ಸಿರಾಜ್ 4-0-51-0, ವನಿಂದು ಹಸರಂಗ ಡಿ ಸಿಲ್ವಾ 4-0-28-2, ಆಕಾಶ್ ದೀಪ್ 4-1-20-1, ಹರ್ಷಲ್ ಪಟೇಲ್ 4-0-23-2, ಶಹಬಾಜ್ ಅಹಮ್ಮದ್ 2-0-19-0

ರಾಯಲ್ ಚಾಲೆಂಜರ್ಸ್ ಬೆಂಗಳೂರು 3ಕ್ಕೆ 152 (18.3 ಓವರ್)

ಡುಪ್ಲೆಸಿ ಸಿ ಸೂರ್ಯಕುಮಾರ್ ಬಿ ಜಯದೇವ್ 16 (24 ಎ, 4x1), ಅನುಜ್ ರನ್‌ಔಟ್ (ರಮಣದೀಪ್ ಸಿಂಗ್) 66 (47 ಎ, 4x2, 6x6), ವಿರಾಟ್ ಎಲ್‌ಬಿಡಬ್ಲ್ಯು ಬಿ ಬ್ರೆವಿಸ್ 48 (36 ಎ, 4x5), ದಿನೇಶ್ ಔಟಾಗದೆ 7 (2 ಎ, 6x1), ಮ್ಯಾಕ್ಸ್‌ವೆಲ್ ಔಟಾಗದೆ 8 (2 ಎ, 4x2)

ಇತರೆ (ಲೆಗ್‌ಬೈ 4, ವೈಡ್ 3) 7

ವಿಕೆಟ್ ಪತನ: 1-50 (ಫಫ್ ಡು ಪ್ಲೆಸಿ, 8.1), 2-130 (ಅನುಜ್ ರಾವತ್, 16.5), 3-144 (ವಿರಾಟ್ ಕೊಹ್ಲಿ, 18.1)

ಬೌಲಿಂಗ್: ಬಾಸಿಲ್ ಥಂಪಿ 4-1-29-0, ಜಯದೇವ ಉನದ್ಕತ್ 4-0-30-1, ಜಸ್‌ಪ್ರೀತ್ ಬೂಮ್ರಾ 4-0-31-0, ಮುರುಗನ್ ಅಶ್ವಿನ್ 3-0-26-0, ಕೀರನ್ ಪೊಲಾರ್ಡ್ 3-0-24-0, ಡಿವಾಲ್ಡ್ ಬ್ರೆವಿಸ್ 0.3-0-8-1

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಏಳು ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಕೋಲ್ಕತ್ತ	4	3	1	0	0	6
ಗುಜರಾತ್	3	3	0	0	0	6
ಬೆಂಗಳೂರು	4	3	1	0	0	6
ಲಖನೌ	4	3	1	0	0	6
ರಾಜಸ್ಥಾನ	3	2	1	0	0	4
ಪಂಜಾಬ್	4	2	2	0	0	4
ಡೆಲ್ಲಿ	3	1	2	0	0	2
ಹೈದರಾಬಾದ್	3	1	2	0	0	2
ಮುಂಬೈ	4	0	4	0	0	0
ಚೆನ್ನೈ	4	0	4	0	0	0

*ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆತ್ಮವಿಶ್ವಾಸದಲ್ಲಿ ರಾಹುಲ್ ಬಳಗ

ರಾಯಲ್ಸ್‌ಗೆ ಜಯದ ತವಕ

ಮುಂಬೈ: ಸತತ ಮೂರು ಪಂದ್ಯಗಳಲ್ಲಿ ಜಯಗಳಿಸಿರುವ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ಬಳಗವು ಸವಾಲೊಡ್ಡಲು ಸಿದ್ಧವಾಗಿದೆ. ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ.

ಮೊದಲ ಐಪಿಎಲ್ ಆಡುತ್ತಿರುವ ಲಖನೌ ತಂಡದ ಪಯಣ ಇಲ್ಲಿಯವರೆಗೂ ಉತ್ತಮವಾಗಿದೆ. ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಜಯಿಸಿ, ಒಂದರಲ್ಲಿ ಸೋತಿದೆ. ರಾಜಸ್ಥಾನ ತಂಡವು ಮೊದಲೆರಡು ಪಂದ್ಯಗಳಲ್ಲಿ ಅಮೋಘ ಜಯ ದಾಖಲಿಸಿತ್ತು. ಆದರೆ ಮೂರನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಮುಗ್ಗರಿಸಿತು. ಇದೀಗ ಮತ್ತೆ ಗೆಲುವಿನ ಹಾದಿಗೆ ಮರಳುವ ಛಲದಲ್ಲಿದೆ.



ಲಖನೌ ತಂಡದ ಕೆ.ಎಲ್. ರಾಹುಲ್

ರಾಜಸ್ಥಾನ ರಾಯಲ್ಸ್ ತಂಡದ ಸಂಜು ಸ್ಯಾಮ್ಸನ್

ನಾಯಕರ ಬಲಾಬಲ

ಆಟಗಾರ	ತಂಡ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಸ್ಟ್ರೈಕ್‌ರೇಟ್
ಕೆ.ಎಲ್. ರಾಹುಲ್	ಲಖನೌ	98	3405	132	2	28	136.09
ಸಂಜು ಸ್ಯಾಮ್ಸನ್	ರಾಜಸ್ಥಾನ	124	3161	119	3	16	134.97

ಪಂದ್ಯ ಆರಂಭ: ಮಧ್ಯಾಹ್ನ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಶ್ರೇಯಸ್–ಪಂತ್ ಮುಖಾಮುಖಿ



ರಿಷಭ್ ಪಂತ್ ಮತ್ತು ಖಲೀಲ್ ಅಹಮದ್

ಮುಂಬೈ: ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಭಾನುವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರಿಸಲಿದೆ. ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ತಂಡವು ನಾಲ್ಕು ಪಂದ್ಯಗಳನ್ನಾಡಿ, ಮೂರರಲ್ಲಿ ಜಯಿಸಿದೆ. ಆಲ್‌ರೌಂಡರ್ ಆ್ಯಂಡ್ರೆ ರಸೆಲ್, ವೆಂಕಟೇಶ್ ಅಯ್ಯರ್, ಸುನೀಲ್ ನಾರಾಯಣ ಈ ತಂಡದ ಪ್ರಮುಖ ಶಕ್ತಿಯಾಗಿದ್ದಾರೆ. ರಿಷಭ್ ಪಂತ್ ನಾಯಕತ್ವದ ಡೆಲ್ಲಿ ತಂಡವು ಮೂರು ಪಂದ್ಯಗಳನ್ನಾಡಿ ಎರಡರಲ್ಲಿ ಸೋತು ಒಂದು ಗೆದ್ದಿದೆ. ತಂಡದ ಬ್ಯಾಟರ್ ಪೃಥ್ವಿ ಶಾ, ರಿಷಭ್, ಸರ್ಫರಾಜ್ ಖಾನ್ ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಕುಲದೀಪ್ ಯಾದವ್ ಮತ್ತು ಮುಸ್ತಫಿಜುರ್ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೌಲಿಂಗ್ ಮಾಡಿದರೆ ತಂಡದ ಜಯದ ಹಾದಿ ನಿಚ್ಚಳವಾಗುವುದು.



ಶ್ರೇಯಸ್ ಅಯ್ಯರ್

ನಾಯಕರ ಬಲಾಬಲ

ಆಟಗಾರ	ತಂಡ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಸ್ಟ್ರೈಕ್‌ರೇಟ್
ಶ್ರೇಯಸ್ ಅಯ್ಯರ್	ಕೋಲ್ಕತ್ತ	91	2444	96	0	16	124.31
ರಿಷಭ್ ಪಂತ್	ಡೆಲ್ಲಿ	87	2581	128	1	15	146.56

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ತಂಡಗಳ ಬಲಾಬಲ

ಪಂದ್ಯ	ಫಲಿತಾಂಶ ಇಲ್ಲ	ತಂಡ	ಜಯ	ಗರಿಷ್ಠ ಮೊತ್ತ	ಕನಿಷ್ಠ ಮೊತ್ತ
29	1	ಡೆಲ್ಲಿ	12	228	98
		ಕೋಲ್ಕತ್ತ	16	210	97

'ಚಾಹಲ್ ಪ್ರಕರಣ: ತಪ್ಪಿತಸ್ಥನಿಗೆ ಶಿಕ್ಷೆಯಾಗಲಿ'

ಮುಂಬೈ (ಪಿಟಿಐ): ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರನ್ನು ಒಂಬತ್ತು ವರ್ಷಗಳ ಹಿಂದೆ ಹೋಟೆಲ್ ಬಾಲ್ಕನಿಯಲ್ಲಿ ನೇತಾಡುವಂತೆ ಮಾಡಿದ್ದ ಆಟಗಾರನನ್ನು ನಿಷೇಧ ಶಿಕ್ಷೆಗೊಳಪಡಿಸಬೇಕು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಆಗ್ರಹಿಸಿದ್ದಾರೆ.

2013ರ ಐಪಿಎಲ್‌ನಲ್ಲಿ ತಾವು ಮುಂಬೈ ಇಂಡಿಯನ್ಸ್ ತಂಡದಲ್ಲಿ ಆಡುತ್ತಿದ್ದ ಸಂದರ್ಭದ ಘಟನೆಯನ್ನು ಚಾಹಲ್ ಯೂಟ್ಯೂಬ್ ವಾಹಿನಿಯಲ್ಲಿ ಹಂಚಿಕೊಂಡಿದ್ದು ಈಗ ಚರ್ಚೆಗೆ ಗ್ರಾಸವಾಗಿದೆ.

ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದ ನಂತರದ ಔತಣಕೂಟದ ಸಂದರ್ಭದಲ್ಲಿ ಕುಡಿದ ಮತ್ತಿನಲ್ಲಿದ್ದ ಮುಂಬೈ ತಂಡದ ಆಟಗಾರನೊಬ್ಬ ಚಾಹಲ್ ಅವರನ್ನು 15ನೇ ಮಹಡಿಯ ಬಾಲ್ಕನಿಯಿಂದ ನೇತಾಡುವಂತೆ ಮಾಡಿದ್ದ. ಅದರಿಂದಾಗಿ ತಾವು ಪ್ರಾಣಭಯ ಎದುರಿಸಿದ್ದಾಗಿ ಚಾಹಲ್ ಬಹಿರಂಗಪಡಿಸಿದ್ದರು. ಈ ವಿಷಯದ ಕುರಿತು ಶಾಸ್ತ್ರಿ ಪ್ರತಿಕ್ರಿಯಿಸಿದ್ದಾರೆ.

'ಇದು ತಮಾಷೆಯ ಪ್ರಸಂಗವಲ್ಲ. ನಕ್ಕು ಮರೆಯುವಂತಿಲ್ಲ. ಆ ವ್ಯಕ್ತಿ ಯಾರೆಂದು ನನಗೆ ಗೊತ್ತಿಲ್ಲ. ಆದರೆ ಆತನ ಬುದ್ಧಿ ಸ್ಥಿಮಿತದಲ್ಲಿರಲಿಲ್ಲ ಎನ್ನುವುದು ಖಚಿತ. ಒಬ್ಬರ ಪ್ರಾಣಕ್ಕೆ ಕುತ್ತು ತಂದಿದ್ದು ಹೌದು. ಇದು ನಿಜಕ್ಕೂ ಗಂಭೀರವಾದ ವಿಷಯ' ಎಂದು ಶಾಸ್ತ್ರಿ ಇಎಸ್‌ಪಿಎನ್ ಕ್ರಿಕ್‌ಇನ್ಫೋ ವೆಬ್‌ಸೈಟ್‌ನಲ್ಲಿ ಹೇಳಿದ್ದಾರೆ.

'ಇಂತಹ ಘಟನೆಯ ಕುರಿತು ನನ್ನ ಜೀವನದಲ್ಲಿ ಮೊದಲ ಬಾರಿ ಕೇಳಿದ್ದೇನೆ. ಈಗ ಇಂತಹ ಘಟನೆ ನಡೆದಿದ್ದರೆ ತಪ್ಪಿತಸ್ಥನಿಗೆ ಜೀವಮಾನ ನಿಷೇಧ ಶಿಕ್ಷೆ ವಿಧಿಸಲಾಗುತ್ತಿತ್ತು. ಈ ಘಟನೆಯನ್ನೂ ತನಿಖೆಗೆ ಒಳಪಡಿಸಬೇಕು. ತಪ್ಪಿತಸ್ಥ ಆಟಗಾರನನ್ನು ನಿಷೇಧಿಸಬೇಕು. ಆತನ ಮಾನಸಿಕ ಸ್ಥಿತಿ ಸುಧಾರಣೆಗೆ ಪುನಶ್ಚೇತನ ಶಿಬಿರಕ್ಕೆ ಕಳುಹಿಸಬೇಕು' ಎಂದು ಶಾಸ್ತ್ರಿ ಹೇಳಿದ್ದಾರೆ.

'ಚಾಹಲ್ ಪ್ರಕರಣವು ಎಲ್ಲರಿಗೂ ಪಾಠವಾಗಬೇಕು. ಇಂತಹ ಘಟನೆಗಳು ನಡೆದಾಗ ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಬೇಕು. ಆಟಗಾರರು ತಮ್ಮನ್ನು ಬುಕ್ಕಿಗಳು ಸಂಪರ್ಕಿಸಿದಾಗ ಭ್ರಷ್ಟಾಚಾರ ತಡೆ ಘಟಕಕ್ಕೆ ತಿಳಿಸುವ ಮಾದರಿಯಲ್ಲಿಯೇ ಇಂತಹ ಪ್ರಕರಣಗಳಲ್ಲಿ ಕೂಡ ಜಾಗರೂಕತೆ ವಹಿಸಬೇಕು' ಎಂದರು.

ಈ ವರ್ಷ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಚಾಹಲ್ ಆಡುತ್ತಿದ್ದಾರೆ. ಅವರು ತಂಡದ ಯುಟ್ಯೂಬ್‌ನಲ್ಲಿ ಪ್ರಸಾರವಾದ ಕಾರ್ಯಕ್ರಮದಲ್ಲಿ ಸಹ ಆಟಗಾರರಾದ ಆರ್. ಅಶ್ವಿನ್ ಮತ್ತು ಕರುಣ್ ನಾಯರ್ ಅವರೊಂದಿಗೆ ಈ ವಿಷಯ ಹಂಚಿಕೊಂಡಿದ್ದರು.

ಹೈದರಾಬಾದ್‌ಗೆ ಮೊದಲ ಜಯದ ಸಂಭ್ರಮ

ನವಿ ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ನರ ವಿರುದ್ಧ ಆಲ್‌ರೌಂಡ್ ಆಟ ಪ್ರದರ್ಶಿಸಿದ ಸನ್‌ರೈಸರ್ಸ್ ಹೈದರಾಬಾದ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 15ನೇ ಆವೃತ್ತಿಯಲ್ಲಿ ಮೊದಲ ಜಯ ದಾಖಲಿಸಿತು.

ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಪಂದ್ಯದಲ್ಲಿ 155 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ 14 ಎಸೆತಗಳು ಬಾಕಿ ಇರುವಾಗಲೇ ಎರಡು ವಿಕೆಟ್ ಕಳೆದುಕೊಂಡು ದಡ ಸೇರಿತು. ಮೊದಲ ಜಯದ ಕನಸು ಹೊತ್ತು ಕಣಕ್ಕೆ ಇಳಿದ ಚೆನ್ನೈ ಸೂಪರ್ ಕಿಂಗ್ಸ್ ಮತ್ತೆ ನಿರಾಸೆಗೆ ಒಳಗಾಯಿತು.



ಅಭಿಷೇಕ್

ಸಾಧಾರಣ ಗುರಿ ಬೆನ್ನತ್ತಿದ ಹೈದರಾಬಾದ್ ಪರ ಅಭಿಷೇಕ್ ಶರ್ಮಾ ಮತ್ತು ನಾಯಕ ಕೇನ್ ವಿಲಿಯಮ್ಸನ್ ಮೊದಲ ವಿಕೆಟ್‌ಗೆ 73 ಎಸೆತಗಳಲ್ಲಿ 89 ರನ್ ಗಳಿಸಿದರು. ವಿಲಿಯಮ್ಸನ್ ಔಟಾದ ನಂತರವೂ ಅಭಿಷೇಕ್ ಭರ್ಜರಿ ಆಟ ಮುಂದುವರಿಸಿದರು. ಗೆಲುವಿಗೆ 10 ರನ್ ಬೇಕಾಗಿದ್ದಾಗ ಅಭಿಷೇಕ್ ವಾಪಸಾದರು. ಆದರೆ 15 ಎಸೆತಗಳಲ್ಲಿ 39 ರನ್ ಸಿಡಿಸಿದ ರಾಹುಲ್ ತ್ರಿಪಾಠಿ ಸುಲಭ ಜಯ ತಂದುಕೊಟ್ಟರು.

ಖ್ಯಾತನಾಮರ ಬ್ಯಾಟಿಂಗ್ ವೈಫಲ್ಯ: ಟಾಸ್ ಗೆದ್ದ ಸನ್‌ರೈಸರ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ರವೀಂದ್ರ ಜಡೇಜ, ಆರಂಭಿಕ ಆಟಗಾರ ರಾಬಿನ್ ಉತ್ತಪ್ಪ ಮತ್ತು ವಿಕೆಟ್ ಕೀಪರ್ ಮಹೇಂದ್ರ ಸಿಂಗ್ ಧೋನಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡರು. ಮೂರನೇ ಕ್ರಮಾಂಕದ ಮೋಯಿನ್ ಅಲಿ (48) ಅವರ ದಿಟ್ಟ ಆಟದಿಂದಾಗಿ ತಂಡಕ್ಕೆ ಸ್ಪರ್ಧಾತ್ಮಕ ಮೊತ್ತ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 7ಕ್ಕೆ 154 (ಮೋಯಿನ್ ಅಲಿ 48, ಅಂಬಟಿ ರಾಯುಡು 27, ರವೀಂದ್ರ ಜಡೇಜ 23; ಭುವನೇಶ್ವರ್ ಕುಮಾರ್ 36ಕ್ಕೆ1, ಮಾರ್ಕೊ ಜಾನ್ಸೆನ್ 30ಕ್ಕೆ1, ವಾಷಿಂಗ್ಟನ್ ಸುಂದರ್ 21ಕ್ಕೆ2, ಟಿ.ನಟರಾಜನ್ 30ಕ್ಕೆ 2, ಏಡನ್ ಮರ್ಕರಮ್ 8ಕ್ಕೆ1); ಸನ್‌ರೈಸರ್ಸ್ ಹೈದರಾಬಾದ್: 17.4 ಓವರ್‌ಗಳಲ್ಲಿ 2ಕ್ಕೆ 155 (ಅಭಿಷೇಕ್ ಶರ್ಮಾ 75, ಕೇನ್ ವಿಲಿಯಮ್ಸನ್ 32, ರಾಹುಲ್ ತ್ರಿಪಾಠಿ ಔಟಾಗದೆ 39; ಮುಕೇಶ್ ಚೌಧರಿ 30ಕ್ಕೆ1, ಡ್ವೇನ್ ಬ್ರಾವೊ 29ಕ್ಕೆ1) ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 8 ವಿಕೆಟ್‌ಗಳ ಗೆಲುವು.

ಫುಟ್‌ಬಾಲ್: ಎವರ್ಟನ್‌ಗೆ ಜಯ

ಲಂಡನ್ (ಎಎಫ್‌ಪಿ): ಅಗ್ರ ನಾಲ್ಕರಲ್ಲಿ ಸ್ಥಾನ ಗಳಿಸುವ ನಾಗಾಲೋಟದಲ್ಲಿರುವ ಮ್ಯಾಂಚೆಸ್ಟರ್ ಯುನೈಟೆಡ್ ತಂಡಕ್ಕೆ ಆಘಾತ ನೀಡಿದ ಎವರ್ಟನ್ ತಂಡ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಆ್ಯಂಟನಿ ಗಾರ್ಡನ್ (27ನೇ ನಿಮಿಷ) ಗಳಿಸಿದ ಏಕೈಕ ಗೋಲಿನ ಬಲದಿಂದ ಎವರ್ಟನ್ 1-0ಯಿಂದ ಜಯ ಗಳಿಸಿತು.

ಮತ್ತೊಂದು ಪಂದ್ಯದಲ್ಲಿ ಚೆಲ್ಸಿ 6-0ಯಿಂದ ಸೌತಾಂಪ್ಟನ್ ಎದುರು ಗೆಲುವು ಸಾಧಿಸಿತು.

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	9
ಯಜುವೇಂದ್ರ	ರಾಜಸ್ಥಾನ	7
ರಾಹುಲ್ ಚಾಹರ್	ಪಂಜಾಬ್	7

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	205
ಶುಭಮನ್	ಗುಜರಾತ್	180
ಲಿವಿಂಗ್‌ಸ್ಟೋನ್	ಪಂಜಾಬ್	162

ಬ್ಯಾಸ್ಕೆಟ್‌ಬಾಲ್: ರೈಲ್ವೆ, ಪಂಜಾಬ್ ಫೈನಲ್‌ಗೆ

ಬೆಂಗಳೂರು: ಪಂಜಾಬ್ ಮತ್ತು ಭಾರತೀಯ ರೈಲ್ವೆ ತಂಡಗಳು ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಫೈನಲ್ ಪ್ರವೇಶಿಸಿದವು.

ಚೆನ್ನೈನ ನೆಹರು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಸೆಮಿಫೈನಲ್‌ನಲ್ಲಿ ಪಂಜಾಬ್ 88-75ರಲ್ಲಿ ಕರ್ನಾಟಕ ತಂಡವನ್ನು ಮಣಿಸಿತು. ಮಹಿಳೆಯರ ವಿಭಾಗದಲ್ಲಿ ರೈಲ್ವೆ 115-88ರಲ್ಲಿ ತಮಿಳುನಾಡು ವಿರುದ್ಧ ಜಯ ಗಳಿಸಿತು.

ಕರ್ನಾಟಕ ಎದುರಿನ ಪಂದ್ಯದಲ್ಲಿ ಪಂಜಾಬ್‌ನ ಕರ್ವರ್ ಸಿಂಗ್ ಮತ್ತು ಅಮೃತ್‌ಪಾಲ್ ಸಿಂಗ್ ತಲಾ 22 ಪಾಯಿಂಟ್ ಗಳಿಸಿದರು. ಅಮ್ಜ್ಯೋತ್ ಸಿಂಗ್ 16 ಮತ್ತು ಪ್ರಿನ್ಸ್‌ಪಲ್ ಸಿಂಗ್ 10 ಪಾಯಿಂಟ್ ಕಲೆ ಹಾಕಿದರು. ಕರ್ನಾಟಕದ ಪರ ಅಭಿಷೇಕ್ ಗೌಡ 22, ಹರೀಶ್ 18 ಮತ್ತು ಅನಿಲ್ ಕುಮಾರ್ 11 ಪಾಯಿಂಟ್ ಗಳಿಸಿದರು.

ರಿಷಿ ಸುನಕ್, ಕುಟುಂಬದ ನೆಮ್ಮದಿ ಮುಖ್ಯ: ಅಕ್ಷತಾ ಮೂರ್ತಿ

'ಎಲ್ಲ ಮೂಲದ ಆದಾಯಕ್ಕೂ ತೆರಿಗೆ ಪಾವತಿ'



ಅಕ್ಷತಾ ಮೂರ್ತಿ

ಲಂಡನ್ (ಪಿಟಿಐ): 'ತೆರಿಗೆ ಪಾವತಿ ಕುರಿತ ಎಲ್ಲ ಗೊಂದಲಗಳನ್ನು ಕೊನೆಗಾಣಿಸಲು, ಭಾರತದಲ್ಲಿ ಗಳಿಸಿದ ಆದಾಯವೂ ಸೇರಿದಂತೆ ತನ್ನ ಎಲ್ಲ ಆದಾಯಗಳಿಗೆ ಇಂಗ್ಲೆಂಡ್‌ನಲ್ಲಿ ತೆರಿಗೆ ಪಾವತಿಸುತ್ತೇನೆ' ಎಂದು ಉದ್ಯಮಿ ಅಕ್ಷತಾ ಮೂರ್ತಿ ಹೇಳಿದ್ದಾರೆ.

'ಬ್ರಿಟನ್‌ನ ಹಣಕಾಸು ಸಚಿವ, ಪತಿ ರಿಷಿ ಸುನಕ್ ಅವರಿಗೆ ಆಗುತ್ತಿರುವ ಚಿತ್ತಕ್ಷೋಭೆಯನ್ನು ತಪ್ಪಿಸುವುದು ಇದರ ಉದ್ದೇಶ. ತೆರಿಗೆ ಕುರಿತಂತೆ ನನ್ನ ಸ್ಥಾನಮಾನದ ಪರಿಣಾಮವು ಪತಿ ಅಥವಾ ನನ್ನ ಕುಟುಂಬದ ಮೇಲೆ ಆಗುವುದನ್ನು ನಾನು ಬಯಸುವುದಿಲ್ಲ' ಎಂದು ಹೇಳಿದ್ದಾರೆ. ಅಕ್ಷತಾ ಅವರು ಭಾರತದ ಉದ್ಯಮಿ, ಇನ್ಫೋಸಿಸ್ ಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಅವರ ಪುತ್ರಿ.

'ನನ್ನ ತೆರಿಗೆ ಪಾವತಿಯ ವ್ಯವಸ್ಥೆ ಬಗ್ಗೆ ಜನರು ಇತ್ತೀಚೆಗೆ ಪ್ರಶ್ನಿಸುತ್ತಿದ್ದಾರೆ. ಅವರಿಗೆ ಸ್ಪಷ್ಟಪಡಿಸಲು ಬಯಸುತ್ತೇನೆ. ಇಂಗ್ಲೆಂಡ್‌ನಲ್ಲಿ ಗಳಿಸಿದ ಆದಾಯಕ್ಕಾಗಿ ನಾನು ದೇಶಕ್ಕೆ ತೆರಿಗೆ ಪಾವತಿಸಿದ್ದೇನೆ. ಅಲ್ಲದೇ, ಅಂತರರಾಷ್ಟ್ರೀಯ ಆದಾಯಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ತೆರಿಗೆಯನ್ನೂ ಪಾವತಿಸಿದ್ದೇನೆ' ಎಂದು ಶುಕ್ರವಾರ ಅವರು ತಿಳಿಸಿದ್ದಾರೆ.

'ನಾನು ವಿನಾಯಿತಿ ಬಯಸುವುದಿಲ್ಲ. ಲಾಭಾಂಶ, ಬಂಡವಾಳ ಆದಾಯ ಒಳಗೊಂಡಂತೆ ಜಗತ್ತಿನ ಎಲ್ಲ ಭಾಗದಲ್ಲಿ ಗಳಿಸಿದ ಆದಾಯಕ್ಕೂ ನಾನು ಇಂಗ್ಲೆಂಡ್‌ನಲ್ಲಿ ತೆರಿಗೆ ಭರಿಸುತ್ತೇನೆ. ತಕ್ಷಣವೇ ಈ ಕ್ರಮ ಆರಂಭವಾಗಲಿದೆ' ಎಂದಿದ್ದಾರೆ.

'ನನ್ನ ತೆರಿಗೆ ವ್ಯವಸ್ಥೆ ಪೂರ್ಣ ಕಾನೂನುಬದ್ಧವಾಗಿದೆ. ಆದರೆ, ಇಂಗ್ಲೆಂಡ್‌ನಲ್ಲಿ ಎಷ್ಟು ಜನ ನಿವಾಸಿಯೇತರರಿಗೆ ತೆರಿಗೆ ಹಾಕಲಾಗಿದೆ ಎಂದು ಪ್ರಶ್ನಿಸಿರುವ ಅವರು, ನನ್ನ ಪತಿಯ ಸ್ಥಾನಮಾನದ ಕಾರಣದಿಂದಲೇ ಈ ಬೆಳವಣಿಗೆಗಳು ನಡೆದಿವೆ ಎಂಬುದು ಸ್ಪಷ್ಟವಾಗುತ್ತದೆ' ಎಂದೂ ತಿಳಿಸಿದ್ದಾರೆ.

ತೆರಿಗೆ ಪಾವತಿಯಿಂದ ದೂರ ಉಳಿಯುವ ಉದ್ದೇಶದಿಂದಲೇ ಬ್ರಿಟನ್‌ನಲ್ಲಿ ನಿವಾಸಿಯೇತರ ಸ್ಥಾನಮಾನವನ್ನು ಅಕ್ಷತಾ ಹೊಂದಿದ್ದಾರೆ ಎಂದು ಆರೋಪಿಸಿದ್ದ ವಿರೋಧಪಕ್ಷಗಳು, ಈ ಸಂಬಂಧ ಅವರ ಪತಿ ರಿಷಿ ಸುನಕ್ ವಿರುದ್ಧ ವಾಗ್ದಾಳಿ ನಡೆಸಿದ್ದವು. ಭಾರತ ಮೂಲದ ಇನ್ಫೋಸಿಸ್ ಸಂಸ್ಥೆಯಲ್ಲಿ 0.9ರಷ್ಟು ಷೇರು ಪಾಲು ಹೊಂದಿರುವ ಅಕ್ಷತಾ ಅವರು, ಇದರ ಆಧಾರದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಲಾಭಾಂಶವಾಗಿ ಪಡೆಯಲಿದ್ದಾರೆ.

ಬ್ರಿಟನ್‌ನಲ್ಲಿ 9 ವರ್ಷಗಳಿಂದ ನೆಲೆಸಿರುವ ಅಕ್ಷತಾ, ಇಂಗ್ಲೆಂಡ್ ಅನ್ನು 'ಅದ್ಭುತ ರಾಷ್ಟ್ರ' ಎಂದು ಬಣ್ಣಿಸಿದ್ದಾರೆ.

ರಿಷಿ ವಿರುದ್ಧ ಮುಂದುವರಿದ ವಾಗ್ದಾಳಿ

ಲಂಡನ್ (ಎಎಫ್‌ಪಿ): ಬ್ರಿಟನ್‌ನ ಹಣಕಾಸು ಸಚಿವ ರಿಷಿ ಸುನಕ್ ವಿರುದ್ಧ ಪ್ರತಿಪಕ್ಷಗಳು ವಾಗ್ದಾಳಿ ಮುಂದುವರಿಸಿವೆ. 'ಅವರದು ರಾಜಕೀಯ ಬೂಟಾಟಿಕೆ, ಪಾರದರ್ಶಕತೆ ಇಲ್ಲ' ಎಂಬ ಟೀಕೆಗಳು ಕೇಳಿಬಂದಿವೆ.

'ತಾವು ಅಮೆರಿಕದ ಗ್ರೀನ್ ಕಾರ್ಡ್ ಹೊಂದಿದ್ದು, ಕಳೆದ ಅಕ್ಟೋಬರ್‌ವರೆಗೂ ಅಮೆರಿಕದ ಶಾಶ್ವತ ಪೌರತ್ವವಿತ್ತು' ಎಂದು ರಿಷಿ ಸುನಕ್ ಒಪ್ಪಿಕೊಂಡ ಹಿಂದೆಯೇ ಈ ಟೀಕೆಗಳು ವ್ಯಕ್ತವಾಗಿವೆ.

ಲೇಬರ್ ಪಕ್ಷದ ನಾಯಕಿ ಲೂಯಿಸ್ ಹೇಗ್ ಅವರು, 'ಕುಟುಂಬದ ತೆರಿಗೆ ವ್ಯವಹಾರ ಕುರಿತ ಗೊಂದಲಗಳು ಹಲವು ಬಾರಿ ರಿಷಿ ಅವರನ್ನು ಸುತ್ತುವರೆದಿವೆ ಎಂದಿದ್ದಾರೆ. 'ಅಕ್ಷತಾ ಅವರ ನಿವಾಸಿಯೇತರ ಸ್ಥಾನಮಾನ, ತೆರಿಗೆ ವ್ಯಾಪ್ತಿಯಿಂದ ಸಾಗರೋತ್ತರ ಆದಾಯವನ್ನು ಹೊರಗಿಟ್ಟಿರುವುದು ಕಾನೂನು ಪ್ರಕಾರ ಸರಿ' ಎಂದಿದ್ದಾರೆ.

ಸುನಕ್ ಅವರು ಗ್ರೀನ್ ಕಾರ್ಡ್ ಹೊಂದಿದ್ದರು ಎಂಬ ಬಗ್ಗೆ ಪ್ರತಿಕ್ರಿಯಿಸಲು ಶ್ವೇತಭವನ ನಿರಾಕರಿಸಿದೆ. ಸಚಿವರಾಗುವ ಮುನ್ನ ಕಳೆದ ಅಕ್ಟೋಬರ್‌ನಲ್ಲಿ ಗ್ರೀನ್ ಕಾರ್ಡ್ ಹಿಂದಿರುಗಿಸಿದ್ದಾಗಿ ಸುನಕ್ ಹೇಳಿದ್ದರು. ಅಮೆರಿಕದ ಕಾಯ್ದೆಯ ಪ್ರಕಾರ, ಗ್ರೀನ್ ಕಾರ್ಡ್ ಹೊಂದಿರುವುದರ ಅರ್ಥ, 'ಅಮೆರಿಕದಲ್ಲಿ ವಾಸಿಸಲು ಮತ್ತು ಅಮೆರಿಕದ ತೆರಿಗೆ ಪಾವತಿಸಲು ಸಮ್ಮತಿಸಿದ್ದಾರೆ' ಎಂಬುದಾಗಿದೆ. ರಿಷಿ ಸುನಕ್ ಮತ್ತು ಅಕ್ಷತಾ ಮೂರ್ತಿ ಅವರು ಅಮೆರಿಕದಲ್ಲಿ ಅಧ್ಯಯನ ಮಾಡುವಾಗ ಪರಿಚಿತರಾಗಿ, ಆಪ್ತರಾಗಿದ್ದರು. 2009ರಲ್ಲಿ ವಿವಾಹವಾಗಿತ್ತು.

ಕೆನಡಾ: ಭಾರತೀಯ ವಿದ್ಯಾರ್ಥಿ ಹತ್ಯೆ

ಟೊರೊಂಟೊ (ಪಿಟಿಐ): ಕೆನಡಾದಲ್ಲಿ ಸುರಂಗಮಾರ್ಗದ ಪ್ರವೇಶ ದ್ವಾರದ ಬಳಿ ಅಪರಿಚಿತ ವ್ಯಕ್ತಿಯೊಬ್ಬರು 21 ವರ್ಷದ ಭಾರತೀಯ ವಿದ್ಯಾರ್ಥಿಯನ್ನು ಗುಂಡಿಟ್ಟು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಕಾರ್ತಿಕ್ ವಾಸುದೇವ್ ಮೃತ ವಿದ್ಯಾರ್ಥಿ. ಗುರುವಾರ ಸಂಜೆ ಸೇಂಟ್ ಜೇಮ್ಸ್ ಟೌನ್‌ನಲ್ಲಿರುವ ಶೆರ್ಬೋರ್ನ್ ಟಿಟಿಸಿ ನಿಲ್ದಾಣದ ಗ್ಲೆನ್ ರೋಡ್ ಪ್ರವೇಶದ್ವಾರದ ಬಳಿ ವಿದ್ಯಾರ್ಥಿ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ.

ವಿದ್ಯಾರ್ಥಿಯನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆ ಫಲಿಸದೆ ಮೃತಪಟ್ಟರು. ಈ ಬಗ್ಗೆ ತನಿಖೆ ಕೈಗೊಂಡಿದ್ದೇವೆ ಎಂದು ಟೊರೊಂಟೊ ಪೊಲೀಸರು ತಿಳಿಸಿದ್ದಾರೆ.

'ಈ ಘಟನೆಯಿಂದ ನೋವಾಗಿದೆ. ಅವರ ಕುಟುಂಬದವರಿಗೆ ಸಂತಾಪ ಸಲ್ಲಿಸುತ್ತೇನೆ' ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಹಲವು ರಾಷ್ಟ್ರಗಳಲ್ಲಿ ಸಾಲ್ಮನೆಲ್ಲಾ ಸೋಂಕು ಪ್ರಕರಣಗಳು ಪತ್ತೆ

ಕಿಂಡರ್ ಚಾಕೊಲೇಟ್ ಕಾರ್ಖಾನೆ ಬಂದ್

ಮುಖ್ಯಾಂಶಗಳು

- ಬ್ರಿಟನ್‌ನಲ್ಲಿ 63, ಫ್ರಾನ್ಸ್‌ನಲ್ಲಿ 21 ಪ್ರಕರಣ ಪತ್ತೆ
- ವಿವಿಧ ದೇಶಗಳಲ್ಲಿ ಕಿಂಡರ್ ಉತ್ಪನ್ನಗಳ ಹಿಂಪಡೆದ ಫೆರೆರೊ ಸಂಸ್ಥೆ
- ಯೂರೋಪ್‌ನ ಏಳು ರಾಷ್ಟ್ರಗಳು, ಅಮೆರಿಕ, ಬ್ರಿಟನ್‌ನಿಂದ ಕಿಂಡರ್ ಉತ್ಪನ್ನ ಹಿಂಪಡೆದಿದೆ

ಬ್ರಸೆಲ್ಸ್ (ಎಎಫ್‌ಪಿ): ಯುರೋಪ್‌ನ ಹಲವು ರಾಷ್ಟ್ರಗಳು ಮತ್ತು ಅಮೆರಿಕದಲ್ಲಿ ಸಾಲ್ಮನೆಲ್ಲಾ ಬ್ಯಾಕ್ಟಿರಿಯಾ ಸೋಂಕು ಪ್ರಕರಣಗಳು ವರದಿಯಾಗಲು ಇಟಲಿಯ ಫೆರೆರೊ ಸಂಸ್ಥೆಯ ಕಿಂಡರ್ ಚಾಕೊಲೇಟ್‌ಗಳು ಕಾರಣ ಎಂಬ ಶಂಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಸಂಸ್ಥೆಯ ಕಾರ್ಖಾನೆಗಳನ್ನು ಮುಚ್ಚಲು ಬೆಲ್ಜಿಯಂ ಸರ್ಕಾರ ಶುಕ್ರವಾರ ಆದೇಶಿಸಿದೆ.

'ಪರಿಶೀಲನೆಯ ವೇಳೆ ಕಿಂಡರ್ ಮಿಠಾಯಿ ತಯಾರಕ ಸಂಸ್ಥೆ ಫೆರೆರೊ ನೀಡಿರುವ ಮಾಹಿತಿ ಅಪೂರ್ಣ ಎಂದು ಗೊತ್ತಾಗಿದೆ. ಹೀಗಾಗಿ, ಕಾರ್ಖಾನೆಗಳನ್ನು ಮುಚ್ಚಲು ಆದೇಶಿಸಲಾಗಿದೆ' ಎಂದು ಬೆಲ್ಜಿಯಂನ ಆಹಾರ ಸುರಕ್ಷತಾ ಪ್ರಾಧಿಕಾರ ಎಎಫ್‌ಎಸ್‌ಸಿಎ ಹೇಳಿಕೆ ನೀಡಿದೆ. ಫೆರೆರೊ ಕಂಪನಿಯ ಕಿಂಡರ್ ಬ್ರ್ಯಾಂಡ್‌ನ ಎಲ್ಲ ಉತ್ಪನ್ನಗಳನ್ನು ಹಿಂದಕ್ಕೆ ಪಡೆಯಲು ಆದೇಶಿಸಿದೆ. ಈಸ್ಟರ್ ರಜಾ ಋತುವಿನಲ್ಲಿ ಈ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ಇರುತ್ತದೆ. ಆದರೆ, ಈಗಿನ ಬೆಳವಣಿಗೆಯಿಂದ ಫೆರೆರೊಗೆ ಭಾರಿ ಹೊಡೆತ ಬಿದ್ದಂತಾಗಿದೆ.

ಫ್ರಾನ್ಸ್‌ನಲ್ಲಿ ಸಾಲ್ಮನೆಲ್ಲಾ ಬ್ಯಾಕ್ಟಿರಿಯಾದ 21 ಸೋಂಕು ಪ್ರಕರಣಗಳು ವರದಿಯಾಗಿದ್ದು ಈ ಪೈಕಿ 15 ಪ್ರಕರಣಗಳಿಗೆ ಕಿಂಡರ್ ಉತ್ಪನ್ನಗಳ ಸೇವನೆಯೇ ಕಾರಣ ಎಂದು ಗೊತ್ತಾಗಿದೆ ಎಂದು ಫ್ರಾನ್ಸ್‌ನ ಸಾರ್ವಜನಿಕ ಆರೋಗ್ಯ ಸೇವಾ ಸಂಸ್ಥೆ ತಿಳಿಸಿದೆ.

ಸಾಲ್ಮನೆಲ್ಲಾ ಎಂಬುದು ಬ್ಯಾಕ್ಟೀರಿಯಾ. ಅದು ಅತಿಸಾರ, ಜ್ವರ, ಹೊಟ್ಟೆ ನೋವು ಸೇರಿದಂತೆ ಹಲವು ಬಗೆಯ ಆರೋಗ್ಯ ಸಮಸ್ಯೆಗೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಆಹಾರದ ಮೂಲಕವೇ ಈ ಸೋಂಕು ಹರಡುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಕ್ಷಮೆ ಯಾಚಿಸಿದ ಫೆರೆರೊ: ಸಾಲ್ಮನೆಲ್ಲಾ ಬ್ಯಾಕ್ಟೀರಿಯಾ ಸೋಂಕಿನ ಕಾರಣಕ್ಕಾಗಿ ಫೆರೆರೊ ಕ್ಷಮೆಯಾಚಿಸಿದೆ. ಆಂತರಿಕ ವೈಫಲ್ಯವನ್ನು ಒಪ್ಪಿಕೊಳ್ಳುತ್ತೇವೆ ಎಂದು ಫೆರೆರೊ ಹೇಳಿದೆ.

'ಮಾರುಕಟ್ಟೆಗೆ ಬಿಡುಗಡೆಯಾದ ಉತ್ಪನ್ನಗಳಲ್ಲಿ ಸಾಲ್ಮನೆಲ್ಲಾ ಇರಲಿಲ್ಲ. ಆದರೆ, ಸೋಂಕು ಪತ್ತೆಯಾದ ಬೆಲ್ಜಿಯಂನಲ್ಲಿ ಅವುಗಳನ್ನು ತಯಾರಿಸಿದ್ದ ಕಾರಣ ಚಾಕೊಲೇಟ್ ಉತ್ಪನ್ನಗಳನ್ನು ಹಿಂದಕ್ಕೆ ಪಡೆಯಲಾಗುತ್ತಿದೆ' ಎಂದು ಫೆರೆರೊ ಹೇಳಿದೆ.

ಪಾಕ್: 'ಶಾಹೀನ್-3' ಕ್ಷಿಪಣಿ ಪರೀಕ್ಷೆ ಯಶಸ್ವಿ

ಇಸ್ಲಾಮಾಬಾದ್ (ಪಿಟಿಐ): ಶತ್ರು ನೆಲೆಯನ್ನು ಗುರಿಯಾಗಿಸಿ, ಭೂಮಿಯಿಂದ ಪ್ರಯೋಗಿಸಬಹುದಾದ ಖಂಡಾಂತರ, ಮಧ್ಯಮ ವ್ಯಾಪ್ತಿಯ 'ಶಾಹೀನ್-3' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಪಾಕಿಸ್ತಾನ ಶನಿವಾರ ಯಶಸ್ವಿಯಾಗಿ ನಡೆಸಿತು.

'ಶಾಹೀನ್-3' ಕ್ಷಿಪಣಿಯನ್ನು 2,750 ಕಿ.ಮೀ ದೂರದ ನೆಲೆಯನ್ನು ಗುರಿಯಾಗಿಸಿ ಪ್ರಯೋಗಿಸಬಹುದು. ಅಂದರೆ, ಭಾರತದ ಹಲವು ನಗರಗಳು ಈ ಕ್ಷಿಪಣಿ ಪ್ರಯೋಗದ ವ್ಯಾಪ್ತಿಗೆ ಬರಲಿವೆ.

ಭಾರತದ ಅಂಡಮಾನ್ ನಿಕೋಬಾರ್ ದ್ವೀಪವನ್ನು ಗುರಿಯಾಗಿಸಿ ಪ್ರಯೋಗಿಸಬಹುದಾದ ಸಾಮರ್ಥ್ಯವನ್ನು ಶಾಹೀನ್-3 ಕ್ಷಿಪಣಿ ಹೊಂದಿದೆ ಎಂದು ಸ್ಥಳೀಯ 'ದ ಡಾನ್' ಪತ್ರಿಕೆ ವರದಿ ಮಾಡಿದೆ.

ಶಸ್ತ್ರಾಸ್ತ್ರ ವ್ಯವಸ್ಥೆಯ ವಿನ್ಯಾಸ, ತಾಂತ್ರಿಕ ಅಂಶಗಳನ್ನು ಪರಿಶೀಲಿಸುವುದು ಪರೀಕ್ಷಾರ್ಥ ಪ್ರಯೋಗದ ಉದ್ದೇಶವಾಗಿತ್ತು ಎಂದು ಸೇನೆಯ ಮಾಧ್ಯಮ ವಿಭಾಗವು ಪ್ರತಿಕ್ರಿಯಿಸಿದೆ. ಮಾರ್ಚ್ 2015ರಲ್ಲಿ ಮೊದಲ ಬಾರಿಗೆ ಪರೀಕ್ಷಾರ್ಥ ಪ್ರಯೋಗ ನಡೆದಿತ್ತು. ಪಾಕಿಸ್ತಾನವು ದೇಶೀಯವಾಗಿ ಅಭಿವೃದ್ಧಿಪಡಿಸಿರುವ, ವ್ಯಾಪ್ತಿಯನ್ನು ವಿಸ್ತರಿಸಲಾದ 'ಬಾಬುರ್ ಕ್ರೂಸ್ ಕ್ಷಿಪಣಿ 1ಬಿ' ಪರಿಷ್ಕೃತ ಮಾದರಿಯ ಪರೀಕ್ಷಾರ್ಥ ಪ್ರಯೋಗ ನಡಸಿತ್ತು.

ಆಸ್ಕರ್ ಪ್ರಶಸ್ತಿ ಸಮಾರಂಭ ವಿಲ್ ಸ್ಮಿತ್‌ಗೆ ನಿರ್ಬಂಧ

ಲಾಸ್ ಏಂಜಲೀಸ್ (ರಾಯಿಟರ್ಸ್): ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಹ ನಟನ ಕೆನ್ನೆಗೆ ಬಾರಿಸಿ ಸುದ್ದಿಯಾಗಿದ್ದ ವಿಲ್ ಸ್ಮಿತ್ ಅವರಿಗೆ ಹಾಲಿವುಡ್ ಫಿಲ್ಮ್ ಅಕಾಡೆಮಿಯು 10 ವರ್ಷಗಳ ಕಾಲ ಆಸ್ಕರ್ ಪ್ರಶಸ್ತಿ ಸಮಾರಂಭಗಳಲ್ಲಿ ಭಾಗವಹಿಸದಂತೆ ನಿರ್ಬಂಧ ವಿಧಿಸಿದೆ.

'10 ವರ್ಷಗಳ ಅವಧಿಗೆ ಆಸ್ಕರ್ ಪ್ರಶಸ್ತಿ ಸಮಾರಂಭಗಳಲ್ಲಿ ಭೌತಿಕವಾಗಿ, ವರ್ಚುವಲ್ ಆಗಿ ಭಾಗವಹಿಸಲು ಅನುಮತಿ ನೀಡದಿರಲು ಅಕಾಡೆಮಿಯ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಅಕಾಡೆಮಿ ಅಧ್ಯಕ್ಷ ಡೇವಿಡ್ ರೂಬಿನ್, ಸಿಇಒ ಡಾನ್ ಹಡ್ಸನ್ ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಸ್ಮಿತ್, 'ನಾನು ಅಕಾಡೆಮಿಯ ನಿರ್ಧಾರವನ್ನು ಸ್ವಾಗತಿಸುತ್ತೇನೆ ಎಂದಿದ್ದಾರೆ

ಹಜ್ ಯಾತ್ರೆ: 10 ಲಕ್ಷ ಯಾತ್ರಾರ್ಥಿಗಳಿಗೆ ಅವಕಾಶ

ರಿಯಾದ್ (ರಾಯಿಟರ್ಸ್): ಈ ವರ್ಷ ಅನ್ಯ ದೇಶಗಳ 10 ಲಕ್ಷ ಯಾತ್ರಾರ್ಥಿಗಳಿಗೆ ಹಜ್ ಯಾತ್ರೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ನೀಡಲು ಸೌದಿ ಅರೇಬಿಯಾ ಸರ್ಕಾರ ಮುಂದಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಮಾಧ್ಯಮವೊಂದು ವರದಿ ಮಾಡಿದೆ.

ಕೊರೊನಾ ಸೋಂಕನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎರಡು ವರ್ಷಗಳಿಂದ ಕಠಿಣ ನಿರ್ಬಂಧಗಳನ್ನು ಹೇರಲಾಗಿತ್ತು. ಕಳೆದ ವರ್ಷ ಕೇವಲ 60 ಸಾವಿರ ಮಂದಿಗೆ ಹಜ್ ಯಾತ್ರೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ, ಈ ವರ್ಷ ಸೋಂಕು ನಿಯಂತ್ರಣಕ್ಕೆ ಬಂದಿರುವ ಕಾರಣ ಹತ್ತು ಲಕ್ಷ ಮಂದಿಗೆ ಅವಕಾಶ ನೀಡಲಾಗುತ್ತಿದೆ.

ಈ ವರ್ಷ ಮೆಕ್ಕಾಗೆ ಬರಲು ಬಯಸುವವರು 65 ವರ್ಷ ಒಳಗಿನವರಾಗಿರಬೇಕು. ಕೊರೊನಾ ಲಸಿಕೆ ಪಡೆದಿರಬೇಕು ಎಂಬುದು ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ ಎಂದು ಹಜ್ ಸಚಿವಾಲಯ ತಿಳಿಸಿದೆ.




ಥಲದಂಕ 'ಮಲ್ಲ'ರು 13

ನರಜಾತಿಯೊಳಗೆಂತು ಬಂದುದೀ ವೈಷಮ್ಯ?

ಕೇರಳದ ಕೂಡಲಮಾಣಿಕ್ಯಂ ದೇವಸ್ಥಾನವು ಭರತನಾಟ್ಯ ನರ್ತಕಿ ಮಾನ್ಸಿಯಾ ಅವರಿಗೆ, ಅವರು ಮುಸ್ಲಿಂ ಅನ್ನುವ ಕಾರಣಕ್ಕೆ, ನೃತ್ಯ ಕಾರ್ಯಕ್ರಮ ನೀಡಲು ಅವಕಾಶವನ್ನೇ ನೀಡಲಿಲ್ಲ. ಮನೆ ಪಕ್ಕದ ಶಾಲೆಯಲ್ಲಿ ನಡೆಯುತ್ತಿದ್ದ ನೀನಾ ಪ್ರಸಾದ್ ಅವರ 'ಮೋಹಿನಿಯಾಟ್ಟಂ' ಸ್ಥಗಿತಗೊಳಿಸುವಂತೆ ಮುಸ್ಲಿಂ ಸಮುದಾಯಕ್ಕೆ ಸೇರಿದ ನ್ಯಾಯಾಧೀಶರೊಬ್ಬರು ಪೊಲೀಸರಿಗೆ ಸೂಚನೆ ನೀಡಿದರು. ಗಾಯಕರಾದ ಯೇಸುದಾಸ್, ಕಲಾಮಂಡಲಂ ಹೈದರಾಲಿ ಅವರಿಗೆ ದೇವಸ್ಥಾನದ ಒಳಗೆ ಪ್ರವೇಶವೇ ಇರಲಿಲ್ಲ. ಅವರ ಮಧುರ ಧ್ವನಿ ದೇಗುಲ ಪ್ರವೇಶಿಸಿದರೆ ಅಡ್ಡಿಲ್ಲ, ಆದರೆ ಕೊರಳಿನಿಂಚರವ ಹೊರಹೊಮ್ಮಿಸುವ ಅವರ ದೇಹಕ್ಕೆ ಪ್ರವೇಶವಿಲ್ಲ! ಕಲೆಯ ಕ್ಷೇತ್ರದೊಳಗೂ ದಾಂಗುಡಿಯಿಟ್ಟಿರುವ ಧಾರ್ಮಿಕ ಮತಾಂಧತೆಗೆ ಏನು ಮದ್ದು? ಈ ದ್ವೇಷದ ಕೆಂಡದುಂಡೆಗಳು ಇನ್ನಷ್ಟು ಹರಡದಂತೆ ತಡೆಯುವುದು ಹೇಗೆ?






ಬಣ್ಣ ಬಣ್ಣದ ಬಟ್ಟೆಗಳ 'ಪ್ಯಾಚ್‌ವರ್ಕ್' ಕೌದಿಗೆ ಬಾಯಿ ಹಾಕಿ ಛಿದ್ರಗೊಳಿಸುತ್ತಿರುವ ಇಲಿಗಳು. ಸಾಂಸ್ಕೃತಿಕ ಅನನ್ಯತೆಯನ್ನು ತುಂಬಾ ಅರ್ಥವತ್ತಾಗಿ ಧ್ವನಿಸುತ್ತಿರುವ ಕಲಾಕೃತಿ ಕಲೆ: ಎಸ್.ಎಸ್. ಹಡಪ

ಪಂ. ರಾಜೀವ ತಾರಾನಾಥ


ನಿರೂಪಣೆ: ಸುಮಂಗಲಾ



ಉಸ್ತಾದ್ ಅಬ್ದುಲ್ ಕರೀಮಖಾನ್



ಉಸ್ತಾದ್ ಅಲಾವುದ್ದೀನ್ ಖಾನ್



ಉಸ್ತಾದ್ ಬಿಸ್ಮಿಲ್ಲಾ ಖಾನ್

ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಅಸಹಿಷ್ಣತೆ ಮೂಗು ತೂರಿಸ್ತಿದೆ... ಕೇರಳದಲ್ಲೀಗ ಅದು ಎದ್ದು ಕಾಣುತ್ತಿದೆ. ಕರ್ನಾಟಕದಲ್ಲೂ ಧರ್ಮದ ಹೆಸರಿನಲ್ಲಿ ಸಾಂಸ್ಕೃತಿಕ ವಾತಾವರಣ ಕದಡಿದೆ. ಜನರ ಮನಸ್ಸು ಬದಲಾಗಬೇಕು ಅಂತ ಹೇಳಬಹುದು, ಹೇಳೋದು ಸುಲಭ, ಆದರೆ ಹಾಗೆ ಆಗೋದು ಕಷ್ಟದ ವಿಚಾರ. ಒಂದು ಸರ್ಕಾರ, ಇನ್ನೊಂದು ಸಾಮಾಜಿಕ ಚಳವಳಿ, ಎರಡರ ಪ್ರಯತ್ನವೂ ಇಲ್ಲಿ ಬೇಕು. ಆದರೆ, ಎಲ್ಲಾ ಕಡೆ ಏನಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

ನಾವು ಸುಪೀರಿಯರ್, ಬ್ಯಾರೆಯವರು ನಮ್ಮ ವೇಷ ಹಾಕಿದ್ರೂ ಸೈತ ಅವ್ರು ಬ್ಯಾರೆನೆ, ಅವರನ್ನ ಎಲ್ಲಾ ಕಡಿಗೂ ಬಿಡಲಾಗದು ಅನ್ನೋ ಮಾತು, ಈ ದೊಡ್ಡೋರು ಅನ್ನಿಸಿಕೊಂಡೋರ ಬಾಯಲ್ಲಿ, ಮನಸ್ಸಿನಲ್ಲಿ ಬ್ಯಾರೆ ಬ್ಯಾರೆ ರೂಪದಲ್ಲಿ ಬರ್ತಾನೆ ಇರುತ್ತೆ. ಒಂದು ಗುಳಿಗಿ ತಗಂಡುಬಿಟ್ಟರೆ ಸರಿಹೋಗುತ್ತೆ ಅಂತಾರಲ್ಲ, ಇದಕ್ಕೆ ಹಂಗಾಗಲ್ಲ.

ಸಾಮ, ದಾನ, ಭೇದ, ದಂಡ ಇವೆಲ್ಲವನ್ನೂ ಉಪಯೋಗಿಸಬೇಕು. ಯಾಕಂದ್ರೆ ಇದನ್ನು ಮಾಡುತ್ತಿರೋರು ನಮ್ಮವರೇ. ಅವರನ್ನು ಇನ್‌ಫ್ಲುಯೆನ್ಸ್ ಮಾಡಬೇಕು, ಮಾತಾಡಿಸಬೇಕು. ಯಾವುದೋ ಕಾಲದಲ್ಲಿ ಹೀಗಾಯ್ತು, ಪುರಾಣ ಕಾಲದಲ್ಲಿ ಹೀಗಾಯಿತು ಎಂದು ಹೇಳೋದು ತಪ್ಪು. ಇದು ತಪ್ಪು ಎಂದು ಹೇಳೋದು ಸರಳವಾಗಿಯೂ ಬಲವಾಗಿಯೂ ಬರಬೇಕು ಅಷ್ಟೆ. ಹಳೇ ಪುರಾಣ, ವೇದ ಅವೆಲ್ಲ ಬ್ಯಾಡ್ರೀ. ನಮ್ಮ ದೇವಸ್ಥಾನಗಳ ಪೂಜಾವಿಧಾನಗಳು, ನಮ್ಮ ಶಿಲ್ಪ ಇವನ್ನೆಲ್ಲ ನೋಡಬೇಕು ಅಂತ ಭಾಳ ಜನ ಬರ್ತಾರ. ಇದು ನಮ್ಮ ಆಸ್ತಿ, ಅಲ್ಲಿ ನೃತ್ಯ ಮಾಡಬಾರದು ಅಂದುಬಿಟ್ಟರೆ? ತಪ್ಪು, ಅದು ಪೂರ್ಣ ತಪ್ಪು. ಇವೆಲ್ಲಾ ಮಾಡಿಯೂ ಸರಿಯಾಗಲಿಲ್ಲ ಅಂದ್ರೆ ಕಠಿಣವಾಗಿ ಮಾಡಬೇಕು, ಅಂದರೆ ಏನು ಮಾಡಬೇಕು? ಅವರನ್ನ ಶಿಕ್ಷಿಸಬೇಕು, ಜೈಲಿಗೆ ಹಾಕಬೇಕು ಅಥವಾ ಬೇರೆ ವಿಧಾನಗಳಿವೆಯೇ, ನನಗೆ ಗೊತ್ತಿಲ್ಲ. ಈ apartheid ಭಾವನೆಯಿಂದ ಪ್ರತ್ಯೇಕತಾ ಮನೋಭಾವದಿಂದ ಹೊರಗೆಳೆಯುವ ಬೇರೆಬೇರೆ ಪ್ರಯತ್ನ ಮಾಡಬೇಕು. ಪ್ರಯತ್ನ ಮಾಡ್ತಲೇ ಇರಬೇಕು. ನಾವೇನು ಮಾಡ್ತೀವಿ... ಇಂತಹ ಘಟನೆ ನಡೆದಾಗ ಹೋಹೋ ಅಂತ ಎದ್ದುಬಿಡ್ತೀವಿ, ನಾಳೆ ನಾಡಿದ್ದು ಅದು ಯಾರಿಗೂ ನೆನಪಿರೋದಿಲ್ಲ. ಹಂಗಾಗಬಾರದು.

ಈ ವಿಷಯ... ಇದೊಂದು ವಿಷಯ ಮಾತ್ರವಲ್ಲ, ಇದು ಕೆಟ್ಟ ವಿಷ, ಇದನ್ನು ಬುಡದಿಂದ ಕಿತ್ತು ಹಾಕಬೇಕು; ಬೇರುಸಹಿತ ಕಿತ್ತು ಹಾಕಬೇಕು. ಅಂದ್ರೆ ಅಲ್ಲಿ ಹಿಂಸೆ ಇರಬಾರದು. ಹ್ಯಾಗೆ ಮಾಡಬೇಕು ಅಂದರೆ... ನೋಡಿ... ನಮ್ಮ ಮನೆಗಳಲ್ಲಿಯೂ ಇಂಥದ್ದು ಆಗುತ್ತೆ. ಅದನ್ನು ಹ್ಯಾಗೆ ನಾವು ಮಾತಾಡಿಕೊಂಡು, ಮಕ್ಕಳಲ್ಲಿ ಹ್ಯಾಗೆ ಸಾಮ, ಬೇಧ ದಾನಗಳಿಂದ ತಿದ್ದುತ್ತೇವೆಯೋ ಹಾಗೆ ತಿದ್ದಬೇಕು. ಸಮಾಜದ ಮುತ್ಸದ್ದಿಗಳು, ಸಮಾಜ ಸುಧಾರಕರು ಮುಂದೆ ಬರಬೇಕು. ಮ್ಯಾಲೆ ಅವರು ಸ್ಪಷ್ಟವಾಗಿ ಯೋಚನೆ ಮಾಡಬೇಕು, ದಿಟ್ಟವಾಗಿ ಮಾತನಾಡಬೇಕು. ಊರೆಲ್ಲ ಕತೆ ಹೇಳ್ಕಂಡು ಬರೆದ್ರೆ, ಅದ್ರಲ್ಲಿ ಚೂಪುತನ ಇರಲ್ಲ.

ಗಾಂಧೀಜಿಯವರು ಚೌರಿ ಚೌರಾದಲ್ಲಿ 1922ರಲ್ಲಿ ಹಾಗೆ ಮಾಡಿದರು. ಅಲ್ಲಿಯೂ ಹಿಂಸೆ ಬಂತು... ನಮ್ಮವರೇ ನಮ್ಮ ಪೊಲೀಸರನ್ನೇ ಕೊಂದರು. ಆವಾಗ ಗಾಂಧೀಜಿ ಉಪವಾಸ ಮಾಡತೀನಿ, ಇದಕ್ಕೆ ನಾನೇ ಪ್ರಾಯಶ್ಚಿತ್ತ ಮಾಡಿಕೋತೀನಿ ಅಂದ್ರು. ಅದರಷ್ಟು ಚೂಪಾದ ಉಪಾಯ ನಾನು ನೋಡಿಲ್ಲ. ಈಗ ನಾವು ಯಾರು ಹಾಗೆ ಮಾಡತೀವಿ? ಅದರಿಂದ ನಾವೇನು ಕಲಿತಿಲ್ಲ. ಗಾಂಧಿಯವರು ಏನೇನು ಮಾಡಿದರು, ಯಾವ್ಯಾವ ರೀತಿಯಲ್ಲಿ ಅದನ್ನು ಹಚ್ಚಿದರು, ಅವರ ವಿಚಾರ ಧಾರೆ... ನಾವು ಮಾಡಲಿಲ್ಲ ಹಂಗೆ. ಗಾಂಧೀಜಿಯ ಆ ಚೂಪುತನ ಬರಬೇಕು. ಮಾತು ಚೂಪಾಗಿರಬೇಕು, ಇದು ಹೀಗೆ, ಇದು ಹೀಗಲ್ಲ ಅಂತ... ಅಷ್ಟೇ ಸಾಕು. ಅದ್ರ ಮೇಲಿನ ಫೋಕಸ್ ಬಿಟ್ಟುಬಿಡಬಾರದು. ಇಂಥದ್ದು ಆಗುವವರೆಗೂ ನಾವು ಬುದ್ಧಿಜೀವಿಗಳು ಇಂಥದ್ದು ಮಾಡತೀವಿ, ಇಂತಿಂಥ ಕೆಲಸ ಮಾಡೋದಿಲ್ಲ, ಈ ಥರಾ ನಿರ್ಧಾರ ಮಾಡಬೇಕು.

> **ನಾನು ಮುಸಲ್ಮಾನ ಗುರುಗಳ ಬಳಿ ಸರೋದ್ ಕಲಿತೆ... ಅವರೇ ನನ್ನ ದೇವರು. ನಾನು ಚೆನ್ನಾಗಿ ನುಡಿಸಿದಾಗ ಅವರು ನನ್ನ ಮೂರು ಬೆರಳುಗಳಲ್ಲಿ ಕೂತಿರುತ್ತಾರೆ, ನಾನು ಚೆನ್ನಾಗಿ ನುಡಿಸದೇ ಇದ್ದಾಗ ಅವರು ಇರಲ್ಲ, ಬೇಜಾರುಪಟ್ಟುಕೊಂಡು ಎದ್ದು ಹೊರಟು ಹೋಗಿರ್ತಾರೆ, ಮಾಯವಾಗಿರ್ತಾರೆ...**

ಸಮಾಜವನ್ನು ಇಬ್ಭಾಗವಾಗಿಯೋ, ಇನ್ನೂ ಎಷ್ಟೋ ಭಾಗವಾಗಿಯೋ ಮಾಡೋ ಪ್ರಯತ್ನ ನಡೆದೇ ಇದೆ. ನಾವೆಲ್ಲ ಒಂದೇ ಜನ, ಈ ಭೂಮಿಯಲ್ಲಿ, ಈ ನೀರನ್ನು ಕುಡಿದು, ಈ ಗಾಳಿಯನ್ನು ಉಸಿರಾಡಿ ಬದುಕಿದ್ದೀವಿ. ಈ ಒಂದು ಸಂಸ್ಕೃತಿಯನ್ನು - ಈ ಸಂಸ್ಕೃತಿ ಅನ್ನೋ ಶಬ್ದ ಭಾಳ ಚರ್ವಿತಚರ್ವಣವಾಗಿದೆ, ನನಗೆ ಅದನ್ನು ಬಳಸೋದಕ್ಕೆ ಇಷ್ಟವಿಲ್ಲ... ನಮ್ಮದು ಇಂಥಾ ಸಂಸ್ಕೃತಿ, ಅಂಥಾ ಸಂಸ್ಕೃತಿ, ಬಿಡಿ ಅದನ್ನು - ಒಟ್ಟಿನಲ್ಲಿ ನಾವೆಲ್ಲ ಅದೇ ಊಟ ಮಾಡ್ತೀವಿ, ಅದೇ ಹವಾ ಸೇವಿಸ್ತೀವಿ... ಅದೇ ನೀರು ಕುಡೀತೀವಿ, ಅವೇ ಅಭ್ಯಾಸಗಳು, ನೋಡಕ್ಕೂ ನಾವೆಲ್ಲ ಒಂದೇ ಥರಾ ಇದೀವಿ. ಅದನ್ನು ಬಿಟ್ಟು ಯಾವುದೋ ಕಾಲದಲ್ಲಿ ಏನೋ ಒಂದು ಆಗಿತ್ತು ಅಂತ ಅದಕ್ಕೆ ಈಗೇನೋ ಮಾಡೋದಕ್ಕೆ ಹೋಗೋದು ಯಾಕೆ?

ನಾವು ಇತಿಹಾಸವನ್ನು ಗಂಭೀರವಾಗಿ ತಗೊಳ್ಳೋದಿಲ್ಲ, ಇತಿಹಾಸದ ತಪ್ಪು ಓದಿನಿಂದ ಅದನ್ನೊಂದು ಆಯುಧ ಮಾಡಿಕೊಳ್ತೀವಿ. ಆಗ ಹಿಂಗಾಗಿತ್ತು, ಅದಕ್ಕೇ ಈಗ ಹಿಂಗೆ ಮಾಡ್ತೀವಿ, ತಪ್ಪು ಅದು. ಇಲ್ಲಿ ಎಷ್ಟೋ ರಾಜ್ಯಗಳಿದ್ದವು, ಎಷ್ಟೋ ರಾಜರುಗಳಿದ್ದರು... ಜಗಳ ಆಡಿದರು, ಸುಖನೂ ಪಟ್ಟರು, ಕುಣಿದರು, ಆಡಿದರು, ಒಮ್ಮೊಮ್ಮೆ ಯುದ್ಧನೂ ಮಾಡಿದರು. ಇದು ಆಗೋದೆ. ಆದರೆ ಈಗಿನ ರೂಪದಲ್ಲಿ, ಈ ಛಿದ್ರ ಅವತಾರದಲ್ಲಿ ಆಗ್ತಾ ಇರಲಿಲ್ಲ.

12ನೇ ಪುಟಕ್ಕೆ...







ಜಾತ್ರೆಗಳ ಪಾಠ

ಚಿತ್ರಗಳು: ತಾಜುದ್ದೀನ್ ಆಜಾದ್



ಕಲಬುರಗಿ ಸೀಮೆಯಲ್ಲಿ ಈಗ ಜಾತ್ರೆಗಳ ಹಂಗಾಮ. ಕೋಮು ದ್ವೇಷ ತನ್ನ ಕೆನ್ನಾಲಗೆಯನ್ನು ಎಲ್ಲೆಲ್ಲೂ ಚಾಚುತ್ತಿರುವ ಈ ಹೊತ್ತಿನಲ್ಲಿ ಇಲ್ಲಿನ ಜಾತ್ರೆಗಳು ಮೊಗೆದು ಕೊಡುವ ನೀತಿ ಪಾಠಗಳು ಬಲು ಅರ್ಥಪೂರ್ಣ. 'ಎಲ್ಲಿ ಕೈ ಮುಂದೊಡ್ಡು ಮಗಳೇ' ಎಂದು ಈ ತಾತ ಹೆಣ್ಣು ಮಕ್ಕಳಿಗೆ ಬಳೆ ತೊಡಿಸುವಾಗ ಯಾವುದೇ ಜಾತಿ, ಧರ್ಮದ ಸೋಂಕು ಅಲ್ಲಿ ಕಾಣುವುದಿಲ್ಲ. ಜಾತ್ರೆಯಲ್ಲಿ ಸಮಾಗಮ ಆದರೇನು, 'ಹ್ಯಾಂಗದಿಪಾ ಸಾಬಣ್ಣ, ತೊಗರಿ ಪೂರ್ತಿ ಮಾರಿದೇನು' ಎಂದು ಈ ರೈತ ಕೇಳಲು ಯಾವ ಧರ್ಮದ ಬೇಲಿಯೂ ಅಡ್ಡ ಬರುವುದಿಲ್ಲ. ಆದರೆ, ಕೋಮು ಸಾಮರಸ್ಯದ ನೇಯ್ಗೆಯಲ್ಲಿ ಕತ್ತರಿ ಆಡಿಸುವವರಿಗೆ ಈ ನಡತೆಗಳು ಪಾಠವೇ ಆಗುವುದಿಲ್ಲ

ಯಕ್ಷ ಸಾಮರಸ್ಯ



ಅರ್ಷಿಯಾ




ಡಾ.ಎಫ್.ಎಚ್. ಒಡೆಯರ್

ಮಂಜುನಾಥ ಹೆಬ್ಬಾರ್

ಪುರಾಣ ಕತೆಗಳ ಪ್ರಸಾರಕ್ಕಾಗಿ ಹುಟ್ಟಿಕೊಂಡಿದ್ದರೂ ಯಕ್ಷಗಾನವು ಜಾತಿ-ಧರ್ಮಗಳ ಎಲ್ಲೆ ಮೀರಿ ಮನೆಮಾತಾದ ಕಲೆ. ಯಕ್ಷಗಾನದ ಪಟ್ಟುಗಳನ್ನು ಒಲಿಸಿಕೊಂಡು, ಈ ಕಲೆಯ ಸೆಲೆಯನ್ನು ಸಮೃದ್ಧಗೊಳಿಸುವುದಕ್ಕೆ ಶ್ರಮಿಸಿದ ಮುಸ್ಲಿಂ ಕಲಾವಿದರನೇಕರಿದ್ದಾರೆ. ಹತ್ತಾರು ಮುಸ್ಲಿಂ ಕಲಾವಿದರು ಯಕ್ಷಗಾನಕ್ಕೆ ಮಾನ, ಸಮ್ಮಾನ ತಂದುಕೊಡುವುದರ ಜೊತೆಗೆ ತಾವೂ ಗೌರವ ಪಡೆದಿದ್ದಾರೆ. ವೇಷಭೂಷಣ, ಪ್ರಸಾಧನ, ನಾಟ್ಯ ಅಥವಾ ನಟನೆಯಲ್ಲಿ ಸೈ ಎನಿಸಿಕೊಂಡ, ಯಕ್ಷಗಾನ ಬಯಲಾಟ ಹಾಗೂ ತಾಳಮದ್ದಲೆ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ ಅನೇಕ ಕಲಾವಿದರು ಯಕ್ಷರಸಿಕರ ಮನದ ರಂಗಸ್ಥಳದಲ್ಲಿ ಈಗಲೂ ಸ್ಥಾನಪಡೆದಿದ್ದಾರೆ.

ಅರ್ಕುಳದ 'ಒಡೆಯರ್ ಮಾಮ': ಒಂದು ಕಾಲದಲ್ಲಿ ಯಕ್ಷಗಾನ ತಾಳಮದ್ದಲೆಯ ಅರ್ಥಗಾರಿಕೆಯಲ್ಲಿ ಡಾ.ಎಫ್.ಎಚ್.ಒಡೆಯರ್ ಅವರದು ಪ್ರಸಿದ್ಧ ಹೆಸರು. 'ಒಡೆಯರ್' ಎಂಬ ಹೆಸರು ಕೇಳಿದ ಬಹಳಷ್ಟು ಮಂದಿಗೆ ಅವರು ಮುಸ್ಲಿಂ ಎಂಬುದು ತಿಳಿದಿರಲಿಕ್ಕಿಲ್ಲ. ಗುಂಗುರು ಕೂದಲಿನ ಅಜಾನುಬಾಹು ವ್ಯಕ್ತಿತ್ವದ ಅವರು 'ಡಾಕ್ಟ್ರ ಮಾಮ', 'ಒಡೆಯರ್ ಮಾಮ' ಎಂದೇ ಪ್ರಸಿದ್ಧರಾಗಿದ್ದರು.



ಜಬ್ಬಾರ್ ಸಮೋ

ಒಡೆಯರ್ ಅವರು 1903ರ ಮಾರ್ಚ್ 15ರಂದು ಅರ್ಕುಳದ ಬ್ಯಾರಿ ಸಮುದಾಯದ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ವಿದ್ಯಾಭ್ಯಾಸವನ್ನು ಮೇರಮಜಲು ಇಗರ್ಜಿ ಶಾಲೆಯಲ್ಲಿ ಹಾಗೂ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ ಪೂರೈಸಿದರು. 1920ರಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದ ಮಹಾತ್ಮ ಗಾಂಧೀಜಿ ಹಾಗೂ ಶೌಖತ್ ಅಲಿಯವರು ತುಳುನಾಡಿನಲ್ಲೂ ದೇಶಪ್ರೇಮದ, ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚನ್ನು ಹಚ್ಚಿದ್ದರು. ಹಿಂದೂ-ಮುಸ್ಲಿಮರ ಏಕತೆ ಸಾರುವ ಕುರಿತು ಗಾಂಧೀಜಿಯಾಡಿದ ಮಾತಿನಿಂದ ಪ್ರೇರಣೆಗೊಂಡು ಹೋರಾಟಕ್ಕೆ ಧುಮುಕಿದ್ದ ಮುಸ್ಲಿಂ ಯುವಕರಲ್ಲಿ ಒಡೆಯರ್ ಅವರೂ ಒಬ್ಬರು. ತಾಳಮದ್ದಲೆ ಅರ್ಥಧಾರಿಯೂ ಆಗಿದ್ದ ಸ್ವಾತಂತ್ರ್ಯ ಹೋರಾಟಗಾರ ಎನ್.ಎಸ್.ಕಿಲ್ಲೆಯವರ ಒಡನಾಟ ಅವರನ್ನು ಯಕ್ಷರಂಗದತ್ತ ಸೆಳೆಯಿತು. ಗುರುಗಳಾದ ಅರ್ಕುಳದ ಲಕ್ಷ್ಮಣ ಶಾನುಭೋಗರ ಗರಡಿಯಲ್ಲಿ ಪಳಗಿದ್ದ ಅವರಿಗೆ ಅರ್ಥಗಾರಿಕೆಯ ಪಟ್ಟುಗಳು ಬೇಗ ಒಲಿದವು.

ರಾಮಾಯಣ, ಮಹಾಭಾರತ, ಭಗವದ್ಗೀತೆ ಹಾಗೂ ಪೌರಾಣಿಕ ಪ್ರಸಂಗಗಳ ಆಳ ಅಧ್ಯಯನದಿಂದ ಪಾಂಡಿತ್ಯವನ್ನೂ ಗಳಿಸಿಕೊಂಡರು. ಉತ್ತಮ ಕಂಠಸಿರಿಯನ್ನು ಹೊಂದಿದ್ದ ಒಡೆಯರ್ ಅರ್ಥಧಾರಿಯಾಗಿ ಆ ಕಾಲದಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಎನ್.ಎಸ್.ಕಿಲ್ಲೆ ಮೊದಲಾದ ವಿದ್ವಾಂಸರ ಜತೆಗೆ ಸಮದಂಡಿಯಾಗಿ ಅರ್ಥದಾರಿಕೆ ಮಾಡುತ್ತಿದ್ದ ಒಡೆಯರ್, ಮುಂದೆ ತಮ್ಮದೇ ಆದ 'ಒಡೆಯರ್ ಬಳಗ' ಎಂಬ ಯಕ್ಷಗಾನ ಕೂಟವನ್ನು ಕಟ್ಟಿ ಬೆಳೆಸಿದರು.

ಮುಸಲ್ಮಾನನೊಬ್ಬ ಹಿಂದೂ ಪುರಾಣದ ಪಾತ್ರಗಳಿಗೆ ಲೀಲಾಜಾಲವಾಗಿ ಜೀವ ತುಂಬುವುದನ್ನು ಕಂಡು ಚಕಿತಗೊಂಡವರಿಗೆಲ್ಲ ಅವರು ಹೇಳುತ್ತಿದ್ದ ಗರ್ವದ ಮಾತುಗಳನ್ನು ಅವರ ಕುಟುಂಬದ ಜೊತೆ ಒಡನಾಟ ಹೊಂದಿದ್ದ ಲೇಖಕಿ ಚಂದ್ರಕಲಾ ನಂದಾವರ ನೆನಪಿಸಿಕೊಳ್ಳುತ್ತಾರೆ.

11ನೇ ಪುಟಕ್ಕೆ...



ಮಾತೃಪ್ರಧಾನ ನಕ್ಷೆ.... ಈ ನಕ್ಷೆಯನ್ನು ರಚಿಸುವಲ್ಲಿ ಕಲಾವಿದ ತೋರಿದ ತಾಳ್ಮೆಗೊಂದು ಸಲಾಂ ಹೇಳಲೇಬೇಕು

ನೋಡೋದಷ್ಟೇ ಅಲ್ಲ... ಓದಿ ಈ ಚಿತ್ರ!

ಪ್ರಸನ್ನ

ಯಾವುದೋ ಕೆಲಸಕ್ಕೆಂದು ದೆಹಲಿಗೆ ಬಂದಿದ್ದೆ. ವಧೇರಾ ಚಿತ್ರಕಲಾ ಗ್ಯಾಲರಿಯಲ್ಲಿ ಕಲಾವಿದ ಹರ್ಷ ಅವರ ಕಲಾಕೃತಿಗಳ ಪ್ರದರ್ಶನವಿತ್ತು, ನೋಡಿದೆ. ಹಾಗೆ ನೋಡಿದರೆ, ಅಲ್ಲಿ ಪ್ರದರ್ಶಿತವಾಗಿದ್ದ ಕೆಲವು ಕೃತಿಗಳನ್ನು ಅವುಗಳ ರಚನೆಯ ಸಂದರ್ಭದಲ್ಲಿಯೇ ಮೈಸೂರಿನ ಅವರ ಸ್ಟುಡಿಯೊದಲ್ಲಿ ನೋಡಿದ್ದೆ. ಆದರೆ ಗ್ಯಾಲರಿಯಲ್ಲಿ ನಿಂತು, ಕುಳಿತು, ನಿರಾಳವಾಗಿ, ಕೃತಿಗಳನ್ನು ನೋಡುವ ಅನುಭವವೇ ಬೇರೆ.

ಇತ್ತೀಚಿನ ದಶಕಗಳಲ್ಲಿ ಹರ್ಷ ತಮ್ಮ ಖ್ಯಾತಿಯನ್ನು ಕರ್ನಾಟಕದಾಚೆಗೂ ವಿಸ್ತರಿಸಿಕೊಂಡಿದ್ದಾರೆ. ದೇಶ ವಿದೇಶಗಳಲ್ಲಿ ಅವರು ಹೆಸರು ಮಾಡಿದ್ದಾರೆ. ಅವರ ಕೃತಿಗಳಿಗೆ ಅಪಾರ ಬೇಡಿಕೆಯೂ ಬಂದಿದೆ. ಆದರೆ ಹರ್ಷ ಅವರ ಕೃತಿಗಳ ಬಗ್ಗೆ ಬರೆಯಲಿಕ್ಕೆ ಈಗ ನನಗಿರುವ ಒತ್ತಾಸೆ ಅವರು ಗಳಿಸುತ್ತಿರುವ ಹೆಸರನದ್ದೂ ಅಲ್ಲ ಅಥವಾ ಹಣದ್ದೂ ಅಲ್ಲ, ಅವರು ತಳೆದಿರುವ ಆರೋಗ್ಯಕರ ನಿಲುವಿನದ್ದು.

ಆಧುನಿಕ ಕಲೆ ತೀವ್ರ ಬಿಕ್ಕಟ್ಟಿನಲ್ಲಿದೆ. ತನ್ನ ಹಾದಿಯ ಡೆಡ್‌ಎಂಡ್ ತಲುಪಿದೆ. ಹಿಂದಕ್ಕೂ ತಿರುಗಲಾಗದೆ ಮುಂದಕ್ಕೂ ಹೋಗಲಾಗದೆ ವ್ಯಗ್ರವಾಗತೊಡಗಿದೆ. ವ್ಯಗ್ರತೆ, ಖಿನ್ನತೆ ಹಾಗೂ ಒಂಟಿತನ ಅದರ ಸ್ಥಾಯೀಭಾವವೇನೋ ಎಂದೆನ್ನಿಸತೊಡಗಿದೆ. ಹಾಗಂತ, ಎಲ್ಲ ಕಲಾವಿದರು ಕೈ ಕಟ್ಟಿಕೊಂಡು ಕುಳಿತಿದ್ದಾರೆಂದು ನನ್ನ ಮಾತಿನ ಅರ್ಥವಲ್ಲ ಅಥವಾ ಮಾರುಕಟ್ಟೆಯ ತೇಜಿಯಿಂದ ಉಬ್ಬಿ ಸುಮ್ಮನಿದ್ದಾರೆ ಎಂದು ಕೂಡ ನನ್ನ ಅರ್ಥವಲ್ಲ. ಹಾಲಿ ಬಿಕ್ಕಟ್ಟನ್ನು ಮೀರುವ ಹಲವು ಧೀರೋದ್ದಾತ ಪ್ರಯತ್ನಗಳು ಚಿತ್ರಕಲೆಯಲ್ಲಿ ನಡೆದಿವೆ. ಮಾತ್ರವಲ್ಲ, ಅಂತಹ ಪ್ರಯತ್ನದಿಂದಾಗಿ ಭಾರತೀಯ ಚಿತ್ರಕಲೆಯು, ಕೌಶಲ ಹಾಗೂ ವಸ್ತುಸಂಯೋಜನಾ ಚಾತುರ್ಯದಲ್ಲಿ ಹೊಸ ಹೊಸ ಸಾಧ್ಯತೆಗಳನ್ನು ಕಂಡಿದೆ. ಇತರೆ ಹಿರಿಯರಂತೆ ಹರ್ಷ ಅವರೂ ಡೆಡ್‌ಎಂಡ್ ತೆರವುಗೊಳಿಸುವ ಪ್ರಯತ್ನ ಮಾಡಿದ್ದಾರೆ. ಪ್ರಾಯಶಃ, ಇತರೆಲ್ಲರಿಗಿಂತ ಸರಳವಾಗಿ, ಸಹಜವಾಗಿ, ಆದರೆ ಅಷ್ಟೇ ಪರಿಣಾಮಕಾರಿಯಾಗಿ, ಬಿಕ್ಕಟ್ಟನ್ನು ನಿರ್ವಹಿಸಿದ್ದಾರೆ ಎಂದು ನನಗನ್ನಿಸುತ್ತದೆ. ವಿವರಿಸುತ್ತೇನೆ.

ಆಧುನಿಕ ಕಲೆಯು ಪಾರಂಪರಿಕ ಕಲೆಗಳಿಗಿಂತ ಹಲವು ರೀತಿಯಲ್ಲಿ ಭಿನ್ನವಾಗಿದೆ, ಹಲವು ಸಂಗತಿಗಳನ್ನು ಅದು ತಿರಸ್ಕರಿಸಿದೆ. ಹಾಗೆ ತಿರಸ್ಕರಿಸಲಾದ ಕೆಲವು ಸಂಗತಿಗಳು ತಿರಸ್ಕಾರಕ್ಕೆ ಯೋಗ್ಯವಾದದ್ದೇ ಆದರೂ ಅದು ತಿರಸ್ಕರಿಸಿದ ಕಥನ ಕೌಶಲವು, ನನ್ನ ಪ್ರಕಾರ, ತಿರಸ್ಕರಿಸಬಾರದ ಸಂಗತಿಯಾಗಿತ್ತು. ಕ್ರಮೇಣ ಇದು ಕಲಾವಿದರಿಗೆ ಅರಿವಾಯಿತು ಕೂಡ. ಕಳೆದ ಶತಮಾನದಲ್ಲಿ ಹಲವು ಭಾರತೀಯ ಕಲಾವಿದರು – ಈ ಕ್ಷಣದಲ್ಲಿ ನನ್ನ ನೆನಪಿಗೆ ಬರುತ್ತಿರುವರು, ಕೆ.ಜಿ. ಸುಬ್ರಹ್ಮಣ್ಯಂ ಹಾಗೂ ಗುಲಾಮ್ ಶೇಖ್, ಈ ತಪ್ಪನ್ನು ತಿದ್ದುವ ಗಂಭೀರ ಪ್ರಯತ್ನ ಮಾಡಿದರು ಹಾಗೂ ಗಮನಾರ್ಹ ಪ್ರಗತಿ ಸಾಧಿಸಿದರು. ಅವರ ನಂತರದ ಪೀಳಿಗೆಯವರಾದ ಹರ್ಷ ತಮ್ಮ ಕೃತಿಗಳಲ್ಲಿ ಕಥನಕೌಶಲವನ್ನು ಅಳವಡಿಸಿಕೊಂಡಿರುವ ರೀತಿ ಅನನ್ಯವಾದದ್ದು.

ಆಧುನಿಕತೆಯು ಕಥನವನ್ನು ಕೀಳಾಗಿ ಕಂಡಿತು. ಚಿತ್ರಗಳು ಕಥೆಯನ್ನೇಕೆ ಹೇಳಬೇಕು ಎಂಬ, ಕೊಂಚ ಒರಟಾದ ಧೋರಣೆ ತಳೆದಿತ್ತು ಅದು. ಆದರೆ ಕಥನವೆಂದರೆ ಅರ್ಥವಾಗುವಂತೆ ಕತೆ ಹೇಳುವುದಷ್ಟೇ ಅಲ್ಲ. ಅಥವಾ, ಯಾರಿಗೂ ಅರ್ಥವೇ ಆಗದಂತೆ ಚಿತ್ರಬಿಡಿಸುವ ಕೆಲವರ ಪರಿ, ಹೆಮ್ಮೆಯ ಸಂಗತಿಯೂ ಅಲ್ಲ. ಒಳ್ಳೆಯ ಚಿತ್ರಗಳು ಸಾಮಾನ್ಯರಿಗೆ ಸಾಮಾನ್ಯ ಸ್ತರದಲ್ಲಿಯೂ, ಪರಿಣಿತರಿಗೆ ಪರಿಣಿತ ಸ್ತರದಲ್ಲಿಯೂ ಅರ್ಥವಾಗಿಸುವ ಶಕ್ತಿಹೊಂದಿರುತ್ತವೆ. ತಾನು ಬದುಕಿರುವ ಸಮುದಾಯದ ಜೊತೆ ಸಂವಹನ ಸಾಧಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿರುತ್ತದೆ ಅದು. ಕಥನಕೌಶಲವೆಂಬುದು ಬರಿದೆ ಕೌಶಲವಲ್ಲ, ಒಂದು ಸಮಗ್ರ ಜೀವನ ದೃಷ್ಟಿ ಅದು, ಸಾವಯವವಾದದ್ದು ಅದು. ಸಹಜ ಪ್ರಕೃತಿಯೊಟ್ಟಿಗೆ ಹಾಗೂ ಸಾಮಾನ್ಯ ಜನತೆಯೊಟ್ಟಿಗೆ ಸಂಬಂಧ ಸಾಧಿಸಬಲ್ಲಂತಹದ್ದು ಅದು.

ಅತಿರೇಕಕ್ಕೆ ತಲುಪಿದಾಗ ಆಧುನಿಕತೆಯ ವ್ಯಕ್ತಿನಿಷ್ಠೆಯ ರೋಗಕ್ಕೆ ಪಕ್ಕಾಯಿತು. ತಾನು ಬದುಕಿರುವ ತನ್ನ ಸಮುದಾಯದಿಂದಲೇ ದೂರಗೊಂಡು ಪರಕೀಯವಾಯಿತು. ಗ್ಯಾಲರಿಗಳಲ್ಲಿ ಶ್ರೀಮಂತರಿಗೆ ಹಾಗೂ ಲಂಪಟರಿಗೆ ಸಿದ್ಧಪಡಿಸಿದ ಔತಣ ಚಿತ್ರಕಲೆ ಎಂಬ ಅನಗತ್ಯ ಅಪವಾದಕ್ಕೆ ಅದು ಗುರಿಯಾಯಿತು, ಒಂಟಿಯಾಯಿತು.

ಹರ್ಷ ಅವರ ಚಿತ್ರಗಳು ಮೇಲ್ನೋಟಕ್ಕೆ ಸರಳವಾಗಿ ಕಾಣಿಸುತ್ತವೆ. ಆಧುನಿಕತೆಯ ಅತಿರೇಕಗಳಿಗೆ ಒಗ್ಗಿಕೊಂಡವರಿಗಂತೂ, ಅವು, ಅತಿ ಸರಳವಾಗಿ ಕಾಣಿಸುತ್ತವೆ. ಮಗ್ಗಿ ಪುಸ್ತಕಕ್ಕೆಂದು ರಚಿಸಲಾದ ನೀರಸವಾದ ಏಕತಾನತೆಯಂತೆ ಕಾಣುತ್ತವೆ. ಮೊದಲನೋಟಕ್ಕೆ ಅವರ ಚಿತ್ರಗಳು 'ಇದೆಂಥದ್ದು ಮಾರಾಯ.....!' ಎಂದು ಉದ್ಗಾರ ತೆಗೆದು, ಮುಂದೆ ನಡೆದುಬಿಡೋಣವೆಂದು ನೀವು ನಿರ್ಧರಿಸುವಷ್ಟರಲ್ಲಿ 'ಇಲ್ಲ, ಇಲ್ಲೇನೋ ವಿವರಗಳು ಮುಲುಕಾಡುತ್ತಿವೆ!' ಎಂದೆನ್ನಿಸಿ ಹತ್ತಿರ ಸರಿಯುತ್ತೀರಿ. ಮಗ್ಗಿ ಪುಸ್ತಕದ ಅಪ್ರಬುದ್ಧ ರಚನೆಗಳಡಿಯಲ್ಲಿ ವ್ಯಕ್ತಿಗಳು ಗೋಚರಿಸಿತೊಡಗುತ್ತಾರೆ. ಅವರೂ ಸಾಮಾನ್ಯರೇ, ನೀರಸರೇ. ಆದರೆ ಅವರ ಸಾಮಾನ್ಯತೆ ಹಾಗೂ ನೀರಸತನದಲ್ಲಿ ನೂರಾರು ಬಗೆಗಳಿವೆ ಅನ್ನಿಸತೊಡಗುತ್ತದೆ. 'ಅರೆ, ಇವರ ಸಾಮಾನ್ಯತೆ ಹಾಗೂ ನೀರಸತನಗಳು ತೀರ ಕಳಪೆಯೇನಲ್ಲವಲ್ಲ!' ಎಂಬ ಅರಿವಾಗುತ್ತದೆ. ಹೌದು ಸಾಮಾನ್ಯತೆ ನೀರಸವಲ್ಲ, ದಿನವೂ ಹುಟ್ಟುವ ಸೂರ್ಯ, ದಿನವೂ ಅರಳುವ ಹೂವು ನೀರಸವಲ್ಲ ಎಂಬ, ನವೋದಯ ಚಳವಳಿಯ ಘೋಷವಾಕ್ಯ ನೆನಪಾಗುತ್ತದೆ. ಚಿತ್ರಗಳಲ್ಲಿ ಸಾಮಾನ್ಯರು ಇತರೆ ಸಾಮಾನ್ಯರ ಜೊತೆ ಬೆರೆತು ಸಂವಹನ ಸಾಧಿಸತೊಡಗುತ್ತಾರೆ, ತುಂಟಾಟ ಮಾಡತೊಡಗುತ್ತಾರೆ, ಪಿಸುಮಾತು ಬಿಸಿಯುಸಿರು ಕೇಳಿಸತೊಡಗುತ್ತದೆ ನಿಮಗೆ. ಮನುಷ್ಯ ವ್ಯಕ್ತಿಗಳಷ್ಟೇ ಅಲ್ಲದೆ ಪ್ರಾಣಿ ವ್ಯಕ್ತಿಗಳು, ಪಕ್ಷಿ ವ್ಯಕ್ತಿಗಳು, ದೆವ್ವ ಭೂತಗಳು, ಭ್ರಮೆಗಳು, ಕಲ್ಪನೆಗಳು ಕಣ್ಣಮುಂದೆ ಕುಣಿಯತೊಡಗುತ್ತವೆ. ಒಂದು ಸಮಗ್ರ ಕಥಾಸರಿತ್ಸಾಗರವೇ ರೂಪಿತವಾಗಿ ಬಿಡುತ್ತದೆ ನಿಮ್ಮ ಕಣ್ಣ ಮುಂದೆ.



ಮಾಲಿನ್ಯ ಪರೀಕ್ಷೆ... ಚಿತ್ರವನ್ನು ಒಮ್ಮೆ ದಿಟ್ಟಿಸಿ ನೋಡಿ, ವಿವರಗಳನ್ನು ಗಮನಿಸಿ



ದೇವಕಣಗಳ ನಿಯತಕಾಲಿಕ ಭೇಟಿ

ದೆಹಲಿಯ ಹೆಸರಾಂತ ಕಲಾವಿಮರ್ಶಕಿ ಗಾಯತ್ರಿ ಸಿನ್ಹ, ಹರ್ಷ ಅವರ ಚಿತ್ರಗಳ ಬಗ್ಗೆ ಬರೆಯುತ್ತ, 'ಈತನ ಚಿತ್ರಗಳನ್ನು ನೋಡುವುದೆಂದರೆ ಓದಿನ ಅನುಭವ ಅದು, ಎಡದಿಂದ ಬಲಕ್ಕೆ ವ್ಯಾಕರಣ ಬದ್ಧವಾಗಿ ಓದುವ ಅನುಭವ ಇದ್ದಂತೆ' ಎನ್ನುತ್ತಾರೆ. ಓದುವುದೆಂದರೇನೇ ಕಥನ, ಓದುವುದೆಂದರೇನೇ ಪೋಣಿಸುವಿಕೆ. ಮೊಗ್ಗಿನ ಹಾರ ಪೋಣಿಸಿದಂತೆ ಹರ್ಷ ಅವರ ರಚನಾಶೈಲಿ. ಹರ್ಷ ಅವರ ಹೆಸರು ಮಾಡಿದ ಮೊದಲ ಚಿತ್ರ, ಮದುವೆಮನೆಯ ಪಂಕ್ತಿ ಊಟದ್ದು. ಸಾಲುಸಾಲಾಗಿ ಬಡಿಸಿದ ಬಾಳೆಲೆ, ಬಾಳೆಲೆಯ ಮುಂದೆ ಸಾಲಾಗಿ ಕುಳಿತ ಸಾಮಾನ್ಯ ಮಂದಿ, ತಿಂದುಬಿಟ್ಟ ಅಥವಾ ತಿನ್ನುತ್ತಿರುವ, ಅನ್ನ ಪಲ್ಯ ಮಜ್ಜಿಗೆ ಪಾಯಸ. ಇವಿಷ್ಟು ಮೊದಲ ನೋಟಕ್ಕೆ ಕಂಡರೆ, ನಂತರ ಕಾಣುತ್ತದೆ, 'ಅರೆ!' ಒಬ್ಬರಂತಿನೊಬ್ಬರಿಲ್ಲವಲ್ಲ, ಒಬ್ಬರ ಕತೆ ಇನ್ನೊಬ್ಬರ ಕತೆಯಂತಿಲ್ಲವಲ್ಲ, ಮದುವೆ ಮನೆಗೆ ಬಂದಿರುವುದು ಇಡೀ ಮನುಕುಲವೇ ಆಗಿದೆಯಲ್ಲ! ಎಲಾ! ಮಕ್ಕಳು ಮುದುಕರು ಪಾಪಿಗಳು ಪ್ರಿಯಕರರು ಎಲ್ಲರೂ ಜಮಾಯಿಸಿದ್ದಾರಲ್ಲ ಇಲ್ಲಿ ಊಟಕ್ಕೆಂದು!' ಎಂದು ಉದ್ಗರಿಸುತ್ತೀರಿ.

ಹರ್ಷ ಅವರಿಗೆ ಏಕತಾನತೆ ಹಾಗೂ ಸಾಮಾನ್ಯತೆ ಒಂದು ತಂತ್ರ ಅಷ್ಟೆ. ಅವರ ಚಿತ್ರಗಳಲ್ಲಿ ಕೌಶಲ ಅಡಗಿದೆ. ಕುಸುರಿಕೆಲಸ ಅಡಗಿದೆ. ಮೈಬಗ್ಗಿಸಿ ಮಾಡುತ್ತಾರೆ ಚಿತ್ರ ಬರೆಯುವ ಕಸುಬನ್ನು ಅವರು.



ಕಲಾವಿದ ಎನ್‌.ಎಸ್‌. ಹರ್ಷ

ಯಕ್ಷ ಸಾಮರಸ್ಯ

10ನೇ ಪುಟದಿಂದ...

'ನಾನು ಭಾರತೀಯ. ಆದ ಕಾರಣ ಭಾರತೀಯತೆಯನ್ನು ಗೌರವಿಸುವುದು ಹಾಗೂ ಅನುಸರಿಸುವುದು ನನ್ನ ಹಕ್ಕು ಎಂದು ಒಡೆಯರ್ ಹೇಳಿಕೊಳ್ಳುತ್ತಿದ್ದರು' ಎಂದು ಚಂದ್ರಕಲಾ ಹೇಳುತ್ತಾರೆ.

ಅರ್ಕುಳದಲ್ಲಿ ಕೆಲವು ತರುಣರಿಗೆ ತಾಳಮದ್ದಲೆಯ ಅರ್ಥದಾರಿಕೆಯನ್ನೂ ಒಡೆಯರ್ ಅವರು ಕಲಿಸಿದ್ದರು. 'ನಿಮಗೆ ಒಬ್ಬ ಮಾಪಿಳ್ಳೆ ಯಕ್ಷಗಾನದ ಅರ್ಥ ಕಲಿಸಿದ ಎಂದು ಹೇಳಿದರೆ ಅಷ್ಟೇ ಸಾಕು. ಅದುವೇ ನನಗೆ ಗುರುದಕ್ಷಿಣೆ' ಎಂದು ಒಡೆಯರ್ ಅವರು ಹೇಳುತ್ತಿದ್ದರಂತೆ. 'ತಾಳಮದ್ದಲೆಯಲ್ಲಿ ವಾಗ್ವಾದವೇ ಹೂರಣ. ಆದರೂ, ನಿರ್ವಹಿಸುವ ಪಾತ್ರಕ್ಕೆ ಯೋಗ್ಯವಲ್ಲದ, ಅನುಚಿತವಾದ ವಾಚಾಳಿತನದಿಂದ, ಸಲ್ಲದ ಮಾತುಗಾರಿಕೆಯಿಂದ ಒಡೆಯರ್ ಯಾವತ್ತೂ ದೂರ. ಅರ್ಥಗಾರಿಕೆಯ ಸಂದರ್ಭದಲ್ಲಿ ಕುರಾನ್‌ನ ಧರ್ಮವಾಕ್ಯಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುತ್ತಿದ್ದರು' ಎಂದು ಅವರು ವಿವರಿಸುತ್ತಾರೆ.

ಮಂತ್ರಮುಗ್ಧಗೊಳಿಸುವ ಜಬ್ಬಾರ್ ಸಮೋ: '18 ದಿವಸಗಳ ಈ ಅಂತರದಲ್ಲಿ ಎಂಥೆಂತಹ ವೈಚಿತ್ರ್ಯಗಳನ್ನು, ಎಂಥೆಂತಹ ಅದ್ಭುತಗಳನ್ನು ಅತಿಮಾನುಷವಾದ ಪವಾಡಸದೃಶ್ಯವಾದ ಕೃತ್ಯಗಳನ್ನು ಆಚರಿಸಲಾಯಿತು ಎಂಬುದನ್ನು ನಾನು ಪ್ರತ್ಯಕ್ಷವಾಗಿ ಕಂಡೆ...' –ಕುರುಕ್ಷೇತ್ರದಲ್ಲಿ ನಿಂತ ಸುಯೋಧನನ ಅಂತರಂಗದ ಮಾತುಗಳಿವು.

ಜಬ್ಬಾರ್ ಸಮೋ ಅವರು ಕೌರವ ಪಾತ್ರದ ಒಳಹೊಕ್ಕು, 'ಛಲಭರಿತ ಉತ್ಸಾಹಭರಿತವಾದ ಸ್ಫೂರ್ತಿಯುತವಾದ ನನ್ನ ಸುದೀರ್ಘ ಕಾಲದ ಬದುಕಿನಲ್ಲಿ ಯಾವುದನ್ನು ಸಾಧಿಸುವುದಕ್ಕಾಗಿ ಹಗಲಿರುಳು ನಾನು ಹಪಹಪಿಸಿದೆನೋ... ಆ ಎಲ್ಲ ನನ್ನ ಸದಿಚ್ಛೆಗಳು, ವಿಶಾಲವಾದ ಆಲೋಚನೆಗಳು ಎಲ್ಲವೂ ಕುರುಕ್ಷೇತ್ರದ ರಕ್ತದ ಕೆಸರಿನಲ್ಲಿ ತುಣುಕುಗಳಾಗಿ ಮಿಳಿತಗೊಳ್ಳುವ ದುರಂತಮಯವಾದ ವಿಷಾದದ ದೃಶ್ಯವನ್ನು ನಾನು ಕಾಣುತ್ತಿದ್ದೇನೆ...' ಎನ್ನುತ್ತಾ ವಾಗ್ಝರಿ ಹರಿಸಲು ಶುರುವಾದರೆ ಶ್ರೋತೃಗಳು ಪುರಾಣಲೋಕಕ್ಕೆ ತೇಲಿಹೋಗುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಂಚಿನ ಸಂಪಾಜೆ ಎಂಬ ಪುಟ್ಟ ಊರಿನಿಂದ ಬಂದು ಯಕ್ಷಗಾನ ಹಾಗೂ ತಾಳಮದ್ದಲೆ ಕ್ಷೇತ್ರಗಳೆರಡರಲ್ಲೂ ಹೆಸರು ಮಾಡಿ ಧರ್ಮಾತೀತವಾಗಿ ಪ್ರೀತಿ ಅಭಿಮಾನ ಗಳಿಸಿರುವ ಕಲಾವಿದ ಜಬ್ಬಾರ್ ಸಮೋ. ಅರ್ಥ ಹೇಳಲು ಕುಳಿತಾಗ ಜಬ್ಬಾರ್ ಪುರಾಣ ಪಾತ್ರಗಳ ಆಳಕ್ಕೆ ಇಳಿದು ತಾವೂ ಪಾತ್ರವೇ ಆಗಿಬಿಡುವ ಪರಿ, ಪಾತ್ರಗಳನ್ನೂ ಅವರು ಕಟ್ಟಿಕೊಡುವ ರೀತಿ, ಭಾಷೆಯ ಮೇಲೆ ಅವರಿಗಿರುವ ಪ್ರಭುತ್ವ, ಶಬ್ದ ಪ್ರಯೋಗಗಳಲ್ಲಿ ತೋರುವ ಲಾಲಿತ್ಯ ಮೋಹಕವಾದುದು.

'ಕರಾವಳಿಯದ್ದು ಪರಮ ಸಹನಶೀಲವಾದ, ಎಲ್ಲವನ್ನೂ ಧರಿಸಬಹುದಾದ ಮಣ್ಣು. ನಮ್ಮ ನಂಬುಗೆಗಳನ್ನು, ಆಚಾರಗಳನ್ನು ಸಂಸ್ಕೃತಿಗಳನ್ನು ಕಣಕಣಗಳಲ್ಲಿ ಹೊಂದಿ ಲಕಲಕನೆ ಹೊಳೆಯುವ ಮಣ್ಣಿನ ಪವಿತ್ರ ಭರತವರ್ಷವಿದು. ಇಂತಹ ಮಣ್ಣಿನ ಕಣಕಣಗಳೇ ನನ್ನಲ್ಲಿ ಯಕ್ಷ ಪ್ರೀತಿಯನ್ನು ಬೆಳೆಸಿವೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ ಜಬ್ಬಾರ್.

ಬಡಗಿನ ಗೌಸ್: ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಾವ್ರಾಡಿಯ ಶೇಕ್ ಬುಡಾನ್ ಸಾಹೇಬ್ ಹಾಗೂ ಬೀಬಿ ಮಾಬಿಬಿ ದಂಪತಿಯ ಪುತ್ರ ಮಹಮ್ಮದ್ ಗೌಸ್ ಯಕ್ಷ ಕೃಷಿಯಲ್ಲಿ ಸಮೃದ್ಧ ಫಸಲನ್ನು ಕಂಡವರು. ಯಕ್ಷಗಾನ ಬಯಲಾಟ, ತಾಳಮದ್ದಳೆ, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಂದ ಪ್ರೇರಿತರಾಗಿದ್ದ ಅವರು ಬಡಗುತಿಟ್ಟಿನ ರಂಗಸ್ಥಳದಲ್ಲಿ ಮಿಂಚಿನ ಸಂಚಲನ ಮೂಡಿಸುತ್ತಿರುವ ಪ್ರಬುದ್ಧ ಕಲಾವಿದ.

ಸಕ್ಕಟ್ಟು ಲಕ್ಷ್ಮೀನಾರಾಣಯ್ಯ ಹಾಗೂ ವಂಡ್ಸೆ ಮುತ್ತ ಗಾಣಿಗರ ಗರಡಿಯಲ್ಲಿ ಯಕ್ಷಗಾನದ ಹೆಜ್ಜೆಗಳನ್ನು ಕಲಿತು, 12 ವರ್ಷ ಯಕ್ಷ ಶಿಕ್ಷಣ ಪಡೆದುಕೊಂಡು, ರೆಂಜದಕಟ್ಟೆ, ಹಾಲಾಡಿ, ಸಿಗಂಧೂರು, ಬಗ್ವಾಡಿ, ಮಡಾಮಕ್ಕಿ ಮುಂತಾದ ವೃತ್ತಿ ಮೇಳಗಳಲ್ಲಿ ಪರಿಪೂರ್ಣ ಕಲಾವಿದರಾಗಿ ಜನ ಮೆಚ್ಚುಗೆ ಗಳಿಸಿದವರು. ಪೌರಾಣಿಕ, ಚಾರಿತ್ರಿಕ ಹಾಗೂ ಕಾಲ್ಪನಿಕ ಪ್ರಸಂಗಗಳಲ್ಲಿ ಅವರು, ನಾಯಕ, ಪ್ರತಿ ನಾಯಕ ಹಾಗೂ ಖಳ ನಾಯಕ ಪಾತ್ರಗಳಿಗೆ ಜೀವ ತುಂಬುವ ಪರಿ ಮನೋಜ್ಞವಾದುದು.

ಅರ್ಷಿಯಾ ಯಕ್ಷವಲ್ಲರಿ: ಪುರುಷ ಪ್ರಧಾನವಾದ ಯಕ್ಷಗಾನ ಕಲೆಯಲ್ಲಿ ಎಲ್ಲ ಅಡೆತಡೆಗಳನ್ನೂ ಮೆಟ್ಟಿನಿಂತು ಗಂಡಸರಿಗೆ ಸಮದಂಡಿಯಾಗಿ ಬೆಳೆದ ಮಹಿಳಾ ಕಲಾವಿದರು ಹಲವರಿದ್ದಾರೆ. ಇತ್ತೀಚಿನ ವರ್ಷಗಳಲ್ಲಂತೂ ತೆಂಕು-ಬಡಗು ತಿಟ್ಟುಗಳೆಂಬ ಭೇದವಿಲ್ಲದೆ, ಯಕ್ಷಗಾನದ ಸಕಲ ವಿಭಾಗಗಳಲ್ಲೂ ಮಹಿಳೆಯರು ಮಿಂಚುತ್ತಿದ್ದಾರೆ. ಈ ಪಟ್ಟಿಗೆ ಇತ್ತೀಚಿನ ಸೇರ್ಪಡೆ ಮಂಗಳೂರಿಗೆ ಹುಡುಗಿ ಅರ್ಷಿಯಾ. ಅವರನ್ನು ಯಕ್ಷ ರಂಗಸ್ಥಳ ಪ್ರವೇಶಿಸಿದ ಮೊದಲ ಮುಸ್ಲಿಂ ಮಹಿಳೆ ಎಂದೇ ಗುರುತಿಸಲಾಗುತ್ತದೆ.

ಆಟೊಮೊಬೈಲ್ ಕಂಪನಿಯ ಉದ್ಯೋಗಿಯಾಗಿರುವ ಅರ್ಷಿಯಾ, 10ನೇ ವಯಸ್ಸಿನಲ್ಲೇ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ಒಕ್ಕೆತ್ತೂರು ಮಾಡದಲ್ಲಿ ನಡೆದಿದ್ದ ಯಕ್ಷಗಾನ ಪ್ರದರ್ಶನ ಕಂಡು ಈ ಕಲೆಯತ್ತ ಆಕರ್ಷಿತರಾಗಿದ್ದರಂತೆ. ಅವರ ಪ್ರತಿಭೆಗೆ ಆರಂಭದಲ್ಲಿ ಉತ್ತೇಜನ ನೀಡಿದ್ದು ಊರಿನ ಶಿಕ್ಷಕರು. ಬಳಿಕ ಮಂಗಳೂರಿನ ಕದಳಿ ಕಲಾ ಕೇಂದ್ರ ಅವರ ಪ್ರತಿಭೆಯನ್ನು ಪ್ರೋತ್ಸಾಹಿಸಿ ಬೆಳೆಸಿತು. ಯಕ್ಷಗಾನ ಮಾತ್ರವಲ್ಲ, ಚೆಂಡೆ ನುಡಿಸುವುದನ್ನೂ ಅವರು ಕಲಿತಿದ್ದಾರೆ. ದೇವಿ ಮಹಾತ್ಮೆ ಪ್ರಸಂಗದಲ್ಲಿ 'ಮಹಿಷಾಸುರ'ನ ಪಾತ್ರ ವಹಿಸಿದ ಅಗ್ಗಳಿಕೆ ಅವರದ್ದು.

'ಯಕ್ಷಶ್ರೇಷ್ಠ' ಶೇಣಿ ಗೋಪಾಲಕೃಷ್ಣ ಭಟ್ಟರು 'ಬಪ್ಪನಾಡು ಕ್ಷೇತ್ರ ಮಹಾತ್ಮೆ' ಪ್ರಸಂಗದಲ್ಲಿ 'ಬಪ್ಪ ಬ್ಯಾರಿ'ಯ ಪಾತ್ರವನ್ನು ಕಟ್ಟಿಕೊಟ್ಟ ರೀತಿಯನ್ನು ಕರಾವಳಿಯ ಜನರು ಮರೆತವರಲ್ಲ. ಶೇಣಿ ಅವರು ಯಕ್ಷಯಾತ್ರೆ ಮುಗಿಸಿ ಒಂದೂವರೆ ದಶಕ ಕಳೆದ ಬಳಿಕವೂ ಅವರು ಕಟ್ಟಿಕೊಟ್ಟ ಬಪ್ಪ ಬ್ಯಾರಿಯ ಪಾತ್ರ ಕಲಾಪ್ರೇಮಿಗಳ ಸ್ಮೃತಿಪಟಲದಲ್ಲಿ ಹಚ್ಚಹಸಿರಾಗಿದೆ. ಆ ಪಾತ್ರ ನಿರ್ವಹಣೆಗಾಗಿ ಶೇಣಿಯವರು ಕುರಾನ್ ಗ್ರಂಥವನ್ನು ಹಾಗೂ ಮುಸ್ಲಿಮರ ಆಚಾರ-ವಿಚಾರಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಬಪ್ಪ ಬ್ಯಾರಿಯ ಪಾತ್ರವನ್ನು ಹಿಂದೂಗಳು ಮಾತ್ರವಲ್ಲ, ಮುಸ್ಲಿಮರು ಸಹ ಮನಸಾರೆ ಸ್ವೀಕರಿಸಿದ್ದರು.

ಹಿಂದೂ ಪುರಾಣಗಳ ಪಾತ್ರಗಳನ್ನು ಮುಸ್ಲಿಂ ಕಲಾವಿದರು, ಮುಸ್ಲಿಂ ಕಥಾನಾಯಕನ ಪಾತ್ರವನ್ನು ಹಿಂದೂ ಕಲಾವಿದರು ಎಲ್ಲರೂ ಒಪ್ಪುವಂತೆ ಕಟ್ಟಿಕೊಟ್ಟ ಪರಿ ಯಕ್ಷಲೋಕದ ಸಾಮರಸ್ಯದ ಹೆಗ್ಗುರುತುಗಳು. ಹಾಲು–ಜೇನು ಬೆರೆಯುವಂತಹ ಇಂತಹ ಸಮರಸ ಭಾವ ಅನೂಚಾನವಾಗಿ ಮುಂದುವರಿಯುವಂತೆ ನೋಡಿಕೊಳ್ಳುವ ಉತ್ತರದಾಯಿತ್ವ ಕಲಾರಸಿಕರದು...

ಮುನ್ನೋಟ 10-04-2022 ರಿಂದ 16-04-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ವೃತ್ತಿರಂಗದ ಬಗ್ಗೆ ಸಂತೋಷವಿರುತ್ತದೆ. ಗುತ್ತಿಗೆ ವ್ಯವಹಾರಸ್ತರಿಗೆ ಹಣದ ಹರಿವು ಚೆನ್ನಾಗಿರುತ್ತದೆ. ನೆರೆಹೊರೆಯವರೊಡನೆ ನಿಷ್ಠುರವಾಗಿ ಅವರಿಂದ ದೂರವಾಗುವ ಸಾಧ್ಯತೆ ಇದೆ. ನಿಮ್ಮ ಸ್ವಂತ ವಿವೇಚನೆಯಿಂದ ಕೆಲವೊಂದು ಅಂತ ಕಲಹಗಳನ್ನು ನಿವಾರಣೆ ಮಾಡಿಕೊಳ್ಳುವಿರಿ. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವಿರುತ್ತದೆ. ಲಲಿತಕಲೆ ಪರಿಣಿತರಿಗೆ ಪ್ರದರ್ಶನ ಮಾಡುವ ಅವಕಾಶಗಳು ದೊರೆಯಲು ಆರಂಭಿಸುತ್ತವೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಕೆಲಸ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯನ್ನು ಕಾಣಬಹುದು. ಅನಿಶ್ಚಿತತೆಯಿಂದ ವ್ಯವಹಾರಗಳಲ್ಲಿ ಲಾಭ ಕಡಿಮೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಸ್ವಲ್ಪಮಟ್ಟಿನ ಮುನ್ನಡೆ ಇರುತ್ತದೆ. ದೈಹಿಕ ಕೆಲಸಗಳನ್ನು ಮಾಡುವ ಕೆಲವರಿಗೆ ಕೆಲಸದೊತ್ತಡ ಕಡಿಮೆಯಾಗುವುದು. ರಾಜಕೀಯ ವ್ಯಕ್ತಿಗಳಿಗೆ ಸ್ವಲ್ಪ ಮಟ್ಟಿನ ಕಿರಿಕಿರಿ ಉಂಟಾಗಬಹುದು. ಕೆಲವರಿಗೆ ಉದರ ಸಂಬಂಧಿ ಕಾಯಿಲೆಗಳು ಕಾಣಿಸಬಹುದು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪಮಟ್ಟಿನ ಏರುಪೇರುಗಳು ಕಂಡುಬಂದರೂ ಅಂತಹ ತೊಂದರೆಯಿರುವುದಿಲ್ಲ. ನಿಶ್ಚಿತ ಆದಾಯಕ್ಕೆ ಕೊರತೆಯಿರುವುದಿಲ್ಲ. ಮಹಿಳೆಯರ ಮನೋಭಿಲಾಷೆಗಳು ಈಡೇರುವ ಸಂದರ್ಭವಿದೆ. ಬೇರೆಯವರ ವಾದ ವಿವಾದಗಳಲ್ಲಿ ಮಧ್ಯಸ್ಥಿಕೆ ವಹಿಸಬೇಕಾದ ಸಂದರ್ಭವಿದೆ, ಎಚ್ಚರವಹಿಸಿ ಮಾತನಾಡಿರಿ. ರಾಜಕೀಯ ಪ್ರೇರಿತ ಕೆಲಸಗಳಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಸ್ವಲ್ಪಮಟ್ಟಿನ ಹಣಕಾಸಿನ ತೊಂದರೆಗಳು ಪರಿಹಾರವಾಗುತ್ತವೆ. ನಿರೀಕ್ಷಿತ ಮೂಲಗಳಿಂದ ಹಣದ ಒಳಹರಿವು ಇರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆಯನ್ನು ಕಾಣಬಹುದು. ಕೆಲಸಕಾರ್ಯಗಳಲ್ಲಿ ಪ್ರಗತಿಯನ್ನು ಕಾಣಬಹುದು. ವ್ಯವಹಾರಗಳಲ್ಲಿ ನಿಮ್ಮ ಶ್ರಮ ಫಲ ನೀಡುವುದು. ಬರಬೇಕಾಗಿದ್ದ ಬಾಕಿ ಹಣದಲ್ಲಿ ಸ್ವಲ್ಪ ಹಣ ಬರುತ್ತದೆ. ಎಣ್ಣೆ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಅಭಿವೃದ್ಧಿ ಇರುತ್ತದೆ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನಿಮ್ಮ ಅಭಿವೃದ್ಧಿಗೆ ಪೂರಕವಾದ ಅವಕಾಶಗಳು ಒದಗಿಬರುತ್ತವೆ. ಅವುಗಳನ್ನು ಸರಿಯಾಗಿ ಬಳಸಿಕೊಳ್ಳಿರಿ. ಆರ್ಥಿಕ ತೊಂದರೆಗಳಿಂದ ಸ್ವಲ್ಪಮುಕ್ತಿಯನ್ನು ಕಾಣಬಹುದು. ಕೋರ್ಟ್ ಕಚೇರಿಯ ವ್ಯಾಜ್ಯಗಳು ಪರಿಹಾರದತ್ತ ಸಾಗಿ ನಿಮಗೆ ಅನುಕೂಲವಾಗುತ್ತದೆ. ವಸ್ತ್ರಾಭರಣಗಳ ಖರೀದಿಯನ್ನು ಮಾಡಲು ಮುಂದಾಗುವಿರಿ. ಸಹೋದ್ಯೋಗಿಗಳ ಮನಮೆಚ್ಚುವಂತೆ ಮಾತನಾಡಿ ಕೆಲಸ ಸಾಧಿಸುವಿರಿ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಅನುಕೂಲ ದೊರೆಯುವಂತಾದರೂ ಕೊನೆಗೆ ದೊರೆಯುವುದು ಕಷ್ಟ. ಕುಟುಂಬದಲ್ಲಿ ಎಲ್ಲರ ಬೆಂಬಲಗಳಿಸಿ ಲಾಭ ಪಡೆಯಲು ಯತ್ನಿಸುವಿರಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆಯನ್ನು ಕಾಣಬಹುದು. ಹಣದ ಒಳಹರಿವು ಅಷ್ಟೇನೂ ಹಿತಕರವಾಗಿ ಇರುವುದಿಲ್ಲ. ಮಹಿಳಾ ಸಂಘಗಳಿಂದ ಸಾಲ ಸಿಗುವ ಸಾಧ್ಯತೆ ಇದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ಅವಿವಾಹಿತರಿಗೆ ವಿವಾಹ ಒದಗುವ ಸಂದರ್ಭವಿದೆ. ಸಾಮಾಜಿಕ ಕ್ಷೇತ್ರದಲ್ಲಿ ಜನಮನ್ನಣೆ ದೊರೆತರೂ ನಿಮ್ಮ ಬಗ್ಗೆ ಸಣ್ಣ ಮಾತುಗಳು ಕೇಳಿಬರುತ್ತವೆ. ಮನರಂಜನಾ ಕಾರ್ಯಕ್ರಮಗಳನ್ನು ನಡೆಸಿ ಕೊಡುವವರಿಗೆ ಬೇಡಿಕೆ ಬರಲಾರಂಭಿಸುತ್ತದೆ. ಮಕ್ಕಳ ವಿಷಯದಲ್ಲಿ ಸ್ವಲ್ಪಮಟ್ಟಿನ ವ್ಯಥೆ ಉಂಟಾಗುತ್ತದೆ. ಸ್ನೇಹಿತರೊಂದಿಗೆ ಆರ್ಥಿಕ ವಿಷಯಗಳಲ್ಲಿ ವಿರಸ ಬರಬಹುದು.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಉತ್ತಮ ಕಾಲ. ತಮ್ಮನ್ನು ಜನಾನುರಾಗಿಗಳೆಂದು ಬಿಂಬಿಸಿಕೊಳ್ಳಲು ಅವಕಾಶವೊಂದು ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಗಳು ದೊರೆತು ಅಧ್ಯಯನಕ್ಕೆ ಸಹಾಯವಾಗುತ್ತದೆ. ಹಣಕಾಸಿನ ವಿಷಯದಲ್ಲಿ ಸ್ವಲ್ಪಮಟ್ಟಿನ ಸುಧಾರಣೆ ಇರುತ್ತದೆ.


ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಕೈಗೆತ್ತಿಕೊಂಡ ಕೆಲಸಗಳು ನಿಮ್ಮ ಸತತ ಪ್ರಯತ್ನದಿಂದಾಗಿ ಯಶಸ್ವಿಯಾಗಲಿವೆ. ಶುಭ ಸಮಾರಂಭಗಳಲ್ಲಿ ಭಾಗಿಯಾಗಲು ದೂರ ಪ್ರಯಾಣ ಮಾಡಬೇಕಾಗಬಹುದು. ಉದ್ಯೋಗ ಕ್ಷೇತ್ರದಲ್ಲಿ ನಿಮ್ಮ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಣೆ ಮಾಡಿ ಎಲ್ಲರ ಗಮನ ಸೆಳೆಯುವಿರಿ. ಗೃಹ ನಿರ್ಮಾಣ ಅಥವಾ ನವೀಕರಣವನ್ನು ಕೈಗೆತ್ತಿಕೊಳ್ಳುವ ಸಂದರ್ಭವಿದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಸಮಾಧಾನದಿಂದ ವ್ಯವಹಾರ ಮಾಡುವುದರಿಂದ ಎಲ್ಲ ಕೆಲಸಗಳು ಕೈಗೂಡುತ್ತವೆ. ಗೃಹ ನಿರ್ಮಾಣ ಕಾರ್ಯದಲ್ಲಿ ಸ್ವಲ್ಪ ಹಿನ್ನಡೆಯಾದರೂ ನಂತರ ಪೂರ್ಣಗೊಳ್ಳುತ್ತದೆ. ಅನವಶ್ಯಕ ವ್ಯವಹಾರಗಳಲ್ಲಿ ಹಣ ತೊಡಗಿಸುವುದು ಬೇಡ. ಹೊಸ ಯೋಜನೆಯೊಂದನ್ನು ನಿರೂಪಿಸುವಲ್ಲಿ ಬಹಳ ಯಶಸ್ಸನ್ನು ಕಾಣುವಿರಿ. ಚಿನ್ನ, ಬೆಳ್ಳಿ ವ್ಯವಹಾರ ಮಾಡುವವರಿಗೆ ವ್ಯವಹಾರ ವೃದ್ಧಿಸುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಸಾಹಸ ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ಕ್ರೀಡಾಪಟುಗಳಿಗೆ ನಿರೀಕ್ಷಿತ ಸಹಾಯ ದೊರೆತು ಸಾಧನೆ ಮಾಡುವ ಅವಕಾಶ ದೊರೆಯುತ್ತದೆ. ಆರ್ಥಿಕ ಅಭಿವೃದ್ಧಿಯತ್ತ ಹೆಚ್ಚಿನ ಗಮನ ಕೊಡುವಿರಿ. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಉತ್ತಮ ಹೆಸರು ಬರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಸರ್ಕಾರಿ ಉದ್ಯೋಗಿಗಳಿಗೆ ವರ್ಗಾವಣೆಯಾಗುವ ಸಾಧ್ಯತೆ ಇದೆ. ನಿಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಡುವಿರಿ. ಸಾಮಾಜಿಕ ಕಾರ್ಯಕರ್ತರುಗಳಿಗೆ ಹೆಚ್ಚಿನ ರೀತಿಯ ಪ್ರೋತ್ಸಾಹ ಮತ್ತು ಜನ ಸಹಾಯ ದೊರೆಯುತ್ತದೆ. ವ್ಯವಹಾರದಲ್ಲಿ ಇತರರ ವಿಷಯದಲ್ಲಿ ವಿನಾಕಾರಣ ಅಸಹನೆಯನ್ನು ತೋರಿಸುವುದರಿಂದ ನಿಮಗೆ ಸಿಗಬೇಕಾಗಿದ್ದ ಲಾಭ ಕಡಿಮೆಯಾಗುತ್ತದೆ.

ಪದಬಂಧ 2733



ಮೇಲಿನಿಂದ ಕೆಳಕ್ಕೆ
1. ಸಂತೋಷ ಉತ್ಸಾಹಗಳೆರಡು ಬೆರೆತ ಲವಲವಿಕೆಯ ಸ್ಫೂರ್ತಿ 3
2. ಹೊಸದಾದ ಕೋಮಲ ಹೂವು 5
3. ಸುಖವಾಗಿ ಕುಳಿತುಕೊಳ್ಳಬಹುದಾದಂತಹ ಪೀಠ, ಕುರ್ಚಿ 5
4. ವ್ಯಸನ ಸ್ವಲ್ಪ ಕಡಿಮೆಯಾದಾಗ ಬಟ್ಟೆ ಸಿಗುತ್ತೆ 3
7. ಪರರಿಂದೊದಗುವ ಶ್ರೇಷ್ಠತೆ 3
8. ಪುಣ್ಯ ಸಂತತಿ ಪಡೆದ ನಮ್ಮ ದೇಶ ಮಾತೆ 3
12. ಪ್ರೀತಿಯಿಂದ ಓಲೈಸಿ ಮುದ್ದು ಮಾಡು 3
14. ಸೂರ್ಯೋದಯಕ್ಕೆ ಮುನ್ನ ಬೆಳಕಿನ ಸ್ಥಿತಿ 3
16. ಜೋ ಜೋ ಎನ್ನುವ ತಾಯಿಯ ಹಾಡು 3
18. ರಸದ ಹರವಿನಲ್ಲಿ ಕಾಣುವ ಜೋರು 3
19. ಒಳಗೊಳಗೆ ಹರಿಯುವಂತದ್ದು 5
20. ರಾಮ ನವಮಿಯಂದು ತಂಪಾಗಿಸುವ ಸವಿ ದ್ರವ 5
21. ನೀರಿನಿಂದ ಹುಟ್ಟಿದವಳು 3
24. ದಶರಥಾತ್ಮಜನಿಗೆ ಸಿಗುವ ಬಿಡುವು 3
26. ಕಾಲಿನ ಬದಿ ನೀರು ಹರಿವ ವ್ಯವಸ್ಥೆ 3

ಎಡದಿಂದ ಬಲಕ್ಕೆ
1. ಕಾಡಂತೆ ಕಾಣುವ ನಗರದಲ್ಲಿನ ಹೂದೋಟ 5
3. ತನ್ನೊಳಗಿರುವ ಶಕ್ತಿಗೆ ಸಿಗಬೇಕಾದ ಮನ್ನಣೆ 5
5. ರಘುವಂಶದವನಾಗಿ ಖ್ಯಾತನಾದ ರಾಮ ಹಿಂದುಮುಂದು 3
6. ಸರಸದ ಜೊತೆ ಮಾತಿನ ಹರಟೆ 3
8. ಹೃದಯ ಸ್ಪಂಧನಕ್ಕೆ ಪ್ರತಿಕ್ರಿಯಿಸುವವಳು 3
9. ದೇವರೆ ಕಾಪಾಡು ಎನ್ನುವ ಮೊರೆ 3
10. ಅಲ್ಪಕಾರದ ರಾಜ್ಯಾಡಳಿತ ವ್ಯವಸ್ಥೆ 3
11. ಮೋಹನದಾಸ ಗಾಂಧಿಯ ಹೆಸರಲ್ಲಿ ವಿರಳವಾದ ಕರ್ಮ 3
13. ಪಾಠವನ್ನು ಮನಸ್ಸಿನಲ್ಲಿ ಗಟ್ಟಿಮಾಡಿಕೊಳ್ಳುವಿಕೆ 3
15. ಚಿನ್ನ ಮತ್ತು ನಗದು ನಾಣ್ಯಗಳನ್ನು ಭದ್ರಗೊಳಿಸುವ ಪೆಟ್ಟಿಗೆ 3
17. ಭುವಿಯ ದೇವನೆಂಬ ಹೆಸರಿಗೆ ಪಾತ್ರನಾದವ 3
19. ಆಕರ್ಷಣೆಯಿಂದ ಒಡೆವ ಚಿಗುರು 3
21. ಲಘೂಲಘೂನೆ ಮಾಡುವ ಸ್ನಾನ 3
22. ಸಮುದ್ರ ಉಕ್ಕಿದಾಗ ರಾಮನ ಅನುಜ ಸಿಗುತ್ತಾನೆ 3
23. ಸಂಸ್ಕೃತ ಜಲ 3
24. ಭೋಗ ಮೋಜುಗಳ ಲಹರಿ 3
25. ಕುದುರೆಗಳೆಳವ ಬದುಕಿನ ಬಂಡಿ 3
27. ಹಾಡುಗಾರಿಕೆ 3
28. ದಸರೆಯಲ್ಲಿ ಬರುವ ಒಂಭತ್ತನೆ ದೊಡ್ಡ ದಿನ 5
29. ಪರಿಸೆಯಲ್ಲಿ ಕಡಲೆಪುರಿ, ಬತ್ತಾಸುಗಳ ಜೊತೆಗೆ ಸಿಗುವ ಸಿಹಿಗಡಲೆ 5

ಪದಬಂಧ ಉತ್ತರ -2732

ಮೇಲಿಂದ ಕೆಳಕ್ಕೆ

1. ಅತಿಕಾಯ 2.ತಿಮಿಂಗಲ 3.ಸಾರ್ವತ್ರಿಕ 4.ಲವಲೇಶ 6.ನವೀನ 8.ಕುರುಕುತಿಂಡಿ 10.ಮಲ್ಲಿಕಾರ್ಜುನ 11.ಒಡಲು 12.ಪುದೀನ 16.ವಿರಾಜ 17. ಗಾವಿಲರು 18.ಗಜಗಾತ್ರ 19.ಮತದಾರ 20. ಜಡಮುನಿ

ಎಡದಿಂದ ಬಲಕ್ಕೆ

1. ಅನುಮತಿ ಸಾಯಂಕಾಲ 5.ಗಗನಯಾತ್ರಿ 7.ಯದುಕುಲ 9.ಕಮಲೇಶ 11.ಒನಪು 13.ಕುರುಡ 14.ದೀಪಿಕಾ 15.ಉಳಿನ 17.ಗಾರುಡಿಗ 19.ಮನಸಿಜ 21.ಜನಜನಿತ 22.ರುದ್ರನೇತ್ರ 23.ರಕ್ತದಾನಿ


ನೆಲಗುಣದ ಹಣ್ಣು, ಮೈತುಂಬ ಕಣ್ಣು!

ಪಿನಾಕ

ಪತ್ರಕರ್ತ ಹಾಗೂ ಪರಿಸರ ಕಾರ್ಯಕರ್ತನ ರೂಪದಲ್ಲಿ ನಾಡಿನ ತುಂಬಾ ಅನಾವರಣಗೊಂಡಿರುವ ನಾಗೇಶ ಹೆಗಡೆ ಅವರದು ಹಲವು ಚಾಚುಗಳ ಪ್ರತಿಭೆ. ಶಿವರಾಮ ಕಾರಂತರಂತೆಯೇ ಇವರ 'ಹುಚ್ಚು' ಮನಸ್ಸಿನ ವ್ಯಕ್ತಿತ್ವಕ್ಕೂ ಹತ್ತಾರು ಮುಖಗಳು. ಪರಿಸರ ಕಾಳಜಿಯ ಹುಚ್ಚನ್ನೂ ವಿಜ್ಞಾನ ಬರವಣಿಗೆಯ ಹುಚ್ಚನ್ನೂ ಸಹಜ ಕೃಷಿಯ ಹುಚ್ಚನ್ನೂ ಚಳವಳಿಯ ಹುಚ್ಚನ್ನೂ ಅಭ್ಯುದಯ ಪತ್ರಿಕೋದ್ಯಮದ ಹುಚ್ಚನ್ನೂ ವಿಭಿನ್ನ ನುಡಿಗಟ್ಟು ಟಂಕಿಸುವ ಭಾಷಾಶಾಸ್ತ್ರದ ಹುಚ್ಚನ್ನೂ ಹೃದಯಕ್ಕೆ ಅಂಟಿಸಿಕೊಂಡವರು ಅವರು. ಈ ವಾಮನಮೂರ್ತಿ ಪತ್ರಿಕೋದ್ಯಮಕ್ಕೆ ದಾಪುಗಾಲು ಹಾಕಿ, ತ್ರಿವಿಕ್ರಮನಾಗಿ ಬೆಳೆದು ಬರೊಬ್ಬರಿ ಐವತ್ತು ವರ್ಷಗಳು ಸಂದಿರುವ ನೆನಪಿನಲ್ಲಿ ಒಡನಾಡಿಗಳು ಹೊರತಂದಿರುವ ಅಭಿನಂದನಾ ಗ್ರಂಥ 'ನೆಲಗುಣ'.

ಪಶ್ಚಿಮಘಟ್ಟದ ತೊಟ್ಟಿಲಿನ ಬಕ್ಕೆಮನೆಯಲ್ಲಿ ಜನಿಸಿದ ಹೆಗಡೆ ಅವರಿಗೆ ಮಣ್ಣಿನ ಮೇಲೆ ಅಗಾಧ ಪ್ರೀತಿ. 'ಇರುವುದೊಂದೇ ಭೂಮಿ' ಎಂದು ಕನವರಿಸಿದ, ಕನವರಿಸುವ ಈ ಪತ್ರಕರ್ತ 'ಗಗನಸಖಿಯರ ಸೆರಗ ಹಿಡಿದು' ಆಕಾಶದಲ್ಲೂ ಹಾರಾಡಿದವರು. ಸಹಜವಾಗಿಯೇ ಅವರ ಬರವಣಿಗೆಯ ವಿಷಯವ್ಯಾಪ್ತಿ ಭೂಮ್ಯಾಕಾಶದವರೆಗೆ ಹಬ್ಬಿ ನಿಂತಿದೆ. ಹೆಗಡೆ ಅವರು ಬರೆದ ಹೊತ್ತಗೆಗಳ ಸಂಖ್ಯೆ ಅರ್ಧ ಸೆಂಚುರಿ ಬಾರಿಸಿದ್ದರೂ ಅವರ ಹೆಸರು ಪ್ರಸ್ತಾಪವಾದೊಡನೆ ಮೊದಲು ನೆನಪಿಗೆ ಬರುವುದು 'ಪ್ರಜಾವಾಣಿ'ಯ ವಿಜ್ಞಾನ ವಿಶೇಷ ಅಂಕಣವೇ. ಆ ಅಂಕಣಕ್ಕೂ ಈಗ 40ರ ಹರೆಯ! ಇಲ್ಲಿನ ಹಲವು ಲೇಖನಗಳಲ್ಲಿ ಆ ಅಂಕಣ ಮತ್ತೆ ಮತ್ತೆ ಪ್ರಸ್ತಾಪಗೊಂಡಿರುವುದು ಅದು ಗಳಿಸಿರುವ ಓದುಗ ಪ್ರೀತಿಗೆ ಸಾಕ್ಷಿ.

ವಿಜ್ಞಾನ ಸಾಹಿತ್ಯವು ತನ್ನ ಜಟಿಲ 'ವ್ಯಾಕರಣ'ದಲ್ಲಿ ಬಂಧಿಯಾಗದಂತೆ ಛಂದೋಬದ್ಧ ರಾಜಮಾರ್ಗವನ್ನು ನಿರ್ಮಿಸಿ ನಗೆ ಬೀರಿದವರಲ್ಲವೇ ಈ ಲೇಖಕ? 'ಹೆಗಡೆಯವರು ಮೊದಲು ತಮ್ಮ ಕನ್ನಡವನ್ನು ಕಟ್ಟಿಕೊಂಡು, ಬಳಿಕ ತಮ್ಮ ಬರಹಗಳಿಂದ ಕನ್ನಡವನ್ನು ಕಟ್ಟಿದ್ದಾರೆ' ಎಂಬ ಕೆ.ವಿ. ಅಕ್ಷರರ ಮಾತು ಖಂಡಿತ ದಿಟ ಎನ್ನುವುದಕ್ಕೆ ಅವರ ಯಾವುದೇ ಬರಹವೂ ಸಾಕ್ಷ್ಯ ನುಡಿಯುತ್ತದೆ. 'ಕ್ಯಾಪ್ಸೂಲಗಿತ್ತಿ', 'ನ್ಯಾನೊಹೇನು', 'ಹಾರುವತಟ್ಟೆಯ ದಶಾವತಾರಗಳು', 'ಮುಷ್ಟಿಯಲ್ಲಿ ಮಿಲೇನಿಯಂ'... ಅವರು ಕನ್ನಡ ಕಟ್ಟುವ ಕ್ರಿಯೆಯ ಪರಿಶೀಲನೆಗಾಗಿ ನಿಮಗೆ ಎಷ್ಟು ಸಾಕ್ಷಿ ಬೇಕು ಹೇಳಿ? ಅಂದಹಾಗೆ, ಹೆಗಡೆ ಅವರ ಬರಹಗಳನ್ನು ವಿಜ್ಞಾನ ಲೇಖನಗಳ ಪ್ರಭೇದದಲ್ಲಿ ಮಾತ್ರ ವರ್ಗೀಕರಿಸಿ ನೋಡದೆ ಕನ್ನಡ ಸಾಹಿತ್ಯದ ಮುಖ್ಯವಾಹಿನಿಯ ಕೃತಿಗಳನ್ನಾಗಿಯೂ ನೋಡುವ ಅಗತ್ಯವಿದೆ.



ನೆಲಗುಣ-ನಾಗೇಶ ಹೆಗಡೆ ಅಭಿನಂದನಾ ಗ್ರಂಥ
ಸಂಪಾದಕ: ಗುರುರಾಜ್ ಎಸ್. ದಾವಣಗೆರೆ
ಪ್ರ:ನಾಗೇಶ ಹೆಗಡೆ ಅಭಿನಂದನಾ ಸಮಿತಿ
ಸಂ: 9449177628

ಪು: 434 ₹350

ಒಳನೋಟ

ವೈದೇಹಿ, ಸಿ.ಎನ್. ರಾಮಚಂದ್ರನ್, ಡಿ. ಉಮಾಪತಿ, ಜಯಂತ ಕಾಯ್ಕಿಣಿ ಸೇರಿದಂತೆ ಹಲವು ಹಿರಿಯರ ಲೇಖನಗಳು ಈ ಸಂಗ್ರಹದಲ್ಲಿವೆ. ವ್ಯಕ್ತಿತ್ವದ ಒಂದೊಂದು ಒಳಗುಟ್ಟನ್ನು ಅವುಗಳು ಹೊಳೆಯಿಸುತ್ತವೆ. ಹೆಗಡೆ ಅವರ ತಂಗಿ ಶಾರದಾ ದಾಬಡೆ ಅವರು ಬರೆದ ಲೇಖನ ನಾವು-ನೀವೆಲ್ಲ ಕಾಣುತ್ತಿರುವ 'ಇಂದಿನ ಹೆಗಡೆ' ರೂಪುಗೊಂಡ ಕಥೆಯನ್ನು ಸೊಗಸಾಗಿ ಕಟ್ಟಿಕೊಡುತ್ತದೆ. ಪುಟ್ಟ ಹುಡುಗ ಬೆಟ್ಟಗುಡ್ಡಗಳನ್ನೇರಿ ಶಾಲೆಗೆ ಹೋಗುತ್ತಿದ್ದುದರಿಂದ ಹಿಡಿದು ಪಟ್ಟಣದಲ್ಲಿ ಬೇರೆಯವರ ಮನೆಯಲ್ಲಿ ಉಳಿದು, ಕೊನೆಗೆ ಜೆಎನ್‌ಯು ಅಂಗಳದಿಂದ ಹೊರಬಂದು ದೈತ್ಯನಾಗಿ ಬೆಳೆದವರೆಗಿನ ಪರಿಯನ್ನು ತಂಗಿಯ ಕಣ್ಣುಗಳಿಂದ ಕಂಡರಿಸಿದ ನೋಟಗಳು ಹೃದಯಸ್ಪರ್ಶಿ. ಜೆಎನ್‌ಯುನಲ್ಲಿ ಸಹಪಾಠಿಯಾಗಿದ್ದ ವಿಘ್ನೇಶ್ ಭಟ್ ಅವರು ನೀಡುವ ವಿವರಗಳು ಸಹ 'ಯುವಕ ಹೆಗಡೆ' ವ್ಯಕ್ತಿತ್ವವನ್ನು ತೆರೆದಿಡಲು ಯಶಸ್ವಿಯಾಗಿವೆ.

'ಪ್ರಜಾವಾಣಿ'ಯ ಕರ್ನಾಟಕ ದರ್ಶನ ಪುರವಣಿ ಮೂಲಕ ಅಭ್ಯುದಯ ಪತ್ರಕರ್ತರ ತಂಡವನ್ನೇ ಕಟ್ಟಿದವರು ಹೆಗಡೆ. 'ತರಾಸು, ಅನಕೃ ಅವರನ್ನು 'ಓದುವ ಸಂಸ್ಕೃತಿ' ಬೆಳೆಸಿದವರು ಎನ್ನುವಂತೆಯೇ ಇವರು ಬರೆಯುವ ತಲೆಮಾರೊಂದನ್ನು ರೂಪಿಸಿದ ಮೇಷ್ಟ್ರು' ಎಂದು ಕರೆದಿರುವುದು ಕೂಡ ಉತ್ಪ್ರೇಕ್ಷೆಯ ಮಾತೇನಲ್ಲ. ಹೆಗಡೆಯವರ ಕುರಿತು ಇಲ್ಲಿರುವ ದೊಡ್ಡ ಲೇಖನಗಳಿಗಿಂತಲೂ ಲೇಖಕರ ಕುರಿತು ಹೆಗಡೆಯವರು ಬರೆದ ಪುಟ್ಟ ಟಿಪ್ಪಣಿಗಳೇ ಹೆಚ್ಚು ರಸವತ್ತಾಗಿವೆ. ಒಂದೇ ಗುಕ್ಕಿನಲ್ಲಿ ಓದಿಸಿಕೊಂಡು ಹೋಗಿ, ತುಟಿಯಂಚಿನಲ್ಲೊಂದು ನಗೆಯನ್ನೂ ಮೂಡಿಸುತ್ತವೆ. ಎಲ್ಲಿಯೋ ಒಂದುಕಡೆ ಫೋಟೊ ಅಲ್ಬಂ ಕೊಟ್ಟು ಕೈತೊಳೆದುಕೊಳ್ಳುವ ಬದಲು ಆಯಾ ಲೇಖನದಲ್ಲಿ ಚರ್ಚಿತವಾದ ವಿವರಗಳಿಗೆ ಪೂರಕವಾದ ಚಿತ್ರಗಳನ್ನು ಅಲ್ಲಲ್ಲೇ ನೀಡಿರುವುದು ಗಮನಾರ್ಹವಾಗಿದೆ. ಗಗನಸಖಿಯರ ನಡುವಿನ ಬಡಪಾಯಿ ಪತ್ರಕರ್ತನ ಚಿತ್ರವಂತೂ ಅನನ್ಯವಾಗಿದೆ.

ಕೃತಿಯ ಸಂಪಾದಕ ಗುರುರಾಜ್ ದಾವಣಗೆರೆ ಅವರು ಹೆಗಡೆಯವರ ಸಹೋದ್ಯೋಗಿಗಳಿಂದಲೇ ಹೆಚ್ಚಿನ ಲೇಖನಗಳನ್ನು ಬರೆಸಿದ್ದೇಕೋ? ಈ ಕಾರಣದಿಂದ 'ಪತ್ರಕರ್ತ ಹೆಗಡೆ'ಯವರೇ ಢಾಳಾಗಿ ಎದ್ದುಕಂಡಿದ್ದಾರೆ. ಹೆಗಡೆಯವರು ಗೌರವಿಸುವ ಸಿ.ಎನ್.ಆರ್. ರಾವ್, ಅವರ ಒಡನಾಡಿಗಳಾದ ಮೇಧಾ ಪಾಟ್ಕರ್, ರಾಜೇಂದ್ರ ಸಿಂಗ್, ವಂದನಾ ಶಿವ, ದೇವಿಂದರ್ ಶರ್ಮಾ ಅವರಂತಹ ಘಟಾನುಘಟಿಗಳಿಂದಲೂ ಬರೆಸಿದ್ದರೆ ಹೆಗಡೆಯವರ ವ್ಯಕ್ತಿತ್ವದ, ಅವರ ಹೋರಾಟ-ಚಳವಳಿ-ಚಟುವಟಿಕೆಗಳ ಕುರಿತ ಇನ್ನಷ್ಟು ಒಳನೋಟಗಳು ದಕ್ಕುತ್ತಿದ್ದವು.


ಹೆಗಡೆ ಅವರ ಪತ್ನಿ ರೇಖಾ ಅವರ ಹಳೆಯ ನಿರೂಪಿತ ಲೇಖನ ಪ್ರಕಟಿಸುವ ಬದಲು, ಅವರಿಂದಲೇ ಹೊಸದಾಗಿ ಲೇಖನವೊಂದನ್ನು ಬರೆಸಿದ್ದರೆ ಚೆನ್ನಾಗಿತ್ತು. ಆಗ ನಡುಬಾಗದ ಪತ್ರಕರ್ತ, ನಡುರಾತ್ರಿ ಸ್ವಗತದಲ್ಲಿ ತೊಡಗುವುದರಿಂದ ಅವರು ಅನುಭವಿಸುವ ಕೀಟಲೆ ಹಾಗೂ ಹೊಸದೊಂದು ಪುಸ್ತಕ ಬಂದಾಗ ಅವರು ತೋರುವ ಸಂಭ್ರಮದ ರೇಖಾಚಿತ್ರಣವೊಂದು ಸಿಗುತ್ತಿತ್ತು. ಹಾಗೆಯೇ ಹೆಗಡೆಯವರ 'ನಡುಭಾಗ'ದ ವಿಚಾರಗಳನ್ನು (ಎಡ, ಬಲ ತೊಡೆತಟ್ಟಿ ನಿಂತಿರುವ ಈ ಹೊತ್ತಿನ ಜರೂರು) ತಿಳಿಯುವಂತಹ ಸಂದರ್ಶನವೊಂದು ಇದ್ದಿದ್ದರೆ ಕೃತಿಯ ತೂಕ ಇನ್ನೂ ಹೆಚ್ಚುತ್ತಿತ್ತು. ಆದರೆ, ಅಭಿನಂದನೆಯ ನೆಪದಲ್ಲಿ ಈ ಗ್ರಂಥವೊಂದು ಭಜನಾ ಕಲಾಪವಾಗದೆ ಪತ್ರಿಕೋದ್ಯಮ, ಪರಿಸರ, ಜ್ಞಾನ, ವಿಜ್ಞಾನ, ಕೃಷಿ ವಿಷಯಗಳ ಕಲರವವಾಗಿದೆ ಎನ್ನುವುದನ್ನು ಒಪ್ಪಬೇಕು. ಅದನ್ನು ಹಾಗೆ ರೂಪಿಸಿದ್ದಕ್ಕಾಗಿ ಸಂಪಾದಕರಿಗೆ ಅಭಿನಂದನೆಯೂ ಸಲ್ಲಬೇಕು. ❖

ಅಂತಃಕರಣದ ಕನವರಿಕೆಗಳು

ಮಹತಿ

ಮುಮ್ತಾಜ್ ಬೇಗಂ ಗಂಗಾವತಿಯವರು. ವೃತ್ತಿಯಿಂದ ಸಹಾಯಕ ಪ್ರಾಧ್ಯಾಪಕಿ. 2016ರಲ್ಲಿ 'ಕಬಂಧ ಬಾಹುಗಳು ಬೇಕಿಲ್ಲ' ಕವನ ಸಂಕಲನ ಪ್ರಕಟಿಸಿದ್ದ ಅವರು, ಆರು ವರ್ಷಗಳ ನಂತರ ತಮ್ಮ ಎರಡನೇ ಸಂಕಲನ 'ಕೊಂದ ಕನಸುಗಳ ಕೇಸು' ಹೊರತಂದಿದ್ದಾರೆ. ಸಮಕಾಲೀನ ವಿದ್ಯಮಾನಗಳಿಗೆ ಸೂಕ್ಷ್ಮ ಮನಸ್ಸೊಂದರ ಪ್ರತಿಕ್ರಿಯೆಯ ರೂಪದಲ್ಲಿ ಈ ಸಂಕಲನದ ಕವಿತೆಗಳು ಮುಖ್ಯವೆನ್ನಿಸುತ್ತವೆ.

ಮಾತಿನ ಧ್ವನಿಶಕ್ತಿಯ ಮೇಲೆ ಅಬ್ಬರ ಮೇಲುಗೈ ಸಾಧಿಸಿರುವ ಸಂದರ್ಭದಲ್ಲಿ, ಕವಿ ಕೊಂಚ ಮಾತಾಳಿಯಾಗುವುದು ಅನಿವಾರ್ಯ ಎನ್ನಿಸುವಂತೆ ಮುಮ್ತಾಜ್‌ರ ಕವಿತೆಗಳಿವೆ. ಕಾವ್ಯದ ಧ್ವನಿ-ಲಯದ ಬಗ್ಗೆ ಅರಿವಿದ್ದೂ, ಪರಿಣಾಮದ ಬಗ್ಗೆಯೇ ಕವಯಿತ್ರಿ ಹೆಚ್ಚು ಆಸಕ್ತರು. ಅದರ ಫಲವಾಗಿಯೇ ಇಲ್ಲಿನ ಬಹುತೇಕ ರಚನೆಗಳು ಮುಕ್ತತೆಯನ್ನು ಹೆಚ್ಚು ನಂಬಿಕೊಂಡಿವೆ, ಆಶಯಪ್ರಧಾನವಾಗಿವೆ.



ಕೊಂದ ಕನಸುಗಳ ಕೇಸು
ಲೇ: ಡಾ. ಮುಮ್ತಾಜ್ ಬೇಗಂ
ಪ್ರ: ಜೀವನ ಪ್ರಕಾಶನ, ಗಂಗಾವತಿ
ಸಂ: 9986666075

ಪು: 104 ₹100

ಸಂಕಲನದ ಮೊದಲ ಕವಿತೆ, 'ನಾ ಬುರ್ಖಾ ತೆಗೆದು ಬರುವೆ' ಗಮನಿಸಿ. ಬುರ್ಖಾ ಮತ್ತು ಮುಸುಕು ತೆಗೆದು ಹೊರಗೆ ಬಂದಾಗ – ಗುಡಿಯ ಗಂಟೆ, ಚರ್ಚಿನ ಪ್ರಾರ್ಥನೆ ಹಾಗೂ ಮಸೀದಿಯ ಆಜಾನ್‌ಗಳು ಧ್ವನಿಸಿ, ಹೊಸದೊಂದು ರಾಗ ಹೊರಹೊಮ್ಮಲಿ ಎನ್ನುತ್ತದೆ ಕವಿತೆ. 'ಮಂದಿರದ ಮೇಲೆ ನಲಿವ / ಹಕ್ಕಿಗಳು ಮಸೀದಿಯ ಮಿನಾರಿನಲಿ / ಗೂಡು ಕಟ್ಟಲಿ / ಹಕ್ಕಿಗಳಿಗೆ ಮಕ್ಕಳು ಹುಟ್ಟಿ / ಮಂದಿರ ಮಸೀದಿ ಒಡೆವ / ಜನಕೆ ಶಾಂತಿ ಸಾರಲಿ' – ವಿಶ್ಲೇಷಣೆಯ ಹಂಗಿಲ್ಲದ, ಮನಸ್ಸನ್ನು ಆರ್ದ್ರಗೊಳಿಸುವ ಇಂಥ ಸಾಲುಗಳು ಸಂಕಲನದಲ್ಲಿ ಸಾಕಷ್ಟಿವೆ. ಇದೇ ಪದ್ಯದ ಜೊತೆಗೆ ಓದಿಕೊಳ್ಳಬಹುದಾದ 'ಎಲ್ಲಿದ್ದಾನೆ...!' ಕವಿತೆಯ – 'ಆಸ್ಪತ್ರೆಯ ಗೋಡೆಗಳು / ಆಲಿಸಿದಷ್ಟು ಪ್ರಾರ್ಥನೆಯನು / ಚರ್ಚಿನಲಿ ಕುಳಿತ ಯೇಸು ಕ್ರಿಸ್ತ / ಆಲಿಸಿರಲಾರ' ಎನ್ನುವ ಸಾಲು, ಈ ಜಗತ್ತಿಗೆ ಬೇಕಾದುದೇನು ಎನ್ನುವುದನ್ನು ಸೂಚಿಸುವಂತಿದೆ. ಆ ದೇವರು ನಮಗೆ ಬರುವುದಾದರೆ ಮನುಷ್ಯನಾಗಿಯೇ ಬರಲಿ, ಮನುಷ್ಯತ್ವ ಸಾಯದಂತೆ ಜೀವಂತವಾಗಿಡಲಿ ಎನ್ನುವ ಸಾಲುಗಳು ಸಂಕಲನದ ಒಟ್ಟಾರೆ ಆಶಯವೂ ಹೌದು.

'ನಿನ್ನ ಸುತ್ತಲಿನವರು' ಕವಿತೆ, ಸಮಾಜದ ರಾಡಿಯಲ್ಲಿ ಮನುಷ್ಯತ್ವ ಉಸಿರುಗಟ್ಟುತ್ತಿರುವುದನ್ನು ಸೂಚಿಸುತ್ತದೆ. 'ನಮ್ಮನ್ನು ಬೆಂಕಿಯ ಮುಂದೆ ನಿಲ್ಲಿಸಿ / ಒಮ್ಮೊಮ್ಮೆ ಬೆಂಕಿಯಲಿ / ಮಲಗಿಸಿ ಸಾರ್ಥಕತೆ ಪಡೆದವರು' ಎನ್ನುವ ಸಾಲು, ಹೆಣ್ಣನ್ನು ಸಮಾಜ ನಡೆಸಿಕೊಂಡು ಬಂದಿರುವ ಕಥನವಾಗಿರುವಂತೆಯೇ ವರ್ತಮಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಅನುಭವಿಸುತ್ತಿರುವ ತಲ್ಲಣವೂ ಆಗಿದೆ. 'ಸುರಯ್ಯ, ಕೌಸರ್, ಹಸೀನಾ, ಮಲಾಲ, ಸುಹಾನರನು ತಾಗಿದ ಕಲ್ಲು, ಭರ್ಚಿ, ಆಸಿಡ್, ಬಾಂಬುಗಳ ವಿರುದ್ಧ ಸಾರಬೇಕಿದೆ ಸಮರ' ಎನ್ನುವ 'ಗೋರಿಯೊಳಗಿನ ಮಾತು', ಎಲ್ಲ ವ್ಯಾಧಿಗಳಿಗೆ ಸಂವಿಧಾನವೇ ಮದ್ದೆನ್ನುವ 'ಕೋಮು ವ್ಯಾಧಿ', ಮತ್ತೆ ಮತ್ತೆ ಅಸ್ತಿತ್ವಕ್ಕೆ ಎದುರಾಗುವ ಪ್ರಶ್ನೆಗಳು ಉಂಟುಮಾಡುವ ತಳಮಳಗಳ ಕುರಿತಾದ 'ಪೌರತ್ವ' – ಇವೆಲ್ಲವೂ ಸಮಕಾಲೀನ ಬಿಕ್ಕಟ್ಟುಗಳ ಹಾಡುಪಾಡುಗಳಾಗಿವೆ.

ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಪ್ರಯತ್ನಗಳು ಬಿರುಸಿನಿಂದ ನಡೆಯುತ್ತಿರುವ ವರ್ತಮಾನದಲ್ಲಿ, ಅಂತಃಕರಣಕ್ಕೂ ಮಿಗಿಲಾದ ಧರ್ಮ ಮತ್ತೊಂದಿಲ್ಲ ಎನ್ನುವುದನ್ನು ಇಲ್ಲಿನ ಕವಿತೆಗಳು ಹೇಳುತ್ತಿರುವಂತಿದೆ.

ಸಾಮಾಜಿಕ ಅಭಿವ್ಯಕ್ತಿಯಂತೆಯೇ ಖಾಸಗಿ ತವಕತಲ್ಲಣಗಳನ್ನೂ ಇಲ್ಲಿನ ಕವಿತೆಗಳಲ್ಲಿ ಗುರ್ತಿಸಬಹುದು. ನೆರಿಗೆ ಲಂಗದ ಹುಡುಗಿ, ನಂತರದ ವರ್ಷಗಳಲ್ಲಿ ನಡೆಸಿದ ಪ್ರೀತಿ ಮತ್ತು ಮಾನವೀಯತೆಯ ಹುಡುಕಾಟದ ಕವಿತೆಗಳು ಆಪ್ತವಾಗಿವೆ. 'ಬಾಹುಬಂಧನವು ಸಾವಿರ ಬಿಡುಗಡೆಯ ಆರಂಭವು' ಎನ್ನುವ ಮಾತು, ಪ್ರೀತಿಯ ಮಾಂತ್ರಿಕತೆಯನ್ನು ಸೂಚಿಸುವಂತೆಯೇ ಕಾವ್ಯದ ಕುರಿತ ನೆಚ್ಚುಗೆಯೂ ಆಗಿದೆ. ಬಿಡುಗಡೆಯ ಹಲವು ಸಾಧ್ಯತೆಗಳನ್ನು ಒಳಗೊಂಡಿರುವ ಕಾರಣದಿಂದಾಗಿ ಈ ಕವನ ಸಂಕಲನ ಮುಖ್ಯವೆನ್ನಿಸುತ್ತದೆ.

ಕರಡು ತಿದ್ದುವುದರ ಬಗ್ಗೆ ಕನ್ನಡ ಪುಸ್ತಕೋದ್ಯಮಕ್ಕಿರುವ ಉದಾಸೀನ 'ಕೊಂದ ಕನಸುಗಳ ಕೇಸು' ಸಂಕಲನದಲ್ಲೂ ಇಣುಕಿದೆ. ಸಂಕಲನದುದ್ದಕ್ಕೂ ಉಳಿದುಕೊಂಡಿರುವ ಕಾಗುಣಿತ ದೋಷಗಳು ಓದಿನ ರುಚಿ ಕೆಡಿಸುವಂತಿವೆ. ❖

ಕರುಳ ದನಿಯಲ್ಲಿ ಮಾನವೀಯತೆಯ ಬನಿ

ಎಚ್. ದಂಡಪ್ಪ

ನಿಂಗಪ್ಪ ಮುದೇನೂರು ಅವರ 'ಕರುಳ ಕೊರಳ ಹಾಡು' ಕೃತಿಯಲ್ಲಿ ಒಟ್ಟಾರೆ 33 ಲೇಖನಗಳಿವೆ. ಇವುಗಳಲ್ಲಿ ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದ ನಾಲ್ಕು ಲೇಖನಗಳಿದ್ದರೆ, ಉಳಿದವು ಬುಡಕಟ್ಟು ಜನಪದ ಮಹಾಕಾವ್ಯಗಳು ಮತ್ತು ಜನಪದ ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಬರೆದಿರುವ ಅಧ್ಯಯನ ಲೇಖನಗಳು.


'ಕುವೆಂಪು ಅವರ ಶೂದ್ರ ತಪಸ್ವಿ: ಬೆಂಕಿ ಬೆಳಕಾಗುವ ಪರಿ' ಮತ್ತು 'ಕುವೆಂಪು ಸಾಹಿತ್ಯದಲ್ಲಿ ಅಲಕ್ಷಿತ ವರ್ಗಗಳ ಚಲನೆ' ಕ್ರಮವಾಗಿ ಕುವೆಂಪು ಅವರ ನಾಟಕ ಮತ್ತು ಇತರ ಗದ್ಯ ಕೃತಿಗಳ ವಸ್ತುವನ್ನು ಆಧರಿಸಿದ ಅಧ್ಯಯನ ಲೇಖನಗಳಾಗಿವೆ. ಈ ಎರಡೂ ಲೇಖನಗಳಲ್ಲಿ ದಲಿತ ವರ್ಗಗಳು ಕ್ರಿಯಾತ್ಮಕವಾಗಿ ಚಲಿಸುತ್ತವೆಯೋ ಇಲ್ಲವೋ, ಕ್ರಿಯಾತ್ಮಕವಾಗಿ ಚಲಿಸದಿದ್ದರೆ ಅದಕ್ಕೆ ಕಾರಣಗಳೇನು ಎಂಬುದರ ಬಗ್ಗೆ ಸುದೀರ್ಘವಾಗಿ ಮುದೇನೂರರು ಚರ್ಚಿಸಿ ವಿವರಿಸಿದ್ದಾರೆ. 'ವತನ: ಕನ್ನಡ ದಲಿತ ಕಥನದ ಅರಿವಿನ ವಿಕಾಸ' ಮತ್ತು 'ಜನಪದ ಕಲೆ, ಸಂಸ್ಕೃತಿ: ದಲಿತ ಸಂಸ್ಕೃತಿಯ ಬೇರು ಹುಡುಕುವ ಪ್ರಯತ್ನ' - ಈ ಎರಡೂ ಲೇಖನಗಳು ಕ್ರಮವಾಗಿ ಎಚ್.ಟಿ. ಪೋತೆಯವರ ಕಥಾ ಸಾಹಿತ್ಯ ಮತ್ತು ಜನಪದ ಸಾಹಿತ್ಯದ ಅಧ್ಯಯನ ಕುರಿತು ಬರೆದ ಲೇಖನಗಳಾಗಿವೆ.

ವಿಮರ್ಶೆ

ಜಾನಪದವನ್ನು ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ರೋಮಾಂಚನದಿಂದ ನೋಡಲಾಗುತ್ತಿತ್ತು. ಇಂದಿಗೂ ಅದನ್ನೇ ಹೆಚ್ಚಿನವರು ಮುಂದುವರಿಸುತ್ತಿದ್ದಾರೆ. ಆದರೆ, ಕೆಲವು ಜಾನಪದ ತಜ್ಞರು ಸಂಗ್ರಹ ಮಾಡಿದ ಸಾಹಿತ್ಯವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುತ್ತಿದ್ದಾರೆ. ಮತ್ತೆ ಕೆಲವರು ಇನ್ನೂ ಮುಂದಕ್ಕೆ ಹೋಗಿ ಜಾನಪದವನ್ನು ಸಂವಹನ, ಕ್ರಿಯಾತ್ಮಕ, ಚಲನಶೀಲ ನೆಲೆಗಳಲ್ಲಿ ಅಧ್ಯಯನ ಮಾಡಿ, ಅದರ ಸಾಂಸ್ಕೃತಿಕ, ಸಾಮಾಜಿಕ ಮುಂತಾದ ವಿನ್ಯಾಸಗಳನ್ನು ಗುರುತಿಸಿ, ವರ್ತಮಾನದ ಸ್ಥಿತಿಗತಿಗಳನ್ನೂ ಅಧ್ಯಯನ ಮಾಡುತ್ತಿದ್ದಾರೆ. ಇದು ಸಾಂಸ್ಕೃತಿಕ ಚರಿತ್ರೆಯ ಸ್ವರೂಪವನ್ನು ಗುರುತಿಸುವ ಕೆಲಸದಲ್ಲಿ ಮಹತ್ವವಾದದ್ದು. ಈ ದಿಕ್ಕಿನಲ್ಲಿ ಮುದೇನೂರರ ಅಧ್ಯಯನ ನಡೆದಿರುವುದು ಎದ್ದು ಕಾಣುತ್ತದೆ.

'ಜನಪದ ಮಹಾಕಾವ್ಯಗಳ ನಾಯಕರು: ಅರ್ಥೈಸುವ ಬಗೆ', 'ಜನಪದ ಹಾಲುಮತ ಮಹಾಕಾವ್ಯದ ದಲಿತತ್ವ', 'ಮೈಲಾರನ ಸಾಂಸ್ಕೃತಿಕ ನೆಲೆಗಳು', 'ಕರ್ನಾಟಕದಲ್ಲಿ ಸ್ಕಂದ ಪರಂಪರೆ' ಮುಂತಾದ ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದ ಲೇಖನಗಳಲ್ಲಿ ಸಾಂಸ್ಕೃತಿಕ ಮಾನವಶಾಸ್ತ್ರ, ಸಮಾಜಶಾಸ್ತ್ರ, ಮಾನವಿಕ, ವಿಜ್ಞಾನ ಮುಂತಾದ ಎಲ್ಲಾ ಜ್ಞಾನ ವಿಜ್ಞಾನಗಳನ್ನು ಅನುಸಂಧಾನಗೊಳಿಸಿ ಜನಪದ ಮಹಾಕಾವ್ಯಗಳನ್ನು ವಿಶ್ಲೇಷಿಸುವುದಕ್ಕೆ ಪ್ರಯತ್ನ ಮಾಡಿರುವುದನ್ನು ಗುರುತಿಸಬಹುದು.

ಜನಪದ ಮಹಾಕಾವ್ಯಗಳು ಶೈವ, ದ್ರಾವಿಡ, ಅವೈದಿಕ ನೆಲೆಗಳನ್ನು ತಮ್ಮಲ್ಲಿ ಗರ್ಭೀಕರಿಸಿಕೊಂಡಿವೆ. ಆಯಾ ಕಾವ್ಯಗಳು ಸೃಷ್ಟಿಯಾಗಿರುವ ಪ್ರದೇಶದ ಆಯಾ ವೃತ್ತಿಯ ಸಾಕು ಪ್ರಾಣಿಗಳು, ಆಹಾರದ ಕ್ರಮ, ಉಡುಗೆ ತೊಡುಗೆ, ಆಚರಣೆ ಇತ್ಯಾದಿ ವಿವರಗಳೆಲ್ಲವೂ ಅಲ್ಲಿ ಇಡುಕಿರಿದಿವೆ. ಹೀಗಾಗಿ ಸಹಜವಾಗಿಯೇ ಈ ಕಾವ್ಯಗಳು ಸಂಸ್ಕೃತಿ-ನಾಗರಿಕತೆಯ ವಿಕಾಸದ ಸ್ವರೂಪವನ್ನು ತಿಳಿಯುವ ಸಾಧನಗಳಾಗಿವೆ. ಉದಾಹರಣೆಗೆ ಕಬ್ಬಿಣದ ಬಗೆಗಿನ ವಿವರಗಳಲ್ಲಿ ಸಂಸ್ಕೃತಿ ಮತ್ತು ನಾಗರಿಕತೆ ವಿಕಾಸವಾಗುವುದರಲ್ಲಿ ಕಬ್ಬಿಣ ಯಾವ ಪಾತ್ರ ವಹಿಸಿತು ಮತ್ತು ಅದರ ಮಹತ್ವವೇನು ಎಂಬುದನ್ನು ವಿವರಿಸಿಕೊಂಡು ವಿಶ್ಲೇಷಿಸಲು ಸಾಧ್ಯವಾಗುತ್ತದೆ.



ಕರುಳ ಕೊರಳ ಹಾಡು
ಲೇ: ಡಾ. ನಿಂಗಪ್ಪ ಮುದೇನೂರು
ಪ್ರ: ಸಿದ್ಧಲಿಂಗೇಶ್ವರ ಪ್ರಕಾಶನ
ಸಂ: 9448124431


ಪು: 296 ₹265

ಜನಪದ ಮಹಾಕಾವ್ಯಗಳನ್ನು ಕುರಿತ ಲೇಖನಗಳಲ್ಲಿ ಕಬ್ಬಿಣದ ಬಳಕೆ, ಪ್ರಾಣಿಗಳ ಸಾಕಾಣಿಕೆ ಹಾಗೂ ವ್ಯವಸಾಯದ ಬೆಳವಣಿಗೆ ಇತ್ಯಾದಿಗಳ ಬಗ್ಗೆ ಪ್ರಸ್ತಾಪ ಮತ್ತು ಚರ್ಚೆ ಇದೆ. ಈ ಚರ್ಚೆಗೆ ಪೂರಕವಾದ ವಿಚಾರಗಳಿಗೆ ಪಾಶ್ಚಾತ್ಯ, ಭಾರತ ಹಾಗೂ ಕನ್ನಡದ ಜಾನಪದ ಮತ್ತು ಸಂಸ್ಕೃತಿ ಚಿಂತಕರ ಅಭಿಪ್ರಾಯಗಳನ್ನು ಬಳಸಿಕೊಂಡಿರುವುದು ಚರ್ಚೆಗೊಂದು ಅಧಿಕೃತತೆ ಬರಲು ಕಾರಣವಾಗಿದೆ. ಮಹಾಕಾವ್ಯಗಳನ್ನು ಚರ್ಚಿಸುವಾಗ ಭಾಷಾ ಬಳಕೆಗಿಂತ ಹೆಚ್ಚಾಗಿ ವಸ್ತುವನ್ನು ಕುರಿತ ವಿವರವೇ ಹೆಚ್ಚಾಗಿದೆ. ಸಾಂಸ್ಕೃತಿಕ ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗ ಇದು ಸಹಜವೇ. ಆದರೆ, ಮಹಾಕಾವ್ಯಗಳಲ್ಲಿ ಬರುವ ಐತಿಹ್ಯ, ಪುರಾಣಗಳನ್ನು ಅರ್ಥೈಸುವಾಗ ಭಾಷಾ ವಿನ್ಯಾಸವನ್ನು, ಅದರ ಧ್ವನಿಯನ್ನು ಹಿಡಿದೇ ವಿಶ್ಲೇಷಣೆ ಮಾಡಿ, ಅದರ ಸಾಂಸ್ಕೃತಿಕ ಮಹತ್ವವನ್ನು ಗುರುತಿಸಬೇಕಾಗುತ್ತದೆ. ಮಾನವಶಾಸ್ತ್ರದಲ್ಲಿ ಭಾಷೆಯ ಅಧ್ಯಯನವೂ ಒಂದು ಪ್ರಮುಖವಾದ ಅಂಶವಾಗಿದೆ.

ಜನಪದ ಮಹಾಕಾವ್ಯಗಳ ಮೇಲೆ ಬೌದ್ಧ, ಜೈನ, ಶೈವ, ವೈಷ್ಣವ, ದಾಸಪಂಥ, ಇಸ್ಲಾಂ, ಕ್ರೈಸ್ತ, ನಾಥ, ಸಿದ್ಧ, ಸೂಫಿ ಮುಂತಾದ ಧರ್ಮ, ಪಂಥಗಳು ಪ್ರಭಾವ ಬೀರಿವೆ. ಇವುಗಳನ್ನು ಅಧ್ಯಯನ ಕ್ರಮದಲ್ಲಿ ಅಲ್ಲಲ್ಲಿ ಗುರುತಿಸಿ ವಿವರಿಸಲಾಗಿದೆ. ಬುಡಕಟ್ಟು ಸಂಸ್ಕೃತಿಯನ್ನು ಕುರಿತು ಇಲ್ಲಿ ಹೆಚ್ಚು ಲೇಖನಗಳಿವೆ. ಈ ಲೇಖನಗಳು ಸಾಂಸ್ಕೃತಿಕ ಅಧ್ಯಯನಕ್ಕೊಂದು ಮಾದರಿಯಾಗಿವೆ. 'ಜನಪದ ಸಾಹಿತ್ಯ: ಇವತ್ತಿನ ಆಗುಹೋಗುಗಳು' ಎಂಬ ಕೊನೆಯ ಲೇಖನದಲ್ಲಿ ಜನಪದ ಸಾಹಿತ್ಯವನ್ನು ತಾಂತ್ರಿಕ ಯುಗದಲ್ಲಿ ಉಳಿಸಿಕೊಳ್ಳಬೇಕಾದ ಅಗತ್ಯ ಹಾಗೂ ಅಧ್ಯಯನ ಮಾಡಬೇಕಾದ ಕ್ರಮವನ್ನು ಚರ್ಚಿಸಲಾಗಿದೆ.

ಈ ಕೃತಿಯ ಲೇಖನಗಳನ್ನು ಓದಿ ಮುಗಿಸಿದಾಗ ಒಂದು ದೇಶದಲ್ಲಿಯಾಗಲಿ, ಸಮಾಜದಲ್ಲಿಯಾಗಲಿ ತಾನೊಬ್ಬ ಪರಕೀಯ, ಬಡವ, ತಿರಸ್ಕಾರಕ್ಕೆ ಗುರಿಯಾದವನು ಎಂಬ ಭಾವ ಅನುಭವಿಸುತ್ತಿರುವ ವ್ಯಕ್ತಿಯನ್ನು ಒಳಗು ಮಾಡಿಕೊಂಡು ಬದುಕಬೇಕೆಂಬ ಆಶಯವೊಂದು ಥಟ್ಟನೆ ಮನಸ್ಸಿಗೆ ಬರುತ್ತದೆ. ಸಬಾಲ್ಟ್ರನ್ ಚಿಂತನಾಧಾರೆಯೊಂದು ಉದ್ದಕ್ಕೂ ಹರಿಯುತ್ತಿರುವುದು ಕಂಡುಬರುತ್ತದೆ. ಕೆಳಜಾತಿ, ಅದರಲ್ಲೂ ಅಸ್ಪೃಶ್ಯ ಜಾತಿಗಳೇ ಮುಖ್ಯವಾಗಿ, ನಂತರ ಮೇಲ್ಮುಖವಾಗಿ ಚಲಿಸಿದಾಗ ಮಾನವೀಯ ಮೌಲ್ಯಗಳು ನೆಲೆಸಲು ಸಾಧ್ಯ ಎಂದು ಹಾತೊರೆಯುವ ಮನಸ್ಸೊಂದು ಇಲ್ಲಿನ ಲೇಖನಗಳಲ್ಲಿ ಇದೆ. ❖

ಕಾದಂಬರಿ ರೂಪದಲ್ಲಿ 'ಬೇಡದರ್ಣಗೆ'



ದುರ್ಗದ ಬೇಡದರ್ಣಗೆ
ಲೇ: ಡಾ.ಬಿ.ಎಲ್.ವೇಣು
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಸಂ: 9449886390

ಪು: 316 ₹300

1857ರಲ್ಲಿ ನಡೆದ ಸಿಪಾಯಿ ದಂಗೆಯೇ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬುವುದು ಇತಿಹಾಸದಲ್ಲಿ ದಾಖಲಾದ ವಿಷಯ. ಈ ವಿಷಯದ ಕುರಿತು ಇನ್ನೂ ಹಲವು ತಕರಾರುಗಳಿವೆ, ಚರ್ಚೆಗಳೂ ನಡೆಯುತ್ತಿವೆ. ಸಿಪಾಯಿ ದಂಗೆಗಿಂತ ಮೊದಲೇ ನಡೆದಿದ್ದ ಕಿತ್ತೂರು ಸಂಗ್ರಾಮವೇ ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಹಲವರು ಪ್ರತಿಪಾದಿಸಿದರೆ, 1849ರಲ್ಲಿ ಚಿತ್ರದುರ್ಗದ ಏಳು ಬೇಡ ಹುಡುಗರ ದಂಡು ಬ್ರಿಟಿಷರ ವಿರುದ್ಧ ದಂಗೆ ಎದ್ದಿದ್ದೇ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದೂ ಹೇಳಲಾಗುತ್ತಿದೆ.

ಈಗಾಗಲೇ ಚಿತ್ರದುರ್ಗದ ಇತಿಹಾಸವನ್ನು ಆಧಾರವಾಗಿಟ್ಟುಕೊಂಡು ಹಲವು ಐತಿಹಾಸಿಕ ಕಾದಂಬರಿಗಳನ್ನು ಹಾಗೂ ಕಥಾಸಂಕಲನಗಳನ್ನು ಕಾದಂಬರಿಕಾರ ಬಿ.ಎಲ್. ವೇಣು ರಚಿಸಿದ್ದಾರೆ. ಇದೀಗ, 1849ರಲ್ಲಿ ದುರ್ಗದಲ್ಲಿ ಬೇಡ ಹುಡುಗರು ದಂಡು ಕಟ್ಟಿ ನಡೆಸಿದ ದಂಗೆಯ ಕುರಿತು ಸಂಶೋಧಕರಾದ ಬಿ.ನಂಜುಂಡಸ್ವಾಮಿ ಅವರು ನೀಡಿದ ಉಪನ್ಯಾಸವೊಂದರಿಂದ ಪ್ರೇರಿತರಾಗಿ, ಇತಿಹಾಸದ ಈ ಘಟನೆಯನ್ನು ಆಧರಿಸಿ ಕಲ್ಪನೆಯ ಪಾಕ ಬೆರೆಸಿ 'ದುರ್ಗದ ಬೇಡದರ್ಣಗೆ' ಶೀರ್ಷಿಕೆಯಡಿ ಕಾದಂಬರಿ ರೂಪದಲ್ಲಿ ಓದುಗರ ಮುಂದಿಟ್ಟಿದ್ದಾರೆ.

ಉಪನ್ಯಾಸ ಕೇಳುತ್ತಿರುವಾಗಲೇ ಅಲ್ಲಿನ ಅಧಿಕಾರಿ ವರ್ಗ, ಘಟನೆಗಳು ಕ್ರಮವಾಗಿ ಪಾತ್ರಗಳಾಗಿ ಸನ್ನಿವೇಶಗಳಾಗಿ ಅಚ್ಚೊತ್ತಿದ್ದವು ಎಂದು ಮುನ್ನುಡಿಯಲ್ಲಿ ವೇಣು ಉಲ್ಲೇಖಿಸುತ್ತಾರೆ. ಬೆಳೆದ ಭೂಮಿಗೆ ಸುಂಕದ ಜೊತೆಗೆ, ಪಾಳುಭೂಮಿಗೂ ಸುಂಕ ಕೇಳಿದ ಬ್ರಿಟಿಷರ ವಿರುದ್ಧ ರೈತರು, ಪಾಳೆಪಟ್ಟಿನವರು, ಜಮೀನ್ದಾರರು ಸಿಡಿದೆದ್ದ ಘಟನೆಯೊಂದಿಗೆ 'ದುರ್ಗದ ಬೇಡದರ್ಣಗೆ' ಆರಂಭವಾಗುತ್ತದೆ. ನಾಯಕನಹಟ್ಟಿ ಪಾಳೇಗಾರ ಕೆಂಚಮಲ್ಲಪ್ಪ ನಾಯಕನ ಮೊಮ್ಮಗ ವಾಲ್ಮೀಕಿ ನಾಯಕನ ಆರ್ಭಟದೊಂದಿಗೆ ಪುಟಗಳು ತಿರುವುತ್ತಲೇ ಚಾರಿತ್ರಿಕವಾದ ಘಟನೆಗಳು ಕಲ್ಪನೆಯ ಸನ್ನಿವೇಶದೊಂದಿಗೆ ಸಾಗುತ್ತವೆ. ಇತಿಹಾಸದಲ್ಲಿನ ಘಟನೆಗಳ ಸುತ್ತ ಕಲ್ಪನೆಯ ಕಥೆ ಕಟ್ಟುವುದು ಕಠಿಣ. ಆದರೆ ದಂಗೆಯ ಎಳೆಯನ್ನಿಟ್ಟುಕೊಂಡು ಬೇಡ ಯುವಕರ ಸಾಹಸಗಾಥೆಯನ್ನು ವಿವರಿಸುತ್ತಾ ವೇಣು ಅವರು ಕಾದಂಬರಿಗೆ ಅಗತ್ಯವಾದ ರೋಚಕತೆಯನ್ನು ಸೃಷ್ಟಿಸಿದ್ದಾರೆ.

'ಪರಂಗೇರು ಹೇಳಿದಂತೆ ಭಾರತ ದೇಶಾನೇ ಕೇಳ್ತಾ ಅದೆ. ನೀವೇನು ಉಪ್ಪರ್ಸೆ ಇಳಿದಿದೀರಾ? ನೀವೇನು ಪೆಶಲ್ಲಾ?' ಎನ್ನುವ ಚೀಫ್ ಸೋಲ್ಜರ್ ಖಾದರ್ ಖಾನ್ ಪಾತ್ರದ ಉರ್ದುಮಿಶ್ರಿತ ಕನ್ನಡ, ಬ್ರಿಟಿಷ್ ಅಧಿಕಾರಗಳ ಇಂಗ್ಲಿಷ್ ಮಿಶ್ರಿತ ಕನ್ನಡ ಹೀಗೆ ಪಾತ್ರಕ್ಕೆ ತಕ್ಕಂತೆಯೇ ಭಾಷೆ ಬಳಕೆ ಓದಿಗೆ ಓಘ ನೀಡುತ್ತದೆ. ಪ್ರಸಕ್ತ ಸಂದರ್ಭದಲ್ಲಿ ಎದ್ದಿರುವ ಸಾಮಾಜಿಕ, ಧಾರ್ಮಿಕ ಸಂಘರ್ಷದ ಎಳೆಯನ್ನೂ ವೇಣು ಅವರು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಶೋಷಣೆಯಿಂದ ಬಿಡುಗಡೆಯ ನಿಲುವೂ ಹಲವು ಪಾತ್ರಗಳ ಮಾತಿನಲ್ಲಿದೆ. ಚಿತ್ರದುರ್ಗದ ಇತಿಹಾಸವನ್ನು ಕಾದಂಬರಿ ರೂಪದಲ್ಲಿ ಕಟ್ಟಿಕೊಡುವ ವೇಣು ಅವರ ಕೃತಿಗಳ ಸಾಲಿಗೆ ಮತ್ತೊಂದು ಸೇರ್ಪಡೆಯಾಗಿ ಈ 'ಬೇಡದರ್ಣಗೆ' ಮೂಡಿಬಂದಿದೆ. ❖

ಬಂದುದೀ ವೈಷಮ್ಯ?

10ನೇ ಪುಟದಿಂದ...

ಈಗ ಯಾಕೆ ಹೀಗಾಗ್ತಿದೆ ಅಂದರೆ... ನಮ್ಮ ರಾಜಕಾರಣಿಗಳು, ನಮ್ಮ ಕೆಲವು ಬುದ್ಧಿಜೀವಿಗಳು, ಏನೇನೋ ಧೋರಣೆಗಳಿಂದ ಪುಸ್ತಕಗಳನ್ನು ಬರೆದರು, ಅವೆಲ್ಲ ಪೂಜ್ಯ ಪುಸ್ತಕಗಳಾದವು. ಅವನ್ನೇ ಎಲ್ಲಾರೂ ಓದತಾರೆ. ನಮ್ಮದೇ ಪಕ್ಕದ ಮನೆಯ ಜನರಿಗೆ ನೋವು ಕೊಟ್ಟು, ಹಿಂಸೆ ಮಾಡಿ, ಅವರ ಮೇಲೆ ದಬ್ಬಾಳಿಕೆ ಮಾಡಿ ಬದುಕುವುದು ಯಾವ ಸಂಸ್ಕೃತಿಯ ಲಕ್ಷಣವೂ ಅಲ್ಲ.

ಇವನ್ನೆಲ್ಲ ಹ್ಯಾಗೆ ಕಡಿಮೆ ಮಾಡುವುದು - ಇದಕ್ಕೆ ಮದ್ದು ಶಿಕ್ಷಣ. ಅದನ್ನು ಕುಂಠಿತಗೊಳಿಸಬಾರದು, ಅದರಲ್ಲಿ ಏನೇನೋ ಸೇರಿಸಬಾರದು. ನಾವು ಒಂದೇ ಜನ, ಒಂದೇ ಆಗಿರಬೇಕು. ನಾವು ಸ್ವಲ್ಪ ಜಾಗೃತವಾಗಿದ್ದರೆ ಆ ದುಃಖ, ಆ ಹಿಂಸೆ ಅದನ್ನೆಲ್ಲ ತಪ್ಪಿಸಬಹುದು. ಅದು ಸ್ಕೂಲುಗಳಲ್ಲಿ ಬರಬೇಕು, ಮನೆಗಳಲ್ಲಿ ಬರಬೇಕು. ನಾನು ಇನ್ನೂ ಉಗ್ರವಾಗಿ ಮಾತಾಡಬಹುದು, ಆದರೆ ಮಾತಾಡಿ ಉಪಯೋಗವಿಲ್ಲ. ನಾವದನ್ನು ಬದುಕಬೇಕು.

ನಾನು ಹುಟ್ಟಿ ಬೆಳೆದ ತುಂಗಭದ್ರದಲ್ಲಿ ಆಗೆಲ್ಲ ಮೊಹರಂ ಹುಲಿವೇಷ ಇರತಿತ್ತು. ಹುಲಿವೇಷವನ್ನು ಇನ್ನಾರೋ ಧರ್ಮದವರು ಹಾಕತಿದ್ರು. ನಮ್ಮ ಮನೆಯ ಸುತ್ತಲೂ ಹುಲಿವೇಷ ಕುಣಿಯುತ್ತ ಹೋಗತಿತ್ತು. ನಾನು ಭಾಳ ಸಣ್ಣೋನು, ನಿಂತಲ್ಲೇ ಥೈಥೈ ಅನ್ನತಿದ್ದೆ. ನಮ್ಮಪ್ಪ, ಅಮ್ಮ ನೋಡಿ ನಗತಿದ್ದರು. ಹಾಗೆ ಮೊಹರಂ ಹಬ್ಬದಲ್ಲಿ ನಾವು ನೀವು ಎಲ್ಲಾರು ಕುಣಿತಿದ್ದೆವು. ಇಂಥವನ್ನು ಗಮನದಲ್ಲಿಟ್ಟುಕೊಂಡು ಜಾಗೃತವಾಗಿರಬೇಕು. ಅದರಲ್ಲಿ ಯಾರು ಭಾಗವಹಿಸುತ್ತಾರೆ, ಯಾರು ಭಾಗವಹಿಸದೇ ದೂರ ನಿಲ್ಲುತ್ತಾರೆ... ಅದನ್ನು ಸ್ವಲ್ಪ ಗಮನಿಸಿ ನೋಡಿ. ಅದರಿಂದಲೇ ಹಾನಿ, ದುಃಖ ಬೆಳೆದಿದ್ದು. ನಾವು ಎಲ್ಲರೂ ಅದರಲ್ಲಿ ಧುಮುಕಿದೆವಾ... ಇಲ್ಲ. ನಮ್ಮಲ್ಲೇ ಕೆಲವರು ದೂರ ನಿಂತುಕೊಳ್ತೀವಿ, ನಮ್ಮಲ್ಲೇ ನಾವು ಎಂಥದ್ದೋ ಒಂದು ಮಡಿವಂತಿಕೆ ತಂದುಕೊಳ್ಳುತ್ತೀವಿ. ಅದಾಗಬಾರದಿತ್ತು, ಆಗಲೂಬಾರದು.

ಕಲೆಯಿಂದಲೇ ಇಂಥದನ್ನೆಲ್ಲ ಎದುರಿಸಬಹುದು ಎಂಬುದೆಲ್ಲ ಬೊಗಳೆ ಮಾತು. ಡಬ್ಲ್ಯು.ಬಿ. ಯೇಟ್ಸ್ ಕವಿ ಗೊತ್ತಲ್ಲ... ಆತ ತೀರಿಕೊಂಡಾಗ ಇನ್ನೊಬ್ಬ ಕವಿ ಡಬ್ಲ್ಯು.ಎಚ್. ಆಡೆನ್ ಒಂದು ಕವನ ಬರೆದಿದಾನೆ, ಅದರಲ್ಲಿ ಒಂದು ಸಾಲು poetry makes nothing happen ಅಂತ ಬರೆದಿದ್ದಾನೆ. ಕಲೆಯಿಂದ ಏನೂ ನಡೆಯೋದಿಲ್ಲ. ಅದು ನಿಜವೇ. ನೋಡಿ... ಕಲೆಯಿಂದ ಏನೋ ಮಾರ್ಪಾಡು ಮಾಡ್ತೀವಿ ಅನ್ನೋ ವಿಚಾರ ನನಗೂ ಇಷ್ಟ. ಸ್ವಲ್ಪ ಮಟ್ಟಿಗೆ ಆಗಬಹುದು ಅಷ್ಟೆ. ಸಿನಿಮಾದಿಂದ ಸ್ವಲ್ಪ ಮಟ್ಟಿಗೆ ಆಗಬಹುದು.

ನಾವು ಹತ್ತು ಜನರಿದ್ದೇವಾ, ಬಲ ಇದೆಯಾ, ಸರಿ ಹೊಡಿ. ಈ ಥರ ಹಿಂಸೆ, ನೋವು ಎಲ್ಲಾ ಕಡೆಗೆ ಹಬ್ಬಿದೆ, ಬಲಪ್ರಯೋಗಕ್ಕೆ ಯಾವ ರೀತಿಯ ಧರ್ಮ ಪ್ರಜ್ಞೆ ಇಲ್ಲ, ಬಲ ಇದ್ದರೆ ಹೊಡಿ. ಅದು ನಡೀತಾನೆ ಇದೆ. ಅದೇ ಬಲವನ್ನು ಇಡೀ ದೇಶಕ್ಕೆ ಅದರ ಕಹಿ, ಅದರ ನೋವು ಉಪಯೋಗಿಸದೇ, ಅದರಿಂದ ಉಪಯೋಗವಿರುವುದನ್ನು ತೆಗೆದುಕೊಂಡು, ಆ ಬಲವನ್ನು ಇನ್ನೊಂದು ಕಡೆಗೆ ತಿರುಗಿಸಬಹುದು. ಗಾಂಧೀಜಿ ನಮ್ಮೆಲ್ಲರನ್ನೂ ಸ್ವಲ್ಪ ಮಟ್ಟಿಗೆ ಮಹಾತ್ಮರಾಗಿ ಮಾಡಿದ್ದರು, ಅವರು ಬದುಕಿರುವವರೆಗೆ ನಾವೆಲ್ಲ ಟೆಂಪರರಿ ಮಹಾತ್ಮರಾಗಿದ್ದೆವು. ಆದರೆ ಅದು ನಿಲ್ಲಲಿಲ್ಲ. ಕೊನೆಗೆ ಅವರನ್ನೇ ಕೊಂದೆವು. ಅದರಿಂದ ಎಂಥ ನಷ್ಟವಾಯಿತು ನಮಗೆ ಅಂದರೆ... ಅದರ ಫಲವನ್ನೇ ಈಗಲೂ ಉಣ್ತಾ ಇದ್ದೀವಿ. ಹಿಂಸೆಯಲ್ಲಿರೋ ಬಲವನ್ನೇ ಬೇರೆಡೆ ತಿರುಗಿಸಬಹುದು, ಗಾಂಧೀಜಿ ಅದನ್ನು ನಮಗೆ ತೋರಿಸಿದ್ದರು. ನಾವದನ್ನು ಮರೆತಿದ್ದೀವಿ.



ಕಲೆ: ಕರಿಯಪ್ಪ ಹಂಚಿನಮನಿ

ಉಸ್ತಾದ್ ಅಬ್ದುಲ್ ಕರೀಮಖಾನ್ ಎಂಥ ಮಹಾನ್ ಸಂಗೀತಗಾರ... ಅವರ ಹತ್ರ ರಾಮಭಾವು ಕುಂದಗೋಳಕರ್ ಕಲಿತ್ರು - ಅವರ ಇನ್ನೊಂದು ಹೆಸರು ಸವಾಯಿ ಗಂಧರ್ವ. ಅಲ್ಲಿಂದ ಸಂಗೀತ ಹ್ಯಾಗೆ ಹಬ್ಬಿತು ನೋಡಿ... ಗಂಗೂಬಾಯಿ ಹಾನಗಲ್, ವೆಂಕಟರಾವ್ ದೇವದುರ್ಗ, ಭೀಮಸೇನ್ ಜೋಶಿ... ಹಿಂಗೇ ಹಬ್ಬಿಬಿಡ್ತು. ಗುಲಾಮ್ ಅಲಿ ಖಾನ್ ಸಾಹೇಬರ ಬಗ್ಗೆ ನಮ್ಮ ಅಜಯ್ ಚಕ್ರವರ್ತಿ ಎಷ್ಟು ಪ್ರಭಾವಿತರಾಗಿದ್ದರು, ಉಸ್ತಾದರ ಮಗನಿಂದಲೂ ಸಂಗೀತ ಕಲಿತರು. ಆಗ್ರಾ ಘರಾಣೆಯ ಉಸ್ತಾದ್ ಫೈಯಾಜ್ ಖಾನ್ ಸಾಹೇಬರಿಂದಲೇ ಕಲೀಬೇಕು ಅಂತ ನಮ್ಮ ಬೆಂಗಳೂರಿಂದ ರಾಮ್ ರಾವ್ ನಾಯಕ್ ಹೋದರು. ಇವರೋ ಬಹಳ ಮಡಿ... ಉಸ್ತಾದರು ಅವರಿಗೆ ಬೇರೆ ಒಲೆ ಹಚ್ಚಿ, ಅಕ್ಕಿ, ಬ್ಯಾಳೆ ಎಲ್ಲ ಕೊಟ್ಟು, ಬೇರೆ ಅಡುಗೆ ಮಾಡಿಕೊಳ್ಳಕ್ಕೆ ವ್ಯವಸ್ಥೆ ಮಾಡಿದ್ರು. 'ಬೇಗ ಉಂಡು ಪಾಠಕ್ಕೆ ಬಾ' ಅಂದ್ರು. ಅದನ್ನು ಮರೀಬಾರದು.

ನಮ್ಮ ಗುರುಗಳ ತಂದೆ ಬಾಬಾ ಅಲಾವುದ್ದೀನ್ ಖಾನರು ಮೈಹರಿನಲ್ಲಿರುವ ಶಾರಾದಾ ಮಾತೆ ಮಂದಿರಕ್ಕೆ ಪ್ರತಿದಿನ ಹೋಗ್ತಿದ್ದರು, ಹಂಗೇ ದಿನಕ್ಕೆ ಐದು ಸಲ ನಮಾಜನ್ನೂ ಮಾಡತಿದ್ದರು. ಅವರಿಗಿದ್ದ ಏಕೈಕ ಮುಸ್ಲಿಂ ಶಿಷ್ಯ ಅಂದ್ರೆ ಅವರ ಮಗ ಮಾತ್ರ. ಇನ್ನುಳಿದ ಶಿಷ್ಯರೆಲ್ಲ ಬ್ಯಾರೆಯವ್ರು... ಹಿಂದೂಗಳು, ಬೌದ್ಧರು, ಕ್ರೈಸ್ತರು... ಶ್ರೀಲಂಕಾದಿಂದ ಕೂಡ ಶಿಷ್ಯರು ಬಂದಿದ್ದರು. ಯಾವ ಘರಾಣೆಯವರೂ ತಮ್ಮ ಮನೆಯ ಹೆಣ್ಣುಮಕ್ಕಳಿಗೆ ಕಲಿಸದ ಕಾಲಘಟ್ಟದಲ್ಲಿ ಅವರು ತಮ್ಮ ಮಗಳು ಅನ್ನಪೂರ್ಣರಿಗೆ ಕಲಿಸಿದರು. ಶರಣ್ ರಾಣಿಗೆ ಕಲಿಸಿದರು. ಧರ್ಮ, ಜಾತಿ, ಲಿಂಗ ಇದನ್ನೇನೂ ನೋಡಲಿಲ್ಲ. ಅವರನ್ನ ತಂಪುಹೊತ್ತಿನಲ್ಲಿ ನೆನಸಿಕೊಳ್ಳಬೇಕು. ನನ್ನ ಗುರುಗಳು ಖಾನ್ ಸಾಹೇಬರು ಮೈಸೂರಿಗೆ ಬಂದಾಗ ಚಾಮುಂಡಿಬೆಟ್ಟಕ್ಕೆ ಹೋಗಿ ದೇವಿ ದರ್ಶನ ತಗಂಡು ಹೋದರು. ನಮ್ಮ ಹಿಂದೂಸ್ತಾನಿ ಸಂಗೀತ ನಮ್ಮೆಲ್ಲರ ಒಟ್ಟುಮೆಯ ಫಲ. ನಾವೆಲ್ಲರೂ ಸೇರಿ ಬೆಳೆಸಿದೀವಿ. ಎಷ್ಟೋ ಉಸ್ತಾದರು, ಗುರುಗಳು ಆ ಜಾತಿ, ಈ ಧರ್ಮ ಅಂತೆಲ್ಲ ಯೋಚನೆ ಮಾಡದೇ ಕಲಿಸಿದರು, ಅದರಲ್ಲೇನೂ ಕಮ್ಮಿ ಮಾಡಲಿಲ್ಲ, ಮ್ಯಾಲ ಎಷ್ಟು ಪ್ರೀತಿ ತೋರಿಸಿದರು.

ಅದೆಲ್ಲ ಎಲ್ಲಿ ಹೋಯಿತು? ಅದನ್ನು ಯಾಕೆ ಹೋಗಗೊಟ್ಟೆವು? ಆ ಕಾಲ ಎಲ್ಲಿ ಹೋಯಿತು? ಇದನ್ನೆಲ್ಲ ನಾವು ಯೋಚನೆ ಮಾಡಬೇಕು. ನಾವು ಸುಮ್ಮನೆ ಖೇದಪಡ್ತಾ ಕೂರೋದಲ್ಲ. ಇದನ್ನು ಬದಲಾಯಿಸಬೇಕು. ಸಂಗೀತ ಮೌಲ್ಯವನ್ನು ಎತ್ತಿಹಿಡಿಯೋ ಮೂಲಕ, ಮಕ್ಕಳಿಗೆ ಸ್ಕೂಲಿನಲ್ಲಿ ಹೇಳಿಕೊಡೋ ಮೂಲಕ ಮಾಡಬೇಕು. ಏನಾದರೂ ತಪ್ಪಿಹೋಗಿದ್ದರೆ ನಾವೆಲ್ಲರೂ ಅದರಲ್ಲಿ ಭಾಗಿಗಳು. ಇದು ಬಹಳ ದುಃಖದ ವಿಚಾರ. ಈ ದುಃಖವನ್ನೇ ಹರಿತವಾಗಿಟ್ಟುಕೊಂಡು, ಅದನ್ನೊಂದು ಬಲ ಮಾಡಿಕೊಂಡು, ನಾವು ಈ ಸ್ಥಿತಿಯನ್ನು ಬದಲಿಸಬೇಕು, ದೇಶವನ್ನು ತಿರುಗಿಸಬೇಕು. ಅಲಾವುದ್ದೀನ್ ಖಾನ್ ಅವರಂತಹ ನಿದರ್ಶನಗಳನ್ನು ನಮ್ಮ ಮನಸ್ಸಿನಲ್ಲಿ, ಬದುಕಿನಲ್ಲಿ ಜಾಗೃತವಾಗಿಟ್ಟರಬೇಕು.



ನೀನಾ ಪ್ರಸಾದ್

ನೋಡಿ... ಈಗ ಇಡೀ ಪ್ರಪಂಚನೇ ನಡಗತಾ ಇದೆ. ಉಕ್ರೇನ್-ರಷ್ಯಾ ಯುದ್ಧ ಏನಾಗುತ್ತೋ ಅಂತ... ಎಂಥ ದೊಡ್ಡ ಸಂಕಷ್ಟ ಇದೆ. ಆದರೆ ನಾವಿಲ್ಲಿ ಹಿಜಾಬು, ಮೈಕು ಇಂಥದನ್ನೇ ದೊಡ್ಡದು ಮಾಡಿಕೊಂಡು ಕಿತ್ತಾಡತಾ ಇದ್ದೀವಿ. ಇಷ್ಟು ವರ್ಷ ಅದು ಸರಿ ಇತ್ತು, ಈಗ ಅಚಾನಕ್ ಯಾಕೆ ಭಾಳ ಕೆಟ್ಟದಾಗಿ ಕಾಣ್ತಿದೆ? ಒಂದು ಕಡೆಯಿಂದ ನೋಡಿದ್ರೆ ಅದು ಭಾಳ ದುಃಖದ ವಿಚಾರ, ಇನ್ನೊಂದು ಕಡೆಯಿಂದ ನೋಡಿದರೆ ಅದು ಭಾಳ ಸ್ಟುಪಿಡ್.

ನೀವು, ನಾನು, ನಮ್ಮಂಥವರು ಮಾತಾಡ್ತೀವಿ... ಬರೀತೀವಿ, ಒಳ್ಳೇದು. ಆದರೆ ಇಷ್ಟೇ ಸಾಲದು, ಇನ್ನೂ ಮುಂದೆ ಹೋಗಬೇಕು. ನಾವೆಲ್ಲ ಒಂದೇ ಎಂಬ ಧೋರಣೆಯನ್ನು, ಆ ಆದರ್ಶವನ್ನು ಮಕ್ಕಳಲ್ಲಿ ಮೊದಲು ಬೆಳಸಬೇಕು. ನಾವೆಲ್ಲರೂ ಮಾಡಬೇಕಿರೋ ಜವಾಬ್ದಾರಿ ಇದು. ನಾವದನ್ನು ಮಾಡಲಿಲ್ಲ ಅಂದರೆ ಈ ದೇಶ ಎಂದೂ ಮುಂದೆ ಬರಲ್ಲ. ಹಿಂಗೇ ಇರುತ್ತೆ. ನಮ್ಮಲ್ಲಿ ಇರೋದನ್ನು ನಾವೇ ಕೈಯಾರ ಹಾಳುಮಾಡ್ತಿದೀವಿ. ಇಂತಹ ಕಿಡಿಗೇಡಿತನದ ಬಗ್ಗೆ ನಮ್ಮ ಜನರನ್ನು ಎಚ್ಚರಿಸಬೇಕಾಗಿರೋದು ನನ್ನ ಮತ್ತು ನಿಮ್ಮ ಕರ್ತವ್ಯ. ನಮ್ಮಲ್ಲಿ ಕೆಲವರು ಮಾಡ್ತಾ ಇದ್ದೀವಿ. ಮೊನ್ನೆ ಇಲ್ಲಿ ನಮ್ಮ ದೇವನೂರ ಮಹಾದೇವರು ಎಷ್ಟು ಛಲೋ ಮಾತಾಡಿದ್ರು. ಆದರೆ ಇಂಥವನ್ನೆಲ್ಲ ಇನ್ನೂ ಮಾಡಬೇಕು.

ನಾವು ಸಮಾಜವನ್ನು ಹಿಂಗೇ ಭಾಗಭಾಗವಾಗಿ ಕಡೀತ ಹೋದರೆ ಏನುಳಿಯುತ್ತೆ? ಒಂದು ನಾಡಿಗೆ 'ಒಟ್ಟುಮೆ' ಅಂತ ಏನಿರುತ್ತೆ? ಆ ಒಟ್ಟುಮೆಯನ್ನು ಉಳಿಸಿಕೊಳ್ಳೋದು ಮುಖ್ಯ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೀಶ್ರಸ್ಪು ಕಷಿಯ

ಗಣಿತದಲ್ಲಿ ಗರ್ದಿ ಗಮ್ಮತ್ತು

ಕೌತುಕಮಯ ಕ್ರಮ ಸಂಖ್ಯೆಗಳು

– ಇಲ್ಲಿ ಕೊಟ್ಟಿರುವ ಎಲ್ಲ ಕ್ರಮ ಸಂಖ್ಯೆಗಳನ್ನು ಕೂಡಿಸಿದರೆ ಮೊತ್ತ ಒಂದೇ ಸಂಖ್ಯೆ ಬರುತ್ತದೆ

A	B	C	D	E
5	+	+	+	+
6	10	15	30	41
7	11	16	+ 31	+ 42
8	12	17	32	43
9	13	+ 18	33	126
+ 10	+ 14	19	126	
11	15	20		
12	16	21		
13	17	126		
14	18			
15	126			
16				
126				

ಪುಟಾಣಿ ಪದ್ಯ

ಸೂಟಿ ಬಂತು ಸೂಟಿ

ಸೂಟಿ ಬಂತು ಸೂಟಿ ಬಂತು
ನಮ್ಮ ನಮ್ಮ ಶಾಲೆಗೆ
ಪಾಟಿ ಗಂಟು ಯಾಕೆ ಬೇಕು
ಹೋಯ್ತು ಎಲ್ಲೋ ಮೂಲೆಗೆ

ಪಾಠವಿಲ್ಲ ಕಾಟವಿಲ್ಲ
ಬರೀ ಆಟ ಮೋಜಿಗೆ
ಓಣಿ ಎಲ್ಲ ತಿರುಗಿ ತಿರುಗಿ
ಕುಡಿದಾಯ್ತು ಮಜ್ಜಿಗೆ

ಬಿಸಿಲೆ ಇರಲಿ ಬೆವರೆ ಇರಲಿ
ಚಿಂತೆಯಿಲ್ಲ ಆಟಕೆ
ಆಟದಲ್ಲಿ ಮಗ್ನರಾಗೆ
ಲಕ್ಷ್ಯವಿಲ್ಲ ಊಟಕೆ

ಬ್ಯಾಟು ಚೆಂಡು ಹಿಡಿದುಕೊಂಡು
ಹೊರಟೆಬಿಡ್ತು ದಂಡು ಗ್ರೌಂಡಿಗೆ
ಆಟವಾಡಿ ದಣಿದು ದಣಿದು
ಮರಳಿ ಬಂತು ಸಂಜೆಗೆ



ಪದ ವಿನೋದ

ಇಲ್ಲಿ ಕೊಟ್ಟಿರುವ ಪದ ಅಕ್ಷರ ಕೂಡಿಸಿ ಐದು ಅಕ್ಷರಗಳ ಒಂದೇ ಪದ ಮಾಡಿ

1. ಹಣ್ಣುಕದಿ + ಳ = __________
2. ಹಾಡಿನಲಿ + ಪು = __________

ಶಕುನದ ಕಥೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇವರು ಬುಡುಬುಡಿಕೆಯವರು. ಹಳ್ಳಿಗಳಲ್ಲಿ ಸುತ್ತಾಡುತ್ತಾ, ಶಕುನ ಶಾಸ್ತ್ರ ಹೇಳುತ್ತಿರುತ್ತಾರೆ. ಅಲೆಮಾರಿ ಜನರಿವರು. ವಿಶಿಷ್ಟ ವೇಷ ಭೂಷಣ, ಬುಡುಬುಡಿಕೆ ಹಿಡಿದು ಜನರನ್ನು ಆಕರ್ಷಿಸುತ್ತಾರೆ



ಸ್ಮಶಾನದಲ್ಲಿ ಶಕುನ ಪಕ್ಷಿ ಇದೆ. ನಡುರಾತ್ರಿಯಲ್ಲಿ ಇವರು ಶಕುನ ಪಕ್ಷಿಯಲ್ಲಿಗೆ ಹೋಗಿ ಪಣ ಕಟ್ಟುತ್ತಾರೆ. ಅದರ ಆಧಾರದಲ್ಲಿ ಶಕುನ ಹೇಳುತ್ತಾರೆ ಎಂಬ ನಂಬಿಕೆ ಇದೆ




ಶಕುನ ಪಕ್ಷಿಯ ಸೂಚನೆಯಂತೆ ಊರೂರು ಅಲೆದು ಶಾಸ್ತ್ರ ಹೇಳುತ್ತಾರೆ ಎಂದು ಪ್ರತೀತಿ. ಆಯಾ ಮನೆಯವರು ಕೊಟ್ಟ ಧಾನ್ಯ, ಕಾಳು, ಹಣ ಪಡೆದುಕೊಂಡು ಮುಂದೆ ಸಾಗುತ್ತಾರೆ



ಎತ್ತಿನಗಾಡಿಯ ಮೂಲಕ ಈ ಅಲೆಮಾರಿಗಳು ಒಂದೂರಿನಿಂದ ಇನ್ನೊಂದು ಊರಿಗೆ ತಮ್ಮ ಸರಕು ಸರಂಜಾಮುಗಳೊಂದಿಗೆ ಪ್ರಯಾಣಿಸುತ್ತಾರೆ



ಊರ ಹೊರಗಿನ ದೇವಸ್ಥಾನ ಅಥವಾ ಬಯಲು ಪ್ರದೇಶದಲ್ಲಿ ಪುಟ್ಟ ಡೇರೆಗಳನ್ನು ಹಾಕಿಕೊಂಡು ತಾತ್ಕಾಲಿಕವಾಗಿ ವಾಸ ಮಾಡುತ್ತಾರೆ



ಬುಡುಬುಡಿಕೆಯವರು ಬಂದಾಗ ಜನರ ಕುತೂಹಲ ಹೆಚ್ಚೇ ಇರುತ್ತದೆ. ತಮ್ಮ ಊರಿನ ಭವಿಷ್ಯ ತಿಳಿಯಲು ಅವರನ್ನು ಸುತ್ತುವರಿಯುತ್ತಾರೆ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳಿಗೆ ಮುಂದೆ ಕೊಟ್ಟಿರುವ ಸುಳಿವು ಆಧರಿಸಿ ಅದೇ ಅರ್ಥ ಬರುವ ಪದ ರಚಿಸಿ

	ಗ	ಳ	ಸುಳಿವು
1			ಒಂದು ಪಕ್ಷಿ
2			ಹವ್ಯಾಸ
3			ಹವೆ
4			ತಗ್ಗು
5			ಕಷ್ಟ

ಪೈ (π) ಬೆಲೆ ನೆನಪಿಡಲೊಂದು ಉಪಾಯ

ಗಣಿತದಲ್ಲಿ ಬರುವ ಪೈ ಬೆಲೆ ಅದೊಂದು ಅನಂತ ಸಂಖ್ಯಾ ಸರಣಿ. ಅದರ ಮೊದಲ ಎಂಟು ಸ್ಥಾನಗಳ ಅಂಕಿಗಳನ್ನು ಸ್ಮರಿಸಲು ಈ ವಾಕ್ಯ ನೆನಪಿಟ್ಟುಕೊಂಡರೆ ಸಾಕು. ಸುಲಭವಾಗಿ ನೆನಪಿಡಬಹುದು.

$$\frac{\text{HOW}}{3}\ \frac{1}{1}\ \frac{\text{WISH}}{4}\ \frac{1}{1}\ \frac{\text{COULD}}{5}\ \frac{\text{RECOLLECT}}{9}\ \frac{\text{OF}}{2}\ \frac{\text{CIRCLE}}{6}$$

= 3.1415926

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್

1-S 2-R 3-P 4-T 5-Q
6-N 7-O 8-M 9-B 10-L
11-C 12-D 13-I 14-K 15-G
16-F 17-H 18-E 19-J 20-A

ಜಾಣಪದ ಆಟ

1. ತೋಳು 2. ತೋಳ
3. ತಿಳಿ 4. ತಾಳು
5. ತಾಳಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಪ್ರಣೀತ್ ಕೆ.ಆರ್., ಮೈಸೂರು



ವರ್ಷ ಕೆ.ಎಸ್., ಲಕ್ಕಂಪುರ (ದಾವಣಗೆರೆ)



ಸಿರಿ ವೈ ಭಟ್ಟ, ಶಿರಸಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in




ಟ್ವೆಂಟಿ – 20 ಮ್ಯಾಚ್

A. ವಿಶ್ವದ ಕೆಲವು ದೇಶಗಳು ಹಾಗೂ ಅವುಗಳ ರಾಜಧಾನಿಯ ಹೆಸರು ಹೊಂದಿಸಿ			
1.	ಇಂಡೋನೇಷ್ಯಾ	A	ಪ್ಯಾರಿಸ್
2.	ಇಂಗ್ಲೆಂಡ್	B	ರೋಮ್
3.	ಥಾಯ್ಲೆಂಡ್	C	ಟೋಕಿಯೊ
4.	ನೇಪಾಳ	D	ಸಿಯೋಲ್
5.	ಶ್ರೀಲಂಕಾ	E	ಬ್ಯಾಂಕಾಕ್
6.	ಮಲೇಷ್ಯಾ	F	ಕ್ವಾಲಾಲಂಪುರ
7.	ಜಪಾನ್	G	ಜಕಾರ್ತ
8.	ಇಟಲಿ	H	ಲಂಡನ್
9.	ದ. ಕೊರಿಯಾ	I	ಕಠ್ಮಂಡು
10.	ಫ್ರಾನ್ಸ್	J	ಕೊಲಂಬೊ


B. ಭಾಗಾಕಾರಗಳಿಗೂ ಭಾಗಲಬ್ಧಗಳಿಗೂ ಹೊಂದಿಸಿ			
1.	780 ÷ 15	A.	9
2.	286 ÷ 13	B.	239
3.	323 ÷ 19	C.	280
4.	3392÷16	D.	17
5.	7000 ÷ 25	E.	212
6.	6000 ÷ 30	F.	22
7.	2635 ÷ 85	G.	200
8.	717 ÷ 3	H.	52
9.	999999 ÷ 7	I.	31
10.	333÷ 37	J.	142857

ಛಲದಂಕ 'ಮಲ್ಲ'ರು

ಪ್ರಮೋದ



ನಿರಾಧಾರ ಆಸನದಲ್ಲಿ ಮಕ್ಕಳ ಮಲ್ಲಕಂಬ ಸಾಹಸ



ಗದಗ ತಾಲ್ಲೂಕಿನ ನೀಲಗುಂದ ಸಮೀಪದ ಗುದ್ನೇಶ್ವರ ಮಠದ ಶಾಲೆ ಮಕ್ಕಳ ಮಲ್ಲಕಂಬ ಸಾಹಸ

ಜಾತ್ರೆ, ಉತ್ಸವ ಹಾಗೂ ಸಮಾರಂಭಗಳಲ್ಲಿ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗುತ್ತಿದ್ದ ಮಲ್ಲಕಂಬ ಸಾಹಸ ಈಗ ವೃತ್ತಿಪರ ಕ್ರೀಡೆಯಾಗಿ ಬದಲಾಗಿದೆ. ಚಿಕ್ಕ ವಯಸ್ಸಿನ ಮಕ್ಕಳು ಮಲ್ಲಕಂಬದ ಆಸನಗಳನ್ನು ನೋಡಿ ಈ ಕ್ರೀಡೆಯ ಸಹವಾಸವೇ ಬೇಡ ಎಂದು ದೂರ ಸರಿಯುತ್ತಾರೆ.

ಅವರಿಗೆ ಸಾಧಕರ ಕಥೆಗಳನ್ನು ಹೇಳಿ ಸ್ಫೂರ್ತಿ ತುಂಬಿ ಸಾಹಸಕ್ಕೆ ಅಣಿಯಾಗುವಂತೆ ಮಾಡುವ ಕೆಲಸ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನಡೆಯುತ್ತಿದೆ. ಇದಕ್ಕೆ ಪೋಷಕರ ಬೆಂಬಲ ಲಭಿಸುತ್ತಿದೆ.



ಕೋಚ್ ವಿನಾಯಕ ಗಾಣಿಗೇರ

ಇವರು ಮಲ್ಲಕಂಬದ ಮಲ್ಲರು. ಸಾಧನೆಯ ಛಲವುಳ್ಳ, ಎಂಥದ್ದೇ ಸಾಧನೆಯಾದರೂ ಮಾಡಬಲ್ಲೆವು ಎನ್ನುವ ಧೈರ್ಯ ತೋರುವ ಮಲ್ಲರು. ಕಂಬದ ಮೇಲೆ ಹಲವಾರು ಸಾಹಸಗಳನ್ನು ಮಾಡುವವರು. ನೆಲದ ಮೇಲೆ ಕಾಲಿಟ್ಟು ಆಕಾಶದತ್ತ ಮುಖ ಮಾಡಿ ನೋಡನೋಡುತ್ತಲೇ 25ರಿಂದ 30 ಅಡಿಗಳಷ್ಟು ಮೇಲಕ್ಕೆ ಹೋಗಿ ದೇಹ ಸಮತೋಲಿತವಾಗಿ ಇರುವಂತೆ ಮಾಡಬಲ್ಲರು.

ಕರ್ನಾಟಕದಲ್ಲಿ ಮಲ್ಲಕಂಬಕ್ಕೆ ವಿಶಿಷ್ಟವಾದ ಸ್ಥಾನವಿದೆ. ಅದರಲ್ಲೂ ವಿಶೇಷವಾಗಿ ಬಾಗಲಕೋಟೆ, ಧಾರವಾಡ, ವಿಜಯಪುರ ಹಾಗೂ ಗದಗ ಜಿಲ್ಲೆಗಳಲ್ಲಿ ಮೈ ನವಿರೇಳಿಸುವ ಈ ಸಾಹಸ ಕ್ರೀಡೆಯಲ್ಲಿ ಹೆಚ್ಚಿನ ಕ್ರೀಡಾಪಟುಗಳು ತೊಡಗಿಕೊಂಡಿದ್ದಾರೆ. ಹಲವು ವರ್ಷಗಳ ಹಿಂದೆ ಜಾತ್ರೆ, ಉತ್ಸವ, ಹಬ್ಬಹರಿದಿನಗಳು, ಶಾಲಾ ಮತ್ತು ಕಾಲೇಜುಗಳಲ್ಲಿ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿದ್ದ ಮಲ್ಲಕಂಬ ಕೆಲ ವರ್ಷಗಳಿಂದ ವೃತ್ತಿಪರ ಕ್ರೀಡೆಯಾಗಿ ಬದಲಾಗಿದೆ. ದೇಶ, ವಿದೇಶಗಳಲ್ಲಿ ಮಲ್ಲಕಂಬದ ಸಾಹಸಗಳು ಸ್ಪರ್ಧಾತ್ಮಕವಾಗಿ ಪ್ರದರ್ಶಿತವಾಗುತ್ತಿವೆ.

ಗದಗ ಜಿಲ್ಲೆಯ ಬಹುತೇಕ ಕಡೆ ಈ ಕ್ರೀಡೆ ಸಂಸ್ಕೃತಿಯಾಗಿ ಬೆಳೆದುಬಂದಿದೆ. ಇದೇ ಜಿಲ್ಲೆಯ ನೀಲಗುಂದ ಸಮೀಪದ ಗುದ್ನೇಶ್ವರ ಮಠದ ದಿವ್ಯಚೇತನ ಆಂಗ್ಲ ಮಾಧ್ಯಮ ಶಾಲೆ ಮಕ್ಕಳು ಕೂಡ ಮಲ್ಲಕಂಬದಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಪೋಷಕರ ಪ್ರೋತ್ಸಾಹವೂ ಇದಕ್ಕಿದೆ. ಎಂಟು ವರ್ಷದಿಂದ 18 ವರ್ಷದ ವಯಸ್ಸಿನ ತನಕದ ಮಕ್ಕಳು ಈ ಶಾಲೆಯಲ್ಲಿ ಮಲ್ಲಕಂಬ ತರಬೇತಿ ಪಡೆಯುತ್ತಿದ್ದಾರೆ. ಸ್ಥಿರ ಮಲ್ಲಕಂಬದಲ್ಲಿ ದಶರಂಗಾಸನ, ನಟರಾಜಾಸನ, ಸ್ಟ್ಯಾಂಡಿಂಗ್‌ನಲ್ಲಿ ಹ್ಯಾಂಡ್ ಬ್ಯಾಲೆನ್ಸ್, ಸೂರ್ಯ ನಮಸ್ಕಾರ, ಏಕಪಾದಾಸನ, ರಾಜಾಸನ, ಮಯೂರಾಸನ, ಪದ್ಮಾಸನ, ರೋಪ್ ಮಲ್ಲಕಂಬದಲ್ಲಿ ಕ್ರಿಸ್‌ಕ್ರಾಸ್, ನಿದ್ರಾಸನ, ಪದ್ಮಾಸನ, ಪರ್ವತಾಸನ, ಶವಾಸನ ಹೀಗೆ ಅನೇಕ ಆಸನಗಳನ್ನು ಪ್ರದರ್ಶಿಸುತ್ತಾರೆ.

ಈ ಕ್ರೀಡೆಗಾಗಿಯೇ ಮಲ್ಲಕಂಬ ಮಹಾಮಂಡಳಿ ಕೆಲವು ನಿಯಮಗಳನ್ನು ರೂಪಿಸಿದೆ. ಸ್ಥಿರ, ನೇತಾಡುವ ಹಾಗೂ ಹಗ್ಗದ ಮಲ್ಲಕಂಬಗಳು ಜನಜನಿತವಾಗಿವೆ. ದಶರಂಗ, ವೇಲ್, ತಿರುವು ಹಾಗೂ ಯೋಗಾಸನದ ಮಲ್ಲಕಂಬಗಳಲ್ಲಿ ಪಾದರಸದಷ್ಟು ವೇಗ, ಚಾಕಚಕ್ಯತೆ, ದೇಹವನ್ನು ಬಾಗಿಸುವ ಮತ್ತು ಸಮತೋಲನ ಕಾಪಾಡುವ ಕೌಶಲ ಬೇಕಾಗುತ್ತದೆ.

ಮೂರು ವರ್ಷಗಳ ಹಿಂದೆ ಗುದ್ನೇಶ್ವರ ಮಠದ ಶಾಲೆಯಲ್ಲಿ ಮಲ್ಲಕಂಬ ಕಲಿಕೆ ಆರಂಭವಾದಾಗ 15 ಮಕ್ಕಳು ತರಬೇತಿಗೆ ಬಂದಿದ್ದರು. ಈಗ 60ಕ್ಕೂ ಹೆಚ್ಚು ಮಕ್ಕಳು ನಿತ್ಯ ಮೂರ್ನಾಲ್ಕು ತಾಸು ಅಭ್ಯಾಸ ಮಾಡುತ್ತಾರೆ. ಇದುವರೆಗೆ 15 ಜನ ಮಲ್ಲಕಂಬ ಮಾಡುವ ಸಾಹಸಿಗರು ರಾಜ್ಯಮಟ್ಟದಲ್ಲಿ ಹಾಗೂ ಮುಬಾರಕ್ ಮುಲ್ಲಾನವರ ಎಂಬ 13 ವರ್ಷದ ಕ್ರೀಡಾಪಟು ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಸಾಧನೆ ಮೆರೆದಿದ್ದಾರೆ.

ನಿತ್ಯ ಬೆಳಿಗ್ಗೆ 4.30ಕ್ಕೆ ಏಳುವ ಮಕ್ಕಳು ದೇಹದ ಅಂಗಗಳನ್ನು ಸಡಿಲ ಮಾಡಿಕೊಳ್ಳಲು ಶಾಲಾ ಆವರಣದಲ್ಲಿ ಓಡುತ್ತಾರೆ. ಬಳಿಕ ಜಂಪಿಂಗ್ ಹಾಗೂ ಏಕಾಗ್ರತೆಗಾಗಿ ಯೋಗ ಮಾಡಿಸಲಾಗುತ್ತದೆ. ಬೆಳಿಗ್ಗೆ ಎರಡು ತಾಸು ಮತ್ತು ಸಂಜೆ ಎರಡು ತಾಸು ಮಲ್ಲಕಂಬದ ಅಭ್ಯಾಸ ಮಾಡುತ್ತಾರೆ.

ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡದ ವಿನಾಯಕ ಗಾಣಿಗೇರ ಮೂರು ವರ್ಷಗಳಿಂದ ತರಬೇತಿ ನೀಡುತ್ತಿದ್ದು ಸಾಮಾನ್ಯವಾಗಿ ನಡೆಯುವ ಮಲ್ಲಕಂಬಗಳ ಸಾಹಸದ ಜೊತೆಗೆ ನಿರಾಧಾರ, ಬಾಟಲ್, ಹ್ಯಾಂಗಿಂಗ್ ಮತ್ತು ಬಾಳೆಗೊನೆ ಆಕಾರದ ಮಲ್ಲಕಂಬಗಳ ವಿಧಾನಗಳನ್ನು ಕಲಿಸುತ್ತಿದ್ದಾರೆ. ವರ್ಷಗಳು ಉರುಳಿದಂತೆ ಮಲ್ಲಕಂಬದಲ್ಲಿಯೂ ಹೊಸ ಪ್ರಯೋಗಗಳು ನಡೆಯುತ್ತಿವೆ. ವೃತ್ತಿಪರವಾಗಿ ಈ ಕ್ರೀಡೆ ಬೆಳೆಯುತ್ತಿದೆ. ವಿನಾಯಕ, ಕೋಳಿವಾಡದ ರಾಜು ಶಿವನಗೌಡ ಅವರಿಂದ ಯೋಗ ಹಾಗೂ ಮಲ್ಲಕಂಬದ ಕೌಶಲಗಳನ್ನು ಕಲಿತಿದ್ದು, ದೇಶ- ವಿದೇಶಗಳಲ್ಲಿ ಯೋಗ ಪ್ರದರ್ಶನ ನೀಡಿದ್ದಾರೆ.

ಕಥೆಗಳೇ ಸ್ಫೂರ್ತಿ: ಮಲ್ಲಕಂಬ ಕಲಿಯಲು ಬಯಸುವ ಮಕ್ಕಳಿಗೆ ಸಾಧಕರ ಕಥೆಗಳನ್ನು ಹೇಳಿ ಅವರಲ್ಲಿ ಸ್ಫೂರ್ತಿ ತುಂಬಲಾಗುತ್ತದೆ. ಇದು ಸಾಹಸ ಮತ್ತು ಹೆಚ್ಚು ಶ್ರಮ ಬೇಡುವ ಕ್ರೀಡೆಯಾದ್ದರಿಂದ ಬಹಳಷ್ಟು ಮಕ್ಕಳು ಮಲ್ಲಕಂಬ ಮಾಡುವ ವಿಧಾನಗಳನ್ನು ನೋಡಿಯೇ ಇದರ ಸಹವಾಸವೇ ಬೇಡ ಎಂದು ದೂರಸರಿಯುತ್ತಾರೆ.


ಆದ್ದರಿಂದ ಕೋಚ್ ಸಾಧಕರ ಕಥೆಗಳನ್ನು ಹೇಳಿ ಮಕ್ಕಳಲ್ಲಿ ಭರವಸೆ ತುಂಬುತ್ತಿದ್ದಾರೆ. ವಿಶ್ವ ಜೂನಿಯರ್ ಅಥ್ಲೆಟಿಕ್ಸ್‌ನ ಮಹಿಳಾ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಹಿಮಾದಾಸ್, ಬ್ಲೇಡ್ ರನ್ನರ್ ಖ್ಯಾತಿಯ ಆಸ್ಕರ್ ಪಿಸ್ಟೋರಿಯಸ್, ರೈಲಿನಲ್ಲಿ ದುಷ್ಕರ್ಮಿಗಳ ದಾಳಿಗೆ ಒಳಗಾಗಿ ಒಂದು ಕಾಲು ಕಳೆದುಕೊಂಡರೂ ಮೌಂಟ್ ಎವರೆಸ್ಟ್ ಏರಿದ ಅರುಣಿಮಾ ಸಿನ್ಹಾ, ಹುತಾತ್ಮ ಯೋಧ ಹನುಮಂತಪ್ಪ ಕೊಪ್ಪದ ಹೀಗೆ ಸವಾಲುಗಳ ನಡುವೆ ಸಾಧನೆ ಮಾಡಿದವರ ಕಥೆಗಳು ಮಕ್ಕಳಿಗೆ ಪ್ರೇರಣೆಯಾಗುತ್ತಿವೆ.

'ಮಲ್ಲಕಂಬ ಕಲಿಯುವುದಕ್ಕಿಂತ ಹೆಚ್ಚಾಗಿ, ಕಲಿಯಲು ಮಕ್ಕಳನ್ನು ಮಾನಸಿಕವಾಗಿ ಗಟ್ಟಿ ಮಾಡುವುದೇ ದೊಡ್ಡ ಕೆಲಸ. ಮೊದಲು ಅವರಲ್ಲಿ ಸಾಹಸ ಮನೋಭಾವ ಬೆಳೆಸಲಾಗುತ್ತದೆ. ದೇಹ ಗಟ್ಟಿಮುಟ್ಟಾಗಿಸಲು ಕರ್ಜೂರ, ಹಸಿ ಕಾಳುಗಳು, ಹಾಲು ಹಾಗೂ ಮೊಸರು ಕೊಡಲಾಗುತ್ತದೆ. ನಿತ್ಯ ಯೋಗ, ಪ್ರಾಣಾಯಾಮ ಹಾಗೂ ಧ್ಯಾನ ಹೇಳಿಕೊಡಲಾಗುತ್ತಿದೆ' ಎನ್ನುತ್ತಾರೆ ಕೋಚ್ ವಿನಾಯಕ.



ಬಾಲಕನ ಮಲ್ಲಕಂಬ ಸಾಹಸ

'ಉಚಿತ ತರಬೇತಿಗೆ ವ್ಯವಸ್ಥೆ'



ಪ್ರಭುಲಿಂಗ ಸ್ವಾಮೀಜಿ

ಮಕ್ಕಳಿಗೆ ಮಠದಲ್ಲಿ ವಸತಿ ಸೌಲಭ್ಯ ನೀಡಿ, ಮಲ್ಲಕಂಬ ತರಬೇತಿಗೆ ಉಚಿತವಾಗಿ ವ್ಯವಸ್ಥೆ ಮಾಡಿಕೊಟ್ಟ ಗುದ್ನೇಶ್ವರ ಮಠದ ಪ್ರಭುಲಿಂಗ ಸ್ವಾಮೀಜಿ ಮಕ್ಕಳ ಮಲ್ಲಕಂಬ ಸಾಹಸಕ್ಕೆ ಪ್ರೇರಣೆಯಾಗಿ ನಿಂತಿದ್ದಾರೆ. ಅವರಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಒದಗಿಸಿದ್ದಾರೆ.

'ನೆಲದ ಮೇಲೆ ಕಂಬ ಇಟ್ಟು ಮಲ್ಲಕಂಬದ ಸಾಹಸ ಮಾಡುವುದು ಈಗ ಸಾಮಾನ್ಯವಾಗಿದೆ. ಇದೇ ಕ್ರೀಡೆಯಲ್ಲಿ ಹೊಸತನಗಳನ್ನು ನಾವು ಅಳವಡಿಸಿಕೊಂಡಿದ್ದೇವೆ. ಯಾರ ನೆರವೂ ಇಲ್ಲದೆ ಸಾಹಸ ಮಾಡುವುದನ್ನು ಕಲಿಸುತ್ತಿದ್ದೇವೆ' ಎಂದು ಪ್ರಭುಲಿಂಗ ಸ್ವಾಮೀಜಿ ಹೇಳುತ್ತಾರೆ.

'ಮಲ್ಲಕಂಬ ಕ್ರೀಡೆಯಷ್ಟೇ ಅಲ್ಲ; ಜೀವನ ಪಾಠವೂ ಹೌದು. ಈ ಕ್ರೀಡೆಯಲ್ಲಿ ಸರಾಗವಾಗಿ ಆಸನಗಳನ್ನು ಮಾಡಲು ದೇಹ ಹೇಗೆ ಸಮತೋಲಿತವಾಗಿ ಇರಬೇಕೋ, ಅದೇ ರೀತಿ ಜೀವನ ಸುಂದರವಾಗಿ ಇರಲು ಎಲ್ಲವೂ ಸಮತೋಲಿತವಾಗಿ ಇರಬೇಕು ಎನ್ನುವ ಸಂದೇಶವನ್ನು ಕ್ರೀಡೆಯ ಮೂಲಕ ಮಕ್ಕಳಿಗೆ ಹೇಳಿಕೊಡಲಾಗುತ್ತಿದೆ' ಎನ್ನುತ್ತಾರೆ ಅವರು.

ವಿಶ್ವ ಡಬಲ್ಸ್ ಸ್ಕ್ವಾಷ್: ದೀಪಿಕಾ ಸಾಧನೆ; ಸೌರವ್, ಜ್ಯೋತ್ಸ್ನಾ ಮಿಂಚು

ಅವಳಿ ಮಕ್ಕಳ ತಾಯಿಗೆ 'ಡಬಲ್' ಖುಷಿ



ಫೈನಲ್ ಪಂದ್ಯದಲ್ಲಿ ಪಾಯಿಂಟ್ ಗಳಿಸಿ ಸಂಭ್ರಮಿಸಿದ ದೀಪಿಕಾ ಪಳ್ಳಿಕ್ಕಲ್ (ಬಲ) ಮತ್ತು ಜ್ಯೋತ್ಸ್ನಾ ಚಿನ್ನಪ್ಪ–ಟ್ವಿಟರ್ ಚಿತ್ರ

ಗ್ಲಾಸ್ಗೊ, ಸ್ಕಾಟ್ಲೆಂಡ್ (ಪಿಟಿಐ): ಅವಳಿ ಮಕ್ಕಳಿಗೆ ಜನ್ಮ ನೀಡಿದ ನಂತರ ಇದೇ ಮೊದಲ ಬಾರಿ ಕಣಕ್ಕೆ ಇಳಿದ ಭಾರತದ ಸ್ಕ್ವಾಷ್ ಪಟು ದೀಪಿಕಾ ಪಳ್ಳಿಕ್ಕಲ್ ಡಬಲ್ ಚಿನ್ನದ ಸಾಧನೆ ಮಾಡಿ ಸಂಭ್ರಮಿಸಿದರು.

ಶನಿವಾರ ಮುಕ್ತಾಯಗೊಂಡ ಡಬ್ಲ್ಯುಎಸ್‌ಎಫ್ ವಿಶ್ವ ಸ್ಕ್ವಾಷ್ ಡಬಲ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಅವರು ಚಾಂಪಿಯನ್ ಪಟ್ಟ ಅಲಂಕರಿಸಿಕೊಂಡರು.

ಮಿಶ್ರ ಡಬಲ್ಸ್‌ನಲ್ಲಿ ಸೋದರ ಸಂಬಂಧಿ ಸೌರವ್ ಘೋಷಾಲ್ ಅವರೊಂದಿಗೆ ಕಣಕ್ಕೆ ಇಳಿದ ಅವರು ಫೈನಲ್‌ನಲ್ಲಿ 11-6, 11-8ರಲ್ಲಿ ಇಂಗ್ಲೆಂಡ್‌ನ ಅಡ್ರಿಯನ್ ವ್ಯಾಲರ್ ಮತ್ತು ಅಲಿಸನ್ ವಾಟರ್ಸ್ ಜೋಡಿಯನ್ನು ಮಣಿಸಿದರು. ಮಹಿಳೆಯರ ಡಬಲ್ಸ್‌ನಲ್ಲಿ ಬಹುಕಾಲದ ಜೊತೆಗಾತಿ ಜ್ಯೋತ್ಸ್ನಾ ಚಿನ್ನಪ್ಪ ಅವರ ಜೊತೆ ದೀಪಿಕಾ ಆಡಿದ್ದರು. ಫೈನಲ್‌ನಲ್ಲಿ 11-9, 4-11, 11-8ರಲ್ಲಿ ಇಂಗ್ಲೆಂಡ್‌ನ ಸಾರಾ ಜೇನ್ ಪೆರಿ ಮತ್ತು ಅಲಿಸನ್ ವಾಟರ್ಸ್ ಜೋಡಿಯನ್ನು ಮಣಿಸಿದರು.

2018ರ ಅಕ್ಟೋಬರ್ ನಂತರ ಇದೇ ಮೊದಲ ಬಾರಿ ಸ್ಪರ್ಧಾತ್ಮಕ ಸ್ಕ್ವಾಷ್ ಆಡಿದ ದೀಪಿಕಾ ಅವರು ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್‌ಗೆ ಕೆಲವೇ ತಿಂಗಳು ಉಳಿದಿರುವಾಗ ಮಾಡಿರುವ ಸಾಧನೆ ಭರವಸೆ ಮೂಡಿಸಿದೆ. ಸೌರವ್ ಘೋಷಾಲ್ ಮತ್ತು ಜ್ಯೋತ್ಸ್ನಾ ಅವರ ಮೇಲೆಯೂ ನಿರೀಕ್ಷೆ ಮೂಡಿದೆ.


2014ರ ಕಾಮನ್‌ವೆಲ್ತ್ ಗೇಮ್ಸ್‌ನ ಮಹಿಳಾ ವಿಭಾಗದ ಡಬಲ್ಸ್ ವಿಭಾಗದಲ್ಲಿ ಚಿನ್ನ ಗೆಲ್ಲುವ ಮೂಲಕ ದೀಪಿಕಾ ಮತ್ತು ಜ್ಯೋತ್ಸ್ನಾ ಇತಿಹಾಸ ನಿರ್ಮಿಸಿದ್ದರು. ಶುಕ್ರವಾರ ನಡೆದ ಮಿಶ್ರ ಡಬಲ್ಸ್ ಸೆಮಿಫೈನಲ್‌ನಲ್ಲಿ ದೀಪಿಕಾ–ಸೌರವ್ 11-9, 11-5ರಿಂದ ವೇಲ್ಸ್‌ನ ಜೋಯಲ್ ಮಾಕಿನ್ ಮತ್ತು ತೇಸ್ನಿ ಇವಾನ್ಸ್ ಅವರನ್ನು ಮಣಿಸಿದ್ದರು. ಮಹಿಳಾ ಡಬಲ್ಸ್‌ನ ನಾಲ್ಕರ ಘಟ್ಟದ ಪಂದ್ಯದಲ್ಲಿ ದೀಪಿಕಾ ಮತ್ತು ಜ್ಯೋತ್ಸ್ನಾ ವಿರುದ್ಧ ಕಣಕ್ಕಿಳಿಯ-ಬೇಕಿದ್ದ ನ್ಯೂಜಿಲೆಂಡ್‌ನ ಜೋಯಲ್ ಕಿಂಗ್‌-ಅಮಂಡಾ ಲ್ಯಾಂಡರ್ಸ್ ಮರ್ಫಿ ಗಾಯಗೊಂಡು ಹಿಂದೆ ಸರಿದಿದ್ದರು. ಹೀಗಾಗಿ ಭಾರತದ ಜೋಡಿಗೆ ವಾಕ್ ಓವರ್ ಲಭಿಸಿತು.

ಗೋವಿಂದ್, ಅನಂತ, ಸುಮಿತ್‌ಗೆ ಚಿನ್ನದ ಪದಕ

ಥಾಯ್ಲೆಂಡ್ ಓಪನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್: ಅಮಿತ್‌ಗೆ ಸೋಲು


ಪದಕದೊಂದಿಗೆ ಗೋವಿಂದ್ ಸಹಾನಿ


ಅನಂತ


ಸುಮಿತ್ –ಪಿಟಿಐ ಚಿತ್ರಗಳು

ನವದೆಹಲಿ (ಪಿಟಿಐ): ಭಾರತದ ಗೋವಿಂದ್ ಸಹಾನಿ, ಅನಂತ ಪ್ರಹ್ಲಾದ ಚೋಪ್ಡೆ ಮತ್ತು ಸುಮಿತ್ ಅವರು ಥಾಯ್ಲೆಂಡ್ ಓಪನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಚಿನ್ನಕ್ಕೆ ಮುತ್ತಿಟ್ಟರು.

ಫುಕೆಟ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಮೂವರೂ ಏಕಪಕ್ಷೀಯವಾಗಿ ಜಯ ಗಳಿಸಿದರು. ನಿರೀಕ್ಷೆ ಮೂಡಿಸಿದ್ದ ಅಮಿತ್ ಫಂಘಾಲ್ ಸೋಲಿಗೆ ಶರಣಾದರು. 75 ಕೆಜಿ ವಿಭಾಗದಲ್ಲಿ ಸುಮಿತ್ ಸ್ಥಳೀಯ ಬಾಕ್ಸರ್ ಪೀತಾಪತ್ ಈಸುಂಗ್‌ನ್ಯಾನ್ ಎದುರು 5-0ಯಿಂದ ಜಯ ಗಳಿಸಿದರು. ಗೋವಿಂದ್ ಸಹಾನಿ ಕೂಡ ಸ್ಥಳೀಯ ಕ್ರೀಡಾಪಟು ನತ್ತಾಫನ್ ತುವಾಮ್‌ಚರೊನ್ ಎದುರು 5-0ಯಿಂದ ಗೆದ್ದರು. ಈ ಇಬ್ಬರೂ ಕ್ರಮವಾಗಿ 75 ಕೆಜಿ ಮತ್ತು 48 ಕೆಜಿ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ.

54 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅನಂತ ಆಕ್ರಮಣಕಾರಿ ಮತ್ತು ರಕ್ಷಣಾತ್ಮಕ ಆಟದ ಮೂಲಕ ಎದುರಾಳಿ ಥಾಯ್ಲೆಂಡ್‌ನ ರಿಥಿಯಾಮೊನ್ ಸಾಯಿಂಗ್‌ಸ್ವಾಂಗ್ ಅವರನ್ನು ಗೊಂದಲಕ್ಕೆ ಸಿಲುಕಿಸಿ ಗೆದ್ದರು.

ಫಂಘಾಲ್‌ಗೆ ಆಘಾತ: 52 ಕೆಜಿ ವಿಭಾಗದಲ್ಲಿ ಕಣಕ್ಕೆ ಇಳಿದ 2019ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಅಮಿತ್ ಫಂಘಾಲ್ ಪ್ರಬಲ ಪೈಪೋಟಿಯ ನಂತರ ಫಿಲಿಪ್ಪೀನ್ಸ್‌ನ ರಾಗೆನ್ ಲಾಡಾನ್‌ಗೆ 2-3ರಲ್ಲಿ ಮಣಿದರು. 48 ಕೆಜಿ ವಿಭಾಗದಲ್ಲಿ ಮೋನಿಕಾ, 60 ಕೆಜಿಯಲ್ಲಿ ವರಿಂದರ್ ಸಿಂಗ್ ಮತ್ತು 81 ಕೆಜಿ ವಿಭಾಗದಲ್ಲಿ ಆಶಿಶ್ ಕುಮಾರ್ ಕೂಡ ಸೋತರು. 75 ಕೆಜಿ ವಿಭಾಗದಲ್ಲಿ ಕಳೆದ ಬಾರಿ ಚಿನ್ನದ ಪದಕ ಗೆದ್ದುಕೊಂಡಿದ್ದ ಆಶಿಶ್ ಈ ಬಾರಿ 81 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು. ಫೈನಲ್‌ನಲ್ಲಿ ಅವರು ಕಜಕಸ್ತಾನದ ನೂರ್‌ಬೆಕ್ ಒರಲ್ಬೆ ವಿರುದ್ಧ 0-5ರಲ್ಲಿ ಸೋತರು. ಜಿದ್ದಾಜಿದ್ದಿಯ ಪೈಪೋಟಿಯಲ್ಲಿ 26 ವರ್ಷದ ಮೋನಿಕಾ ಸ್ಥಳೀಯ ಬಾಕ್ಸರ್ ಚೂತಾಮಸ್ ರಕ್ಷಾ ವಿರುದ್ಧ 0-5ರಲ್ಲಿ ಸೋತರು. ವರಿಂದರ್ ಸಿಂಗ್ ಅವರನ್ನು ಸ್ಥಳೀಯ ಸ್ಪರ್ಧಿ ಖೂನಾತಿಪ್ ಪಿಡ್ನುಚ್ 0-5ರಲ್ಲಿ ಮಣಿಸಿದರು.

ಮೂರು ಚಿನ್ನ ಮತ್ತು ನಾಲ್ಕು ಬೆಳ್ಳಿ ಸೇರಿದಂತೆ ಭಾರತ ಈ ಬಾರಿ 10 ಪದಕಗಳನ್ನು ಗೆದ್ದುಕೊಂಡಿತು. ಕಳೆದ ಬಾರಿ ಒಂದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳು ಲಭಿಸಿದ್ದವು.

ಜೂನಿಯರ್ ವಿಶ್ವಕಪ್ ಹಾಕಿ: ನೆದರ್ಲೆಂಡ್ಸ್ ಎದುರಾಳಿ

ಭಾರತಕ್ಕೆ ಚೊಚ್ಚಲ ಫೈನಲ್ ಕನಸು

ಪೊಚೆಫ್‌ಸ್ಟ್ರೂಮ್(ಪಿಟಿಐ): ಚೊಚ್ಚಲ ಫೈನಲ್ ಕನಸಿನೊಂದಿಗೆ ಭಾರತ ತಂಡ ಜೂನಿಯರ್ ಮಹಿಳೆಯರ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನ-ಲ್ಲಿ ಭಾನುವಾರ ಕಣಕ್ಕೆ ಇಳಿಯಲಿದೆ. ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತಕ್ಕೆ ಮೂರು ಬಾರಿಯ ಚಾಂಪಿಯನ್ ನೆದರ್ಲೆಂಡ್ಸ್ ಎದುರಾಳಿ.

ಕಂಚಿನ ಪದಕ ಗೆದ್ದಿರುವುದು ಭಾರತದ ಈ ವರೆಗಿನ ಗರಿಷ್ಠ ಸಾಧನೆಯಾಗಿದೆ. ಜರ್ಮನಿಯಲ್ಲಿ 2013ರಲ್ಲಿ ನಡೆದ ಟೂರ್ನಿಯಲ್ಲಿ ಭಾರತ ಕಂಚಿನ ಪದಕ ಗಳಿಸಿತ್ತು. ಈ ಬಾರಿ ಇದುವರೆಗೆ ತಂಡ ಅಜೇಯವಾಗಿದೆ. ಆದ್ದರಿಂದ ನಿರೀಕ್ಷೆಗಳು ಗರಿಗೆದರಿವೆ.

ಸಲಿಮಾ ಟೆಟೆ ನಾಯಕತ್ವದ ತಂಡ ಈ ಬಾರಿ ಉತ್ತಮ ಲಯದಲ್ಲಿದ್ದು ಪ್ರತಿಯೊಬ್ಬರೂ ಸಾಮರ್ಥ್ಯವನ್ನು ಪರಿಪೂರ್ಣವಾಗಿ ಹೊರಗೆಡವುತ್ತಿದ್ದಾ-ರೆ. ಫಾರ್ವರ್ಡ್ ವಿಭಾಗ ಪ್ರತಿಯೊಂದು ಪಂದ್ಯದಲ್ಲೂ ಎದುರಾಳಿ ತಂಡಕ್ಕೆ ಸವಾಲಾಗಿ ನಿಂತಿದೆ. ನಾಲ್ಕು ಪಂದ್ಯಗಳಲ್ಲಿ ಒಟ್ಟು 14 ಗೋಲುಗಳು ದಾಖಲಾಗಿವೆ. ಮಿಡ್‌ಫೀಲ್ಡರ್‌ಗಳು ಸಾಕಷ್ಟು ಅವಕಾಶ-ಗಳನ್ನು ಸೃಷ್ಟಿಸಿದ್ದಾರೆ.

ಟೂರ್ನಿಯಲ್ಲಿ ಉಭಯ ತಂಡಗಳ ಸಾಧನೆ	
ಭಾರತದ ತಂಡದ ಸಾಧನೆ	
ಎದುರಾಳಿ ತಂಡ	ಫಲಿತಾಂಶ
ವೇಲ್ಸ್	5-1ರ ಜಯ
ಜರ್ಮನಿ	2-1ರ ಜಯ
ಮಲೇಷ್ಯಾ	4-0 ಗೆಲುವು
ಕೊರಿಯಾ	3-0 ಗೆಲುವು
ನೆದರ್ಲೆಂಡ್ಸ್ ತಂಡದ ಸಾಧನೆ	
ಅಮೆರಿಕ	9-0 ಜಯ
ಕೆನಡಾ	11-0 ಗೆಲುವು
ಜಿಂಬಾಬ್ವೆ	18-0 ಜಯ
ದಕ್ಷಿಣ ಆಫ್ರಿಕಾ	5-0 ಜಯ
ಸೆಮಿಫೈನಲ್ ವೇಳಾಪಟ್ಟಿ	
ಭಾರತ–ನೆದರ್ಲೆಂಡ್ಸ್	
ಇಂಗ್ಲೆಂಡ್–ಜರ್ಮನಿ	

ಯುವ ಸ್ಟ್ರೈಕರ್ ಮುಮ್ತಾಜ್ ಖಾನ್ ಹ್ಯಾಟ್ರಿಕ್ ಒಳಗೊಂಡಂತೆ ಆರು ಗೋಲುಗಲನ್ನು ಗಳಿಸಿದ್ದಾರೆ. ಲಾಲ್‌ರೆಮ್ಸಿಯಾಮಿ, ಲಾಲ್‌ರಿಂಡಿಕಿ ಮತ್ತು ಶರ್ಮಿಳಾ ದೇವಿ ಅವರೂ ಮಿಂಚುತ್ತಿದ್ದಾರೆ. ಸಲಿಮಾ ಟೆಟೆ ಸೇರಿದಂತೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆಡಿರುವ ಮೂವರು ತಂಡದಲ್ಲಿರುವು-ದು ಯುವ ಆಟಗಾರ್ತಿಯರಿಗೆ ಹುರುಪು ತುಂಬಲು ಕಾರಣವಾಗಿದೆ.

ಈ ಎಲ್ಲ ಪೂರಕ ಅಂಶಗಳ ಬಲವಿದ್ದರೂ ನೆದರ್ಲೆಂಡ್ಸ್ ವಿರುದ್ಧ ಗೆಲ್ಲುವುದು ಸುಲಭದ ಮಾತಲ್ಲ.

ನೆದರ್ಲೆಂಡ್ಸ್‌ಗೆ ಜಯ

ಭುವನೇಶ್ವರ: ಎಫ್‌ಐಎಚ್ ಪ್ರೊ ಲೀಗ್‌ನ ನೆದರ್ಲೆಂಡ್ಸ್ ಎದುರಿನ ಎರಡನೇ ಪಂದ್ಯದಲ್ಲಿ ಭಾರತ ಸೀನಿಯರ್ ಮಹಿಳಾ ಹಾಕಿ ತಂಡವು ನಿರಾಸೆ ಅನುಭವಿಸಿತು. ಶನಿವಾರ ನಡೆದ ಹಣಾಹಣಿಯಲ್ಲಿ ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್ ಪೆನಾಲ್ಟಿ ಶೂಟೌಟ್‌ನಲ್ಲಿ 3-1ರಿಂದ ಭಾರತಕ್ಕೆ ಸೋಲುಣಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1-1ರಿಂದ ಸಮಬಲ ಸಾಧಿಸಿದ್ದವು

ಬ್ಯಾಡ್ಮಿಂಟನ್: ಸಿಂಧು, ಶ್ರೀಕಾಂತ್‌ಗೆ ನಿರಾಸೆ

ಸಂಚ್ಯಾನ್, ದಕ್ಷಿಣ ಕೊರಿಯಾ (ಎಎಫ್‌ಪಿ): ಭಾರತದ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತು ಹೊರಬಿದ್ದಿದ್ದಾರೆ.

ಶನಿವಾರ ನಡೆದ ಪಂದ್ಯದಲ್ಲಿ ಸಿಂಧು, ಸ್ಥಳೀಯ ಆಟಗಾರ್ತಿ ಹಾಗೂ ಎರಡನೇ ಶ್ರೇಯಾಂಕದ ಆ್ಯನ್ ಸೆ ಯಂಗ್ ವಿರುದ್ಧ ಸೋತರು. 20 ವರ್ಷದ ಆ್ಯನ್ ಸೆ ಯಂಗ್ 21-14, 21-17ರಲ್ಲಿ ಜಯ ಗಳಿಸಿದರು. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ಥಾಯ್ಲೆಂಡ್‌ನ ಶ್ರೇಯಾಂಕರಹಿತ ಆಟಗಾರ್ತಿ ಪೋರ್ನಪವಿ ಚೊಚುವಾಂಗ್ ಅವರನ್ನು ಎದುರಿಸುವರು.

ಕೊರಿಯಾದ ಕಿಮ್ ಗಾ ಯೂನ್ ಎದುರು 21-17, 21-14ರಲ್ಲಿ ಗೆದ್ದ ಪೋರ್ನಪವಿ ಫೈನಲ್ ಪ್ರವೇಶಿಸಿದರು.

ಪುರುಷರ ವಿಭಾಗದಲ್ಲಿ ಕಿದಂಬಿ ಶ್ರೀಕಾಂತ್ ಅವರನ್ನು ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ 21-19, 21-16ರಲ್ಲಿ ಮಣಿಸಿದರು. ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಫೈನಲ್‌ನಲ್ಲಿ ಜೊನಾಥನ್ ಎದುರಿಸುವರು. ವೆಂಗ್ ಹಾಂಗ್ ಡೆನ್ಮಾರ್ಕ್‌ನ ವಿಕ್ಟರ್ ಸ್ವೆಂಡ್ಸೆನ್ ಎದುರು ಜಯ ಸಾಧಿಸಿದರು.

ಚೆಸ್: ಆದಿರೆಡ್ಡಿ ಶುಭಾರಂಭ

ಮಂಡ್ಯ: ತೆಲಂಗಾಣದ ಆದಿರೆಡ್ಡಿ ಅರ್ಜುನ್ ಅವರು ನಗರದ ಅಮರಾವತಿ ಹೋಟೆಲ್‌ನಲ್ಲಿ ಶನಿವಾರ ಆರಂಭವಾದ 34ನೇ ರಾಷ್ಟ್ರೀಯ 12 ವರ್ಷದೊಳಗಿನ ಬಾಲಕ-ಬಾಲಕಿಯರ ಚೆಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಮಂಡ್ಯ ಚೆಸ್ ಅಕಾಡೆಮಿ, ತುಮಕೂರು ಚೆಸ್ ಸಂಸ್ಥೆ, ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಹಾಗೂ ಅಖಿಲ ಭಾರತ ಚೆಸ್ ಸಂಸ್ಥೆ ಸಹಯೋಗದಲ್ಲಿ ಟೂರ್ನಿ ಆರಂಭಗೊಂಡಿತು. ಮೊದಲ ಸುತ್ತಿನ ಪಂದ್ಯದಲ್ಲಿ ಆದಿರೆಡ್ಡಿ, ಪಶ್ಚಿಮ ಬಂಗಾಳದ ಖುತುಲ್ ಮಜುಂದಾರ್ ವಿರುದ್ಧ ಜಯ ಗಳಿಸಿದರು.

ಈಜು: ಚಾಹತ್‌ಗೆ ಚಿನ್ನದ ಪದಕ

ನವದೆಹಲಿ (ಪಿಟಿಐ): ಭಾರತದ ಚಾಹತ್ ಅರೋರ ಶನಿವಾರ ನಡೆದ ಥಾಯ್ಲೆಂಡ್ ಓಪನ್ ವಯೋಮಾನ ವಿಭಾಗದ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಸಮುತ್ ಪ್ರಖಾನ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆಯ ಮಹಿಳೆಯರ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಅವರು ಸಾಧನೆ ಮಾಡಿದರು.

ಚಂಡೀಗಢದ ಚಾಹತ್ 33.62 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ವೈಯಕ್ತಿಕ ಶ್ರೇಷ್ಠ ಸಾಧನೆಯನ್ನು ಸರಿಗಟ್ಟಿದರು.ಇದೇ ವೇಳೆ ಫ್ರೆಂಚ್ ಓಪನ್ ಎಲೀಟ್ ಚಾಂಪಿಯನ್‌ಷಿಪ್‌ನ 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನ 'ಬಿ' ಗುಂಪಿನ ಫೈನಲ್‌ನಲ್ಲಿ ಕರ್ನಾಟಕದ ಶ್ರೀಹರಿ ನಟರಾಜ್ ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಫುಟ್‌ಬಾಲ್: ಭಾರತಕ್ಕೆ ಜಯ

ಜಾರ್ಕಾ, ಜೋರ್ಡಾನ್ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡವು ಜೋರ್ಡಾನ್‌ನಲ್ಲಿ ಎರಡನೇ ಗೆಲುವು ದಾಖಲಿಸಿತು. ಶನಿವಾರ ನಡೆದ ಸ್ನೇಹಪರ ಪಂದ್ಯದಲ್ಲಿ 1-0ಯಿಂದ ಆತಿಥೇಯ ತಂಡವನ್ನು ಸೋಲಿಸಿತು.

ವಿಜೇತ ತಂಡದ ಪರ ಮನೀಷಾ 48ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.